ಸಂವಾದ

ಏಪ್ರಿಲ್ ೨೦೧೨ ರೂ. ೨೦

ಅಂಬೇಡ್ಕರ್ ವಿಶೇಷಾಂಕ

- ನೈಜ ಅಂಬೇಡ್ಕರ್ ಅನ್ವೇಷಣೆಯಲ್ಲಿ
- ಮೀಸಲಾತಿ ಒಂದು ಕನಿಷ್ಠ ಕಾರ್ಯಕ್ರಮ
- ಒಳಮೀಸಲಾತಿಯೆಂಬ ಬೂದಿಮುಚ್ಚಿದ ಕೆಂಡ
- ದಲಿತ ಮಹಿಳೆ: ಸಮಸ್ಯೆ–ಸವಾಲುಗಳು
- ದಲಿತ ಚಳವಳಿ: ಕಮ್ಯುನಿಷ್ಟರ ದೃಷ್ಟಿಕೋನ
- 'ಸಂವಾದ' ಪ್ರಶ್ನೆಗಳಿಗೆ ದಲಿತ ನಾಯಕರ ಉತ್ತರ

PRISTINE BREAKFAST
HEALTHY ORGANIC BREAKFAST CEREAL RANGE
Wheat
Net wt : 300g
Rs.150.00
Mixed Millet
Net wt : 300g
Rs.150.00
Corn
Net wt : 300g
Rs.150.00
Ragi
Net wt : 300g
Rs.150.00
Organic Cereal Flakes
~ CORN ~
Customer Care
1800 425 2216
Certified Organic
Rich in Vitamins and Minerals
Pristine Organics Pvt. Ltd. #44/2A, Kodigehalli Gate, Sahakarnagar Post, NH-7, Bengaluru - 560092.
info@pristineorganics.com | www.pristineorganics.com

ಒಳಪುಟಗಳಲ್ಲಿ

ಸಂವಾದ

ಮಾಸ ಪತ್ರಿಕೆ

ಸಂಪುಟ 10 ಸಂಚಿಕೆ 6
ಏಪ್ರಿಲ್ 2012

ಸಂಪಾದಕ:
ಇಂದೂಧರ ಹೊನ್ನಾಪುರ

ಉಪ ಸಂಪಾದಕ:
ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಡಾ|| ಕೆ. ಪುಟ್ಟಸ್ವಾಮಿ
ಡಾ|| ಡಿ. ಡೊಮಿನಿಕ್
ಡಾ|| ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

- ❑ ಪತ್ರಗಳು ೦೪
- ❑ ಅಂತರಂಗ ೦೫
- ❑ ಸಂಪಾದಕರೊಂದಿಗೆ ಸಂವಾದ:
  - ○ ಡಾ|| ಎಸ್.ಬಿ ಜೋಗುರ ೦೬
  - ○ ಡಾ|| ಕಿರಣ್ ಎಂ. ಗಾಜನೂರು ೦೭
- ❑ ಅಲೆಮಾರಿಗಳು: ಒಂದು ಪ್ರತಿಕ್ರಿಯೆ
  - ○ ಹೊ.ಮ ಪಂಡಿತಾರಾಧ್ಯ ೦೮
- ❑ ನೈಜ ಅಂಬೇಡ್ಕರ್ ಅನ್ವೇಷಣೆಯಲ್ಲಿ
  - ○ ಮೂಲ: ಡಾ|| ಆನಂದ್ ತೇಲ್‌ತುಂಬ್ಡೆ
    ಅನು: ಶಿವಸುಂದರ್ ೧೦
- ❑ ಧೂಳ್ಮಗ ಧುರೀಣನಾದ ಅದ್ಭುತ!
  - ○ ಸಿ.ಎಚ್ ಜಾಕಬ್ ಲೋಬೊ ೧೪



- ❑ ಒಳಮೀಸಲಾತಿಯೆಂಬ ಬೂದಿಮುಚ್ಚಿದ ಕೆಂಡ
  - ○ ಡಾ|| ಎಲ್ ಹನುಮಂತಯ್ಯ ೧೮
- ❑ ಮೀಸಲಾತಿ ಒಂದು ಕನಿಷ್ಠ ಕಾರ್ಯಕ್ರಮ
  – ಪ್ರೊ|| ರವಿವರ್ಮಕುಮಾರ್ ಸಂದರ್ಶನ
  - ○ ಇಂದೂಧರ ಹೊನ್ನಾಪುರ ೨೦
  - ○ ಡಾ|| ಡಿ ಡೊಮಿನಿಕ್
  - ○ ಡಾ|| ಸಿ.ಜಿ ಲಕ್ಷ್ಮೀಪತಿ
- ❑ ಅಸ್ಪೃಶ್ಯತೆಯ ವಿರುದ್ಧದ
  ಹೋರಾಟದಲ್ಲಿ ಕಮ್ಯುನಿಷ್ಟರು
  - ○ ಜಿ.ಎನ್ ನಾಗರಾಜ್ ೨೬
- ❑ ಬುದ್ಧ, ಮಾರ್ಕ್ಸ್ ಮತ್ತು ಅಂಬೇಡ್ಕರ್
  - ○ ಡಾ|| ಸಿದ್ದನಗೌಡ ಪಾಟೀಲ್ ೩೦
- ❑ ದಲಿತ ಮಹಿಳೆ; ಸಮಸ್ಯೆಗಳು–ಸವಾಲುಗಳು
  - ○ ಡಾ|| ಅನಸೂಯ ಕಾಂಬಳೆ ೩೨
- ❑ 'ಸಂವಾದ' ಪ್ರಶ್ನಾವಳಿಗೆ
  ದಲಿತ ಮುಖಂಡರ ಉತ್ತರಗಳು ೩೪
- ❑ ಭ್ರಷ್ಟಾಚಾರದ ವಿರುದ್ಧ ಅಂಬೇಡ್ಕರ್
  - ○ ರಘೋತ್ತಮ ಹೊ.ಬ ೪೪
- ❑ ಹೊಸ ಪುಸ್ತಕ ೪೭
- ❑ ಜನಾಂಗೀಯ ಮೂಲದ ಶೋಧ
  - ○ ಡಾ|| ಬಿ.ಯು ಸುಮಾ ೪೮
- ❑ ನೋಯುವ ಹಲ್ಲಿಗೆ
  ಹೊರಳುವ ನಾಲಿಗೆ–೫
  - ○ ಡಾ|| ಎಚ್.ಎಸ್ ಅನುಪಮಾ ೫೩
- ❑ ಬತ್ತದ ಬಯಲು –೪
  - ○ ಡಾ|| ಬಿ.ಎಂ ಪುಟ್ಟಯ್ಯ ೫೬
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/
    ಎಸ್ ಮರಿಸ್ವಾಮಿ ೬೦

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಕಪ್ಪು ಬಿಳುಪಿನ ಅಪ್ಸರೆ

ಪ್ರೀತಿಯ ಇಂದೂಧರ,

ಮುಖಪುಟದ ಹೊರತಾಗಿ ಗಿಲೀಟು ಬಣ್ಣಗಳಿಲ್ಲದ ಕಪ್ಪು ಬಿಳುಪಿನಲ್ಲೇ ಸಕಲ ಸೌಂದರ್ಯವನ್ನು ಸೂರೆ ಹೊಡೆದಂತಿದೆ ನಿಮ್ಮ ಸಂಪಾದಕತ್ವದ 2012ರ ವಿಶೇಷಾಂಕ. ಒಂದಕ್ಕೆ ಮಿಗಿಲಾಗಿ ಮತ್ತೊಂದು ಮತ್ತೊಂದಕ್ಕೆ ಇನ್ನೊಂದು ಎಂಬಂತಿರುವ ಲೇಖನ, ಕತೆ, ಕವಿತೆ ನೆಪಮಾತ್ರದವಲ್ಲ. ಸಿನಿಮಾ ಕೂಡ ಬರೀ ರಂಜನೆಯಲ್ಲ ಎಂಬುದಕ್ಕೆ ಮಾಸಡಿ ಲೇಖನ ಉದಾಹರಣೆ. ವಿಶೇಷ ಸಂಚಿಕೆಯನ್ನು ಹೇಗೆ ರೂಪಿಸಬೇಕು ಎಂಬುದನ್ನು 'ಸಂವಾದ' ಬಳಗದವರಿಂದ 'ಬೇರೆಯವರು' (ಹೊಸತು, ಪ್ರಜಾವಾಣಿ ಹೊರತುಪಡಿಸಿ) ಕಲಿಯುವುದು ಬಹಳಷ್ಟಿದೆ ಎಂಬುದೂ ಈ ಸಂಚಿಕೆಯಿಂದ ಸಾಬೀತಾದಂತಾಯಿತು.

ಇಂಥ ಮೌಲ್ಯವುಳ್ಳ ವಿಶೇಷಾಂಕದ ಬಗ್ಗೆ ಯಾವ ದಿನ ಪತ್ರಿಕೆಗಳಲ್ಲೂ ಪ್ರಚಾರವೇ ಇಲ್ಲವಲ್ಲ ಮಾರಾಯ. ಇರಲಿ ಬಿಡಿ ಈ ಅಪ್ಸರೆಯನ್ನು ನಾಡಿನ ವಿಚಾರವಂತರು, ಸಹೃದಯಿಗಳು ತಮ್ಮ ಹೃದಯದಲ್ಲಿ ತುಂಬಿಕೊಳ್ಳುತ್ತಾರೆಂಬುದರಲ್ಲಿ ನನಗಂತೂ ಅನುಮಾನವೇ ಇಲ್ಲ.

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಹಲವು ಸಂಘರ್ಷಗಳಿಂದ ಚರಿತ್ರೆ ಸೃಷ್ಟಿಸಿದ ಪತ್ರಿಕೆ: ಸಂವಾದ

ಪ್ರಿಯ ಸಂಪಾದಕರೇ,

ಸಂವಾದಕ್ಕೆ ಈಗ ದಶಕದ ಸಂಭ್ರಮ. ಅದಕ್ಕಾಗಿ ತಮಗೆ ಅಭಿನಂದನೆಗಳು. ಅಕ್ಷರ ಲೋಕದ ಕಪ್ಪು ಪತ್ರಿಕೆಗಳ ನಡುವೆ ಸಂವಾದ ಕಳೆದ ಒಂದು ದಶಕದಿಂದ ಈ ನಾಡಿನ ವೈಚಾರಿಕ, ಸಾಂಸ್ಕೃತಿಕ, ಸಾಹಿತ್ಯಿಕ ಚರಿತ್ರೆಯನ್ನು ಹಲವು ಸಂಘರ್ಷಗಳಿಗೊಳಗಾಗಿ ಜೀವಂತವಾಗಿರಿಸಿದೆ. ನಾಡಿನ ಹಿರಿ–ಕಿರಿಯ ಬರಹಗಾರರನ್ನು ಬೆಳೆಸುತ್ತಾ, ಯಾರೂ ಯಾವ ಬೌದ್ಧಿಕ ದಾಸ್ಯಕ್ಕೆ ಒಳಗಾಗದಂತೆ ಅವರ ಮುಕ್ತ ಚಿಂತನೆಗಳ ಚರ್ಚೆಗೆ ಮುಕ್ತ ವೇದಿಕೆಯನ್ನು ಸಂವಾದ ಒದಗಿಸಿಕೊಟ್ಟಿರುವುದು ಸಂತಸದ ವಿಚಾರ. ಈ ನಾಡಿನ ಶೋಷಿತ ಸಮುದಾಯಗಳ ಧ್ವನಿಯಾಗಿ ತಳ ಸಮುದಾಯಗಳ ಆಸೆ, ಆಕಾಂಕ್ಷೆ, ತವಕ, ತಲ್ಲಣ, ಕನಸುಗಳಿಗೆ ಜೀವ ಕೊಟ್ಟಿರುವ ವೈಚಾರಿಕ ಪ್ರಗತಿಪರ ಪತ್ರಿಕೆಯಾಗಿ ಬೆಳೆಯುತ್ತಿರುವುದು ಪತ್ರಿಕೆಗೆ ಗರಿ. ಪತ್ರಿಕೆಯಲ್ಲಿ ಬರುವ ಮುಜಾಫ್ಫರ್ ಅಸ್ಸಾದಿ ರವರ ಚಿಂತನೆಗಳು, ಚಂದ್ರಭಾನ್ ಪ್ರಸಾದ್‌ರವರ ದಲಿತ್ ಡೈರಿ (ಅನುವಾದ: ಎಸ್. ಮರಿಸ್ವಾಮಿ) ರಹಮತ್ ತರೀಕೆರೆ, ಡಿ.ಎಸ್.ನಾಗಭೂಷಣ, ನಟರಾಜ್ ಹುಳಿಯಾರ್, ಚಂದ್ರಶೇಖರ ನಂಗಲಿ, ಡೊಮಿನಿಕ್ ಮುಂತಾದವರ ಪ್ರಗತಿಪರ ಚಿಂತನೆಗಳ ಗುಚ್ಛವಾಗಿ ಬರುತ್ತಿರುವ ಪತ್ರಿಕೆ ಬೌದ್ಧಿಕ ದಾರಿದ್ರ್ಯಕ್ಕೆ ಉತ್ತರವಾಗಿ ಬೌದ್ಧಿಕ ಹಸಿವಿಗೆ ಆಹಾರ ಒದಗಿಸಿದೆ. ಶಿಕ್ಷಣ, ಸಮಾಜ, ರಾಜಕೀಯ, ಸಾಹಿತ್ಯ ಹೀಗೆ ಹತ್ತು ಹಲವು ಚರ್ಚಾತ್ಮಕ ಅಂಶಗಳು ಹಲವು ಬಾರಿ ತಮ್ಮ ಪತ್ರಿಕೆಯಲ್ಲಿ ಹೊಸ ಸವಾಲು ಮತ್ತು ಚರ್ಚೆಗಳನ್ನು ಹುಟ್ಟು ಹಾಕಿರುವುದನ್ನು ನಾನು ಕಂಡಿದ್ದೇನೆ. ಈ ಎಲ್ಲಾ ಬೆಳವಣಿಗೆಯ ಹಾದಿಯಲ್ಲಿ ಬೌದ್ಧ ಮತ್ತು ದಲಿತ ಚಿಂತನೆಗಳು ಇವತ್ತಿನ ತುರ್ತು ಅಗತ್ಯಗಳಾಗಿರುವುದನ್ನು ತಮ್ಮ ಪತ್ರಿಕೆಯ ಮೂಲಕ ಮನಗಂಡಿದ್ದೇನೆ. ಅದಕ್ಕೆ ತಕ್ಕಂತ ಬರಹಗಳನ್ನು ಒದಗಿಸುತ್ತಿರುವ ಪತ್ರಿಕೆ ಹೀಗೆಯೇ ತನ್ನ ಪ್ರಗತಿಪರತೆಯನ್ನು ಕಾಯ್ದುಕೊಳ್ಳಲಿ. ಸಂವಾದ –10, ವಿಶೇಷ ಸಂಚಿಕೆ ಹಲವು ಸಮೃದ್ಧಿಗಳಿಂದ ಮೂಡಿ ಬಂದಿದ್ದು, ನಂತರದ ಸಂಚಿಕೆ ಹೊಸ ವಿನ್ಯಾಸದಲ್ಲಿ ಪ್ರಕಟಗೊಂಡಿರುವುದು ಸಂವಾದದ ಮುಂದಿನ ಸೃಜನಕ್ರಿಯೆಯ ಭವಿಷ್ಯವನ್ನು ಸಾರುತ್ತದೆ. ಮುರಳೀಧರ ರಾಠೋಡ್‌ರವರ ಮುಖಪುಟ ವಿನ್ಯಾಸ ತುಂಬಾ ಚೆನ್ನಾಗಿದೆ. ಅವರಿಗೆ ನನ್ನ ಅಭಿನಂದನೆಗಳು. ಪತ್ರಿಕೆ ಹೀಗೆ ಬೆಳೆಯಲಿ, ಪ್ರಗತಿಪರ ಚಿಂತನೆಗಳಿಂದ ವ್ಯವಸ್ಥೆಯ ಕಣ್ಣು ತೆರೆಸಲಿ ಎಂದು ಹಾರೈಸುತ್ತಾ,

ಇಂತಿ ಪ್ರಿಯ ಓದುಗ,

ಗುಂಡೀಗೆರೆ ವಿಶ್ವನಾಥ್, ಬೆಂಗಳೂರು



ಚೆಂದದ ಸಂಚಿಕೆ

ಪ್ರೀತಿಯ ಇಂದೂಧರ,

ನಿನ್ನ ವಿಶೇಷಾಂಕ ಬಂದಾಗ ಊರಲ್ಲಿರಲಿಲ್ಲ. ಮುಂಬೈಗೆ ಹೋಗಿದ್ದೆ. ಚಲನಚಿತ್ರೋತ್ಸವವೊಂದರಲ್ಲಿ ಭಾಗವಹಿಸಲು. ಇಂದು ಸಂವಾದ ಕಂಡೆ. ಹಾಗೇ ತಿರುವಿಹಾಕಿದೆ ಕುತೂಹಲದಿಂದ. ಸಾಕಷ್ಟು ಶ್ರದ್ಧೆ ವಹಿಸಿ ಒಂದು ಒಳ್ಳೆಯ ವಿಶೇಷಾಂಕ ತಂದಿದಿ. ಕಂಗ್ರಾಟ್ಸ್.

ಒಂದಷ್ಟು ಅರ್ಜೆಂಟ್ ಕೆಲಸಗಳಲ್ಲಿ ಮುಳುಗಿದೀನಿ. ಈ ತಿಂಗಳ ಕೊನೆಗೆ ಪುರುಸೊತ್ತಾದಾಗ ಕೂತು ಸಂವಾದವನ್ನು ಓದುವೆ. ಓದಿದ ನಂತರ ನಿನ್ನನ್ನು ಕಾಣುವೆ. ನಿನ್ನ ಪತ್ರಕರ್ತ ಅನುಭವದಲ್ಲಿ ಬಹುಶಃ ಸಂವಾದವೇ ದೀರ್ಘ ಅನುಭವವಿರಬೇಕು. ಅಥವಾ ಪಂಚಮಾನ? ಒಂದು ಒಳ್ಳೆಯ ಸಂಚಿಕೆ ತಂದು ಜಾಗತಿಕ ತವಕ ತಲ್ಲಣಗಳಿಗೆ ಆಶಾವಾದಿಯಾಗಿ ಸ್ಪಂದಿಸುತ್ತಿರುವ ನಿನಗೆ ಅಭಿನಂದನೆಗಳು.

ಪ್ರೀತಿಯಿಂದ,

ಚಲಂ ಬೆನ್ನೂರ್‌ಕರ್, ಬೆಂಗಳೂರು

ವಿಭಿನ್ನ ವಿಶೇಷಾಂಕ

ಮಾನ್ಯರೇ,

ದಶಮಾನೋತ್ಸವದ ವಿಶೇಷ ಸಂಚಿಕೆಯ ಎಲ್ಲ ಕತೆಗಳಾಗಲಿ, ಲೇಖನಗಳಾಗಲಿ, ಪದ್ಯಗಳಾಗಲಿ 'ತ್ರಿಕರಣ'ಗಳ ಪ್ರಭಾವವನ್ನು ಧಿಕ್ಕರಿಸಿ ಹೊಸ ಭರವಸೆಯತ್ತ ಸ್ಪಂದಿಸುತ್ತವೆ. ರಹಮತ್ ತರೀಕೆರೆಯವರ, ನಟರಾಜ್ ಬೂದಾಳು, ಜಿ. ರಾಜಶೇಖರ ಅವರ ಲೇಖನಗಳು ಗಮನಾರ್ಹ. ಮಾನವೀಯತೆ ಅಂತಾರಲ್ಲ ಅದರ ಬಗ್ಗೆ, ಇಸ್ಲಾಂ ಇಲ್ಲದ ಜಗತ್ತು ಹೇಗಿರುತ್ತಿತ್ತು ಮರು ಓದಿಗೆ ಹಚ್ಚಿಸುತ್ತವೆ. ಮಂಜುನಾಥ ಲತಾ, ಡಾ. ಜೋಗುರ, ಕೇಶವ ಮಳಗಿ ಕಥೆಗಳು ಮತ್ತು ಆ ಸರ್ಕಲ್ಲು ನಾಟಕ ಸಕಾಲಿಕವಾಗಿವೆ. ರಾಜಕೀಯ ಮತ್ತು ಸಿನಿಮಾ ವಿಶ್ಲೇಷಣಾತ್ಮಕವಾಗಿದೆ.

ಮುಖಪುಟದ ವಿನ್ಯಾಸವನ್ನು ಪ್ರತಿ ಪುಟದಲ್ಲಿ ಮೂಡಿಸಿರುವುದು ಒಂದು ವಿಶೇಷತೆ.

ಒಂದು ಸಲ ಓದಿ ತೆಗೆದಿಡುವ ವಿಶೇಷಾಂಕಗಳಿಗಿಂತ, ಭಿನ್ನವಾಗಿ ಮತ್ತೆ ಮತ್ತೆ ನೋಡುವ, ಚಿಂತನೆಗೆ ಹಚ್ಚುವ 'ಸಂವಾದ'ದ ಸಂಪಾದಕರಿಗೆ ಅಭಿನಂದನೆಗಳು.

ಯು.ಎನ್. ಸಂಗನಾಳಮಠ, ದಾವಣಗೆರೆ

ಬೇಕಾಗಿದ್ದಾರೆ

'ಸಂವಾದ' ಕಚೇರಿಯಲ್ಲಿ ಕೆಲಸ ಮಾಡಲು ಕನ್ನಡ ಓದು–ಬರಹ ಚೆನ್ನಾಗಿ ಬಲ್ಲ, ಕಂಪ್ಯೂಟರ್ ಕಲಿತಿರುವ (ಡಿಟಿಪಿ ಗೊತ್ತಿದ್ದರೆ ಒಳ್ಳೆಯದು) ಮಹಿಳಾ ಕಚೇರಿ ಸಹಾಯಕರು ಬೇಕಾಗಿದ್ದಾರೆ. ಸಂಬಳ 7 ರಿಂದ 8 ಸಾವಿರ. ಬೆಂಗಳೂರು ಪೂರ್ವ ಭಾಗದಲ್ಲಿ ವಾಸಿಸುವವರಿಗೆ ಆದ್ಯತೆ. ಕೂಡಲೇ ಸಂಪರ್ಕಿಸಿ: ಸಂಪಾದಕರು, 'ಸಂವಾದ' ಮಾಸಿಕ #402, 1ನೇ ಮುಖ್ಯ ರಸ್ತೆ, 1ನೇ ಸ್ಟೇಜ್, 2ನೇ ಬ್ಲಾಕ್, ಹೆಚ್.ಬಿ.ಆರ್ ಬಡಾವಣೆ, ಬೆಂಗಳೂರು–560043.

ಮೊಬೈಲ್: 94480 48306

ಅಂತರಂಗ

ಸಂ । ಪಾ । ದ । ಕೀ । ಯ



ನಿಜ ಅರ್ಥದ ಅಂಬೇಡ್ಕರ್ ವಾರಸುದಾರರಾಗಿ

ಮತ್ತೆ ಅಂಬೇಡ್ಕರ್ ಜಯಂತಿ ಬಂದಿದೆ. ಬಹುಷಃ ಇಡೀ ಭಾರತದಲ್ಲಿ ಬೇರಾವುದೇ ವ್ಯಕ್ತಿಯನ್ನು ಕುರಿತು ಇಷ್ಟು ಭಾವನಾತ್ಮಕ ಸಂಬಂಧವನ್ನು ಜನತೆ ಇಟ್ಟುಕೊಂಡಿಲ್ಲ. ಗಾಂಧಿ-ನೆಹರೂ ಮೊದಲಾದವರ ಜಯಂತಿಗಳು ದೇಶಾದ್ಯಂತ ಆಚರಿಸಲ್ಪಡುವವಾದರೂ, ಅವು ಯಾವುದೇ ಭಾವನಾತ್ಮಕ ಸಂಬಂಧವನ್ನು ಹೊಂದಿರುವುದಿಲ್ಲ. ಅಂಬೇಡ್ಕರ್ ನಿಧನರಾದ ನಂತರ ವರ್ಷ ಕಳೆದಂತೆ ಅವರು ಜನರಿಗೆ ಹತ್ತಿರವಾಗುವುದು ಹೆಚ್ಚುತ್ತಲೇ ಇದೆ. ಕೆಳ ಸಮುದಾಯಗಳಲ್ಲಿ ಅದರಲ್ಲೂ ಪರಿಶಿಷ್ಟ ಜಾತಿ/ವರ್ಗಗಳಲ್ಲಿ ಅಂಬೇಡ್ಕರ್ ಪ್ರಭಾವ ಗಾಢವಾಗುತ್ತಲೇ ಇದೆ. ದೇಶದಲ್ಲಿ ಎಲ್ಲೆಂದರಲ್ಲಿ ಕಂಡು ಬರುವ ಅಂಬೇಡ್ಕರ್ ಪ್ರತಿಮೆಗಳನ್ನು ನೋಡಿದರೆ ಅವರ ಪ್ರಭಾವ ಎಷ್ಟೆಂದು ಗೋಚರಿಸುತ್ತದೆ.

ಒಂದು ರೀತಿಯಿಂದ ನೋಡಿದರೆ ಅಂಬೇಡ್ಕರ್ ಅವರ ಇಂಥ ಪ್ರಭಾವದಿಂದ ದಲಿತ ಜನಸಮುದಾಯದಲ್ಲಿ ಜಾಗೃತಿ ಮೂಡುತ್ತಿದ್ದರೂ, ಅದಕ್ಕೆ ಸರಿ ಸಮನಾಗಿ ದಲಿತರ ಮೇಲಿನ ದೌರ್ಜನ್ಯಗಳೂ ಹೆಚ್ಚುತ್ತಲೇ ಇವೆ. ದಲಿತರಿಗೆ ರಾಜಕೀಯ, ಶೈಕ್ಷಣಿಕ ಹಾಗೂ ಉದ್ಯೋಗಗಳಲ್ಲಿ ಪ್ರಾತಿನಿಧ್ಯ ಸಿಕ್ಕಿ ದೇಶದ ಮಧ್ಯಮ ವರ್ಗದವರೊಂದಿಗೆ ಅವರೂ ಗುರುತಿಸಿಕೊಳ್ಳುವುದಕ್ಕೆ ಆರಂಭಿಸಿದಾಗಿನಿಂದ ದಲಿತರ ಮೇಲಿನ ಸಾಂಪ್ರದಾಯಿಕ ದೌರ್ಜನ್ಯಗಳೊಂದಿಗೆ ಹೊಸ ಬಗೆಯ ಅಸಹನೆ ಕೂಡ ಹೆಚ್ಚಾಗತೊಡಗಿದೆ. ಇಂಥ ಸಂದರ್ಭದಲ್ಲಿ ದಲಿತ ಸಮುದಾಯಗಳಲ್ಲಿ ಐಕ್ಯತೆ, ಸೈದ್ಧಾಂತಿಕ ಜಾಗೃತಿಗಳು ಮತ್ತಷ್ಟು ಸದೃಢವಾಗಬೇಕಾಗಿತ್ತು. ಆದರೆ ಇಡೀ ದಲಿತ ಸಮುದಾಯಗಳು ವಿಘಟನೆಯತ್ತ ಮುಖಮಾಡಿವೆಯೇ ಹೊರತು, ಐಕ್ಯ ಹೋರಾಟ ಕಟ್ಟುವತ್ತ ಮನಸ್ಸು ಮಾಡುತ್ತಿಲ್ಲ. ಇದು ಒಂದು ರೀತಿಯ ವಿಚಿತ್ರ ನಡವಳಿಕೆಯಾದರೂ, ಜಾಗತೀಕರಣದ ಕ್ಷಣಿಕ ಲಾಭದ ಲಾಲಸೆಗೆ ಜನಸಮುದಾಯವೆಲ್ಲ ಒಳಗಾಗಿರುವಾಗ ತಾವೇಕೆ ಅದರಿಂದ ಹೊರಗಿರಬೇಕೆಂದು ಒಳ ಆಸೆ ದಲಿತ ಸಮುದಾಯಗಳ ಇಂಥ ವರ್ತನೆಗೆ ಕಾರಣವಿರಬಹುದೆಂಬ ಅನುಮಾನ ನನ್ನನ್ನು ಕಾಡುತ್ತಿದೆ.

ಎಲ್ಲವನ್ನೂ ಸ್ವಂತ ಲಾಭಕ್ಕಾಗಿ ಹೇಗೆ ಬಳಸಿಕೊಳ್ಳಬಹುದೆಂಬ ಲೆಕ್ಕಾಚಾರವೇ ಇಂದು ಮುಖ್ಯವಾಗುತ್ತಿದೆ. ದಲಿತ ಸಂಘಟನೆಗಳ ಹೆಸರಿನಲ್ಲಿ ಸಾವಿರಾರು ಮಂದಿ ನಗರ-ಪಟ್ಟಣ ಪ್ರದೇಶಗಳಲ್ಲಿ ಜೀವನ ನಡೆಸುತ್ತಿದ್ದರೆ, ನೂರಾರು ಮಂದಿ 'ನಾಯಕ'ರುಗಳು ರಾಜ್ಯ ಮಟ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಕೆಲವರಿಗಂತೂ ಅದೇ ಉದ್ಯೋಗವಾಗಿದೆ. ದೊಡ್ಡ ದೊಡ್ಡ ನಗರಗಳಲ್ಲಿರುವ ಒಂದಷ್ಟು ಜನರು ದೊಡ್ಡ ಸಂಘಟನೆಗಳ ಹೆಸರಿನಲ್ಲಿ 'ರಿಯಲ್ ಎಸ್ಟೇಟ್' ದಂಧೆಗೆ ಇಳಿದಿದ್ದಾರೆ. ವಿವಾದಾತ್ಮಕ ಖಾಲಿ ಸೈಟು ಕಂಡಲ್ಲೆಲ್ಲ ಇವರ ಸಂಘಟನೆಯ ಬೋರ್ಡ್‌ಗಳು ರಾತ್ರೋರಾತ್ರಿ ಉದ್ಭವವಾಗುತ್ತವೆ. ವ್ಯವಹಾರ ಚುಕ್ತಾವಾದ ಕೂಡಲೇ ಈ ಸಂಘಟನೆಗಳು ಬೋರ್ಡ್ ಸಮೇತ ನಾಪತ್ತೆಯಾಗುತ್ತವೆ. ಇನ್ನೂ ಕೆಲವರಂತೂ ದಲಿತ ಕಲೆ, ಸಾಹಿತ್ಯ, ಸಂಸ್ಕೃತಿಗಳನ್ನೇ ಬಂಡವಾಳ ಮಾಡಿಕೊಂಡು ಅವುಗಳ ನೇರ ವ್ಯಾಪಾರಕ್ಕೆ ನಿಂತುಬಿಟ್ಟಿದ್ದಾರೆ. ಕಲಾಕ್ಷೇತ್ರ, ಕನ್ನಡ ಭವನ, ಅಕಾಡೆಮಿ, ಸಂಸ್ಕೃತಿ ಇಲಾಖೆಗಳ ಜಗಲಿಗಳ ಮೇಲೆ ಸದಾ ಪವಡಿಸುವ ಇವರುಗಳ ಏಕೈಕ ಕಾರ್ಯಕ್ರಮವೆಂದರೆ ಪರಿಶಿಷ್ಟ ಜಾತಿ/ವರ್ಗಗಳ ಮೀಸಲಾದ ಶೇ. 18ರ ಪಾಲು ಹೊಡೆಯುವುದು. ಹೀಗೆ ಹೊಡೆದ ಸರ್ಕಾರಿ ಹಣದಲ್ಲಿ ಕಾರ್ಯಕ್ರಮ ನಡೆಸಿ 'ಕ್ರಾಂತಿ' ಮಾಡುವುದರಲ್ಲಿ ಇವರು ನಿಸ್ಸೀಮರು!

ಬಹುಷಃ ಹೀಗೆ ಬರೆಯುವುದು ಅತಿಯಾಯಿತು ಎನಿಸುತ್ತಿದೆ. ಆದರೆ ಅದು ವಸ್ತುಸ್ಥಿತಿಯೂ ಆಗಿರುವುದರಿಂದ ಮನಸ್ಸು ತಡೆಯುತ್ತಿಲ್ಲ. ನಿಜವಾಗಿ ನಾನು ಬರೆಯಬೇಕು ಅಂದುಕೊಂಡಿದ್ದು ಇದಲ್ಲ. ಅಂಬೇಡ್ಕರ್ ಜಯಂತಿಯ ನೆಪದಲ್ಲಾದರೂ ದಲಿತ ಸಂಘಟನೆಗಳು ಅವರನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಅಂಬೇಡ್ಕರ್ ನಿರಂತರ ಪರಿವರ್ತನೆಗೆ ತನ್ನನ್ನ ತಾನು ಒಡ್ಡಿಕೊಳ್ಳುತ್ತಿದ್ದರು. ತಮ್ಮ ಗುರಿ ಸಾಧಿಸಲು ಕಾಲಕಾಲಕ್ಕೆ ಅನುಸರಿಸಬೇಕಾದ ಮಾರ್ಗೋಪಾಯಗಳನ್ನು ಗುರುತಿಸಿಕೊಳ್ಳುತ್ತಾ ಹೋರಾಟವನ್ನೂ ಮುಂದುವರೆಸುತ್ತಿದ್ದರು. ಅವರ ಪ್ರತಿ ಕಾರ್ಯಕ್ರಮವೂ ತಮ್ಮ ಗುರಿಗಾಗಿ ನಡೆಸುತ್ತಿರುವ ಹೋರಾಟದ ಮುಂದುವರೆದ ಭಾಗವೇ ಆಗಿರುತ್ತಿತ್ತು. ಅವರೆಂದೂ ನಿಂತ ನೀರಾಗಿರಲಿಲ್ಲ. ಒಂದೇ ಕಾರ್ಯಕ್ರಮಕ್ಕೆ, ಆಲೋಚನೆಗೆ ಜೋತು ಬೀಳುತ್ತಿರಲಿಲ್ಲ. ರಾಜಕಾರಣದೊಳಗಿದ್ದೂ, ಅವರು ಅದಕ್ಕಾಗಿ ತಮ್ಮ ತತ್ವ ಸಿದ್ಧಾಂತಗಳನ್ನು ಬಿಟ್ಟುಕೊಡಲಿಲ್ಲ. ಹಿಂದೂ ಕೋಡ್ ಬಿಲ್‌ಗೆ ಪ್ರಧಾನಿ ನೆಹರೂ ಒಪ್ಪದಿದ್ದಾಗ ಕಾನೂನು ಮಂತ್ರಿಗಿರಿಗೆ ರಾಜಿನಾಮೆ ಎಸೆದು ಬಂದರು.

ಆದರೆ ಅಂಬೇಡ್ಕರ್ ಅನುಯಾಯಿಗಳೆಂದು ನಿತ್ಯ ಕರೆದುಕೊಳ್ಳುವ ಬಹುತೇಕ ದಲಿತ ನಾಯಕರಿಗೇಕೆ ಇದು ಸಾಧ್ಯವಾಗುತ್ತಿಲ್ಲ? ಅಂಬೇಡ್ಕರ್ ಕಟ್ಟಿ ಬೆಳೆಸಿದ ಚಳವಳಿಯನ್ನೇಕೆ ಮುನ್ನಡೆಸಲಾಗುತ್ತಿಲ್ಲ? ತನಗಾಗಿ ಎಂದೂ ಬದುಕದ ಅಂಬೇಡ್ಕರ್ ಯಾಕೆ ಇವರಿಗೆಲ್ಲ ಆದರ್ಶವಾಗುತ್ತಿಲ್ಲ? ಯಾಕೆ ಇವರೆಲ್ಲ ಕುಬ್ಜರಾಗಿ ತಮ್ಮ ತಮ್ಮ ತಮ್ಮ ಜಾತಿಗಳೊಳಗೆ ಕಳೆದು ಹೋಗುತ್ತಿದ್ದಾರೆ? ಯಾಕೆ ಒಂದು ಶಾಸಕ ಸ್ಥಾನಕ್ಕೆ, ಅಧ್ಯಕ್ಷಗಿರಿಗೆ ತಮ್ಮನ್ನು ಮಾರಿಕೊಳ್ಳುತ್ತಿದ್ದಾರೆ? ಇವು ಹತಾಷೆಯ ಪ್ರಶ್ನೆಗಳಲ್ಲ. ಬದಲಿಗೆ ಇಂದಿನ ಪ್ರತಿಯೊಬ್ಬ ದಲಿತ ನಾಯಕನೂ ನಿಜದ ಅರ್ಥದಲ್ಲಿ ಅಂಬೇಡ್ಕರ್ ಅವರ ಸೈದ್ಧಾಂತಿಕ ವಾರಸುದಾರನಾಗಬೇಕೆಂಬ ಅದಮ್ಯ ತುಡಿತದಿಂದ ಎದ್ದ ಪ್ರಶ್ನೆಗಳು. ನನ್ನಂತೆಯೇ ಇಂಥ ಪ್ರಶ್ನೆಗಳನ್ನು ತಮ್ಮೊಳಗೆ ಕೇಳಿಕೊಂಡು ತಳಮಳ-ಆತಂಕದಿಂದ ಬೇಯುತ್ತಿರುವ ನಾಡಿನ ಪ್ರಜ್ಞಾವಂತರ ಕಾಳಜಿಯಿಂದ ಮೂಡಿಬಂದ ಪ್ರಶ್ನೆಗಳು. ಇಡೀ ಸಾಮಾಜಿಕ ಹಾಗೂ ರಾಜಕೀಯ ಬದುಕೇ ಭ್ರಷ್ಟಗೊಂಡಿರುವಾಗ ದಲಿತ ನಾಯಕರನ್ನೇಕೆ ಪ್ರತ್ಯೇಕಿಸಿ ನೋಡಬೇಕೆಂಬ ಪ್ರಶ್ನೆಯೂ ಇದರಲ್ಲಿದೆ. ಹೀಗೆ ಪ್ರಶ್ನಿಸುವವರೆಲ್ಲ ಅವಾಸ್ತವವಾದಿಗಳೆಂದು ಜರೆದದ್ದನ್ನು ಕೇಳಿದ್ದೇನೆ. ಆದರೆ ನಮ್ಮಲ್ಲಿ ಕನಿಷ್ಟ ಆದರ್ಶಕ್ಕಾದರೂ ಕೆಲವರು ಬದುಕಬಾರದೇ ಎಂಬ ಕೊರಗು ನನ್ನದು. ನಾಳಿನ ಜನಾಂಗಕ್ಕೆ ಆದರ್ಶಪ್ರಾಯರೆಂದು ತೋರಿಸಲು ಅಂಬೇಡ್ಕರ್ ಅವರ ನಂತರ ಯಾರಿದ್ದಾರೆ? ಅಂಬೇಡ್ಕರ್ ಅವರಷ್ಟು ಎತ್ತರಕ್ಕೆ ಏರದಿದ್ದರೂ, ಅವರ ಆದರ್ಶ-ಹೋರಾಟಗಳ ನೈಜ ವಾರಸುದಾರರಾಗಿಯಾದರೂ ಕೆಲವರು ಇರಬೇಕಲ್ಲ?

'ಸಂವಾದ'ದ ಅಂಬೇಡ್ಕರ್ ವಿಶೇಷಾಂಕ ಇಂಥ ಅಂಬೇಡ್ಕರ್ ವಾರಸುದಾರರನ್ನು, ಅಂಬೇಡ್ಕರ್ ಕಟ್ಟಿ ಬೆಳೆಸಿದ ಚಳವಳಿಯನ್ನು ನಿಜದ ಅರ್ಥದಲ್ಲಿ ಮುಂದುವರೆಸುವವರನ್ನು ಪ್ರೇರೆಪಿಸಬಲ್ಲದು ಎಂಬ ಆಶಯ ನನ್ನದು.

○ ಇಂದೂಧರ ಹೊನ್ನಾಪುರ

ಸಂಪಾದಕರೊಡನೆ ಸಂವಾದ

ಜಾತೀಯತೆ ಹಾಗೂ ಜಾತ್ಯಾತೀತತೆ

ಜಾತ್ಯಾತೀತತೆ ಎನ್ನುವ ಪದವನ್ನು ಧರ್ಮನಿರಪೇಕ್ಷತೆ, ಮತಾತೀತತೆ ಎಂತಲೂ ಕರೆಯುವದಿದೆ. ಅತ್ಯಂತ ಜಟಿಲವಾಗಿರುವ ಜಾತಿ ಹಾಗೂ ಧರ್ಮದಂತಹ ವಿಷಯಗಳಲ್ಲಿ ಸಡಿಲತೆಯನ್ನು ಕಂಡುಕೊಳ್ಳುವ ಮಾರ್ಗವಾಗಿ ಜಾತ್ಯಾತೀತತೆ ಪರಿಕಲ್ಪನೆ ಬೆಳೆದುಬಂದಿದೆ. ಸರಳವಾಗಿ ಹೇಳುವದಾದರೆ ಧರ್ಮ ಮತ್ತು ಜಾತಿಯಂಥ ವಿಷಯಗಳನ್ನು ಕುರಿತು ಅತ್ಯಂತ ಯತಾರ್ಥವಾಗಿ ವ್ಯವಹರಿಸುವ ಮನಃಸ್ಥಿತಿಯೇ ಜಾತ್ಯಾತೀತತೆ.

ಡಾ॥ ಎಸ್.ಬಿ ಜೋಗುರ

ಪ್ರಿಯ ಸಂಪಾದಕರೇ,

ಅದೊಂದು ಅಚ್ಚುಕಟ್ಟಾದ ವೇದಿಕೆ. ವೇದಿಕೆಯ ಮೇಲೆ ನಿರೂಪಕನನ್ನು ಒಳಗೊಂಡು ಏಳು ಜನ. ಆ ಏಳು ಜನರಲ್ಲಿ ಕಾರ್ಯಕ್ರಮ ನಿರೂಪಣೆ ಮಾಡುವವನನ್ನು ಮೈನಸ್ ಮಾಡಿದರೆ ಮಿಕ್ಕವರೆಲ್ಲಾ ಬಹುತೇಕವಾಗಿ ಒಂದೇ ಜಾತಿಗೆ ಸೇರಿದವರು. ಅವರೆಲ್ಲರೂ ಅಲ್ಲಿ ಸೇರಿರುವ ಉದ್ದೇಶ 'ಜಾತ್ಯಾತೀತತೆಯ ಪ್ರಸ್ತುತತೆ' ಎನ್ನುವ ವಿಷಯದ ಬಗ್ಗೆ ಕುರಿತು ಚರ್ಚಿಸುವದಾಗಿದೆ. ಜಾತ್ಯಾತೀತತೆ ಎಂದರೇನು? ಎನ್ನುವ ವಿಷಯದಿಂದ ಆರಂಭವಾಗುವ ಅವರ ಚರ್ಚೆ ಅದರ ಕಾರಣಗಳು.. ಪರಿಣಾಮಗಳನ್ನೊಳಗೊಂಡು ಅಂತಿಮವಾಗಿ ತಮ್ಮ ಸಮುದಾಯ ಚಿಕ್ಕ ಸಮುದಾಯ, ಅನೇಕ ಬಗೆಯ ಹಕ್ಕು ಸೌಲಭ್ಯಗಳಿಂದ ವಂಚಿತವಾದ ಸಮುದಾಯ, ಹಾಗೆ ನೋಡಿದರೆ ತಮ್ಮ ಜಾತಿಗೆ ಸಿಗುವ ಸೌಲಭ್ಯಗಳು ತನ್ನದೇ ಸೈಜಿನ ಜಾತಿಯವರಿಗೆ ಸಿಗುವ ಸೌಲಭ್ಯಗಳಿಗಿಂತಲೂ ಕಡಿಮೆ, ಈ ಬಾರಿಯ ಚುನಾವಣೆಯ ಸಂದರ್ಭದಲ್ಲಿ ಅದನ್ನು ನಾವೆಲ್ಲಾ ಒಗ್ಗಟ್ಟಾಗಿ ವೋಟು ಕೇಳಲು ಬರುವವರಿಗೆ ಮನದಟ್ಟು ಮಾಡಬೇಕು ಎನ್ನುವವರೆಗೆ ಆ ಚರ್ಚೆ ಬಂದು ನಿಲ್ಲುತ್ತದೆ. ಈ ರೀತಿಯ ಚರ್ಚೆಗಳು ಕೇಂದ್ರ ವೃತ್ತಾಂತದಿಂದ ಕರೆಕ್ಟಾಗಿ ಶುರುವಾದರೂ ವಿಚಲಿತವಾಗಿ ಎಲ್ಲೆಲ್ಲೋ ಹಾಯುವ ಸುಂಟರಗಾಳಿಯಂತೆ ಹೋಗಿ ನಿಲ್ಲುವ ಅಪಾಯದ ನಡುವೆ, ಜಾತ್ಯಾತೀತತೆ ಎನ್ನುವ ಪದ ಇವರ ಭಂಡತನಕ್ಕೆ ಬೆದರಿ ನಾಚಿ ನೀರಾಗುತ್ತದೆ ತನ್ನ ಅನರ್ಥಕ್ಕೆ ಕಂಗಾಲಾಗುತ್ತದೆ.

ಇಂಗ್ಲಿಷನ 'ಸೆಕ್ಯುಲ್ಯಾರಿಜಂ' ಎನ್ನುವ ಪದ ಆಯಾ ಹೊತ್ತಿಗೊದಗುವಂತೆ ಅರ್ಥೈಸುವಲ್ಲಿರುವ ಮುಖ್ಯ ಕಾರಣ ಇತರೆ ಭಾಷೆಗಳಲ್ಲಿ [ಕನ್ನಡವನ್ನೊಳಗೊಂಡು] ಸಾರ್ವತ್ರಿಕವಾಗಿ ಸಲ್ಲಬಹುದಾದ ಸ್ವೀಕೃತವಾದ ಏಕಮಾತ್ರ ಪದವಿಲ್ಲ. ಕನ್ನಡದಲ್ಲಂತೂ ಜಾತ್ಯಾತೀತತೆ ಎನ್ನುವ ಪದವನ್ನು ಧರ್ಮನಿರಪೇಕ್ಷತೆ, ಮತಾತೀತತೆ ಎಂತಲೂ ಕರೆಯುವದಿದೆ. ಅತ್ಯಂತ ಜಟಿಲವಾಗಿರುವ ಜಾತಿ ಹಾಗೂ ಧರ್ಮದಂತಹ ವಿಷಯಗಳಲ್ಲಿ ಸಡಿಲತೆಯನ್ನು ಕಂಡುಕೊಳ್ಳುವ ಮಾರ್ಗವಾಗಿ ಜಾತ್ಯಾತೀತತೆ ಪರಿಕಲ್ಪನೆ ಬೆಳೆದುಬಂದಿದೆ. ಸರಳವಾಗಿ ಹೇಳುವದಾದರೆ ಧರ್ಮ ಮತ್ತು ಜಾತಿಯಂಥ ವಿಷಯಗಳನ್ನು ಕುರಿತು ಅತ್ಯಂತ ಯತಾರ್ಥವಾಗಿ ವ್ಯವಹರಿಸುವ ಮನಃಸ್ಥಿತಿಯೇ ಜಾತ್ಯಾತೀತತೆ. ಪಿ.ಎಚ್.ಲ್ಯಾಂಡಿಸ್ ಎನ್ನುವ ಚಿಂತಕರು ಈ ಜಾತ್ಯಾತೀತತೆ ಎನ್ನುವದು ಎರಡು ಪ್ರಮುಖ ಧ್ಯೇಯಗಳನ್ನು ಆಧರಿಸಿದೆ ಎಂದಿರುವರು. ಒಂದನೆಯದಾಗಿ ಅನೇಕ ಶತಮಾನಗಳಿಂದಲೂ ನಂಬಿಕೊಂಡು ಬರಲಾಗಿದ್ದ ಅತಿಮಾನುಷ ಶಕ್ತಿಗಳ ಬಗೆಗಿನ ನಂಬುಗೆಯ ಬುಡಕ್ಕೆ ಕೈ ಹಾಕಿ ಅಲ್ಲಾಡಿಸುವದು, ಎರಡನೆಯದಾಗಿ ಈ ಅತಿಮಾನುಷ ಶಕ್ತಿಯ ಬಗೆಗಿನ ನಂಬುಗೆಯ ಜಾಗೆಯಲ್ಲಿ ವೈಚಾರಿಕತೆಯನ್ನು ತಂದು ನಿಲ್ಲಿಸಿರುವ ಕೆಲಸ ಅಷ್ಟೇ ಮುಖ್ಯವಾದುದು. ಅನೇಕ ಶತಮಾನಗಳಿಂದಲೂ ಧರ್ಮದ ಹೊಟ್ಟೆಯೊಳಗೆ ಬೆಚ್ಚಗೆ ಕುಳಿತು ಕಾವು ಕಂಡ ನಂಬುಗೆಗಳು, ಸಂಪ್ರದಾಯಗಳ ಬೇರುಗಳು ಸಡಿಲುಗೊಂಡು, ನಡುಕ ಉಂಟಾಗುವಲ್ಲಿ ಈ ಜಾತ್ಯಾತೀತ ಮನೋಭಾವವೇ ಕಾರಣ. ಆದರೆ ಇತ್ತೀಚಿನ ದಿನಗಳಲ್ಲಿ ಈ ಜಾತ್ಯಾತೀತತೆ ಎನ್ನುವ ಪದ ಆಯಾ ದೇಶಗಳಲ್ಲಿ ಕೋಮುಗಲಭೆಗಳು ಘಟಿಸಿದಾಗ ಬಳಕೆಯಾಗುವ ಪದವಾಗಿ ತನ್ನ ಸಂಕುಚಿತ ಸೀಮಿತತೆಯನ್ನು ಉಳಿಸಿಕೊಂಡಿದೆ ಎನ್ನುವಂತಾಗಿದೆ.

ಜಾತ್ಯಾತೀತತೆಯ ಬಗೆಗೆ ಮಾತನಾಡುತ್ತಾ ಖ್ಯಾತ ಇತಿಹಾಸಕಾರ್ತಿ ರೋಮಿಲಾ ಥಾಪರ್ ಅವರು 'ಜಾತ್ಯಾತೀತತೆ ಎನ್ನುವದು ಜಾತ್ಯಾತೀತವಲ್ಲದ ಘಟನೆಗಳಿಗೆ ಸಿಗಬಹುದಾದ ಪ್ರತಿಕ್ರಿಯೆಯ ಹಂತದಲ್ಲಿಯ ಒಂದು ಪದವಾಗಿ ಮಾತ್ರ ಉಳಿದಿದೆ' ಎಂದಿರುವದರ ಹಿಂದೆ ಆ ಪದದ ಸಸ್ತಾ ಬಳಕೆಯ ಬಗೆಗಿನ ಕಳಕಳಿ ಅಡಕವಾಗಿದೆ. ಅನೇಕ ಸಂದರ್ಭಗಳಲ್ಲಿ ಈ ಜಾತ್ಯಾತೀತತೆಯ ಪರಿಕಲ್ಪನೆಯನ್ನು ಪಾಶ್ಚಾತ್ತೀಕರಣಕ್ಕೆ ಸಂವಾದಿ ಎನ್ನುವ ಹಾಗೆ ಬಳಸುವದೂ ಇದೆ. ಆದರೆ ಎರಡೂ ಬೇರೆ ಬೇರೆ ಕಲ್ಪನೆಗಳೇ.. ಜಾತ್ಯಾತೀತತೆ ಎನ್ನುವದು ಧರ್ಮ ಮತ್ತು ಜಾತಿಯನ್ನು ಧಿಕ್ಕರಿಸುವ ಬಗ್ಗೆ ಮಾತನಾಡುವದಲ್ಲ, ಬದಲಾಗಿ ತನ್ನಂತೆ ಪರರ ಬಗೆದೊಡೆ ಕೈಲಾಸ ಕಣ್ಣ ಮುಂದೆಯೇ ಎಂದು ಪ್ರತಿಪಾದಿಸುವ ಮನೋಭಾವ. ಹಾಗೆ ನೋಡಿದರೆ ಈ ಜಾತ್ಯಾತೀತತೆಗೆ ಒಂದು ಅಗಾಧವಾದ ಶಕ್ತಿಯಿದೆ. ಅದು ಕೇವಲ ವೇದಿಕೆಯ ಉಪಭೋಗದ ವಿಷಯವಾಗಿ, ಚರ್ಚೆ ಮತ್ತು ಸಂವಾದದ ಸರಕಾಗಿ ಉಳಿದಿರುವ ಹಿನ್ನೆಲೆಯಲ್ಲಿಯೇ ಅದರ ತಾಕತ್ತಿನ ಅರಿವು ನಮಗೆ ಸರಿಯಾಗಿ ಗ್ರಹಿಕೆಯಾಗುತ್ತಿಲ್ಲ. ಇದನ್ನು ಬಳಸಿ ಒಂದು ಸಮುದಾಯವನ್ನು ಕೇವಲ ಧಾರ್ಮಿಕ ಸಾಮರಸ್ಯದ ತಳಹದಿಯ ಮೇಲೆ ಕಟ್ಟುವ ಕೆಲಸ ಮಾತ್ರವಲ್ಲದೇ ಅದನ್ನು ಔಚಿತ್ಯಪೂರ್ಣವಾಗಿ ರೂಪಿಸುವಲ್ಲಿಯೂ ಇದು ನೆರವಾಗುತ್ತದೆ. ಅದು ಗಾಂಧೀಜಿಯವರ ರಾಮರಾಜ್ಯ, ಪ್ಲೇಟೋನ ಆದರ್ಶರಾಜ್ಯ, ಥಾಮಸ್ ಮೋರ್‌ನ ಯುಟೋಪಿಯಾಕ್ಕೆ ತುಂಬಾ ತುಂಬಾ ಹತ್ತಿರವಾದ ಸಮುದಾಯವನ್ನು ಕಟ್ಟುವಲ್ಲಿ ಈ ಜಾತ್ಯಾತೀತತೆಯ ಶಕ್ತಿ ನೆರವಾಗುತ್ತದೆ. ಈ ಪರಿಕಲ್ಪನೆಯನ್ನು ಬಳಸುವಾಗಲೆಲ್ಲಾ ನಾವು ಬಹುತೇಕವಾಗಿ ಹಿಂದು-ಮುಸ್ಲಿಂ ಧಾರ್ಮಿಕ ಸಮೂಹಗಳನ್ನು ಮೀರಿ, ಹೊರತುಪಡಿಸಿ ಚಿಂತಿಸುವದೇ ಇಲ್ಲ. ಜಾತ್ಯಾತೀತತೆ ಎನ್ನುವದು ಧರ್ಮ, ಜಾತಿ, ಭಾಷೆ, ಪ್ರಾದೇಶಿಕತೆಯನ್ನು ಮೀರಿ ಅನ್ವಯ, ಅಳವಡಿಕೆಯಾಗುವ ಅವಶ್ಯಕತೆಯಿದೆ.

ಜಾತಿ ಎನ್ನುವದು ಭಾರತೀಯ ಸಮಾಜದಲ್ಲಿ ಮತ್ತೆ ಮತ್ತೆ ನಮ್ಮ ಬದುಕಿನ ಬೇರೆ ಬೇರೆ ಆಯಾಮಗಳ ಬಗೆಗಿನ ತೀರ್ಮಾನಗಳ ಮಧ್ಯೆ ಎಂಟ್ರಿ ಹೊಡೆಯುವ ಪರಿಣಾಮವಾಗಿ ನಾವು ಜಾತ್ಯಾತೀತತೆಯ ಪರಿಕಲ್ಪನೆಯನ್ನು ಸಂಕುಚಿತವಾದ ರೀತಿಯಲ್ಲಿ ಬಳಸುವ, ಅದರ ಆಳ ಅಗಲವನ್ನು ಕುಬ್ಜಗೊಳಿಸುವ ಕೆಲಸವನ್ನು ತಿಳಿದೂ ಮಾಡುತ್ತಿರುತ್ತೇವೆ. ಹಾಗಾದಾಗ ಜಾತ್ಯಾತೀತತೆ ಎನ್ನುವ ಪದ ಹುಳ ತಿಂದ ಕಟ್ಟಿಗೆಯಂಥಾಗುತ್ತದೆ. ಭಾರತೀಯ ಸಂವಿಧಾನದ ಪೂರ್ವಪೀಠಿಕೆಯಲ್ಲಿ ತಳ ಊರಿದ ಈ ಕಲ್ಪನೆಯನ್ನು ವಸ್ತುನಿಷ್ಠ ಹಿನ್ನೆಲೆಯಲ್ಲಿ ಅರಿಯುವ ಅವಶ್ಯಕತೆಯಿದೆ. ಜಾತಿಯ ಸೆಳಕಿನೊಂದಿಗೆ ಜಾತ್ಯಾತೀತತೆ ಎನ್ನುವ ಪದಪ್ರಯೋಗ ಮಾಡುವಾತ ಆ ಪದಕ್ಕೂ ನ್ಯಾಯ ಕೊಡಲಾರ. ಅಂತೆಯೇ ತನ್ನ ಜೊತೆಗಿರುವ ಜನಸಮೂಹಕ್ಕೂ ಕೂಡಾ. ಇನ್ನು ಕೆಲ ವಿದೇಶಿ ಚಿಂತಕರು ಭಾರತೀಯ ನೆಲದಲ್ಲಿ ಜಾತ್ಯಾತೀತತೆ ಎನ್ನುವದು ಸಾಧ್ಯವೇ ಇಲ್ಲ ಯಾಕೆಂದರೆ ಇಲ್ಲಿ ವೃತ್ತಿ ಮತ್ತು ಪ್ರವೃತ್ತಿ ಎರಡೂ ಒಂದೇ ಆಗಿಲ್ಲ ಎನ್ನುವದಿದೆ. ಅಂದರೆ ಆಚರಣೆ ಮತ್ತು ಅನುಸರಣೆಯ ಮಧ್ಯೆ ಇಲ್ಲಿ ತುಂಬಾ ಅಂತರಗಳಿವೆ ಎಂದು ಹೇಳುವವರಿದ್ದಾರೆ. ಆಂದ್ರೇ ಬೀತೇ ಎನ್ನುವ ಚಿಂತಕರು ಈ ಜಾತ್ಯಾತೀತತೆ ಎನ್ನುವ ಪರಿಕಲ್ಪನೆ ಕೇವಲ ಭಾರತದಲ್ಲಿ ಮಾತ್ರವಲ್ಲದೇ ತಾವು ತುಂಬಾ ಸೆಕ್ಯುಲರ್ ಎಂದು ಹೇಳಿಕೊಳ್ಳುವ ಫ್ರಾನ್ಸ್ ಮತ್ತು ಜರ್ಮನಿಯಲ್ಲಿಯೂ ಗೊಂದಲಗಳನ್ನು ಒಳಗೊಂಡಿರುವದಿದೆ. ಅತಿ ಮುಖ್ಯವಾಗಿ ಆಯಾ ರಾಷ್ಟ್ರೀಯ ನೆಲೆಯಲ್ಲಿ ಜಾತ್ಯಾತೀತತೆ ಎನ್ನುವದು ಅರ್ಥೈಸುವಂತಾದರೂ ಅದರ ಮೂಲ ಆಶಯ ಮಾತ್ರ ಧರ್ಮ, ಜಾತಿ, ಜನಾಂಗ, ಭಾಷೆಗಳಿಗೆ ಸಂಬಂಧಿಸಿರುವ ಉದಾರ ಮನೋಭಾವವೇ ಆಗಿರಬೇಕೇ ಹೊರತು ಮೂಲ ಆಶಯದಿಂದ ವ್ಯತಿರಿಕ್ತವಾಗಿ ಜಾತ್ಯಾತೀತತೆಯ ವ್ಯಾಖ್ಯಾನವೇ ವಿಭಿನ್ನವಾಗುವದು ವಿಪರ್ಯಾಸ. ■

ಸಂಪಾದಕರೊಡನೆ ಸಂವಾದ

ಮಾಯಾ ಬೆಹನ್ ಸೋಲು ದಲಿತ ಚಳವಳಿಗೆ ಪಾಠವಾಗಬಲ್ಲದೇ...?

ಡಾ॥ ಕಿರಣ್.ಎಂ ಗಾಜನೂರು

ಪ್ರಿಯ ಸಂಪಾದಕರೇ,

ಅದು 2007ರ ಮೇ 11 ಶುಕ್ರವಾರದ ದಿನ. ಅಂದು ಪ್ರಕಟವಾದ ಉತ್ತರ ಪ್ರದೇಶದ ಚುನಾವಣಾ ಫಲಿತಾಂಶ ಇಡೀ ಭಾರತದ ದಲಿತ ಸಮುದಾಯದ ಮನಸ್ಸಿನಲ್ಲಿ ವಿದ್ಯುತ್ ಸಂಚಾರ ಉಂಟುಮಾಡಿತ್ತು. ಭಾರತದ ಸ್ವತಂತ್ರ್ಯ ನಂತರ ಮೊಟ್ಟ ಮೊದಲ ಬಾರಿಗೆ ಒಬ್ಬ ದಲಿತ ಮಹಿಳೆ ಸಂಪೂರ್ಣ ಬಹುಮತದೊಂದಿಗೆ (403 ಸೀಟುಗಳಲ್ಲಿ 206ರಲ್ಲಿ ಬಿ.ಎಸ್.ಪಿ ವಿಜಯಿಯಾಗಿತ್ತು) ಉತ್ತರ ಪ್ರದೇಶದಂತಹ ಬೃಹತ್ ರಾಜ್ಯದ ಗದ್ದುಗೆ ಏರಿದ್ದಳು. ಆ ಫಲಿತಾಂಶ ನೋಡಿದ ಪ್ರತಿಯೊಬ್ಬ ದಲಿತನು ತನ್ನನ್ನು ಹುಟ್ಟಿನಿಂದಲೇ ಅವಮಾನಕ್ಕೆ ಈಡುಮಾಡಿದ ಈ ನೆಲದ ಶೋಷಿತ ಇತಿಹಾಸವನ್ನು ಓರೆಗಣ್ಣಿನಿಂದ ನೋಡಿ ನಿನ್ನನ್ನು ಇನ್ನು ಬದಲಿಸುತ್ತೇನೆ ನೋಡುತ್ತಿರು ಎಂಬಂತೆ ಆತ್ಮವಿಶ್ವಾಸದಿಂದ ಎದೆಯುಬ್ಬಿಸಿ ಮಾತನಾಡಿದ್ದ. ಅಲ್ಲದೆ ಶತಮಾನಗಳ ನೋವನ್ನು, ಪೂನಾ ಒಪ್ಪಂದದ ನಯವಂಚನೆಯನ್ನು ಮರೆತು ಮಾಯಾವತಿಯ ವಿಜಯವನ್ನು ತನ್ನ ಸಮುದಾಯದ ವಿಜಯವೆಂಬಂತೆ ಭಾವಿಸಿ ಸಮಾಧಾನದ ನಿಟ್ಟಿಸಿರು ಬಿಟ್ಟಿದ್ದ. ದಲಿತ ಚಿಂತಕರು ಅದು ಮಾಯಾವತಿಯ ವಿಜಯವಲ್ಲ ಬದಲಾಗಿ ಭಾರತದಲ್ಲಿ ದಲಿತ ಪರಂಪರೆಗೆ ದೊರೆತ ವಿಜಯ ಎಂಬಂತೆ ಮಾತನಾಡಿದ್ದರು. ಇನ್ನು ಈ ನೆಲದಲ್ಲಿ ದಲಿತ ಪರ್ವ ಪ್ರಾರಂಭವಾಗಿದೆ ಎಂಬಂತೆ ಬಿಂಬಿಸಿದ್ದರು. ಯಾವ Political Power ಅನ್ನು ಅಂಬೇಡ್ಕರ್ ದಲಿತ ವಿಮೋಚನೆಯ Master key ಎಂದಿದ್ದರೋ ಅಂತಹ ಮಾಸ್ಟರ್ ಕೀಯನ್ನು ಮಾಯಾವತಿ ತಮ್ಮ ಕೈಗೆ ತೆಗೆದುಕೊಂಡು ಬಿಟ್ಟಿದ್ದರು. ಆ ಮೂಲಕ ಶತಮಾನಗಳ ಕಾಲ ಹೋರಾಟ ನಡೆಸಿಕೊಂಡು ಬಂದ ದಲಿತ ಚಳವಳಿಯನ್ನು ಅಂತಿಮವಾಗಿ ಒಂದು ತಾರ್ಕಿಕ ಅಂತ್ಯಕ್ಕೆ ತಲುಪಿಸಿದ್ದೇನೆ ಎಂದು ಸ್ವತಃ ಮಾಯಾವತಿಯವರೇ ಮಾತನಾಡಿದ್ದರು. ಅದೂ ಅಲ್ಲದೆ ಆ ಚುನಾವಣಾ ಪಲಿತಾಂಶ ಭಾರತವನ್ನು ಜಾತಿ ಮುಕ್ತ ದೇಶವನ್ನಾಗಿಸುವ ಬಹಳ ದೊಡ್ಡ ಆಶಯವನ್ನು ಸಮಾಜದಲ್ಲಿ ಬಿತ್ತಿತ್ತು. ಆದರೆ ಈ ಎಲ್ಲಕ್ಕಿಂತ ಮುಖ್ಯವಾಗಿ ಅಂಬೇಡ್ಕರ್ ಕಾಲದಿಂದಲೂ ತಮ್ಮ ಪಾಲಿನ ನ್ಯಾಯಯುತ ರಾಜಕೀಯ ಹಕ್ಕಿಗಾಗಿ ಹೋರಾಡುತ್ತಾ ಬಂದಿದ್ದ ದಲಿತ ಹೋರಾಟಕ್ಕೆ ಕೇವಲ ಭರವಸೆಯ ಮಾತುಗಳನ್ನಾಡುತ್ತಾ, ಸಂವಿಧಾನಿಕ ಮಿತಿಗಳನ್ನು, ನ್ಯಾಯಾಲಯದ ತೀರ್ಪುಗಳನ್ನು ತೋರಿಸಿ ಸಮಾಧಾನ ಪಡಿಸುತ್ತಿದ್ದ ಮೇಲ್ವರ್ಗದ ರಾಜಕೀಯ ತಂತ್ರಗಾರಿಕೆಗೆ ಸರಿಯಾದ ಮರ್ಮಾಘಾತವನ್ನು ಅಂದಿನ ಪಲಿತಾಂಶ ನೀಡಿತ್ತು. ಅದಕ್ಕೆ ಸರಿಯಾಗಿ ಇಂದು ದಲಿತ ಪ್ರಜ್ಞಾವಂತನಾಗಿದ್ದಾನೆ, ತನ್ನ ಅಗತ್ಯತೆಗಳನ್ನು, ಹಕ್ಕುಗಳನ್ನು ಸಾಂವಿಧಾನಿಕ ಮಾರ್ಗದಲ್ಲಿಯೇ ಪಡೆಯುವ ಶಕ್ತಿ ದಲಿತ ಸಮುದಾಯಕ್ಕೆ ಬಂದಿದೆ, ಇನ್ನು ಮುಂದೆ ನಮ್ಮ ನ್ಯಾಯಯುತ ಹಕ್ಕಿಗಾಗಿ ನಿಮ್ಮ ಮುಂದೆ ನಿಲ್ಲುವ ಅಗತ್ಯ ನಮಗಿಲ್ಲ ಎಂಬಂತೆ ದಲಿತ ಸಮುದಾಯ ಮಾತನಾಡಿತ್ತು. ಒಟ್ಟಾರೆ ಅಂದಿನ ಮಾಯಾವತಿಯ ರಾಜಕೀಯ ವಿಜಯ ಕೇವಲ ಉತ್ತರ ಪ್ರದೇಶಕ್ಕೆ ಸೀಮಿತವಾಗಿರದೆ ಇಡೀ ಭಾರತದ ವಿಜಯವಾಗಿ ನಿಮ್ಮ ವರ್ಗ ಭಾವಿಸಿದ್ದಿತು...

ಆದರೆ ಇಲ್ಲಿ ಗಮನಿಸಬೇಕಾದ ಬಹಳ ಪ್ರಮುಖವಾದ ಅಂಶವೆಂದರೆ ಅಂದಿನ ಉತ್ತರ ಪ್ರದೇಶದ ಫಲಿತಾಂಶ ದೇಶದಲ್ಲಿ ಸೊರಗಿದಂತಿದ್ದ ದಲಿತ ಹೋರಾಟಕ್ಕೆ ನವ ಚೈತನ್ಯವನ್ನು ತಂದು ಕೊಟ್ಟಿತ್ತು. ಅಂದರೆ ಅಂಬೇಡ್ಕರ್ ಆದಿಯಾಗಿ ಎಲ್ಲರೂ ಭಾವಿಸಿದಂತೆ ರಾಜಕೀಯ ಅಧಿಕಾರ ದಲಿತ ಹೋರಾಟದ ತಾರ್ಕಿಕ ಅಂತ್ಯ ಎಂಬ ನಿಲುವನ್ನು ಮಾಯಾವತಿಯ ವಿಜಯ ಬೆಂಬಲಿಸಿತ್ತು. ಅದಕ್ಕೆ ಪೂರಕವೆಂಬಂತೆ ಹಲವಾರು ರಾಜ್ಯಗಳಲ್ಲಿ ಬಹುಜನ ಸಮಾಜವಾದಿ ಪಾರ್ಟಿ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಿತು. ಇದಕ್ಕೆ ಕರ್ನಾಟಕದ ದಲಿತ ಸಂಘಟನೆಯು ಹೊರತಾಗಿರಲಿಲ್ಲ. ಆದರೆ ಇಲ್ಲಿ ರೈತ ಸಂಘದ ಎರಡೂ ಬಣಗಳು ಒಟ್ಟುಗೂಡಿ, ದಲಿತ ಸಂಘರ್ಷ ಸಮಿತಿಗಳ ಸಹಕಾರದೊಂದಿಗೆ ಸರ್ವೋದಯ ಕರ್ನಾಟಕ ಪಕ್ಷಕ್ಕೆ ಮರುಹುಟ್ಟು ನೀಡುವ ಪ್ರಯತ್ನಗಳು ನಡೆದವು. ಆದರೆ ಅದು ಯಶಸ್ವಿಯಾಗಲಿಲ್ಲ ಎಂಬುದು ಬೇರೆ ಮಾತು. ಆದರೆ ಒಟ್ಟಾರೆ ನೋಡುವುದಾದರೆ 2007ರ ಮಾಯಾವತಿಯ ಗೆಲುವು ದೇಶದ ದಲಿತ ಹೋರಾಟಕ್ಕೆ ಹೊಸ ಕಸುವು, ಚಟುವಟಿಕೆ ತಂದಿತ್ತು.

ಆದರೆ ದೇಶದ ದಲಿತ ಸಮಾಜ ಕಂಡ ಕನಸು ಕನವರಿಕೆಗಳು 2012ರ ಉತ್ತರ ಪದೇಶ ಚುನಾವಣೆಯಲ್ಲಿ ಬಿ.ಎಸ್.ಪಿ ಯ ಹೀನಾಯ ಸೋಲಿನೊಂದಿಗೆ ಕಮರಿ ಹೋದವು. ಅಯ್ಯೋ ಶತಮಾನಗಳ ಕಾಲ ಹೋರಾಡಿ ಪಡೆದ ರಾಜಕೀಯ ಗದ್ದುಗೆ ಈ ಪರಿ ಕೇವಲ ಐದು ವರ್ಷಗಳಲ್ಲಿ ಕುಸಿದು ಬೀಳುತ್ತದೆ ಎಂದು ಯಾರೂ ಯೋಚಿಸಿರಲಿಲ್ಲ! ಯಾರು ಯಾಕೆ? ಸ್ವತಹ ಮಾಯಾವತಿಯವರೇ ಊಹಿಸಿರಲಿಕ್ಕಿಲ್ಲ. ಆದರೆ ಘಟನೆ ನಡೆದೇ ಹೋಗಿದೆ. ಈಗ ರಾಜಕೀಯ ವಿಶ್ಲೇಷಕರು ಮಾಯಾವತಿಯ ಸೋಲಿಗೆ ಬಿ.ಎಸ್.ಪಿ ಅವಧಿಯಲ್ಲಿ ಬೆಳೆದ ಅತಿಯಾದ ಭ್ರಷ್ಟಾಚಾರ, ದಲಿತರಲ್ಲೇ ಜಾಟ್ ಜನಾಂಗದ ಕಡೆ ಮಾಯಾವತಿ ಹೊಂದಿದ್ದ ಹೆಚ್ಚಿನ ಒಲವು, ಅಲ್ಪಸಂಖ್ಯಾತರನ್ನು ಒಲಿಸಿಕೊಳ್ಳುವಲ್ಲಿ ಮಾಡಿದ ತಪ್ಪು, ಮುಖ್ಯವಾಗಿ ದಲಿತ ಉದ್ಧಾರಕ್ಕಾಗಿ ಸಾಮಾ... ವಲಯಗಳಿಗೆ ನೀಡಿದ ಪ್ರಾಶಸ್ತ್ಯವನ್ನು ಸಮುದಾಯಕ್ಕೆ ನೀಡದೇ ಇದ್ದದು ಇ... ...ರಣಗಳನ್ನು ನೀಡುತ್ತಿದ್ದಾರೆ. ಆದರೆ ಈ ದೇಶದ ತಳಸಮುದಾಯದ ಭದ್ರ ರಾಜಕೀಯ ನೆಲೆ ಭಗ್ನಗೊಂಡ ಕುರಿತು ಯಾರೂ ಮಾತನಾಡುತ್ತಿಲ್ಲ. ಉತ್ತರ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ಪ್ರಾರಂಭವಾಗಿದ್ದ ದಲಿತರ ರಾಜಕೀಯ ಪ್ರಾತಿನಿಧಿಕರಣದ ಹೋರಾಟದ ದಾರಿ ಈಗ ಮುಚ್ಚಿದಂತಾಗಿರುವುದು ಯಾರನ್ನೂ ಅಷ್ಟಾಗಿ ಬಾಧಿಸುತ್ತಿಲ್ಲ. ಇದು ನಿಜವಾದ ದುರಂತ. 2005ರ ಮಾಯಾವತಿಯ ವಿಜಯವನ್ನು ದಲಿತ ಪಂಪರೆಯ ಜಯ ಎಂದು ಒಪ್ಪಿಕೊಂಡ ನಾವು 2012ರ ಸೋಲನ್ನು ರಾಷ್ಟ್ರಮಟ್ಟದಲ್ಲಿ ದಲಿತ ಚಳವಳಿಗೆ ಆದ ಸೋಲು ಅಂತಲೇ ಸ್ವಿಕರಿಸಿ ಪರ್ಯಾಯಗಳ ಕುರಿತು ಚಿಂತಿಸಬೇಕಾಗುತ್ತದೆ. ಅಷ್ಟೆ ಅಲ್ಲದೆ ನನ್ನ ಪ್ರಕಾರ ಈ ಚುನಾವಣಾ ಫಲಿತಾಂಶ ದಲಿತ ಹೋರಾಟ/ಚಿಂತನೆಯ ಆತ್ಮವಿಮರ್ಶೆಗೆ ಕಾರಣವಾಗಬೇಕಿದೆ. ಇದುವರೆಗೂ ರಾಜಕೀಯ ಅಧಿಕಾರ ಅಥವ ಪ್ರಾತಿನಿಧಿಕರಣವು ದಲಿತ ಹೋರಾಟದ ತಾರ್ಕಿಕ ಅಂತ್ಯ ಎಂದು ಭಾವಿಸಿದ್ದ ದಲಿತ ಮುಖಂಡರಿಗೆ ಉತ್ತರ ಪ್ರದೇಶದ ಎರಡು ಚುನಾವಣೆಗಳ ಫಲಿತಾಂಶ ಕಣ್ಣು ತೆರೆಸಬೇಕಿದೆ. ಸಾಮಾಜಿಕವಾಗಿ ಸಂಘಟಿತವಾಗದೇ ಯಾವುದೇ ವರ್ಗ ಪಡೆಯುವ ರಾಜಕೀಯ ಅಧಿಕಾರ ಎಂಬುದು ಕೇವಲ ಇಂದಿನ ಬಹು ಪ್ರಚಲಿತ ಶಕ್ತಿ ರಾಜಕಾರಣದ ಭಾಗ ಮಾತ್ರ ಎನ್ನುವ ಸತ್ಯ ದಲಿತರಿಗೆ ಅರ್ಥವಾಗಬೇಕಿದೆ. ಮಾಯಾವತಿಯ ರಾಜಕೀಯ ತಂತ್ರಗಾರಿಕೆಯನ್ನೆ ದಲಿತರ ಸಬಲೀಕರಣ ಎಂಬಂತೆ ಬಿಂಬಿಸಿದ ದಲಿತ ಚಿಂತಕರು ಇನ್ನಾದರೂ ಆ ಭ್ರಮೆಯಿಂದ ಹೊರ ಬರಬೇಕಿದೆ.

ಮುಖ್ಯವಾಗಿ ಇತ್ತೀಚೆಗೆ ಬೆಳೆದ ಮತ್ತು ಮಾಯಾವತಿಯಿಂದ ಹೆಚ್ಚು ಪ್ರಚಲಿತಕ್ಕೆ ಬಂದ ಬಹುಜನ ಎಂಬ ಪರಿಕಲ್ಪನೆ ಚುನಾವಣಾ ರಾಜಕಾರಣವನ್ನು ಗೆಲ್ಲಲು ಉತ್ತರ ಪ್ರದೇಶದಲ್ಲಿ ದಲಿತರ ಮುಂದಾಳತ್ವದಲ್ಲಿ ರಚಿತವಾದ ಒಂದು ತಂತ್ರ/ಐಡೆಂಟಿಟಿ ಮಾತ್ರವಾಗಿದ್ದು, ಇದು ಶರದ್ ಪವಾರ್ ಮಹಾರಾಷ್ಟ್ರದಲ್ಲಿ ಯಶಸ್ವಿಯಾಗಿ ರೂಪಿಸಿದ ಮರಾಠ ಐಡೆಂಟಿಟಿ ಮತ್ತು ಮುಲಾಯಂಸಿಂಗ್ ಯಾದವ್ ಯಾದವ ಜನಾಂಗಕ್ಕೆ ರೂಪಿಸಿದ ಯಾದವ ಐಡೆಂಟಿಟಿ ಅಥವಾ ಕರ್ನಾಟಕದಲ್ಲಿ ಯಡಿಯೂರಪ್ಪ ಇಂದು ರೂಪಿಸಲು ಪ್ರಯತ್ನಿಸುತ್ತಿರುವ ಲಿ...ಯತ ಐಡೆಂಟಿಟಿ ಮತ್ತು ರಾಮುಲುವಿನ ಕನಸಾದ ನಾ...ಕ ಜನಾಂಗದ ಐ... ...ಹೆಚ್ಚೇನು ಭಿನ್ನವಾದುದಲ್ಲ ಎಂಬ... ...ಳವಳಿ ಗ್ರಹಿಸಬೇಕಿದೆ.

ಮುಂದು... ...ದು ಶತಮಾನಗಳಿಂದ ಆಚರಣೆ,

(17ನೇ ಪುಟಕ್ಕೆ)

ಅಲೆಮಾರಿಗಳು: ಒಂದು ಭಿನ್ನ ವಾದ

— ಹೊ.ಮ ಪಂಡಿತಾರಾಧ್ಯ

ಮಾನ್ಯ ಗೆಳೆಯರಾದ ಬಾಲಗುರುಮೂರ್ತಿಯವರ "ಅಲೆಮಾರಿಗಳು ಮತ್ತು ಸಾಮಾಜಿಕ ನ್ಯಾಯ" ಲೇಖನವನ್ನು ಓದಿದೆ. ತಳ ಸಮುದಾಯ ಮತ್ತು ಅಲೆಮಾರಿಗಳ ಸಂವಿಧಾನಾತ್ಮಕ ಸ್ಥಾನಮಾನದ ಬಗ್ಗೆ ಅವರ ಲೇಖನವು ವಿಚಾರ ಪ್ರಚೋದಕವೆನಿಸಿದರೂ ಅವರು ಹೇಳುವ ವಿಚಾರಗಳು ಸಿಹಿಸ್ವಾದ ಪ್ರಾಯಕ್ಕೆ ಮಸಾಲೆ ಒಗ್ಗರಣೆ ಹಾಕಿದಂತಾಗಿದೆ. ಸಂಶೋಧಕರು ತಾವು ಪರಿಭಾವಿಸಿದ ಕ್ರಮವೇ Ultimate ಅಲ್ಲವೆಂದು ಒಪ್ಪಿಕೊಳ್ಳಬೇಕಾದರೂ ತಾವು ಹೇಳುವುದೇ Ultimate ಎಂದು ಬಾಲಗುರುಮೂರ್ತಿಯವರು ಪರಿಭಾವಿಸಿದಂತಾಗಿದೆ.

ಅಲೆಮಾರಿ ಜಾತಿಗಳ ವರ್ಗೀಕರಣ ಮತ್ತು ಐಡೆಂಟಿಟಿಗಾಗಿ ಪರಿತಪಿಸುತ್ತಿರುವ ಬಾಲಗುರುಮೂರ್ತಿಯವರು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಇದುವರೆಗೆ ಮಾಡಿರುವ ಜಾತಿ ವರ್ಗೀಕರಣ ಮತ್ತು ವಿವಿಧ ಜಾತಿ, ವರ್ಗ, ಗುಂಪು, ಒಳಗುಂಪು, ಉಪಜಾತಿಗಳ ಸ್ಥಾನಮಾನವನ್ನು ಗುರುತಿಸುತ್ತಿರುವ ಸ್ಥಾಪಿತ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾ ಸೌಲಭ್ಯಗಳನ್ನು ಪಡೆಯುವಲ್ಲಿ ಕೆಲವು ಸಾಮ್ಯ ಶಬ್ದದ ಜಾತಿಗಳು ಹೊಸ ಪೋಷಾಕು ಹಾಕಿಕೊಂಡು ಪ್ರಾತಿನಿಧ್ಯ ಮಾಡುತ್ತವೆ ಎಂದು ಪರಿತಪಿಸುತ್ತಿದ್ದಾರೆ.

ಆ ಜಾತಿಗಳ ಅಸ್ತಿತ್ವ ಮತ್ತು ಐಡೆಂಟಿಟಿ ಮೂಡಿಸುವಲ್ಲಿ ಮಾನವ ಸರ್ವೇಕ್ಷಣಾ ಇಲಾಖೆಯವರು, ಸಂಶೋಧಕರು ಮತ್ತು ಸರಕಾರಗಳು ಅನುಸರಿಸಿದ ಪದ್ಧತಿ ಮತ್ತು ಅಂತಿಮ ವರ್ಗೀಕರಣ ಒಪ್ಪಿತವಲ್ಲವೆಂದು ಸಾರಾಸಗಟಾಗಿ ಅಲ್ಲಗಳೆಯುವುದರೊಂದಿಗೆ ಈ ಕ್ರಿಯೆಯಲ್ಲಿ ತಮ್ಮ ತಪ್ಪು ಮುಚ್ಚಿಕೊಳ್ಳುವ ವೈಯಕ್ತಿಕ ಐಡೆಂಟಿಟಿಯ ವಿಜೃಂಭಣೆಗಾಗಿ, ವೈಯಕ್ತಿಕ ಸಂವಿಧಾನಿಕ ರಕ್ಷಣೆ ಪಡೆಯಲು ಯತ್ನಿಸುತ್ತಿರುವುದು ಅವರ ಲೇಖನದ ಉದ್ದೇಶವಾಗಿದೆ ಎನ್ನುವ ಒಳ ವಿಷಯ ಗುಟ್ಟಾಗಿ ಉಳಿಯುವುದಿಲ್ಲ.

ಹಿಂದುಳಿದ ಜಾತಿಗಳ ವರ್ಗೀಕರಣದಲ್ಲಿ ವಿವಿಧ ಗುಂಪುಗಳಲ್ಲಿ ಸ್ಥಾನ ಪಡೆದುಕೊಂಡಿರುವ ಜಾತಿಗಳು ಇನ್ನೂ ಹೆಚ್ಚಿನ ಸೌಲಭ್ಯ ಪಡೆಯುವ ಅತ್ಯಂತ ಹಿಂದುಳಿದವರ ಹಾಗೂ ಹೆಚ್ಚಿನ ಸಂವಿಧಾನಿಕ ಮೀಸಲಾತಿ ಮತ್ತು ರಕ್ಷಣೆ ಪಡೆಯಲು, ಹೋರಾಡಲು ಹಕ್ಕನ್ನು ಪಡೆದಿರುತ್ತವೆ. ಅಂತ್ಯಜರ ಪರಿಶಿಷ್ಟ ಜಾತಿ, ಅಥವಾ ಪರಿಶಿಷ್ಟ ವರ್ಗದ ಮೀಸಲಾತಿ ಪಟ್ಟಿಯಲ್ಲಿ ಸೇರಲು, ಒತ್ತಾಯಿಸಲು ಸರಕಾರಕ್ಕೆ ಬೇಡಿಕೆ ಇಡುವ, ಹಿಂದುಳಿದವರ ಪಟ್ಟಿಯಿಂದ ವರ್ಗೀಕರಣದ ತೀರಾ ಹಿಂದುಳಿದವರ ಪಟ್ಟಿಯಲ್ಲಿ ಸ್ಥಾನಪಲ್ಲಟ ಹೊಂದಲು ಸಂವಿಧಾನದಲ್ಲಿ ಹಕ್ಕನ್ನು ಗ್ಯಾರಂಟಿಗೊಳಿಸಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಜಾತಿಗಳ ಗುರುತಿಸುವಿಕೆ, ವರ್ಗೀಕರಣ ಮತ್ತು ಸ್ಥಾನಮಾನಗಳ ಘೋಷಣೆ ಸಂಬಂಧಪಟ್ಟಂತೆ ಸಂವಿಧಾನ ರಚನಾ ಮಂಡಳಿಯ ಕಲಾಪಗಳಲ್ಲಿ ಈ ವಿಷಯಗಳು ದೀರ್ಘವಾಗಿ ಚರ್ಚೆಯಾಗಿವೆ. ಜಾತಿಗಳ ಐಡೆಂಟಿಟಿ, ಜಾತಿಗಳ ವರ್ಗೀಕರಣವನ್ನು ಮತ್ತು ಘೋಷಣೆಯನ್ನು ಸಂವಿಧಾನವು (ಪರಿಚ್ಛೇದ 341) ಭಾರತದ ರಾಷ್ಟ್ರಪತಿಗಳಿಗೆ ಅಧಿಕಾರ ನೀಡಿದೆ. ಪರಿಶಿಷ್ಟ ಜಾತಿಗೆ ಮತ್ತು ವರ್ಗಗಳಿಗೆ ಸಂಬಂಧಿಸಿದಂತೆ ಜಾತಿಗಳು, ಉಪಜಾತಿಗಳು, ಸಮುದಾಯ, ಒಳಗುಂಪು, ಜನಾಂಗ ಇವುಗಳನ್ನು ಪರಿಶಿಷ್ಟ ಜಾತಿವರ್ಗಗಳೆಂದು ಭಾರತದ ರಾಷ್ಟ್ರಪತಿಗಳು ಘೋಷಿಸಬಹುದು. ಇದ್ದ ಜಾತಿಗಳನ್ನು ತೆಗೆಯಲು, ಹೊಸ ಜಾತಿಗಳನ್ನು ಸೇರಿಸಲು ಈ ಸಂಬಂಧ ಯಾವುದೇ ತಿದ್ದುಪಡಿಗಳನ್ನು ಮಾಡಲು ರಾಷ್ಟ್ರಪತಿಯವರಿಗೆ ಮಾತ್ರ ಸಂವಿಧಾನಿಕ ಅಧಿಕಾರವಿರುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಬಗ್ಗೆ ಯಾವುದೇ ನಿರ್ದೇಶನ, ಸೂಚನೆ, ಲಿಖಿತ ಸಲಹೆಗಳನ್ನು, ಸ್ಪಷ್ಟೀಕರಣಗಳನ್ನು ಕೊಡಲು ರಾಜ್ಯ ಸರ್ಕಾರಗಳಿಗೆ ಯಾವುದೇ ಅಧಿಕಾರವಿರುವುದಿಲ್ಲ.

ಬೇಡ ಜಂಗಮರಿಗೆ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರ ದೊರಕಬಾರದೆನ್ನುವ ಉದ್ದೇಶದಿಂದ ಸರಕಾರಗಳು, ಕೊಡುವ ಸಂಪೂರ್ಣ ಸಂವಿಧಾನಬದ್ಧ ಅವಕಾಶಗಳು ತಮಗೇ ಮಾತ್ರ ದೊರಕಬೇಕೆನ್ನುವ ಕೆಲ ಪಟ್ಟಭದ್ರ ರಾಜಕೀಯ ಶಕ್ತಿಗಳು, ಮೌಖಿಕವಾಗಿ ಪ್ರಮಾಣ ಪತ್ರ ನೀಡುವ ಅಧಿಕಾರಿಗಳಿಗೆ ಸೇವಾ ಭಯಪೂರ್ಣ ತಂತಿ ಮಂತ್ರಗಳನ್ನು ಉಪದೇಶವಿತ್ತದ್ದರಿಂದ ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲವೆಂಬುದು ಬೇಡ ಜಂಗಮರ ದೈನಂದಿನ ದೀನ ಚರಿತ್ರೆಯಾಗಿದೆ.

ಪ್ರತಿಕ್ರಿಯೆ

ಮಾನ್ಯ ಲೇಖಕರು ತಮ್ಮ ವಿಚಾರಗಳನ್ನು ಸಮರ್ಥಿಸಿಕೊಳ್ಳುವಲ್ಲಿ 1993ರಲ್ಲಿ ರಚನೆಯಾದ ಅಂಥ್ರೋಪಾಲಾಜಿಕಲ್ ಸರ್ವೇ ಆಫ್ ಇಂಡಿಯಾದ ನಿರ್ದೇಶಕರಾಗಿದ್ದ ಶ್ರೀ ಕೆ.ಎಸ್. ಸಿಂಗ್ ಅವರ ವರದಿಯ ಯಥಾವತ್ ಸಾರವನ್ನು ಉಲ್ಲೇಖಿಸಿದ್ದಾರೆ. ಕೆ.ಎಸ್. ಸಿಂಗ್ ಅವರ ಸಂಪಾದಕತ್ವದಲ್ಲಿ 1993ರಲ್ಲಿ ಪ್ರಥಮವಾಗಿ ಭಾರತದ ಎಲ್ಲಾ ಸಮುದಾಯಗಳ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಜಾತಿಗಳ ಜಾತಿ ಮಾಹಿತಿ ಪ್ರಕಟಣೆಗೊಂಡಿತ್ತು. ಈ ಪರಿಶಿಷ್ಟ ಜಾತಿ ಜನಗಳ ಸಂಪುಟದಲ್ಲಿ "ಬೇಡ ಜಂಗಮ (ಬುಡ್ಗ ಜಂಗಮರ)" ಬಗ್ಗೆ ವಿಸ್ತೃತ ವಿಷಯಾಧಾರಿತ ವರದಿಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಇದರ ಪುಟ ಸಂಖ್ಯೆ 205ರಿಂದ 207ನೇ ಪುಟದಲ್ಲಿ ಬೇಡ ಜಂಗಮ/ಬುಡ್ಗ ಜಂಗಮರ ಬಗ್ಗೆ ಸವಿಸ್ತಾರ ಮಾಹಿತಿಯನ್ನು ನೀಡಿದ್ದಾರೆ.

ಬೇಡ ಜಂಗಮರು/ಬುಡ್ಗ ಜಂಗಮರು ಬಳ್ಳಾರಿ, ಗುಲ್ಬರ್ಗಾ, ಬೀದರ್‌ಗಳಿಂದ ವಲಸೆ ಬಂದು ಮಹಾರಾಷ್ಟ್ರದಲ್ಲಿ ನೆಲೆಸಿದ ವೀರಶೈವ ಜಂಗಮರಾಗಿದ್ದು ಅವರು ವೀರಶೈವರಿಗೆ ಹಾಗೂ ಶೂದ್ರರಿಗೆ ಧಾರ್ಮಿಕ ಗುರುಗಳಾಗಿರುತ್ತಾರೆ. ಅವರು ವೀರಶೈವ ಅಥವಾ ಶೂದ್ರ ವ್ಯಕ್ತಿ ಸತ್ತಾಗ ಕಳೇಬರಗಳ ಮೆರವಣಿಗೆಯಲ್ಲಿ ಶಂಖ ಮತ್ತು ಗಂಟೆಯನ್ನು ಊದುತ್ತಾ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾರೆ ಮತ್ತು ಸತ್ತ ವ್ಯಕ್ತಿಗೆ ಮೋಕ್ಷ ಕೋರುತ್ತಾರೆ. ಸ್ಮಶಾನದಲ್ಲಿ ಸಮಾಧಿಗೆ ಪೂಜೆ ಮಾಡುತ್ತಾರೆ. ಮತ್ತು ಅಂಥ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವ ಜಂಗಮನಿಗೆ ಸ್ಮಶಾನದಲ್ಲಾಗಲೀ ಅಥವಾ ಹಿಂದಿರುಗಿದ ನಂತರ ಸತ್ತವರ ಮನೆಯಲ್ಲಿ ಸಂಬಂಧಿಕರು 2 ಆಣೆ ಕಾಣಿಕೆ ನೀಡಿ ಜಂಗಮನಿಗೆ ಭಕ್ತಿ ವ್ಯಕ್ತಪಡಿಸುತ್ತಾರೆ. ಈ ಎರಡು ಆಣೆ ಕಾಣಿಕೆಗೆ ತೆಲುಗು ಭಾಷೆಯಲ್ಲಿ "ಬೇಡನಾಣ್ಯಂ" ಎಂದು ಕರೆಯುವುದರಿಂದ ಬೇಡನಾಣ್ಯ ತೆಗೆದುಕೊಳ್ಳುವ ಜಂಗಮನಿಗೆ "ಬೇಡ" ಶಬ್ದದ ಪ್ರತ್ಯಯ ಹಚ್ಚಿ ಬೇಡ ಜಂಗಮ ಎಂದು ಕರೆಯಲಾಗಿದೆ ಎಂದು ಆಂಧ್ರ ಪ್ರದೇಶದ ಶ್ರೇಷ್ಠ ನ್ಯಾಯಾಲಯವು ಅನೇಕ ಬೇಡ ಜಂಗಮ ಪ್ರಮಾಣ ಪತ್ರಗಳ ಸಂಬಂಧದಲ್ಲಿ ತೀರ್ಪು ಇತ್ತಿದೆ. ಬೇಡ ಜಂಗಮರು

ಪ್ರತಿಕ್ರಿಯೆ

ವೀರಶೈವರಲ್ಲವೆನ್ನುವುದು, ವೀರಶೈವ ಜಂಗಮರು ಬೇರೆ, ಬೇಡ ಜಂಗಮರು ಬೇರೆ ಎನ್ನುವ ಮತ್ತು ಜಂಗಮರು ಶಾಖಾಹಾರಿಗಳು, ಬೇಡ ಜಂಗಮರು ಮಾಂಸಹಾರಿಗಳು, ಅಸ್ಪೃಶ್ಯತೆಯನ್ನು ಆಧರಿಸಿಯೇ ಪರಿಶಿಷ್ಟ ಜಾತಿ ಪಟ್ಟಿಯನ್ನು ಘೋಷಿಸಲಾಗಿದೆ ಎನ್ನುವ ವಾದವನ್ನು ಶ್ರೇಷ್ಠ ನ್ಯಾಯಾಲಯಗಳು ತಳ್ಳಿಹಾಕಿವೆ. 1995ರಲ್ಲಿ ಆಂಧ್ರ ಸರ್ಕಾರವು ಬೇಡ ಜಂಗಮರ ಸಂಬಂಧದಲ್ಲಿ ಒಂದು ಸುತ್ತೋಲೆ ಮೆಮೋವನ್ನು ಹೊರಡಿಸಿ ಬೇಡ ಜಂಗಮರು ವೀರಶೈವ ಜಂಗಮರಲ್ಲಾ ಅವರು ಮಾಂಸಹಾರಿಗಳು, ಅಳಿಲು, ಪಕ್ಷಿ, ಹಂದಿಯನ್ನು ಬೇಟೆ ಆಡುವ ಜನ. ಚಾಪೆ, ಬುಟ್ಟಿ ಎಣಿವ ಜನ, ಗಂಧಂ, ಬೂಸಂ, ತೊರಪತಿ, ಪತ್ತಸ್ಮ್‌ವಳ್ಳು, ಕಲ್ಲೆಂವಲ್ಲು ಇತ್ಯಾದಿ ಮನೆತನದ ಹೆಸರುಗಳಿಂದ ಕರೆಯಲ್ಪಡುತ್ತಾರೆ ಮತ್ತು ವೀರಶೈವ ಜಂಗಮರು ಬೇರೆ ಸಮುದಾಯವೆಂದು ಸುತ್ತೋಲೆ ಹೊರಡಿಸಿತ್ತು. ಈ ಸುತ್ತೋಲೆಯ ಅಂಶಗಳು ಸಂವಿಧಾನ ವಿರೋಧಿಯಾಗಿವೆ. ಪರಿಶಿಷ್ಟ ಜಾತಿಗೆ ಒಬ್ಬ ವ್ಯಕ್ತಿ ಸೇರಿದ್ದರೂ ಆತನು ಯಾವುದಾದರೂ ಧರ್ಮಾವಲಂಬಿ ಆಗಿರುತ್ತಾನೆ. ಆದ್ದರಿಂದ ಬೇಡ ಜಂಗಮನು ವೀರಶೈವ ಧರ್ಮದ ಅನುಯಾಯಿ ಆಗಿರಕೂಡದು ಎಂಬ ಸರಕಾರದ ಸುತ್ತೋಲೆಯ ಅಂಶ ಧಾರ್ಮಿಕ ನಂಬುಗೆಯ ಸ್ವಾತಂತ್ರ್ಯಕ್ಕೆ ವಿರುದ್ಧವಾದ, ಸಂವಿಧಾನದ 25ನೇ ಪರಿಚ್ಛೇದಕ್ಕೆ ವಿರುದ್ಧವಾದ, ಅಸಿಂಧುವಾದ ಸುತ್ತೋಲೆ ಎಂದು ಸರಕಾರದ ಆದೇಶವನ್ನು ಸಂವಿಧಾನಬಾಹಿರವೆಂದು ಘೋಷಿಸಿದೆ. ಇದೇ ತರಹ ವೀರಶೈವ ಜಂಗಮರು ಬೇರೆ, ಬೇಡ ಜಂಗಮರು ಬೇರೆ, ಬೇಡ ಜಂಗಮ ಅಸ್ಪೃಶ್ಯರು, ಮಾಂಸಹಾರಿಗಳು ಚಾಪೆ, ಬುಟ್ಟಿಯನ್ನು ಮಾಡುವ ಅಲೆಮಾರಿಗಳು ಎಂದು ಕರ್ನಾಟಕ ಸರಕಾರವೂ ಸುತ್ತೋಲೆ ಸಂಖ್ಯೆ ಎಸ್.ಡಬ್ಲ್ಯೂ.ಎಲ್. 305, ಎಸ್.ಎ.ಡಿ 76/22-7-1978ರಲ್ಲಿ ಜಾರಿಗೊಳಿಸಿತ್ತು. ಆಂಧ್ರ ಪ್ರದೇಶದ ಮೊಕದ್ದಮೆಯ ರೀತಿಯಲ್ಲಿ ಕರ್ನಾಟಕ ಶ್ರೇಷ್ಠ ನ್ಯಾಯಾಲಯದಲ್ಲಿ ಸರಕಾರದ ಈ ಸುತ್ತೋಲೆಯನ್ನು ಪ್ರಶ್ನೆಮಾಡಿ ರಿಟ್ ಅರ್ಜಿಯನ್ನು ಸಲ್ಲಿಸಲಾಗಿತ್ತು(ಐ.ಎಲ್.ಆರ್ 1996 ಕರ್ನಾಟಕ 2672). ನ್ಯಾಯಮೂರ್ತಿ ಹರಿನಾಥ ತಿಲಾರಿಯವರು ಆ ಸುತ್ತೋಲೆಯ ಅಂಶಗಳು ಸಂವಿಧಾನ ವಿರೋಧಿ ಎಂದು ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಸುತ್ತೋಲೆ ಎಂದು ಪರಿಗಣಿಸಿ ಸುತ್ತೋಲೆಯನ್ನು ರದ್ದುಗೊಳಿಸಿದರು. 1978ರಲ್ಲಿಯೇ ಕರ್ನಾಟಕ ಸರಕಾರವು ಇದೇ ಅಂಶಗಳನ್ನೊಳಗೊಂಡಂತೆ ಸುತ್ತೋಲೆ ಹೊರಡಿಸಿ ಬೇಡ ಜಂಗಮರಿಗೆ ಪ್ರಮಾಣಪತ್ರ ನೀಡುವಲ್ಲಿ ತಡೆಯೊಡ್ಡಿತ್ತು.

ಮೇಲಿನ ಸುತ್ತೋಲೆಯನ್ನು ಬೇಡ ಜಂಗಮ ಸಮಾಜ ಸಂಸ್ಥೆಯವರು ಕರ್ನಾಟಕ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದರು. ವಿಚಾರಣೆಯ ಕಾಲಕ್ಕೆ ಸರಕಾರವೇ ವೀರಶೈವ ಜಂಗಮರು ಬೇರೆ, ಬೇಡ ಜಂಗಮರು ಬೇರೆ ಎನ್ನುವ ನಿಲುವಿನ ಅಂಶಗಳನ್ನು ವಾಪಾಸು ತೆಗೆದುಕೊಂಡಿದ್ದೇವೆಂದು, ಜಾತಿ ಪ್ರಮಾಣ ಪತ್ರ ನೀಡುವಾಗ ವಿಚಾರಣೆಯಲ್ಲಿ ಪ್ರತ್ಯೇಕಗೊಳಿಸುವ ಸುತ್ತೋಲೆಯ ಮೇಲ್ಕಾಣಿಸಿದ ಅಂಶಗಳನ್ನು ಪರಿಗಣಿಸಬಾರದೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹೊಸ ಸುತ್ತೋಲೆ ಮಾಡುವುದಾಗಿ ಅಂಡರ್‌ಟೇಕಿಂಗ್ ಕೊಟ್ಟಿದ್ದರಿಂದ ಸುತ್ತೋಲೆಯನ್ನು ವಾಪಾಸು ತೆಗೆದುಕೊಂಡ ಹಿನ್ನೆಲೆಯಲ್ಲಿ ರಿಟ್ ಅರ್ಜಿಯನ್ನು ಇತ್ಯರ್ಥಗೊಳಿಸಲಾಯಿತು. 1986 ರಲ್ಲಿ ಕರ್ನಾಟಕ ವಿಧಾನಸಭೆಯಲ್ಲಿ ವೀರಶೈವ ಜಂಗಮರು ಬೇಡ ಜಂಗಮರ ಪರಿಶಿಷ್ಟ ಜಾತಿಯ ಸುಳ್ಳು ಪ್ರಮಾಣಪತ್ರಗಳನ್ನು ಪಡೆದು ವಂಚನೆ ಮಾಡುತ್ತಲಿದ್ದಾರೆ ಇದರ ಬಗ್ಗೆ ಸಂಪೂರ್ಣ ವಿಚಾರಣೆ ಕೈಗೊಳ್ಳಬೇಕೆಂದು ಚರ್ಚಾ ಕಲಾಪ ನಡೆದು ವಿಧಾನ ಮಂಡಲದ ಜಂಟಿ ಕಾರ್ಯದರ್ಶಿಯವರು ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಇಲಾಖೆಗೆ ಸರಕಾರಕ್ಕೆ ವರದಿ ಸಲ್ಲಿಸಲು ನಿರ್ದೇಶನ ನೀಡಿದರು. ಪುನಃ ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಯವರು ಕರ್ನಾಟಕ ರಾಜ್ಯಪತ್ರದ ಸಂಪಾದಕರಾದ ಶ್ರೀ ಸೂರ್ಯನಾಥ್ ಕಾಮತ್ ಅವರಿಗೆ ಪರಾಮರ್ಶೆ ಮಾಡಿ ಸೂಚನಾಂಶಗಳನ್ನು ನೀಡಿ ತನಿಖೆ ಮಾಡಿ ಇಲಾಖೆಗೆ ವರದಿ ಸಲ್ಲಿಸಲು ಸಂವಿಧಾನಬದ್ಧ ನಿರ್ವಹಣೆಯನ್ನು ವಹಿಸಿತ್ತು. ಕರ್ನಾಟಕ ಸರಕಾರದ ವಿಧಾನಸಭೆಯ ಜಂಟಿ ನಿರ್ದೇಶಕರ ನಿರ್ದೇಶನದಂತೆ ಸಮಾಜ ಕಲ್ಯಾಣ ಇಲಾಖೆ ಮುಖ್ಯಸ್ಥರು ತನಿಖೆಗೆ ಆದೇಶ ಮಾಡಿದ್ದು ವಿಧಾನಸಭೆಯ ಇತಿಹಾಸದಲ್ಲಿಯೇ ಪ್ರಥಮಬಾರಿ ಬೇಡ ಜಂಗಮರ ವಿಷಯ ಪ್ರಧಾನವಾಗಿತ್ತು.

ರಾಜ್ಯ ಪತ್ರದ ಸಂಪಾದಕರಾದ ಶ್ರೀ ಸೂರ್ಯನಾಥ್ ಕಾಮತ್ ಅವರು ರಾಜ್ಯದ ಬೀದರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಸಂಚರಿಸಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳಿಗೆ 1989ರಲ್ಲಿ ವರದಿಯನ್ನು ಸಲ್ಲಿಸಿದರು. ವರದಿಯಲ್ಲಿನ ಮಾನವ ಶಾಸ್ತ್ರದ ಅಂಶಗಳನ್ನು ಸಂಗತಿಗಳನ್ನು ನೋಡಿ ವಿಧಾನಸಭೆಯಲ್ಲಿ ಗೊಂದಲವೆಬ್ಬಿಸಿದ ಜನ ಮೌನಕ್ಕೆ ಶರಣಾದರು, ಅಧಿಕಾರಿಗಳು ಅಪರಾಧಿಗಳ ಮನೋಭಾವದಿಂದಾಗಿ ತಣ್ಣಗಾದರು. ಪರಿಣಾಮವೆಂದರೆ ಸೂರ್ಯನಾಥ ಕಾಮತ್ ಅವರ ಬೇಡ ಜಂಗಮ ತನಿಖಾ ವರದಿಯಲ್ಲಿ **"ಬೇಡ ಜಂಗಮರೂ ಬೇರೆ ಯಾರೂ ಅಲ್ಲ. ಕರ್ನಾಟಕದಲ್ಲಿನ ವೀರಶೈವ ಜಂಗಮರಿಗೆ ಬೇಡ ಜಂಗಮರೆಂದು ಕರೆಯಲಾಗಿದೆ.** ಮತ್ತು ಬೇಡ ಜಂಗಮರೇ ವೀರಶೈವ ಜಂಗಮರು, ಬೇರಾರೂ ಅಲ್ಲವೆಂದು ಎತ್ನೋಗ್ರಾಫಿಕ್ ವರದಿ ಸಲ್ಲಿಸಿ ಬೇಡ ಜಂಗಮರ ಹುಟ್ಟು, ದೀಕ್ಷಾ, ಧಾರ್ಮಿಕ ವೃತ್ತಿ ಕಾಯಕ, ಸಾವಿನ ಅಂತ್ಯಕ್ರಿಯೆಗಳು, ಪಂಚಪೀಠಗಳಿಗೆ ಸೇರಿದ ವೀರಶೈವ-ಲಿಂಗಾಯಿತ ಮತ್ತು ಶೂದ್ರರಿಗೆ-ಧಾರ್ಮಿಕ ಗುರುಗಳಾಗಿದ್ದರೆಂದೂ ಅವರು ತೀರಾ ಬಡವರೆಂದೂ, ಧಾರ್ಮಿಕ ದೃಷ್ಟಿಯಿಂದಾಗಿ ಅವರನ್ನು ಕೂಲಿಗೂ ಜನರು ಕರೆಯುವುದಿಲ್ಲವೆಂದು ವರದಿ ಸಲ್ಲಿಸಿರುವುದನ್ನು ನೋಡಿದರೆ ಬೇಡ ಜಂಗಮರ ಸಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗಳು ಗೊತ್ತಾಗುತ್ತವೆ. ಶೂದ್ರರ ಹೆಣಗಳನ್ನು ಸಂಸ್ಕಾರ ಮಾಡಿ ಜೀವಿಸುವ, ಬೇಡುವ ಕಾಯಕದಿಂದಲೇ ತಿರುಗುವ ಈ ಚಾರಿತ್ರಿಕ, ಧಾರ್ಮಿಕ ಅಲೆಮಾರಿಗಳಿಗೆ ನ್ಯಾಯಾಲಯದ ತೀರ್ಪುಗಳು, ಸರಕಾರದಿಂದಲೇ ನೇಮಿಸಲ್ಪಟ್ಟ ತನಿಖಾ ಸಂಸ್ಥೆಗಳು ಬೇಡ ಜಂಗಮರ ನಿಜ ಶೋಷಿತ ಜೀವನವನ್ನು ವಿಧಾನ ಮಂಡಲದಲ್ಲಿಯೇ ಉತ್ತರ ಸಿಗುವಂತೆ ವರದಿ ಮಾಡಿದ್ದು, ವಿಚಾರ ಗೊತ್ತಿಲ್ಲದ ವಿರೋಧಾಭಾಸದ ಮನಸುಗಳಿಗೆ ಇತಿಶ್ರೀ ಹಾಡಿತು.

ಬೇಡ ಜಂಗಮರಿಗೆ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರ ದೊರಕಬಾರದೆನ್ನುವ ಉದ್ದೇಶದಿಂದ ಸರಕಾರಗಳು, ಕೊಡುವ ಸಂಪೂರ್ಣ ಸಂವಿಧಾನಬದ್ಧ ಅವಕಾಶಗಳು ತಮಗೇ ಮಾತ್ರ ದೊರಕಬೇಕೆನ್ನುವ ಕೆಲ ಪಟ್ಟಭದ್ರ ರಾಜಕೀಯ ಶಕ್ತಿಗಳು, ಮೌಖಿಕವಾಗಿ ಪ್ರಮಾಣ ಪತ್ರ ನೀಡುವ ಅಧಿಕಾರಿಗಳಿಗೆ ಸೇವಾ ಭಯಪೂರ್ಣ ತಂತಿ ಮಂತ್ರಗಳನ್ನು ಉಪದೇಶವಿತ್ತದ್ದರಿಂದ ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲವೆಂಬುದು ಬೇಡ ಜಂಗಮರ ದೈನಂದಿನ ದೀನ ಚರಿತ್ರೆಯಾಗಿದೆ. ನಮ್ಮ ಕರ್ನಾಟಕ ಶ್ರೇಷ್ಠ ನ್ಯಾಯಾಲಯದ ಆದೇಶದ ಪ್ರಕಾರ ಅನೇಕ ಬೇಡ ಜಂಗಮರು ಪರಿಶಿಷ್ಟ ಜಾತಿಯ ಪ್ರಮಾಣಪತ್ರಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ವೈಯಕ್ತಿಕವಾಗಿ ಅನೇಕ ಬೇಡ ಜಂಗಮರು ನ್ಯಾಯಾಲಯದ ಆದೇಶ ಪ್ರಕಾರ ಪರಿಶಿಷ್ಟ ಜಾತಿ ಪ್ರಮಾಣ ಪತ್ರಗಳನ್ನು ಪಡೆಯುತ್ತಿದ್ದರೂ ಗ್ರಾಮೀಣ ಬೇಡ ಜಂಗಮರು ಸಾಮೂಹಿಕವಾಗಿ ಸಾರ್ವತ್ರಿಕವಾಗಿ, ಸರಳವಾಗಿ ಪ್ರಮಾಣಪತ್ರ ಪಡೆಯುವಲ್ಲಿ ಇನ್ನು ತೊಂದರೆ ಅನುಭವಿಸುತ್ತಿದ್ದಾರೆ.

ಬಾಲಗುರುಮೂರ್ತಿಯವರು ಭಾರತದ ಮಾನವ ಶಾಸ್ತ್ರ ಸರ್ವೇಕ್ಷಣ ಇಲಾಖೆಯವರು ಪ್ರಕಟಿಸಿರುವ ಪರಿಷ್ಕೃತ **"ಎ ರೀ ಸ್ಟಡಿ ಆಫ್ ದಿ ಬೇಡ ಜಂಗಮ್"** ಎನ್ನುವ ವರದಿಯನ್ನು ಯಥಾವತ್ ಭಟ್ಟಿ ಇಳಿಸಿದ್ದಾರೆ. ಈ ವರದಿಯಲ್ಲಿನ ಅಂಶಗಳು ಈ ಹಿಂದೆ ಆಂಧ್ರ ಶ್ರೇಷ್ಠ ನ್ಯಾಯಾಲಯವು ರದ್ದುಗೊಳಿಸಿದ ಆಂಧ್ರ ಪ್ರದೇಶ ಸರಕಾರವು ಜಾರಿಗೊಳಿಸಿದ ಮತ್ತು ಕರ್ನಾಟಕ ಸರಕಾರವು ಶ್ರೀಮತಿ ಗೀತಾ ಕುಲಕರ್ಣಿಯವರ ರಿಟ್ ಪ್ರಕರಣದಲ್ಲಿ ಕರ್ನಾಟಕ ಶ್ರೇಷ್ಠ ನ್ಯಾಯಾಲಯವೂ ಅಸಿಂಧುವೆಂದು ರದ್ದುಗೊಳಿಸಿದ

(17ನೇ ಪುಟಕ್ಕೆ)

ಹಿಂದುಳಿದ ಜಾತಿಗಳ ವರ್ಗೀಕರಣದಲ್ಲಿ ವಿವಿಧ ಗುಂಪುಗಳಲ್ಲಿ ಸ್ಥಾನ ಪಡೆದುಕೊಂಡಿರುವ ಜಾತಿಗಳು ಇನ್ನೂ ಹೆಚ್ಚಿನ ಸೌಲಭ್ಯ ಪಡೆಯುವ ಅತ್ಯಂತ ಹಿಂದುಳಿದವರ ಹಾಗೂ ಹೆಚ್ಚಿನ ಸಂವಿಧಾನಿಕ ಮೀಸಲಾತಿ ಮತ್ತು ರಕ್ಷಣೆ ಪಡೆಯ[illegible] ಹೋರಾಡಲು ಹಕ್ಕನ್ನು ಪಡೆದಿರುತ್ತವೆ. ಅಂತ್ಯಜರ ಪರಿಶಿಷ್ಟ ಜಾತಿ, ಅಥವಾ ಪರಿಶಿಷ್ಟ ವರ್ಗದ ಮೀಸಲಾತಿ ಪಟ್ಟಿಯಲ್ಲಿ [illegible] ಒತ್ತಾಯಿಸಲು ಸರಕಾರಕ್ಕೆ ಬೇಡಿಕೆ ಇಡುವ, ಹಿಂದುಳಿದವರ ಪಟ್ಟಿಯಿಂದ ವರ್ಗೀಕರಣದ [illegible] ಹಿಂದುಳಿದವರ ಪಟ್ಟಿಯಲ್ಲಿ ಸ್ಥಾನಪಲ್ಲಟ ಹೊಂದಲು ಸಂವಿಧಾನದಲ್ಲಿ ಹಕ್ಕ[illegible]ರಂಟಿಗೊಳಿಸಿದೆ.

ನೈಜ ಅಂಬೇಡ್ಕರರ ಅನ್ವೇಷಣೆಯಲ್ಲಿ...

ಮೂಲ: ಡಾ॥ ಆನಂದ್ ತೇಲ್‌ತುಂಬ್ಡೆ
ಅನು: ಶಿವಸುಂದರ್

ಇಂದು ಕರ್ನಾಟಕದಲ್ಲಿ ಅಂಬೇಡ್ಕರ್ ಅವರ ಆಶಯಗಳು ಮತ್ತು ಈ ದೇಶದ ಶೋಷಿತ ಜನತೆಯ ವಿಮೋಚನೆಗೆ ಅವರು ನೀಡಿದ ಕೊಡುಗೆಗಳ ಸುತ್ತಾ ಚರ್ಚೆ ಮತ್ತು ದಾಳಿಗಳು ಪ್ರಾರಂಭವಾಗಿವೆ. ಒಂದೆಡೆ ಬಲಪಂಥೀಯರು ಅಂಬೇಡ್ಕರ್ ಅವರ ಹೋರಾಟವನ್ನು ಮತ್ತು ಅವರ ಕೊಡುಗೆಗಳನ್ನು ಸಂಪೂರ್ಣ ಕಡೆಗಣಿಸುವ ಹೊಸ ಹುನ್ನಾರಗಳನ್ನು ನಡೆಸುತ್ತಿದ್ದಾರೆ. ಅದಕ್ಕೆ ಇತ್ತೀಚಿನ ಸೇರ್ಪಡೆ ಅಂಬೇಡ್ಕರ್ ಸಂವಿಧಾನದ ಕರಡನ್ನೂ ಕೂಡಾ ರಚಿಸಲಿಲ್ಲ ಅದನ್ನು ರಚಿಸಿದ್ದು ಬೆನಗಲ್ ನರಸಿಂಹರಾವ್ ಎಂಬ ಅಸಂಬದ್ಧ ಸುಳ್ಳಿನ ದಾಳಿ. ಮತ್ತೊಂದೆಡೆ ಅಂಬೇಡ್ಕರ್‌ವಾದಿಗಳು ಎನಿಸಿಕೊಂಡವರೂ ಸಹ ಅಂಬೇಡ್ಕರ್ ಅವರನ್ನು ಅವರು ಜೀವನದುದ್ದಕ್ಕೂ ಶೋಷಿತ ವಿಮೋಚನೆಗೆ ನಡೆಸಿದ ನಿರಂತರ ಪ್ರಯೋಗಗಳಲ್ಲಿ ಯಾವುದಾದರೂ ಒಂದಕ್ಕೆ ಸೀಮಿತಗೊಳಿಸಿ ಅವರ ಒಟ್ಟೂ ಕ್ರಾಂತಿಕಾರಿ ಅನ್ವೇಷಣೆಯ ಬದುಕನ್ನು ಕುಬ್ಜಗೊಳಿಸುತ್ತಿದ್ದಾರೆ. ಇದು ಈಗ ಪ್ರಾರಂಭವಾಗಿರುವುದೇನೂ ಅಲ್ಲ. ದೇಶದ ಹಲವು ಕಡೆ ಅಂಬೇಡ್ಕರ್ ಅವರನ್ನು ತಮಗೆ ಬೇಕಾದ ಪ್ರತಿಮೆಗೆ ಕಟ್ಟಿಹಾಕುವ ಪಟ್ಟಭದ್ರ ಪ್ರಯತ್ನಗಳು ನಡೆಯುತ್ತಲೇ ಇವೆ. ಇದರ ಕುರಿತಾಗಿ ದೇಶದ ಖ್ಯಾತ ಚಿಂತಕ ಡಾ. ಆನಂದ್ ತೇಲ್‌ತುಂಬ್ಡೆಯರವರು ಅಂಬೇಡ್ಕರ್ ನಂತರದ ದಲಿತ ಚಳವಳಿಯಲ್ಲಿ ಮತ್ತು ಚಳವಳಿಗಾಗಿ ಅಂಬೇಡ್ಕರ್ ಎಂಬ ಮಹಾನ್ ಪ್ರಬಂಧವನ್ನು 1997ರ ಮಾರ್ಚ್ 27-28ರಂದು ಪುಣೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗವು ಆಯೋಜಿಸಿದ್ದ ಅಂಬೇಡ್ಕರ್ ನಂತರದ ದಲಿತ ಚಳವಳಿಗಳು ಎಂಬ ವಿಚಾರ ಸಂಕಿರಣದಲ್ಲಿ ಮಂಡಿಸಿದ್ದರು. ಅದು ಇಂದಿಗೂ ಕನ್ನಡ ಓದುಗರಿಗೆ ಅರ್ಥಪೂರ್ಣ ಹೊಳಹನ್ನು ನೀಡಬಹುದು ಎಂಬ ಉದ್ದೇಶದಿಂದ ಆ ಪ್ರಬಂಧದ ಸಂಕ್ಷಿಪ್ತ ಅನುವಾದವನ್ನು ಮಾಡಿದ್ದೇನೆ. ಇದರ ಸುತ್ತಾ ಕನ್ನಡದ ಎಲ್ಲಾ ಬಗೆಯ ಪ್ರಗತಿಪರರಲ್ಲಿ ಚರ್ಚೆ ನಡೆಯುವುದು ಒಂದು ಹೊಸ ಮಾರ್ಗದ ಶೋಧನೆಗೂ ಪೂರಕವಾಗಬಹುದೆಂಬ ಆಶಯ ನನ್ನದು. -ಅನುವಾದಕ

ಅಂಬೇಡ್ಕರರಾನಂತರ ದಲಿತ ಚಳವಳಿ ಅಂಬೇಡ್ಕರರ ಸುತ್ತ ಕಟ್ಟಿಕೊಂಡಿರುವ ಪ್ರತಿಮೆಗಳು ಅಂಬೇಡ್ಕರರನ್ನು ಸಂವಿಧಾನದ ಕರ್ತೃವೆಂದೂ, ಪ್ರಸ್ತುತ ವ್ಯವಸ್ಥೆಗೆ ಕಾರಣೀಭೂತರೆಂದೂ, ಒಬ್ಬ ಭೋಧೀಸತ್ವನೆಂದೂ, ಒಬ್ಬ ಸಂವಿಧಾನವಾದಿಯೆಂದೂ, ಒಬ್ಬ ಅವಧೂತನೆಂದೂ, ಒಬ್ಬ ರಕ್ಷಕನೆಂದೂ, ಒಬ್ಬ ಉದಾರವಾದಿ ಪ್ರಜಾತಂತ್ರವಾದಿಯೆಂದೂ, ಒಬ್ಬ ದಲಿತರ ನಾಯಕನೆಂದೂ, ಒಬ್ಬ ಕಡು ಕಮ್ಯುನಿಶ್ಟ್ ವಿರೊಧಿಯೆಂದೂ, ಸುಧಾರಣಾವಾದದಲ್ಲಿ ನಂಬಿಕೆಯಿಟ್ಟಿದ್ದ ಮತ್ತು ಕ್ರಾಂತಿಗಳ ವಿರೊಧಿಯೆಂದೂ ಬಣ್ಣಿಸುತ್ತವೆ. ಈ ಬಗೆಯಲ್ಲಿ ಅಂಬೇಡ್ಕರರ ಬಗ್ಗೆ ಇರುವ ಒಂದು ಪೆಟಿ-ಬೂರ್ಜ್ವಾ ಚಿತ್ರಣವೇ ಇಂದು ದಲಿತ ಚಳವಳಿಯನ್ನು ಆವರಿಸಿಕೊಂಡಿವೆ. ಈ ಬಗೆಯ ಬಣ್ಣನೆಗಳು ಅಂಬೇಡ್ಕರರೊಳಗಿದ್ದ, ಯಾವುದೇ ಬಗೆಯ ಶೋಷಣೆ, ಅನ್ಯಾಯ, ಕಪಟಗಳಿಲ್ಲದ ಮಾನವ ಸಮಾಜದ ಕನಸುಗಾರನನ್ನು ಕಟ್ಟಿಕೊಡಲು ವಿಫಲವಾಗುತ್ತವೆ.

ದಲಿತ ಚಳವಳಿಯ ಬಹಳಷ್ಟು ಅಧ್ಯಯನಗಳು ಅಂಬೇಡ್ಕರರನ್ನು ಒಬ್ಬ ಉದಾರವಾದಿ ಪ್ರಜಾತಂತ್ರವಾದಿಯೆಂದು ಚಿತ್ರಿಸುವ ಚೌಕಟ್ಟಿನಿಂದಲೇ ಪ್ರಭಾವಿತವಾಗಿವೆ. ಆದರೆ ಅದು ನಿಜವಾದ ಅಂಬೇಡ್ಕರರನ್ನು ಪ್ರತಿನಿಧಿಸುತ್ತದೆಯೆ? ಅದು ಅಂಬೇಡ್ಕರ್ ಚಳವಳಿಯ ನಿಜವಾದ ಅಂತಃಸತ್ವವನ್ನು ಹಿಡಿದಿಡುತ್ತದೆಯೇ? ಎಲ್ಲಕ್ಕಿಂತ ಹೆಚ್ಚಾಗಿ ದಲಿತರ ವಿಮೋಚನಾ ಚಳವಳಿಯಲ್ಲಿ ನಾವು ಅಸ್ತ್ರದಂತೆ ಬಳಸಬೇಕೆಂದಿರುವುದು ಅಂಬೇಡ್ಕರರ ಈ ಪ್ರತಿಮೆಯನ್ನೇ?

ಒಂದು ಸಾಮಾಜಿಕ ಸಮುದಾಯವಾಗಿ ದಲಿತರು ಈಗಲೂ ಅತ್ಯಂತ ಬಡವರ್ಗದವರು. ಅವರಲ್ಲಿ ಕೆಲವೇ ಕೆಲವರು ಮೀಸಲಾತಿ ಮತ್ತು ರಾಜಕೀಯ ಅವಕಾಶಗಳಂತಹ ಪ್ರಭುತ್ವ ನೀತಿಗಳಿಂದಾಗಿ ಬಡತನದ ಬಲೆಯಿಂದ ಮುಕ್ತರಾಗಿ ಹೇಳಿಕೊಳ್ಳಬಹುದಾದಷ್ಟು ಸಂಪನ್ನರಾಗಿದ್ದಾರೆ. ಆದರೆ ಸಾಮಾಜಿಕ ಸ್ಥರದಲ್ಲಿ ಆರ್ಥಿಕ ಸ್ಥಾನಮಾನಗಳೇನೇ ಇದ್ದರೂ ಎಲ್ಲಾ ದಲಿತರು ಇನ್ನೂ ದಮನಕ್ಕೆ ಒಳಗಾಗಿಯೇ ಇದ್ದಾರೆ. ಈ ಸಾಮಾಜಿಕ ದಮನವು ಇನ್ನೂ ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿರುವ ಅತಿ ಕ್ರೂರ ಅಸ್ಪೃಷ್ಯತೆಯಂತ ಆಚರಣೆಗಳಿಂದ ಹಿಡಿದು ನಗರ ಜೀವನದ ಆಧುನಿಕ ಕ್ಷೇತ್ರಗಳಲ್ಲೂ ಕಂಡು ಬರುವ ಸೂಕ್ಷ್ಮ ಭೇದಭಾವಗಳವರೆಗೆ ಹರಡಿಕೊಂಡಿದೆ. ಕಳೆದ ಐದು

ದಶಕಗಳ ಅಂಕಿಅಂಶಗಳು ತೋರಿಸಿಕೊಡುವಂತೆ ದಲಿತರ ಸ್ಥಿತಿಗತಿ ಎಲ್ಲಾ ಕ್ಷೇತ್ರಗಳಲ್ಲೂ ಮೊದಲಿಗಿಂತ ಸುಧಾರಿಸಿದ್ದರೂ ದಲಿತರಿಗೂ ಹಾಗೂ ದಲಿತೇತರಿಗೂ ನಡುವೆ ಇರುವ ಅಂತರ ಅದೇ ರೀತಿ ಇದೆ ಅಥವಾ ಇನ್ನಷ್ಟು ಹೆಚ್ಚಾಗಿದೆ. ದಲಿತರಲ್ಲಿ ಈಗಲೂ ಶೇ.75ರಷ್ಟು ಇನ್ನೂ ಭೂಮಿಗೇ ಅಂಟಿಕೊಂಡಿದ್ದಾರೆ. ಇವರಲ್ಲಿ ಶೇ.25ರಷ್ಟು ಸಣ್ಣ ಹಾಗೂ ಅತಿ ಸಣ್ಣ ರೈತಾಪಿಯಾಗಿದ್ದರೆ ಉಳಿದ ಶೇ.50ರಷ್ಟು ಭೂ ಹೀನ ಕೂಲಿಗಳೇ. ಒಟ್ಟಾರೆ ರೈತಕೂಲಿಗಳಲ್ಲಿ ದಲಿತರ ಪ್ರಮಾಣ ಹೆಚ್ಚುತ್ತಲೇ ಸಾಗಿದೆ. ನಗರ ಪ್ರದೇಶದಲ್ಲೂ ಅವರು ಹೆಚ್ಚಾಗಿ ಅಸಂಘಟಿತ ವಲಯಗಳಲ್ಲೇ ಕೆಲಸ ಮಾಡುತ್ತಾರೆ. ಅಲ್ಲಿನ ಕೆಲಸದ ವಾತವರಣವಂತೂ ಹಳ್ಳಿಗಾಡಿನ ಊಳಿಗಮಾನ್ಯ ಪರಿಸ್ಥಿತಿಯನ್ನೇ ನೆನಪಿಸುವಂತಿರುತ್ತದೆ. ಒಟ್ಟಾರೆ ದಲಿತರ ಜನಸಂಖ್ಯೆ 13.8 ಕೋಟಿಯಾಗಿದ್ದರೆ ಅದರಲ್ಲಿ ಕಸಗುಡಿಸುವ ಕೆಲಸವನ್ನೂ ಒಳಗೊಂಡಂತೆ ಸೇವಾ ಕ್ಷೇತ್ರಗಳಲ್ಲಿ ಮೀಸಲಾತಿಯಿಂದ ದೊರೆಯುವ ಉದ್ಯೋಗದ ಸಂಖ್ಯೆ 13 ಲಕ್ಷಗಳನ್ನು ದಾಟುವುದಿಲ್ಲ. ಇದು ಒಂದು ಪರ್ಸೆಂಟಿನಷ್ಟು ಆಗುವುದಿಲ್ಲ. ಈ ಅಂಕಿ-ಅಂಶಗಳೂ ಸಹ ಸರಿಯಾದ ಚಿತ್ರಣವನ್ನೇನೂ ನೀಡುವುದಿಲ್ಲ. ಏಕೆಂದರೆ ಈ 13 ಲಕ್ಷದಷ್ಟು ಉದ್ಯೋಗಗಳಲ್ಲಿ ಹಲವಾರು ಸಾರ್ವಜನಿಕ ಉದ್ಯಮಗಳಲ್ಲಿರುವ ಗುಮಾಸ್ತ ರೀತಿಯ ಉದ್ಯೋಗಗಳನ್ನೂ ಸೇರಿಸಿ ಎ ಮತ್ತು ಬಿ ವರ್ಗದ ಉದ್ಯೋಗಗಳು ಕೇವಲ 72212. ಆದರೆ ಚಪರಾಸಿ ಉದ್ಯೋಗಗಳ ಸಂಖ್ಯೆ 131841!

ವಿಶ್ವದಲ್ಲಿ ಹೊಸ ರಾಜಕೀಯ ಆರ್ಥಿಕ ವ್ಯವಸ್ಥೆ ಜಗತ್ತನ್ನೇ ಆವರಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ದಲಿತರ ವಿಮೋಚನಾ ಹೋರಾಟಗಳ ವ್ಯಾಕರಣ ದಲಿತರಿಗೆ ಈವರೆಗೆ ಪರಿಚಿತವಾಗಿರುವ ಭಾಷೆಗಿಂತ ಸಂಪೂರ್ಣ ಭಿನ್ನವಾಗಿರುತ್ತದೆ. ಈ ಘಾತುಕ ಶಕ್ತಿಗಳ ಆಕ್ರಮಣವನ್ನು ವಿಶ್ವದ ಎಲ್ಲಾ ದಮನಿತರು ಅರ್ಥ ಮಾಡಿಕೊಳ್ಳುತ್ತಿರುವ ಹೊತ್ತಿನಲ್ಲಿ ದಲಿತರು ತಮ್ಮನ್ನು ಅವರ ಭಾಗವಾಗಿ ಕಂಡುಕೊಳ್ಳದೇ ಹೋಗುವುದು ಮೂರ್ಖತನವಾಗುತ್ತದೆ. ಒಂದು ಸಾಮಾಜಿಕ ಘಟಕವಾಗಿ ದಲಿತರ ಬದುಕನ್ನು ದೇಶದ ಆರ್ಥಿಕತೆಯ ಸಂಘಟಿತ ಕ್ಷೇತ್ರಕ್ಕೆ ಸೇರಿಕೊಂಡು ಮಾಯವಾದ ಅಲ್ಪಸಂಖ್ಯಾತ ದಲಿತ ಸಮುದಾಯ ಪ್ರತಿನಿಧಿಸುವುದಿಲ್ಲ. ಬದಲಿಗೆ ಈಗಲೂ ಹಳ್ಳಿಯಲ್ಲೇ ಉಳಿದುಕೊಂಡಿರುವ ಮತ್ತು ನಗರದ ಅಸಂಘಟಿತ ಕ್ಷೇತ್ರಗಳಲ್ಲಿ ನಲುಗುತ್ತಿರುವ ದಲಿತರ ಬದುಕು ಅದರ ನಿಜವಾದ ಪ್ರತಿನಿಧಿ. ವಾಸ್ತವವಾಗಿ ತಮ್ಮ ವಿಮೋಚನೆಗಾಗಿ ಸಮರವನ್ನು ನೆಡೆಸುತ್ತಿರುವ ಈ ಸಮುದಾಯಕ್ಕೆ ಅಸ್ತ್ರಗಳ ಅಗತ್ಯವಿದೆ. ಈ ಸಮರವನ್ನು ಏಕಕಾಲದಲ್ಲಿ ಎರಡು ಅಂಗಣಗಳಲ್ಲಿ ನೆಡೆಸುವ ಅಗತ್ಯವಿದೆ-ಜಾತಿ ಮತ್ತು ವರ್ಗ. ಆದರೆ ಈ ಎರಡು ಅಂಶಗಳನ್ನು ಅತ್ಯಂತ ಸಂಕುಚಿತವಾಗಿ ಹಾಗೂ ವಿಭಾಗೀಕರಿಸಿ ಅರ್ಥೈಸಿಕೊಂಡಿರುವುದರಿಂದ ಒಂದನ್ನು ಹೊರತುಪಡಿಸಿ ಮತ್ತೊಂದನ್ನು ನೋಡುವ ಪ್ರವೃತ್ತಿ ಬೆಳೆದಿದೆ. ಆದರೆ ಇಂದಿಗೂ ದಲಿತರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಇತರ ಯಾವುದಕ್ಕಿಂತಲೂ ಅಂಬೇಡ್ಕರ್ ಉತ್ತಮವಾದ ಚೌಕಟ್ಟನ್ನು ಒದಗಿಸಿಕೊಡುವುದರಿಂದ ಹಾಗೂ ಅಂಬೇಡ್ಕರ್ ಈಗಲೂ ದಲಿತರ ಹೃದಯಗಳಲ್ಲಿ ಅಚಲವಾದ ಸ್ಥಾನವನ್ನು ಪಡೆದಿರುವುದರಿಂದ ಅಂಬೇಡ್ಕರ್‌ರ ಶಸ್ತ್ರಾಗಾರದಲ್ಲಿರುವ ಶಸ್ತ್ರಾಸ್ತ್ರಗಳಿಗೆ ಹಿಡಿದಿರುವ ತುಕ್ಕನ್ನು ತೊಳೆದು ಹರಿತಗೊಳಿಸುವ ಅಗತ್ಯವಿದೆ. ಬದಲಾದ ಸಂದರ್ಭದಲ್ಲಿ ಅದರ ಪರಿಣಾಮಕಾರಿಯಾದ ಬಳಕೆಗಾಗಿ ಅಗತ್ಯವಿರುವ ಪರಾಮರ್ಷೆಯನ್ನು ಮಾಡುವ ಹಾಗೂ ಮತ್ತಷ್ಟು ಪುಷ್ಟಿಗೊಳಿಸುವ ಅಗತ್ಯವಿರುತ್ತದೆ. ಬುದ್ಧನ ರೀತಿ ಅಂಬೇಡ್ಕರ್ ಸಹ ತಮ್ಮ ಕೈಯಲ್ಲೇ ಪುನರ್‌ನಿರ್ವಚನಕ್ಕೆ ಒಳಪಡುವ ಅಗತ್ಯವಿದೆ. ನಮ್ಮನ್ನು ಲೂಟಿ ಹೊಡೆಯುತ್ತಿರುವ ದರೋಡೆಕೋರರ ಬಳಿ ಸಣ್ಣಪುಟ್ಟ ಉಪಕಾರಕ್ಕಾಗಿ ಭಿಕ್ಷೆ ಬೇಡದೆ ಇಡೀ ಪ್ರಪಂಚವನ್ನೇ ತಮ್ಮದೆಂದು ಹಕ್ಕಿನಿಂದ ಪ್ರತಿಪಾದಿಸುವಂತೆ ಜನತೆಯನ್ನು ಸ್ಫೂರ್ತಿಗೊಳಿಸುವ ರೀತಿಯಲ್ಲಿ ಕ್ರಾಂತಿಕಾರಿ ಅಂಬೇಡ್ಕರ್‌ರನ್ನು ಜಾನಪದ ಅಂಬೇಡ್ಕರ್‌ರ ಜಾಗದಲ್ಲಿ ಪ್ರತಿಷ್ಠಾಪಿಸಬೇಕಿದೆ. ಎದುರಿಗಿರುವ ಸತ್ಯವನ್ನು ಕಾಣಬಲ್ಲ ಶಕ್ತಿ ಇರುವ ಪ್ರತಿಯೊಬ್ಬರು ಈ ಕರ್ತವ್ಯವನ್ನು ಈಡೇರಿಸಲು ಕೊಡುಗೆಗಳನ್ನು ನೀಡಬೇಕಿದೆ. ಏಕೆಂದರೆ ಅಂಬೇಡ್ಕರ್‌ರನ್ನು ಈ ರೀತಿಯಲ್ಲಿ ಪುನರ್ ನಿರ್ವಚನ ಮಾಡಿಕೊಳ್ಳದಿದ್ದರೆ ಅಂಬೇಡ್ಕರ್ ದೇವಶಿಲೆಯಾಗಬಹುದೇ ವಿನಃ ವಿಮೋಚನೆ ಮಾಡುವಲ್ಲಿ ವಿಫಲವಾಗುತ್ತಾರೆ. ಪಟ್ಟಭದ್ರ ಹಿತಾಸಕ್ತಿಗಳು ಅವರನ್ನು ಅತಿ ಎತ್ತರದ ಪೀಠದಲ್ಲಿ ಕುಳ್ಳಿರಿಸಬಹುದು. ಆದರೆ ಅಂಬೇಡ್ಕರ್ ಎಲ್ಲಿ ಅತ್ಯಂತ ಅಗತ್ಯವಿದೆಯೋ ಅಲ್ಲಿಗೆ ಮುಟ್ಟಲಾಗದೆ ಇತಿಹಾಸದ ವಿಪರ್ಯಾಸಗಳಲ್ಲಿ ಒಂದಾಗಿಬಿಡಬಹುದು.

ಅಂಬೇಡ್ಕರರ ಪುನರ್ನಿರ್ವಚನ:

ವಿದ್ವಾಂಸರು ಅಂಬೇಡ್ಕರರ ಚಿಂತನೆಯನ್ನು ಬೇರೆಬೇರೆ ರೀತಿಯಲ್ಲಿ ನೋಡಿದ್ದಾರೆ. ಕೆಲವರು ಅವುಗಳನ್ನು ಸುಪರಿಚಿತ ಅಕೆಡೆಮಿಕ್ ಶಾಖೆಗಳಾದ ಸಾಮಾಜಿಕ, ರಾಜಕೀಯ, ಧಾರ್ಮಿಕ ಎಂಬಿತ್ಯಾದಿಗಳಾಗಿ ವಿಂಗಡಿಸಿದ್ದಾರೆ. ಇನ್ನೊಂದು ವಿಧಾನವನ್ನು ಜೀವನ ಕಥನ ವಿಧಾನವೆಂದು ಹೇಳಿಬಿಡಬಹುದು. ಮೊದಲನೆ ವಿಧಾನದಲ್ಲಿರುವ ಸಮಸ್ಯೆಯೆಂದರೆ ಅದು ಅಂಬೇಡ್ಕರ್‌ರ ಚಿಂತನೆಯನ್ನು ಅಕೆಡೆಮಿಕ್ ಶಿಸ್ತುಗಳಲ್ಲಿ ಕೃತಕವಾಗಿ ವಿಭಾಗೀಕರಿಸಿಬಿಡುತ್ತದೆ. ಎರಡನೆಯ ಪದ್ಧತಿ ಕಥನ ಮಾದರಿಯಲ್ಲಿ ವೈಭವೀಕರಣದ ನೆಲೆಯಲ್ಲಿ ನೆಡೆಯುತ್ತಾ ಯಾವುದೇ ವಿಮರ್ಷೆ-ವಿಶ್ಲೇಷಣೆ ನೆಡೆಸುವುದಿಲ್ಲ. ಹೀಗಾಗಿ ಅವೆರೆಡೂ ವಿಧಾನಗಳೂ ಒಂದು ಸಮಗ್ರ ಚಿಂತನಾ ವಿಧಾನದ ಪ್ರಮುಖ ಅಂಶಗಳಾದ ಲೋಕದೃಷ್ಟಿ ಮತ್ತು ಭವಿಷ್ಯದ ಕಾಣ್ಕೆಗಳನ್ನು ಹಿಡಿದಿಡುವಲ್ಲಿ ವಿಫಲವಾಗುತ್ತವೆ.

ಅಂಬೇಡ್ಕರ್: ಬದ್ಧತೆ ಮತ್ತು ತೊಡಕುಗಳು:

ಬಾಬಾಸಾಹೆಬ್ ಅಂಬೇಡ್ಕರ್‌ರವರ ವಿಷಯದಲ್ಲಿ ಅವರೊಂದು ಪ್ರತಿಮೆಯಾಗಿಬಿಡುವುದು ಅನಿವಾರ್ಯವೇ ಆಗಿತ್ತು. ಅವರ ಉನ್ನತ ಸ್ಥಾನ-ಮಾನ, ತನ್ನ ಜನರ ಬಗ್ಗೆ ಅವರಿಗೆ ಇದ್ದ ಬದ್ಧತೆ, ಅವರಿದ್ದ ಚಾರಿತ್ರಿಕ ಸನ್ನಿವೇಶ, ಜನತೆಯ ಅನಕ್ಷರತೆ ಹಾಗೂ ಕಡಿಮೆ ಮಟ್ಟದ ರಾಜಕೀಯ ತಿಳುವಳಿಕೆ, ಮತ್ತು ಒಳಗಿನ ಹಾಗೂ ಹೊರಗಿನ ಜನರ ಪಟ್ಟಭದ್ರ ಹಿತಾಸಕ್ತಿಗಳಂತ ಸಂಗತಿಗಳೆ ಇದಕ್ಕೆ ಕಾರಣ. ಸಮಸ್ಯೆ ಇರುವುದು ಪ್ರತಿಮೀಕರಣದಲ್ಲಲ್ಲ. ಬದಲಿಗೆ ಅದರ ಬಹು ಪುನುರುತ್ಪಾದನೆಯಲ್ಲಿ. ಆದರೆ ಇಲ್ಲಿಯೂ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬಹುದು. ಅಂಬೇಡ್ಕರ್‌ರನ್ನು ಕೇವಲ ಒಂದು ಪ್ರತಿಮೆಯಾಗಿ ಗ್ರಹಿಸಬಹುದೇ? ಅಂಬೇಡ್ಕರರ ಶತಮಾನೋತ್ಸವ ಸಂದರ್ಭದಲ್ಲಿ ಪ್ರೊ. ಉಪೇಂದ್ರ ಭಕ್ಷಿಯವರು ತಮ್ಮ ಒಂದು ಲೇಖನದಲ್ಲಿ ಪ್ರಶ್ನಿಸಿದಂತೆ ಹಲವು ಅಂಬೇಡ್ಕರ್‌ಗಳಿರುವುದರಿಂದ ನಾವು ಯಾವ ಅಂಬೇಡ್ಕರ್ ಅವರನ್ನು ಸ್ಮರಿಸುತಿದ್ದೇವೆ? ಪ್ರೊ. ಭಕ್ಷಿಯವರು ಹಾಗೆ ಕೇಳಿದಾಗ ಅವರ ಮನಸ್ಸಿನಲ್ಲಿ ಹಲವು ರೀತಿಯಲ್ಲಿ ವಿಂಗಡಿಸಬಹುದಾದ ಅಂಬೇಡ್ಕರ್‌ರವರ ವ್ಯಕ್ತಿತ್ವವಿತ್ತು. ಅವುಗಳಲ್ಲಿ ಕೆಲವನ್ನು ಕಾಲಾನುಕ್ರಮವಾಗಿ ವಿಂಗಡಿಸಲೂಬಹುದು. ಉದಾಹರಣೆಗೆ 1942 ಕ್ಕೆ ಮುಂಚಿನ ಅಪ್ರತಿಮ ವಿದ್ವತ್ತು ಹೊಂದಿದ್ದ ತನ್ನ ಜನರ ವಿಮೋಚನೆಗಾಗಿ ಒಳಗೂ ಹೊರಗೂ ಹೋರಾಡುತ್ತಿದ ಅಸ್ಪೃಷ್ಯ ಯುವ ಅಂಬೇಡ್ಕರ್‌ಗೂ, ವೈಸ್‌ರಾಯರ ಆಡಳಿತ ಸಮಿತಿಯ ಸದಸ್ಯರಾಗಿದ್ದ ಅಥವಾ ಆ ನಂತರ ನೆಹ್ರೂರ ಕ್ಯಾಬಿನೆಟ್‌ನಲ್ಲಿ ಕಾನೂನು ಮಂತ್ರಿಯಾದ ಅಂಬೇಡ್ಕರ್‌ಗೂ ಅಥವಾ ಅದಕ್ಕೂ ಮುಂಚೆ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷನಾಗಿದ್ದ ಅಥವಾ ಆ ನಂತರದ ವರುಷಗಳಲ್ಲಿ ಬೌದ್ಧ ಧರ್ಮದ ಜೊತೆಗೆ ಸಂಪೂರ್ಣವಾಗಿ ಗುರುತಿಸಿಕೊಂಡು ಒಂದು ರೀತಿಯಲ್ಲಿ ಸಂಪೂರ್ಣವಾಗಿ ತನ್ನನ್ನು ತಾನೆ ಸ್ಪಿರಿಚುಯಲ್ ಆಗಿಸಿಕೊಂಡ ಅಂಬೇಡ್ಕರ್‌ಗೂ ಸಾಕಷ್ಟು ವ್ಯತ್ಯಾಸಗಳಿವೆ.

ಆದರೆ ಅದು ಏನೇ ಇದ್ದರೂ ಈ ಪರಾಮರ್ಷೆಯಲ್ಲಿ ಎದ್ದು ಕಾಣುವ ಸಂಗತಿಯೇನೆಂದರೆ ಅವರ ದೃಷ್ಟಿಕೋನದಲ್ಲಿ ಹಾಗೂ ಅವರ ಪಾತ್ರದಲ್ಲಿ ಬಂದ ಬದಲಾವಣೆಗಳೆಲ್ಲವೂ ದಮನಿತ ಜನತೆಯ ಅದರಲ್ಲೂ ನಿರ್ಧಿಷ್ಟವಾಗಿ ದಲಿತರ ವಿಮೋಚನೆಯ ಬಗ್ಗೆ ಅವರಿಗಿದ್ದ ಅಚಲ ಬದ್ಧತೆಯಿಂದಲೇ ಚಾಲನೆಗೊಂಡಿದ್ದವೆಂಬುದು ನಿರ್ವಿವಾದ. ತಾವು ಹೋರಾಡುತ್ತಿದ್ದ ಸಮಸ್ಯೆಯ ನಿವಾರಣೆಯನ್ನು ಸಾಧಿಸಲು ಅಗತ್ಯವಿದ್ದ ಸೂಕ್ತ ಉಪಕರಣಗಳು ಅವರ ಬಳಿ ಇಲ್ಲದೇ ಇದ್ದಿರಬಹುದು. ಸಮಾಜಶಾಸ್ತ್ರದ ವಿದ್ವತ್ ಲೋಕದಲ್ಲಿ ಬಳಸುವ ಉಪಕರಣಗಳನ್ನು



ಬಾಬಾಸಾಹೆಬ್ ಅಂಬೇಡ್ಕರ್‌ರವರ ವಿಷಯದಲ್ಲಿ ಅವರೊಂದು ಪ್ರತಿಮೆಯಾಗಿಬಿಡುವುದು ಅನಿವಾರ್ಯವೇ ಆಗಿತ್ತು. ಅವರ ಉನ್ನತ ಸ್ಥಾನ–ಮಾನ, ತನ್ನ ಜನರ ಬಗ್ಗೆ ಅವರಿಗೆ ಇದ್ದ ಬದ್ಧತೆ, ಅವರಿದ್ದ ಚಾರಿತ್ರಿಕ ಸನ್ನಿವೇಶ, ಜನತೆಯ ಅನಕ್ಷರತೆ ಹಾಗೂ ಕಡಿಮೆ ಮಟ್ಟದ ರಾಜಕೀಯ ತಿಳುವಳಿಕೆ, ಮತ್ತು ಒಳಗಿನ ಹಾಗೂ ಹೊರಗಿನ ಜನರ ಪಟ್ಟಭದ್ರ ಹಿತಾಸಕ್ತಿಗಳಂತ ಸಂಗತಿಗಳೆ ಇದಕ್ಕೆ ಕಾರಣ.

ಬಳಸಿಕೊಂಡೇ ಅವರು ಇತಿಹಾಸವನ್ನು ಪರಿಶೀಲಿಸಿದರು. ವಿಪರ್ಯಾಸವೆಂದರೆ ಯಾವ ಉಪಕರಣಗಳು ಆಳುವವರ್ಗಗಳ ಸೇವೆಗೆಂದೇ ರೂಪುಗೊಂಡಿವೆಯೋ ಅವೇ ಉಪಕರಣಗಳನ್ನು ಬಳಸಿಕೊಂಡು ಅಂಬೇಡ್ಕರ್‌ರವರು ವ್ಯವಸ್ಥೆಯನ್ನು ನಾಶ ಮಾಡಲು ಯತ್ನಿಸಿದರು. ಅವರಿಗಿದ್ದ ಶೈಕ್ಷಣಿಕ ಹಿನ್ನಲೆ ಅವರನ್ನು ಮಾನವ ಇತಿಹಾಸವು ಒಂದು ಅಂತರ್ಗತವಾಗಿ ತರ್ಕ ಬದ್ಧವಾಗಿರುವ ಸರಣಿಯೆಂದು ಅರ್ಥಮಾಡಿಕೊಳ್ಳಲು ಸಹಾಯಮಾಡುವಂತಿರಲಿಲ್ಲ. ಅವರು ಇತಿಹಾಸವನ್ನು ಮಾನವ ನಿರ್ಮಿತ ಘಟನಾವಳಿಗಳ ಸರಪಳಿಯೆಂದೂ ಅರ್ಥ ಮಾಡಿಕೊಂಡರು. ಅದಕ್ಕೆ ಒಂದು ತರ್ಕವನ್ನು ಅವರು ಆರೋಪಿಸಿದರೂ ಅದರ ಮೂಲವನ್ನು ಹೊರಗಡೆಯೆ ಹುಡುಕಿದರು.

ಗತಿತರ್ಕ ರಹಿತವಾದ ಪರಿಹಾರ: ಪ್ರಭುತ್ವ ಮತ್ತು ಧರ್ಮ:

ಒಂದು ರೀತಿಯಲ್ಲಿ ನೋಡಿದರೆ ಬಾಬಾಸಾಹೆಬ್ ಅಂಬೇಡ್ಕರ್‌ರವರು ಬುದ್ಧ ಧಮ್ಮದ ಮೂಲ ಸೂತ್ರಗಳಲ್ಲಿರುವ ಕ್ಷಣಿಕವಾದ ಅಥವಾ ಅನಿತ್ಯವಾದವನ್ನು ಇಡಿಯಾಗಿ ಅರಗಿಸಿಕೊಂಡಿದ್ದರೆಂದು ಕಾಣುತ್ತದೆ. ಹೀಗಾಗಿಯೇ ಅವರು ತಮ್ಮ ಚಿಂತನಾಧಾರೆಯಲ್ಲಿ ಹಾಗೂ ಅಭಿಪ್ರಾಯಗಳಲ್ಲಿ ಏಕಸೂತ್ರತೆಯನ್ನು ಉಳಿಸಿಕೊಳ್ಳಲೂ ನಿರಾಕರಿಸಿದ್ದಂತೆ ತೋರುತ್ತದೆ. ಈ ಸಿದ್ಧಾಂತವು ಪ್ರತಿಯೊಂದು ಪ್ರತಿಕ್ಷಣವೂ ಬದಲಾಗುತ್ತಿರುತ್ತದೆ ಹಾಗೂ ವಸ್ತುಗಳೂ ಹಾಗೂ ಸಂಗತಿಗಳೂ ನಿರಂತರವಾಗಿ ಉದ್ಭವಗೊಳ್ಳುತ್ತಿರುತ್ತವೆ ಎಂದು ಪ್ರತಿಪಾದಿಸುತ್ತದೆ. ಹೀಗಾಗಿ ಈ ನಿರಂತರ ಚಲನಶೀಲ ಭೌತಿಕ ಪ್ರಪಂಚಕ್ಕೆ ಸಂವಾದಿಯಾಗಿ ಬೌದ್ಧಿಕ ಪ್ರಕ್ರಿಯೆಗಳು ಚಲನಶೀಲವಾಗಿಯೇ ಇರಬೇಕೆಂದು ಪ್ರತಿಪಾದಿಸುತ್ತದೆ.ಹೀಗಾಗಿ ಬದಲಾದ ಪರಿಸ್ಥಿಗೆ ತಕ್ಕಂತೆ ತಮ್ಮ ಆಲೋಚನೆಗಳನ್ನು ಹಾಗೂ ತಮ್ಮ ಸಮರ ತಂತ್ರಗಳನ್ನು ಬದಲಿಸಿಕೊಳ್ಳಲು ಅವರೆಂದೂ ಹಿಂದೆ–ಮುಂದೆ ನೋಡುತ್ತಿರಲಿಲ್ಲ. ಮತ್ತೊಂದು ರೀತಿಯಲ್ಲಿ ನೋಡಿದಲ್ಲಿ ಈ ಬದಲಾವಣೆಗಳನ್ನು ನಿಯಂತ್ರಣ ನೆಡೆಸುವ ಕೇಂದ್ರಬಿಂದುವಿನ ಜೊತೆ ವ್ಯಕ್ತಿಗೆ ಇರುವ ಸಂಬಂಧಗಳಂತೆಯೂ ಅರ್ಥ ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಆಚರಣೆ ಹಾಗೂ ಚಿಂತನೆಗಳಲ್ಲಿ ನಿರಂತರತೆಯೆಂಬುದು ತನ್ನ ಸುತ್ತಮುತ್ತಲಿನ ಪರಿಸರವನ್ನು ನಿಯಂತ್ರಿಸುವ ಕೇಂದ್ರಬಿಂದುವಿನಿಂದ ಆ ವ್ಯಕ್ತಿ ಎಷ್ಟು ದೂರವಿದ್ದಾನೆ ಎಂಬುದರ ಜೊತೆ ವಿಲೋಮ ಸಂಬಂಧವನ್ನೇ ಹೊಂದಿರುತ್ತದೆ. ಅಂದರೆ ಆ ಸುತ್ತಮುತ್ತಲಿನ ಪರಿಸರವನ್ನು ನಿಯಂತ್ರಿಸುವ ನಿಯಂತ್ರಣ ಬಿಂದುವಿಗೆ ಆ ವ್ಯಕ್ತಿ ಹತ್ತಿರವಿದ್ದರೆ ಆಚರಣೆ ಹಾಗೂ ಚಿಂತನೆಯಲ್ಲಿ ನಿರಂತರತೆ ಜಾಸ್ತಿ. ಇಲ್ಲದಿದ್ದಲ್ಲಿ ಕಡಿಮೆ. ತನ್ನ ಸುತ್ತಮುತ್ತಲಿನ ಪರಿಸರದ ಮೇಲೆ ಅಂಬೇಡ್ಕರ್‌ಗೆ ಹೆಚ್ಚೂ ಕಡಿಮೆ ಯಾವುದೇ ನಿಯಂತ್ರಣವಿರಲಿಲ್ಲ. ಅವರು ಲಭ್ಯ ಪರಿಸರದಲ್ಲಿ ಸತತವಾಗಿ ತಮಗಾಗಿ ಒಂದು ಅವಕಾಶವನ್ನು ನಿರ್ಮಿಸಿಕೊಳ್ಳಬೇಕಿತ್ತು ಮತ್ತು ಸಂದರ್ಭವನ್ನು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಬಳಸಿಕೊಳ್ಳಲು ಸದಾ ತಂತ್ರಗಳನ್ನು ಹೆಣೆಯುತ್ತಲೆ ಇರಬೇಕಿತ್ತು. (ಇಂತಹ ಸಂದರ್ಭಗಳ ಗತಿಯನ್ನು ವಿವಿಧ ವಿರೋಧಿ ಬಣಗಳಲ್ಲಿದ್ದ ಶಕ್ತಿಗಳೆ ಪ್ರಭಾವಿಸುತ್ತಿದ್ದರು.) ಅಂಬೇಡ್ಕರ್ ರೂಪಿಸಿದ್ದ ಹೋರಾಟಗಳ ಚೌಕಟ್ಟು ಈ ಗತಿತರ್ಕಕ್ಕೆ ಸದಾ ಸ್ಪಂದಿಸಬೇಕಿತ್ತು. ಅಂಬೇಡ್ಕರ್ ಚಿಂತನೆಯ ಪ್ರಧಾನವಾದ ಅಂಶವೇನೆಂದರೆ ಚಲನಶೀಲ ತರ್ಕ. ಅದನ್ನೇ ಅವರು ನಿರಂತರವಾಗಿ ಬದಲಾಗುತ್ತಿದ್ದ ಸಂದರ್ಭಗಳನ್ನು ಗ್ರಹಿಸಲೂ ಹಾಗೂ ಅದನ್ನು ದಮನಿತ ಜನತೆಯ ಪರವಾಗಿ ಬಳಸಿಕೊಳ್ಳಲು ಸೂಕ್ತವಾದ ತಂತ್ರವನ್ನು ರೂಪಿಸಲು ಬಳಸುತ್ತಿದರು. ಹೀಗಾಗಿ ಅಂಬೇಡ್ಕರ್– ಅವರನ್ನು ಒಂದು ಸ್ಥಿರ, ನಿಶ್ಚಲ ಪರಿಭಾಷೆಯಲ್ಲಿ ಹಿಡಿದಿಡಲಾಗುವುದಿಲ್ಲ. ಅಂಬೇಡ್ಕರ್ ಎಂದು ನಾವು ಹಿಡಿದಿಡುವ ಪ್ರತಿಮೆಯು ಅದರ ಅಂತಃ ಸತ್ವವಾದ ಈ ಚಲನಶೀಲತೆಯನ್ನು ಪ್ರತಿಫಲಿಸಬೇಕಾಗುತ್ತದೆ. ಆದರೆ ಇದು ಸಾಧ್ಯವಾಗುವ ವಿಷಯವಲ್ಲ. ಆದರ ಬದಲಿಗೆ ಅವರ ಎಲ್ಲಾ ಕೃತಿಗಳಲ್ಲಿ ಅಂತರ್ಗತವಾಗಿರುವ ದರ್ಶನಗಳನ್ನು ಅರ್ಥೈಸಿಕೊಂಡು ಮತ್ತು ಅವರ ಇಡೀ ಜೀವನದ ತಾತ್ಪರ್ಯವನ್ನು ಗ್ರಹಿಸಿಕೊಂಡು ಒಂದು ಸೂಕ್ತ ಪ್ರತಿಮೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್‌ರ ಈ ಪ್ರತಿಮೆಯು ನಮಗೆ ಚಿರಪರಿಚಿತವಾಗಿರುವ ಅಂಬೇಡ್ಕರ್‌ರವರ ಪ್ರತಿಮೆಯಾಗಿಲ್ಲದಿದ್ದರೂ ಅದು ಮಾತ್ರವೇ ದಲಿತ ಚಳವಳಿಯ ನಿಜವಾದ ದಿಕ್ಕು ತೋರಿಸುವ ಪಂಜಾಗಿರುತ್ತದೆ.

ಬೌದ್ಧ ದಮ್ಮದಲ್ಲಿರುವ ಅನಿತ್ಯವಾದವು ಗತಿತಾರ್ಕಿಕತೆಗೇ ಸಂಬಧಿಸಿದ್ದು ಅದು ಬುದ್ಧನನ್ನು ವಿಶ್ವದ ಮೊದಮೊದಲ ಗತಿತಾರ್ಕಿಕ ತತ್ವಜ್ಞಾನಿಯನ್ನಾಗಿ ಮಾಡುತ್ತದೆ. ಇದರಲ್ಲಿ ಉದ್ಭವವಾಗುವ ದ್ವಂದ್ವಗಳನ್ನು ಗತಿತಾರ್ಕಿಕ ಪದ್ಧತಿಯಿಂದಲೇ ಬಗೆಹರಿಸಿಕೊಳ್ಳಲು ಸಾಧ್ಯ. ಇಲ್ಲಿಯೂ ಅಂಬೇಡ್ಕರ್‌ರ ವಿಧಾನವು ಒಂದು ಗತಿತಾರ್ಕಿಕ ವಿಧಾನವೇ ಎಂಬ ಪ್ರಶ್ನೆ ಹಾಕಿಕೊಳ್ಳಬಹುದು. ಅವರು ವಸ್ತುವಿನ ಸತತ ಉಗಮವನ್ನು ವಿಶ್ವದ ಅಂತಃಸೂತ್ರವೆಂದು ಪರಿಭಾಷಿಸಿದರೂ ಹಾಗೆ ಉದ್ಭವವಾದ ನಂತರದಲ್ಲಿ ಅದರಲ್ಲಿ ರೂಪುಗೊಳ್ಳುವ ಸುಸ್ಥಿರ ವ್ಯವಸ್ಥೆಯ ಸ್ಥಿತಿಗೆ ಕಾರಣವೇನೆಂಬುದರ ಪ್ರಶ್ನೆ ಬಂದಾಗ ದ್ವಂದ್ವಕ್ಕೊಳಗಾಗುತ್ತಾರೆ. ಆದರೆ ಈ ಪ್ರಶ್ನೆಯನ್ನು ಆ ರೀತಿಯಲ್ಲಿ ಉಗಮಗೊಂಡ ವ್ಯವಸ್ಥೆಗಳಲ್ಲಿ ಅಂತರಿಕವಾಗಿಯೇ ಸ್ವ–ನಿಯಂತ್ರಣವಿರುತ್ತದೆಂಬ ಪರಿಕಲ್ಪನೆಯ ಮೂಲಕ ಗತಿತಾರ್ಕಿಕವಾಗಿ ಪರಿಹರಿಸಿಕೊಳ್ಳಬಹುದು. ಆದರೆ ಸುವ್ಯವಸ್ಥೆ(ಆರ್ಡರ್) ಬಗ್ಗೆ ಇರುವ ಸಾಂಪ್ರದಾಯಿಕ ಪರಿಕಲ್ಪನೆಗಳು, ಸಾರಾಂಶದಲ್ಲಿ ಗತಿತಾರ್ಕಿಕವಲ್ಲದ ಪರಿಕಲ್ಪನೆಗಳು, ವ್ಯವಸ್ಥೆಯೊಳಗಡೆಯೇ ಇರುವ ಸ್ವ ನಿಯಂತ್ರಣದ ಮೂಲವನ್ನು ವ್ಯವಸ್ಥೆಯ ಹೊರಗಡೆಯೇ ಹುಡುಕುತ್ತದೆ. ಇತಿಹಾಸದ ಅತಿಕ್ರೂರ ಅಂಶಗಳನ್ನು ಸ್ವತಃ ಅನುಭವಿಸಿದ್ದ ಹಾಗೂ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಸತತವಾಗಿ ಶೋಷಿಸುವುದನ್ನು ಅನುಭವಿಸಿದ್ದ ಅಂಬೇಡ್ಕರ್‌ರವರು ಸಮಾಜದಲ್ಲಿ ಅಗತ್ಯವಿರುವ ಸುಸ್ಥಿತಿಯನ್ನು ಕಾಪಾಡಿಕೊಂಡು ಬರಲು ಮನುಷ್ಯನ ಒಳಗಿನಿಂದ ಹಾಗೂ ಹೊರಗಿನಿಂದ ಎರಡೂ ಕಡೆಯಿಂದಲೂ ನಿಯಂತ್ರಿಸುವ ಅಗತ್ಯವಿದೆಯೆಂದು ಭಾವಿಸುತ್ತಿದ್ದರೆಂದು ಕಾಣುತ್ತದೆ. ಅವರ ಪ್ರಕಾರ ಅಂತರಿಕ ನಿಯಂತ್ರಣವು ಧರ್ಮವು ನೀಡುವ ನೀತಿ ಸಂಹಿತೆಯಿಂದ ದತ್ತವಾದರೆ ಹೊರಗಿನ ನಿಯಂತ್ರಣವನ್ನು ಪ್ರಭುತ್ವದ ಮೂಲಕ ಸಾಧಿಸಬೇಕು. ಈ ನೀತಿ ಸಂಹಿತೆಯನ್ನು ಎಲ್ಲ ವ್ಯಕ್ತಿಗಳು ಅಂತರಂಗೀಕರಿಸಿಕೊಂಡಾಗ, ಉದಾರವಾದಿ ಪರಂಪರೆಯ ಪ್ರಕಾರ ಸಮಾಜವೆಂಬುದು ವ್ಯಕ್ತಿಗಳ ಸಮೂಹವೇ ಆಗಿರುವುದರಿಂದ, ಸಮಾಜವೂ ಅಂತರಂಗೀಕರಿಸಿಕೊಂಡಂತಾಗಿ ಸಮಾಜವು ಅಂತರಿಕ ನಿಯಂತ್ರಣವನ್ನು ಹೊಂದುತ್ತದೆ ಎಂದು ನಿರೀಕ್ಷಿಸಲಾಗುತ್ತದೆ. ಆದರೆ ಕೆಲವು ವ್ಯಕ್ತಿಗಳ ಅಥವಾ ಒಂದು ಗುಂಪಿನ ಮೃಗೀಯ ಸ್ವಭಾವಗಳು ತಾವು ಆಚರಿಸುತ್ತಿರುವ ವಿಭಿನ್ನ ಸಂಹಿತೆಯ ಕಾರಣದಿಂದಾಗಿಯೋ ಅಥವಾ ಬೇರೆ ಯಾವುದೇ ಕಾರಣಗಳಿಂದಾಗಿ ಈ ಅಂತರಿಕ ನಿಯಂತ್ರಣವನ್ನು ಮೀರಿದಾಗ ಪ್ರಭುತ್ವವು ಮಧ್ಯಪ್ರವೇಶಿಸಿ ಸುವ್ಯವಸ್ಥೆಯನ್ನು ಕಾಪಾಡಬೇಕು. ಜನ ಸಮುದಾಯದ ಅಭೀಪ್ಸೆಯು ಸಂವಿಧಾನದ ಮೂಲಕ ಪ್ರಭುತ್ವದಲ್ಲಿ ನೆಲೆಗೊಂಡಿರುತ್ತದೆಂದು ಭಾವಿಸಲಾಗುತ್ತದೆ. ಆದ್ದರಿಂದಲೆ ಧರ್ಮವು ಜನತೆಯ ಅಫೀಮೆಂಬ ಹಾಗೂ ಪ್ರಭುತ್ವವು ಉದುರಿಹೋಗುತ್ತದೆಂಬ ಮಾರ್ಕ್ಸ್‌ರ ಹೇಳಿಕೆಯನ್ನು ಒಪ್ಪಿಕೊಳ್ಳಲು ಅಂಬೇಡ್ಕರ್‌ರಿಗೆ ಸಮಸ್ಯೆಯಾಗುತ್ತಿತ್ತು. ಆದರೆ ಸುವ್ಯವಸ್ಥೆ ಎಂಬುದು ಆಯಾ ವ್ಯವಸ್ಥೆಯಲ್ಲೇ ಅಂತರಿಕವಾಗಿರುತ್ತದೆಂದು ಅಂಬೇಡ್ಕರ್ ಖಂಡಿತಾ ಭಾವಿಸಿರಲಿಲ್ಲ. ಆದರೆ ಎಪ್ಪತ್ತರ ದಶಕದಲ್ಲಿ ಸಿಬರ್ನೆಟಿಕ್ಸ್ ತಂತ್ರಜ್ಞಾನದ ಅವಿಷ್ಕಾರವಾದ ನಂತರ ಸಂಕೀರ್ಣ ವ್ಯವಸ್ಥೆಗಳು, ಅವುಗಳಲ್ಲಿ ಮಾನವ ಸಮಾಜವೂ ಖಂಡಿತವಾಗಿ ಒಂದು, ತಮ್ಮದೇ ಆದ ಅಂತರಿಕ ಸ್ವ–ನಿಯಂತ್ರಣದ ಹಾಗೂ ಸ್ವ–ಸಂಘಟನೆಯ ವ್ಯವಸ್ಥೆ ಹೊಂದಿರುತ್ತದೆಂದು ಸಾಬೀತಾಯಿತು.

ಉದಾರವಾದ ಮತ್ತು ಸುಧಾರಣಾವಾದ:

ಅಂಬೇಡ್ಕರರ ಬೆಳವಣಿಗೆ ಹಾಗೂ ತರಬೇತಿಗಳೆರಡೂ ಪಾಶ್ಚಿಮಾತ್ಯ ಉದಾರವಾದದ ಪ್ರಭಾವಕ್ಕೆ ಒಳಗಾಗಿದ್ದವು. ಅವರೇ ಹೇಳಿಕೊಂಡಂತೆ ಪಾಶ್ಚಿಮಾತ್ಯ ಸಮಾಜದ ಮುಕ್ತ ಹಾಗೂ ಉದಾರವಾದಿ ಮೌಲ್ಯಗಳು ಅವರಿಗೆ ಸಂತಸಾಶ್ಚರ್ಯವನ್ನು ಉಂಟು ಮಾಡಿದ್ದವು. ಅವರು ಜಾತಿಗಳ ಬಗ್ಗೆ ಬರೆದ ಮೊದಲ ಪ್ರಬಂಧವು ಸ್ವಲ್ಪ ಮಟ್ಟಿಗೆ ಮಾರ್ಕ್ಸ್‌ವಾದಿ ವಿಶ್ಲೇಷಣಾ ಧೋರಣೆಯನ್ನು ಹೊಂದಿದ್ದವು. ಅವರ ಅಕೆಡೆಮಿಕ್ ಅಧ್ಯಯನದ ಒಂದು ವಿಷಯವೂ ಮಾರ್ಕ್ಸ್‌ವಾದಿ ಸಮಜವಾದಕ್ಕೇ ಸಂಬಂಧಪಟ್ಟಿದ್ದಾಗಿತ್ತಲ್ಲದೇ ಅವರ ಗೈಡ್ ಆಗಿದ್ದ ಪ್ರೊ. ಸೆಲಿಗ್‌ಮ್ಯಾನ್ ಇತಿಹಾಸದ ಅರ್ಥಶಾಸ್ತ್ರೀಯ ವ್ಯಾಖ್ಯಾನದಲ್ಲಿ ನಿಪುಣರಾಗಿದ್ದರು. ಅದೇನೇ ಇದ್ದರೂ ಅವರ ನಂತರದ ಕೃತಿಗಳು ಸ್ಪಷ್ಟಪಡಿಸುವಂತೆ ಅಂಬೇಡ್ಕರ್‌ರವರು ಮಾರ್ಕ್ಸ್‌ವಾದಕ್ಕಿಂತ ಹೆಚ್ಚಾಗಿ ಉದಾರವಾದಿ ಸಂಪ್ರದಾಯಕ್ಕೆ ಹೆಚ್ಚು ಹತ್ತಿರವಾಗಿದ್ದರೆಂಬುದನ್ನು ತಿಳಿಸುತ್ತದೆ. ಅದೇನೇ ಇರಲಿ ಅವರೆಂದೂ ಪ್ರಜ್ಞಾಪೂರ್ವಕವಾಗಿ ಉದಾರವಾದದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲಿಲ್ಲ. ಆ ಸಿದ್ಧಾಂತದ ಒಳ ಅಪಾಯಗಳನ್ನು ಅರಿತಿದ್ದ ಅವರು ತಾವು ಉದಾರವಾದಿ ಸುಧಾರಣಾವಾದಿಯಲ್ಲವೆಂದು ಘೋಷಿಸಿಕೊಳ್ಳುವ ಅಗತ್ಯ ಉಂಟಾಯಿತಲ್ಲದೆ ಮಾರ್ಕ್ಸ್‌ವಾದದ ನಿರೂಪಣೆಗಳ ಬಗ್ಗೆ ಎಷ್ಟೇ ಗುಮಾನಿಗಳಿದ್ದರೂ

ಅದರ ಬಗ್ಗೆ ತಮಗಿದ್ದ ಆಕರ್ಷಣೆಯನ್ನು ಮುಚ್ಚಿಟ್ಟುಕೊಳ್ಳಲಿಲ್ಲ.

ಅವರ ಚಿಂತನೆಯಲ್ಲಿದ್ದ ದೌರ್ಬಲ್ಯಗಳು ಭೌತಿಕ ವಾಸ್ತವಗಳ ಜೊತೆ ಸಂಬಂಧ ಕಡಿದುಕೊಂಡ ಧರ್ಮದ ನೈತಿಕ ಶಕ್ತಿಯ ಪರಿಕಲ್ಪನೆಯಿಂದ ಉಗಮವಾಗುತ್ತದೆ. ಆದ್ದರಿಂದಲೇ ಅವರು ಯಾವುದೇ ರಕ್ತಪಾತವಿಲ್ಲದೇ ಸಮಾನತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯದ ತಳಹದಿಯುಳ್ಳ ಸಮಾಜವನ್ನು ಸ್ಥಾಪಿಸಲು ಸಾಧ್ಯ ಎಂದು ಭರವಸೆ ಇಟ್ಟಿದ್ದರು. ಈ ತತ್ವಗಳನ್ನು ಆಧರಿಸಿಯೇ ಅವರು ಸಂವಿಧಾನಾತ್ಮಕ ಪ್ರಭುತ್ವದ ಪರಿಕಲ್ಪನೆಯನ್ನು ಕಟ್ಟಿಕೊಂಡಿದ್ದರು. ಈ ಬಗೆಯ ಸ್ವಕಲ್ಪಿತ ಆಶಯಗಳಿಂದಾಗಿಯೇ ಅವರು, ಆಳುವ ವರ್ಗಗಳು ಎಷ್ಟೆ ನಾಟಕವಾಡಿದರೂ ಒಂದು ಬಹು ಕೇಂದ್ರಗಳುಳ್ಳ, ಅಸಮಾನತೆಯುಳ್ಳ ಸಮಾಜದ ಮೇಲೆ ಉದಾರವಾದಿ ಪ್ರಭುತ್ವದ ಪ್ರಭಾವವು ಅಂತಹ ಬಹು ಕೇಂದ್ರಗಳನ್ನು ಹಾಗೂ ಅಸಮಾನತೆಯನ್ನು ಉಳಿಸಿಕೊಂಡು ಹೋಗಲೇ ಸಹಕರಿಸುತ್ತದೆಂಬುದನ್ನು ಕಡೆಗಣಿಸಿದರು. ಈ ಬಗೆಯ ಉದಾರವಾದವು ಹೆಚ್ಚೆಂದರೆ ಜಾತಿವಾದದ ಕೋಮುವಾದದ ರಾಜಕಾರಣವನ್ನೂ, ದಲಿತರ ನಡುವೆ ಒಡಕುಗಳನ್ನೂ, ರಾಜಕೀಯ ಚದುರಂಗದಾಟದಲ್ಲಿ ಅವರ ಬಳಕೆಯನ್ನೂ, ಅವರ ನಿಜವಾದ ಸಮಸ್ಯೆಗಳ ಬದಿಗೊತ್ತುವಿಕೆಯನ್ನೂ, ಹೆಚ್ಚೆಸಿ ಕೆಲವೇ ಶ್ರೀಮಂತರ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಪರ್ಯಾವಸನಗೊಳ್ಳುತ್ತದೆ. ಬೂರ್ಜ್ವಾಗಳ ರಾಜಕೀಯ ಅಧಿಕಾರದ ಅಭಿವ್ಯಕ್ತಿಯಾಗಿರುವ ಉದಾರವಾದಿ ಪ್ರಜಾತಂತ್ರವು ಬಡಬಗ್ಗರ ಹಿತಕಾಯುತ್ತದೆಂದು ನಿರೀಕ್ಷಿಸುವುದೇ ಒಂದು ವೈರುಧ್ಯಾತ್ಮಕ ಸಮಸ್ಯೆ. ಅದು ಒಂದಷ್ಟು ರಿಯಾಯತಿಗಳನ್ನು ದುರ್ಬಲವರ್ಗಗಳಿಗೆ ಕೊಡುತ್ತಿರುವಂತೆ ಕಂಡರೂ ಅದರ ನಿಜವಾದ ಉದ್ದೇಶ ಅಸ್ತಿತ್ವದಲ್ಲಿರುವ ಆಳುವ ವರ್ಗಗಳ ಆಳ್ವಿಕೆಯನ್ನು ಉಳಿಸಿಕೊಂಡು ಬರುವುದೇ ಅಗಿರುತ್ತದೆ. ಕೊಳೆತ ಹಿಂದೂ ಜಾತಿ ಪದ್ಧತಿಗಿಂತ ಉದಾರವಾದಿ ಪ್ರಜಾತಂತ್ರವು ಉತ್ತಮವೆಂದು ಅನಿಸಿದರೂ ಅದು ದಲಿತರ ಪರವಾಗಿ ಯಾವುದೇ ನೈಜ ಬದಲಾವಣೆಯನ್ನು ತರುವಲ್ಲಿ ಅಸಮರ್ಥವಾಗಿರುತ್ತದೆ. ಅದು ಶೋಷಕ ವ್ಯವಸ್ಥೆಯಲ್ಲಿರುವ ಬಿಕ್ಕಟ್ಟನ್ನು ಮೃದುಗೊಳಿಸುತ್ತದಲ್ಲದೆ ಅದಕ್ಕೆ ಬಲಿಯಾಗಿರುವವರಲ್ಲಿ ಕ್ರಾಂತಿಕಾರಿ ಜಾಗೃತಿಯನ್ನು ಕೊಂದುಹಾಕುತ್ತದೆ.

ಪುನರ್‌ನಿರ್ವಚನದ ಯೋಜನೆ:

ಬಾಬಾಸಾಹೆಬ್ ಅಂಬೇಡ್ಕರ್‌ರವರು ತಮ್ಮ ಕೃತಿಯಲ್ಲಿ ಬಳಸಿಧ ಹಲವಾರು ನಿರ್ಮಿತಿಗಳಿಗೆ ತನ್ನದೇ ಆದ ನಿರ್ದಿಷ್ಟ ಅರ್ಥಗಳಿವೆ. ಮೊದಲನೆಯದಾಗಿ ಅವು ತೋರಿಕೆಗೆ ಕಾಣುವರೀತಿಯಲ್ಲಿ ಸ್ವಸಂಪೂರ್ಣವಾದ ವ್ಯಾಖ್ಯೆಗಳಲ್ಲ. ಅವು ಅವರ ಆಲೋಚನಾ ಕ್ರಮದ ಉಪ ಉತ್ಪನ್ನಗಳಾಗಿದ್ದು ಅದರ ಮೂಲಸೆಲೆಯನ್ನು ಅವರ ಮೂಲಭೂತ ಲಕ್ಷ್ಯವಾಗಿದ್ದ ಜಾತಿ ನಿರ್ಮೂಲನೆ ಮತ್ತು ಸಮಾನತೆ, ಸ್ವಾತಂತ್ರ್ಯ ಮತ್ತು ಸಹೋದರತೆಯನ್ನು ಆಧರಿಸಿದ ಸಮಾಜ ನಿರ್ಮಾಣದಲ್ಲಿ ಹುಡುಕಬಹುದು. ಅವರ ಹೃದಯಕ್ಕೆ ಅತಿ ಸಮೀಪವಾಗಿದ್ದ ಈ ಮೂರು ತತ್ವಗಳೂ ಸಹಾ ಫ್ರೆಂಚ್ ಕ್ರಾಂತಿಯಲ್ಲಿ ಮೂಡಿಬಂದ ಅರ್ಥಗಳಿಗಿಂತ ಭಿನ್ನವಾದ ಅರ್ಥಗಳನ್ನೇ ಹೊರಡಿಸುತ್ತದೆ. ತಾವು ಇದನ್ನು ಬುದ್ಧನಿಂದ ಪಡೆದೆನೆಂದು ಅವರು ಹೇಳುತ್ತಾರೆ. ಬುದ್ಧ ಏನು ಹೇಳಿದ್ದರೆಂಬುದನ್ನೂ ಸಹಾ ಅಂಬೇಡ್ಕರ್‌ರ ವ್ಯಾಖ್ಯಾನದ ಮೂಲಕ ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ ಅದು ಈಗಾಗಲೇ ಭೌದ್ಧ ನಿಲಯಗಳು ಸುಪರಿಚಿತಗೊಳಿಸಿರುವ ವ್ಯಾಖ್ಯಾನಕ್ಕಿಂತ ಭಿನ್ನವೇ ಇರಬಹುದು. ಏಕೆಂದರೆ ಅವರ ಬುದ್ಧ ಮತ್ತು ಅವರ ಧಮ್ಮಗಳು ಪ್ರಾರಂಭದಲ್ಲಿ ಹಲವಾರು ಭೌದ್ಧರಿಂದ ಆ ಬಗೆಯ ನಿರಾಕರಣೆಗೆ ಗುರಿಯಾಗಿತ್ತು. ಆದ್ದರಿಂದ ಅಂಬೇಡ್ಕರ್‌ರನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಅವರು ಬಳಸುವ ಪರಿಕಲ್ಪನೆಗಳ ಮತ್ತು



ನಿರ್ಮಿತಿಗಳ ನಿರ್ಧಿಷ್ಟ ಅರ್ಥವೇನೆಂದು ಗ್ರಹಿಸಲು ವಿಶೇಷ ಪರಿಶೀಲನೆ ಮಾಡಬೇಕಾಗುತ್ತದೆ. ಅದರ ಕೊರತೆಯೇ ಈಗಾಗಲೇ ಹಲವು ಜನರಲ್ಲಿ ಸಾಕಷ್ಟು ತಪ್ಪುಗ್ರಹಿಕೆಗಳನ್ನು ಹುಟ್ಟುಹಾಕಿದೆ. ಅವರು ನಿಜವಾಗಿ ಹೇಳಿದ್ದೇನು ಅಥವಾ ಉದ್ದೇಶಿಸಿದ್ದೇನು ಎಂದು ಅರ್ಥ ಮಾಡಿಕೊಳ್ಳುವುದು ಒಂದು ವಿಷಯವಾದರೆ ಅದನ್ನೇ ಅವರ ಮೂಲಭೂತ ಲಕ್ಷ್ಯ ಹಾಗೂ ದರ್ಶನಗಳಿಗೆ ಸಂವಾದಿಯಾಗುವಂತೆ ವಿಸ್ತರಿಸಿ ಭವಿಷ್ಯದ ಚಳವಳಿಗೂ ಅನುಕೂಲವಾಗುವಂತೆ ವ್ಯಾಖ್ಯಾನಿಸುವುದು ಬೇರೆಯದೇ ಆದ ವಿಷಯ. ಮಾರ್ಕ್ಸ್ ತತ್ವಶಾಸ್ತ್ರದ ಬಗ್ಗೆ ಹೇಳಿದಂತೆ ಅಂಬೇಡ್ಕರ್‌ರನ್ನು ಹೇಗಿದ್ದರೋ ಹಾಗೆ ಅರ್ಥ ಮಾಡಿಕೊಳ್ಳುವ ಸಮಸ್ಯೆಯಲ್ಲ-ಬದಲಿಗೆ ಅವರು ತಮ್ಮ ಜೀವಮಾನವಿಡಿ ತಮ್ಮನ್ನು ಮುಡುಪಾಗಿಟ್ಟ ಹೋರಾಟಗಳಲ್ಲಿ ಒಂದು ಅಸ್ತ್ರವಾಗಿ ಹೇಗೆ ಬಳಸಿಕೊಳ್ಳಬಹುದೆಂದು ಚಿಂತಿಸುವುದೇ ಪ್ರಧಾನವಾದ ವಿಷಯ. ಇಲ್ಲಿ ಪ್ರಸ್ತಾಪಿತವಾದ ಪುನರ್ನಿರ್ವಚನದ ವಿಷಯವೂ ಪ್ರಯಶಃ ಸಾರಾಂಶದಲ್ಲಿ ಇವೆರಡನ್ನೂ ಉದ್ದೇಶಿಸಿರಬೇಕಾಗುತ್ತದೆ.

ಅಂಬೇಡ್ಕರ್ ಬಳಸಿದ ಸಂಶೋಧನಾ ವಿಧಾನವು ಮೂಲಭೂತವಾಗಿ ವೈಚಾರಿಕವಾಗಿದ್ದು ಅದರ ಹಿಂದಿನ ಉದ್ದೇಶವೂ ನಿಸ್ಸಂದೇಹವಾಗಿ ಕ್ರಾಂತಿಕಾರಿಯಾದದ್ದೇ ಆಗಿದೆ. ಒಂದು ನಿರ್ಧಿಷ್ಟ ಯೋಜನೆಯಲ್ಲಿ ಅಥವಾ ಒಂದು ನಿರ್ಧಿಷ್ಟ ಸಂಶೊಧನಾ ಪ್ರಕ್ರಿಯೆಯನ್ನು ಅಳವಡಿಸುವಲ್ಲಿ ಲೋಪಗಳಿರಬಹುದು. ಅದಕ್ಕೆ ಸಂದರ್ಭದ ಸಂಕೀರ್ಣತೆ ಮತ್ತು ಅಂಬೇಡ್ಕರ್‌ರ ಪರಿಸ್ಥಿತಿ ಕಾರಣವಾಗಿರಬಹುದು. ಅದೇನೇ ಇದ್ದರೂ ಅಂತಿಮ ಪರಿಣಾಮವು ಸಂಶೋಧನೆಗೆ ಬಳಸಿದ ಪರ್ಯಾಯಗಳನ್ನೇ ಆಧರಿಸಿರುತ್ತದೆ. ಇದರ್ಥವೇನೆಂದರೇ ನಿರ್ಧಿಷ್ಟವಾದ ಯಾವುದೇ ವಿಧಾನ, ಚಿಂತನೆ ಅಥವಾ ಆಚರಣೆಗಳು ಐತಿಹಾಸಿಕವಾಗಿ ವಾಸ್ತವ ಸಂಗತಿಗಳೆ ಆಗಿದ್ದರೂ ಅಂಬೇಡ್ಕರರ ಸೈದ್ಧಾಂತಿಕ ಅಂಶಗಳನ್ನು ಗ್ರಹಿಸಿಕೊಳ್ಳಬೇಕೆಂದರೆ ಅವುಗಳನ್ನು ತೋರಿಕೆಗೆ ಕಾಣುವಷ್ಟು ರೀತಿಯಲ್ಲೆ ಪರಿಗಣಿಸಲು ಬರುವುದಿಲ್ಲ. ಉದಾಹರಣೆಗೆ ಮೇಲೆ ಹೇಳಲ್ಪಟ್ಟ ಯಾವುದೇ ಅಂಶಗಳನ್ನು ಅದರ ಅಕೆಡೆಮಿಕ್ ತೀವ್ರತೆಯೊಂದಿಗೆ ಅವರು ಅದನ್ನು ಬಳಸುವುದಿಲ್ಲ. ಅದಕ್ಕೆ ಬಹಳಷ್ಟು ಬಾರಿ ಉದ್ದೇಶಿಸಿ ಮಾತಾಡುತ್ತಿದ್ದುದು ಅಕೆಡೆಮಿಕ್ ಅಲ್ಲದ ಜನಗಳನ್ನು ಎಂಬುದು ಒಂದು ಕಾರಣವಾದರೆ ಬಹಳಷ್ಟು ಬಾರಿ ಅವರು ತಾವು ಬಳಸುತ್ತಿದ ಪದಗಳಿಗೆ ತಮ್ಮದೇ ಆದ ಅರ್ಥಗಳನ್ನು ಕೊಡುತ್ತಿದ್ದರು. ಬದಲಾದ ಸಂದರ್ಭಗಳಲ್ಲಿ ಮತ್ತು ಬದಲಾದ ಮಾಹಿತಿಗಳ ಸಂದರ್ಭಗಳಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಹಿಂಜರಿಕೆಯಿಲ್ಲದೇ ಬದಲಾಯಿಸಿಕೊಳ್ಳುತ್ತಿದ್ದರು. ಒಂದು ಊಹಾತ್ಮಕ ಉದಾಹರಣೆ ಕೊಡುವುದಾದರೆ ಅಂಬೇಡ್ಕರ್‌ರವರು ಈಗ ಇದ್ದಿದ್ದರೆ ತಮ್ಮ ಕೆಲವು ನಂಬಿಕೆಗಳ ಹಾಗೂ ಅಭಿಪ್ರಾಯಗಳ ಅನಪೇಕ್ಷಿತ ಪರಿಣಾಮಗಳ ಬಗ್ಗೆ ಮಾಹಿತಿ ಪಡೆದು ಅಥವಾ ಅನುಭವಿಸಿ ಅವುಗಳನ್ನು ಖಂಡಿತಾ ಬದಲಿಸಿಕೊಳ್ಳುತ್ತಿದ್ದರು. ಇಲ್ಲದಿದರೆ ತಾವೇ ಕಷ್ಟಪಟ್ಟು ಬರೆದು ಸಮರ್ಥಿಸಿಕೊಳ್ಳುತ್ತಿದ್ದ ಸಂವಿಧಾನವನ್ನು ತನ್ನನ್ನು ಕೇವಲ ಉಪಕರಣವಾಗಿ ಮಾತ್ರ ಬಳಸಿಕೊಳ್ಳಲಾಗಿದೆ ಎಂದು ಧಿಕ್ಕರಿಸಿ ಹೊರನಡೆಯುತ್ತಿದ್ದರೆ? ಅವರು ಮಾಡಿದ ಹಲವು ವಿಷಯಗಳಲ್ಲಿ ಹಲವು ಮಿತಿಗಳಿದ್ದವು. ಆದರೆ ಅವು ತಪ್ಪೆಂದು ಮನವರಿಕೆಯಾದಾಗ ಅದನ್ನು ಬದಲಾಯಿಸಿಕೊಳ್ಳಲು ಅವರೆಂದು ಹಿಂಜರಿದಿರಲಿಲ್ಲ. ಇಲ್ಲಿ ಪ್ರಸ್ತಾಪಿಸಲಾಗುತ್ತಿರುವ ಪುನರ್ ನಿರ್‌ವಚನವನ್ನು ಅವರೇ ತಮ್ಮ ಬಗ್ಗೆ ಹಲವು ಬಾರಿ ಮಾಡಿಕೊಂಡಿದ್ದರು. ಮತ್ತು ಅವರು ಜೀವಂತವಾಗಿದ್ದರೆ ಅದನ್ನೇ ಮುಂದುವರೆಸುತ್ತಿದ್ದರು. ಅವರ ಅಸಂಪೂರ್ಣವಾದ ವಿಮೋಚನಾ ಯೋಜನೆಯನ್ನು ಪೂರೈಸಲು ಇದು ಅವಿಭಾಜ್ಯ ಅಂಗ.

ಇದನ್ನು ಪೂರೈಸಲು ಅನುಸರಿಸಬೇಕದ ವೈಧಾನಿಕ ಮಾರ್ಗವು ಅಂಬೆಡ್ಕರ್‌ರ ಜೀವನವನ್ನು ಅದರ ಸಾಂದರ್ಭಿಕ ಚೌಕಟ್ಟಿನಲ್ಲಿಟ್ಟು ವಿಶ್ಲೇಶಣಾತ್ಮಕ ಅಧ್ಯಯನ ಕೈಗೊಳ್ಳುತ್ತಲೆ ಅವರ ಅಂತರ್ಗತ ಸಾರಾಂಶವನ್ನು ಹಿಡಿದಿಡುವ ಕಡೆ ಕೇಂದ್ರೀಕರಿಸುತ್ತಾ ಅವರ ಜೀವನ ದರ್ಶನದ ಮತ್ತು ಸೈದ್ಧಾಂತಿಕ ಮೂಸೆಯನ್ನು ಪರಿಕಲ್ಪಿಸಿಕೊಳ್ಳುವುದನ್ನು ಒಳಗೊಂಡಿರುತ್ತದೆ. ಅದು ಅದರ ಮೂಲಭೂತ ಉದ್ದೇಶವಾದ ದಲಿತರ ವಿಮೋಚನಾ ಚಳವಳಯನ್ನು ತೇಜಿಗೊಳಿಸುವ ಮತ್ತು ಅ ಮೂಲಕ ಇಡಿ ಭಾರತ ಸಮಾಜವನ್ನು ಪ್ರಜಾತಾಂತ್ರೀಕರಿಸುವ ಆಶಯವನ್ನು ಪ್ರತಿಫಲಿಸುವಂತಿರಬೇಕು. ಈ ಪ್ರಕ್ರಿಯೆಯು ಪೂರ್ವಾಗ್ರಹಗಳಿಂದ ಮುಕ್ತವಿಲ್ಲದೇ ಇರಬಹುದು. ಆದರೆ ಆ ಪೂರ್ವಾಗ್ರಹಗಳು ಈವರೆಗೆ ಇತಿಹಾಸದ ದುರ್ಬಳಕೆ ಮಾಡಿಕೊಳ್ಳುತ್ತಲೇ ಬಂದ ಶೋಷಕ ವರ್ಗಗಳಿಗಾಗಿಯಲ್ಲದೇ ಬದಲ[illegible]ಯನ್ನು ಹಂಬಲಿಸು[illegible]ರ್ಗತಿಕರ ಪರವಾಗಿದ್ದರೆ ತೊಂದರೆ[illegible]ಲ್ಲ. ಅದು ಅವರ ದೃ[illegible] ಮುಕ್ತವಾಗಿಲ್ಲದೇ ಇರಬಹುದು. [illegible]ತರ ಮುಂದಿನ ವಿಮೋ[illegible]ಗಳಿಗೆ ಅ[illegible]ವನ್ನಾಗಿ ಬಳಸಿಕೊಳ್ಳಬೇಕ[illegible] ಆಶಯದಲ್ಲೇ ಅದು ಅಡಕವಾಗಿದೆ.

ಧರ್ಮಗ ಧುರೀಣನಾದ ಅದ್ಭುತ!

ಅಂಬೇಡ್ಕರ್ ಅಸ್ಪೃಶ್ಯ ಕುಟುಂಬದಲ್ಲಿ 14ನೇ ಮಗುವಾಗಿ ಜನಿಸಿ ಸಾಧಿಸಿದ ಈ ಜ್ಞಾನಾರ್ಜನೆ ಒಂದು ಆಶ್ಚರ್ಯಕರ, ಅದ್ಭುತ ಪವಾಡವೆಂದೇ ಎಣಿಸಬಹುದು. ಇಂದು ನಮ್ಮ ಪರೀಕ್ಷೆಗಳಲ್ಲಿ ನಕಲು ಹೊಡೆಯುವ, ರ್‍ಯಾಗಿಂಗ್ ಮಾಡುವ, ಅಧಿಕಾರಕ್ಕಾಗಿ, ಹಣ ಮಾಡುವುದಕ್ಕಾಗಿ ಸುಖಲೋಲುಪತೆಗಾಗಿ ವಿದ್ಯಾರ್ಜನೆ ಮಾಡುತ್ತಿರುವ ವಿದ್ಯಾರ್ಥಿಗಳು ಅಂಬೇಡ್ಕರ್ ಅವರು ತಮ್ಮ ವಿದ್ಯಾರ್ಜನೆಗಾಗಿ ಪಟ್ಟ ಕಷ್ಟಗಳು, ಸಾಧಿಸಿದ ಪದವಿಗಳು, ಪಡೆದ ಅನುಭವಗಳನ್ನು ಅರಿಯಬೇಕು.

ಸಿ. ಎಚ್ ಜಾಕೋಬ್ ಲೋಬೊ



ಕೊಳಲ ದನಿಗೆ
ಸೋತಲೆದೂಗಿದಡೇನು?
ಒಳಗಣ ವಿಷದ ಬಯಕೆ
ಬಿಡದನ್ನಕ್ಕ
ಹಾಡಿದಡೇನು, ಕೇಳಿದಡೇನು,
ತನ್ನಲುಳ್ಳ ಅವಗುಣ ಬಿಡದನ್ನಕ್ಕ?
ಒಳಗನರಿದು ಹೊರಗೆ ಮರೆದವರ
ನೀ ಎನಗೆ ತೋರಯ್ಯ
ಚೆನ್ನಮಲ್ಲಿಕಾರ್ಜುನಾ (ಅಕ್ಕಮಹಾದೇವಿ)

ಒಳಗಣ ವಿಷ ಬಿಡದ ಪ್ರಸ್ತುತದ ಸಾಮಾಜಿಕ ಸಂಸ್ಕೃತಿಯ ಒಂದು ಉದಾಹರಣೆ ಎಂದರೆ ಉಡುಪಿಯ ಭಕ್ತ ಕನಕನ ಕಿಂಡಿಯ ಹೆಸರನ್ನು ಕನಕನ ನವಗ್ರಹ ಕಿಂಡಿ ಎಂದು ಪುನರ್‌ನಾಮಕರಣಗೊಳಿಸುವ ಪ್ರಯತ್ನ. ಇದರಲ್ಲಿ ಗೋಚರವಾಗುವುದು ಒಳಗಿನ ಕಣ್ಣಿಗೆ ವೈದಿಕ ಸಮೂಹ ಸನ್ನಿ. ನಮ್ಮ ಸಂಸ್ಕೃತಿಯ ಈ ಕರಾಳ ಮುಖವನ್ನು ನಾವು ನಾನಾ ಪರಿಧಿಗಳಲ್ಲಿ ಒಳಗಣ್ಣು ಬಿಟ್ಟು ನೋಡಿಕೊಳ್ಳಬಹುದು.

1990 ಆಸುಪಾಸಿನಲ್ಲಿ ನಾನು ಜೋದ್‌ಪುರದಲ್ಲಿ ಒಂದಾರು ತಿಂಗಳು ಇರಬೇಕಾಯಿತು. ಅದಕ್ಕೆ ಕಾರಣ ಕಾರ್ಗಿಲ್ ವಿಪತ್ತಿನ ನಿರ್ವಹಣೆಯ ಕಾರ್ಯಾಚರಣೆ. ಆಗ ನನ್ನ ಮನಸ್ಸಿಗೆ ಹೊಳೆದಿದ್ದು ಈ ನನ್ನ ಮಹಾನ್ ದೇಶ ಇಷ್ಟು ದೊಡ್ಡ ಭೂಭಾಗವನ್ನು ಸಂರಕ್ಷಿಸುವ ಜವಾಬ್ದಾರಿ ಹೊಂದಿರಲಿಲ್ಲವೇ ಎಂದು. ಈ ಅಕ್ಷಮ್ಯ ಅಪರಾಧಕ್ಕಾಗಿ ಯಾರ ತಲೆಯೂ ಉರುಳಲಿಲ್ಲವೇ ಎಂದು. ಆದರೀಗ ನಾನು ಹೇಳ ಹೊರಟಿರುವುದು. ಒಳಗಣ ವಿಷದ ಬಯಕೆ ಬಿಡದೆ ಇರುವ ವಿಷಯ. ಈ ಸಂದರ್ಭದಲ್ಲೇ ಜೈಪುರದ ರಾಜಸ್ಥಾನ ಉಚ್ಚನ್ಯಾಯಾಲಯದ ಮುಂದೆ ಒಂದು ಮನುವಿನ ವಿಗ್ರಹ ಸ್ಥಾಪಿತವಾಯಿತು. ಅದನ್ನು ನಾನು 'ರಾಜಸ್ಥಾನ್ ಪತ್ರಿಕಾ' ಎಂಬ ಹಿಂದಿ ದೈನಿಕದಲ್ಲಿ ಓದಿಕೊಳ್ಳಬೇಕಾಯಿತು. ಸ್ಥಳೀಯ ಎಂದೊಂದು ಇಂಗ್ಲಿಷ್ ದೈನಿಕ ಇಲ್ಲ. ರಾಜಸ್ಥಾನದಲ್ಲಿರುವ, ಇಲ್ಲಿಗೆ ಬರುವ ಹಿಂದಿಯೇತರರಿಗೆ ಇದೊಂದು ತೊಡಕು. ರಾಜಸ್ಥಾನದಲ್ಲಿ ನೂರಾರು ಸಂಸ್ಥಾನಾಧಿಪತಿಗಳ ಪಳೆಯುಳಿಕೆ ಇನ್ನೂ ಇದ್ದರೂ ಇವರೆಲ್ಲ 'ರಜಪೂತ್' ಬ್ರಾಹ್ಮಣೇತರ ಜಾತಿಯವರಾಗಿದ್ದಾರೆ. ನನಗೆ ನಲ್ವತ್ತರ ದಶಕದಲ್ಲಿ SSLC ಪರೀಕ್ಷೆಗೆ ಚ. ವಾಸುದೇವಯ್ಯ ವಿರಚಿತ "ಆರ್ಯಕೀರ್ತಿ" ಪ್ರಥಮ ಪಠ್ಯಪುಸ್ತಕವಾಗಿದ್ದು ರಜಪೂತ್‌ರ ದೇಶಾಭಿಮಾನದ ಬಗ್ಗೆ ವಿಪರೀತ ಒಲವು ಆ ವಯಸ್ಸಿನಲ್ಲೇ ಹುಟ್ಟಿತ್ತು. ಆದರೀಗ 1990ರಲ್ಲಿ ರಾಜಸ್ಥಾನದ ಒಂದು ಹಳ್ಳಿಯಲ್ಲಿ ಅಮಾನುಷವಾದ ಸತಿ ಸಹಗಮನ ಸಾವಿರಾರು ಜನರ ಮುಂದೆ ನಡೆದಿತ್ತು. ದೇಶಾದ್ಯಂತ ದೊಡ್ಡ ಸುದ್ದಿಯೂ ಆಗಿತ್ತು.

ನಾನಿದ್ದ ಮನೆಯ ಸನಿಹದಲ್ಲೇ ಏಷ್ಯನ್ ಓರಿಯಂಟಲ್ ಸ್ಟಡೀಸ್ ಕಚೇರಿ ಇತ್ತು. ಅಲ್ಲಿನ ಪರಿಚಯಸ್ಥ ವಿದ್ಯಾವಂತೆಯೊಬ್ಬರಲ್ಲಿ ಈ ವಿಷಯ ಪ್ರಸ್ತಾಪಿಸಿದಾಗ ಅವರು ಅತ್ಯಂತ ಅಲಕ್ಷಣದಿಂದ "ಅದು ಅವರ ಅವಲಕ್ಷಣ" ಎಂದು ಸಾರಿಸಿ ಬಿಟ್ಟಿದ್ದರು. ಈ ವಿದ್ಯಾವಂತೆ ಬ್ರಾಹ್ಮಣೆಯೂ ಆಗಿದ್ದರು. ಇವರ ಎಲ್ಲಾ ಮನೆಗಳೂ ಮೆಹೆರಾನ್ ಫರ್ ಎಂಬ 800 ವರ್ಷ ಹಿಂದಿನ ಗುಡ್ಡದ ಮೇಲಿನ ಅರಮನೆಯ ಸುತ್ತಲಿನ ಕಂದಕದ ಬಾಜುವಿನಲ್ಲಿ ಗುಂಪಾಗಿದ್ದವು. ಇವರು ಶ್ರೀಮಾಲಿ ಬ್ರಾಹ್ಮಣರು. ಅವರಲೊಬ್ಬ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದರು, ಅವರ ಹೆಸರು ಡಾ. ಶ್ರೀಮಾಲಿ. ಅದು ಅವರ ಜಾತಿಯ ದ್ಯೋತಕ ಎಂದು ತಿಳಿಯಲಾಯಿತು. ಶ್ರೀಮಾಲಿ ಜಾತಿಯ ದ್ಯೋತಕ ಪ್ರದರ್ಶನವೆಂದರೆ ಪ್ರಭಾವಶಾಲಿ ಜಾತಿ ಎಂದೇ ಅರ್ಥ. ಅದೂ ಬ್ರಾಹ್ಮಣರ ಒಳಪಂಗಡಗಳಲ್ಲಿ ರಾಜಾಶ್ರಯದಿಂದಲೂ ಅವರು ಪ್ರಭಾವಶಾಲಿಗಳಾಗಿರಬಹುದು. ಒಳಗಣ ವಿಷದ ಬಗ್ಗೆ ಇದನ್ನು ಹೇಳಬೇಕಾಯಿತು. ಶಾಂತಿಕಾಲದ "ಸತಿ ಸಹಗಮನ" ಆಸ್ತಿಯ ಒಡೆತನದ ಸ್ವಾಮ್ಯವನ್ನು ಕಾಪಾಡುವುದಕ್ಕಾಗಿಯಾದರೂ, ಯುದ್ಧಕಾಲದ ಭೀತಿಯಿಂದಾಗಿ ಸೋತ ಮನೆತನದ ಸ್ತ್ರೀಯರು ಸತಿ ಸಹಗಮನ ಪಾಲಿಸುತ್ತಿದ್ದದ್ದು ಅರಣ್ಯ ಕಾನೂನಿನ ಯುದ್ಧ ಗೆದ್ದವರ ಕ್ರೂರ ಮನಸ್ಥಿತಿಯ ಗಾಬರಿಯಿಂದಾಗಿ. ಶಾರೀರಕ ಹಿಂಸೆಯ ಭಯದಿಂದಲೇ ಆದರೂ ಮಾನ ಕಾಪಾಡುವ ಕಾರಣವಿಟ್ಟು ಅಥವಾ ಹಾಗೆಂದು ಬರಹಗಾರರು ಬರೆದು ಪ್ರತೀತಿಗೊಳಿಸಿದ್ದರಿಂದ ಶಾಂತಿಕಾಲದ ಸತಿ ಸಹಗಮನವನ್ನು ಬಲವಂತವಾಗಿ ಮಾಡಿಸಿದರು. ಅದೇ ಶೀರ್ಷಿಕೆಯಡಿಯಲ್ಲಿಟ್ಟರು. ಮೇಲೆ ಹೇಳಿದ ಸತಿ ಸಹಗಮನವು ಬಲವಂತವಾಗಿ ಸಾವಿರಾರು ಜನರ ಎದುರು ನಡೆದಿದ್ದರೂ, ದೇಶದ ಅತ್ಯುಚ್ಚ ನ್ಯಾಯಾಲಯದ ಮೆಟ್ಟಲೇರಿದ್ದರೂ, ಸಾಕ್ಷಿಗಳು ಸಿಗದೆ ಸರಕಾರಿ ವ್ಯಾಜ್ಯ ಬಿದ್ದುಹೋಯಿತು.

ನಮ್ಮ ಸಮಾಜದ ಸಂಸ್ಕೃತಿಯ ಒಳಗಣ ವಿಷದ ಬಯಕೆಗೆ ಏನನ್ನೋಣ? ಈ

ಉದಾಹರಣೆ ಏಕೆಂದರೆ ಸತಿಸಹಗಮನ ನಿಷೇಧ ಕಾನೂನಾಗಿ ಶತಕ ಸಂದಿದೆ. ಅದೇ ರೀತಿ ಅಸ್ಪೃಶ್ಯತೆ ನಿಷೇಧ ಕಾನೂನು ಆಗಿ ದಶಕಗಳೇ ಸಂದಿವೆ. ರಾಷ್ಟ್ರದ ಅಧ್ಯಕ್ಷರೇ ಆಗಲಿ, ದೇಶದ ಉಪ ಪ್ರಧಾನಿಗಳೇ ಆಗಲಿ, ರಾಜ್ಯಪಾಲರುಗಳೇ ಆಗಲಿ, ಇಲ್ಲಿ ಅಸ್ಪೃಶ್ಯನು ಅಸ್ಪೃಶ್ಯನೇ! ಒಳಗಣ ವಿಷದ ಪ್ರಭಾವ ಪ್ರತಿಯೊಂದು ಜಾತಿಯವರೂ ಒಂದಿಲ್ಲೊಮ್ಮೆ ಮಾಂಸಾಹಾರ ಮಾಡಿದರೂ. ಹಲವು ಶಾಖಾಹಾರಿಗಳು ಮಾಂಸಾಹಾರದ ಸತ್ವ ಮತ್ತು ರುಚಿಯನ್ನು ಮೆಚ್ಚಿದ್ದರೂ ಈ ದೇಶದ ಸಂಸ್ಕೃತಿಯ ಶಾಖಾಹಾರ–ವೈದಿಕತ್ವ ಎಂಬ ಹಾಡನ್ನೇ ಕೇಳಿಸಿಕೊಳ್ಳುವ ಪರಿಸರಕ್ಕೆ ಏನಂತೀರಿ? ಒಳಗೊಂದು ಹೊರಗೊಂದು ಇರುವ ಅವಗುಣ.

ನಾನೊಮ್ಮೆ ಹಿಮಾಚಲದ ರಾಜ್ಯಪಾಲ ಮನನೀಯ ಬಿ. ರಾಚಯ್ಯನವರನ್ನು ಅವರ ಶಿಮ್ಲಾದ ರಾಜಭವನದಲ್ಲಿ ಸೌಹಾರ್ಧ ಭೇಟಿ ಮಾಡಿದ್ದೆ. ಅವರ ರಾಜಭವನದಲ್ಲಿ ನಾನು ಕಂಡಿದ್ದು ಇಡೀ ಭವನವನ್ನು ನೆಲ ಸಮೇತ ಮರದಿಂದಲೇ ಕಟ್ಟಲ್ಪಟ್ಟಿದ್ದು. ಏಕೆಂದರೆ ಶಿಮ್ಲಾ ಅತ್ಯಂತ ಶೀತ ಪ್ರದೇಶ. ಹಿಮಾಲಯದಲ್ಲಿದೆ. ಆದರೆ ಅಲ್ಲಿ ನಾನು ಕಂಡುಕೊಂಡಿದ್ದು ಅಲ್ಲಿಂದ 40 ಕಿ.ಮಿ ದೂರದಲ್ಲಿರುವ ಮನಾಲಿಯಲ್ಲಿ ಮನುವಿನ ದೇವಸ್ಥಾನವಿದೆ. ಅಷ್ಟೇ ಅಲ್ಲ ಅಲ್ಲಿ ವಾರ್ಷಿಕ ಮನುವಿನ ಜಾತ್ರೆಯೂ ನಡೆಯುತ್ತದೆ. ನನ್ನಂಥವರು ಅಲ್ಲಿಗೆ ಹೋಗಿ ಅದನ್ನು ನೋಡಬೇಕೆಂದು ರಾಜ್ಯಪಾಲರು ಹೇಳಿದಾಗ ಅವರ ಜಾತಿಯ ಅಧಿಕಾರ ಸ್ಥಾನ ಇರುವುದು ಸಾಮಾಜಿಕ ಶಾಂತಿ ಕಾಪಾಡುವುದಕ್ಕೇ ಹೊರತು ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕಲ್ಲ ಎಂದೆಣಿಸಿದೆ.

ಆ ಮೇಲಿನ ನನ್ನ ಅನುಭವ ಕೇರಳದ ಮನನೀಯ ಕೆ. ಆರ್ ನಾರಾಯಣ ಅವರು 2002ರ ಗುಜರಾತ್ ರಾಜ್ಯ ಕೋಮುವಾದಿ ಪ್ರೇರಿತ ಹತ್ಯಾಕಾಂಡವನ್ನು ನಿಲ್ಲಿಸಲು ರಾಷ್ಟ್ರದ ಅಧ್ಯಕ್ಷರಾಗಿ ಸೈನ್ಯವನ್ನು ಬಳಸಲು ಸರಕಾರಕ್ಕೆ ಬರೆದ ಎರಡು ಪತ್ರಗಳನ್ನು ಸರಕಾರ ನಿರ್ಲಕ್ಷಿಸಿದ್ದರಲ್ಲಿ ನಾನು ಕಂಡಿದ್ದ ಕೆಳಜಾತಿಯ ಪ್ರಭಾವ ಎಷ್ಟೆತ್ತರಕ್ಕೇರಿದರೂ ಅಷ್ಟೇಯ ಎಂದು. ಅಂದಿನ ಪ್ರಧಾನಿ ಬ್ರಾಹ್ಮಣರಾಗಿದ್ದರು. ಒಳಗಣ ಕೋಮುವಾದಿ ವಿಷದ ಬಯಕೆ ಬಿಡಲಾರದ ಶಕ್ತಿಹೀನರಾಗಿದ್ದರು. ಹಾಡಿದಡೇನು, ಕೇಳಿದಡೇನು ತನ್ನಲುಳ್ಳ ಅವಗುಣ ಬಿಡಲು ಸಾಧ್ಯವೇ ಇಲ್ಲ ಎಂಬುದು ಸಾಬೀತಾಯಿತಲ್ಲವೇ?

ಅಸ್ಪೃಶ್ಯತೆ ತೊಲಗಲು ಬೇಕಾಗಿರುವುದು ಸಂವಿಧಾನ ವಿಧಿಸಿರುವ ಸ್ವಾತಂತ್ರ್ಯ ಸಮಾನತೆ ಹಾಗೂ ಭ್ರಾತೃ ಭಾವಗಳ ಮನೋಭೂಮಿಕೆ. ಎಲ್ಲಿಯ ಒಳಗಣ ವಿಷದ ಅವಗುಣ ಎಲ್ಲಿಯ ಭ್ರಾತೃತ್ವ ಭಾವದ ಮಾನವೀಯ ಸಲ್ಲಕ್ಷಣ? ಸಧ್ಯ ಡಾ॥ ಅಂಬೇಡ್ಕರ್ ಅವರು ಎಷ್ಟೇ ಕಹಿಯನ್ನು ಪ್ರತ್ಯಕ್ಷವಾಗಿ ಉಂಡಿದ್ದರೂ ಅವರಲ್ಲಿ ನಾನು ಕಂಡ ಕೆಲವೇ ಕೆಲವು ಆದರೆ ವಜ್ರಕಠಿಣವಾದ ಮಾನವೀಯ ಗುಣಗಳಿವೆ. ಮೊದಲನೆಯದಾಗಿ ಎಷ್ಟೇ ಕಠಿಣ ಅಮಾನವೀಯ ಅನುಭವಗಳಾಗಿದ್ದರೂ ಅವರು ಮನುಷ್ಯನು ಗಣ್ಯನಾಗಲು ಆದಷ್ಟು ವಿದ್ಯೆ ಸಂಪಾದಿಸಬೇಕು ಎಂದು ತಿಳಿದು ಈ ಜಗತ್ತಿನಲ್ಲಿ ಯಾರೂ ಪಡದ ಕಷ್ಟಗಳನ್ನು ಅನುಭವಿಸಿ ದೇಶ–ವಿದೇಶಗಳಲ್ಲಿ ಜ್ಞಾನ ಸಂಪಾದಿಸಿದ್ದು.

1908: ಮೆಟ್ರಿಕ್ ಪರೀಕ್ಷೆ ಮುಗಿಸಿದರು.

1912: ಮುಂಬಯಿ ಎಲ್ಫಿನ್ ಸ್ಟೋನ್ ಕಾಲೇಜಿನಿಂದ ಪದವೀಧರರಾದರು.

1916: ಕೊಲಂಬಿಯಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರದಲ್ಲಿ ಎಂ.ಎ ಪದವಿ ಪಡೆದರು.

1917: ಅವರು ಬರೆದ 'ಬ್ರಿಟಿಷ್ ಭಾರತದ ಪ್ರಾಂತ್ಯಗಳ ಆರ್ಥಿಕ ವಿಕಸನ' ವಿಷಯದ ಪ್ರೌಢ ಪ್ರಬಂಧಕ್ಕೆ ಕೊಲಂಬಿಯಾ ವಿಶ್ವವಿದ್ಯಾಲಯದ 'ಡಾಕ್ಟರ್ ಆಫ್ ಫಿಲಾಸಫಿ' ಪದವಿ ಪಡೆದರು.

1921: 'ಬ್ರಿಟಿಷ್ ಇಂಡಿಯಾದಲ್ಲಿ ಬ್ರಿಟನ್ನಿನ ಆರ್ಥಿಕತೆಯ ಪ್ರಾಂತೀಯ ವಿಕೇಂದ್ರೀಕರಣ' ಲೇಖನಕ್ಕೆ ಲಂಡನ್ ವಿಶ್ವವಿದ್ಯಾಲಯದ 'ಮಾಸ್ಟರ್ ಆಫ್ ಸೈನ್ಸ್' ಪದವಿ ಪಡೆದರು.

1922: "ರೂಪಾಯಿಯ ಸಮಸ್ಯೆ" ಕೃತಿಗೆ ಅದೇ ವಿಶ್ವವಿದ್ಯಾಲಯದ 'ಡಾಕ್ಟರ್ ಆಫ್ ಸೈನ್ಸ್' ಪದವಿ ಪುನಃ ಪಡೆದರು.

1922: ಲಂಡನ್ನಿನ ಬಾರ್–ಅಟ್–ಲಾ ಪದವಿ ಪಡೆದರು.

1922: ಜರ್ಮನಿಯ ಬಾನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದರು.

1918–20: ಮುಂಬಯಿಯ ಸಿಡನ್ ಹ್ಯಾಂ ಕಾಲೇಜಿನಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕರಾದರು.

1924: ಮುಂಬಯಿ ಉಚ್ಚನ್ಯಾಯಾಲಯದಲ್ಲಿ ವಕೀಲಿಕೆ ಆರಂಭಿಸಿದರು. ಜೊತೆಗೆ ಕ್ರಿಯಾತ್ಮಕ ಸಾರ್ವಜನಿಕ ಸೇವಾಕಾರ್ಯ ಕೈಗೊಂಡರು.

1926–34: ಮುಂಬಯಿ ವಿಧಾನಸಭೆಯ ನಾಮಕರಣ ಸದಸ್ಯರಾದರು.

1930–33: ಬ್ರಿಟಿಷ್ ಸರ್ಕಾರ ನಡೆಸಿದ ಮೂರು ದುಂಡು ಮೇಜಿನ ಪರಿಷತ್ತುಗಳಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದರು.

1942: ಭಾರತ ಗೌರ್ನರ್ ಜನರಲ್ ಅವರ ಕಾರ್ಯನಿರ್ವಾಹಕ ಮಂಡಳಿಯ ಸಚಿವ ಸದಸ್ಯರಾದರು.

1946–47: ಕಾಂಗ್ರೆಸ್ ಸಂಸ್ಥೆಯಿಂದ ಭಾರತ ಸಂವಿಧಾನ ಸಭೆಗೆ ನಾಮಕರಣ ಸದಸ್ಯರಾದರು. ಭಾರತ ಸಂವಿಧಾನ ಕರಡುಪ್ರತಿ ನಿರ್ಮಾಣ ಸಮಿತಿಯ ಅಧ್ಯಕ್ಷರಾಗಿ ದೇಶದ ಪ್ರಗತಿಪರ ವೈಚಾರಿಕ ಮಾನವಿಕ ಸಂವಿಧಾನ ರಚಿಸಿದರು.

ಅವರು ಒಂದು ಅಸ್ಪೃಶ್ಯ ಕುಟುಂಬದಲ್ಲಿ 14ನೇ ಮಗುವಾಗಿ ಜನಿಸಿ ಸಾಧಿಸಿದ ಈ ಜ್ಞಾನಾರ್ಜನೆ ಒಂದು ಆಶ್ಚರ್ಯಕರ, ಅದ್ಭುತ ಪವಾಡವೆಂದೇ ಎಣಿಸಬಹುದು. ಇಂದು ನಮ್ಮ ಪರೀಕ್ಷೆಗಳಲ್ಲಿ ನಕಲು ಹೊಡೆಯುವ, ರ್‍ಯಾಗಿಂಗ್ ಮಾಡುವ, ಅಧಿಕಾರಕ್ಕಾಗಿ, ಹಣ ಮಾಡುವುದಕ್ಕಾಗಿ ಸುಖಲೋಲುಪತೆಗಾಗಿ ವಿದ್ಯಾರ್ಜನೆ ಮಾಡುತ್ತಿರುವ ವಿದ್ಯಾರ್ಥಿಗಳು ಅಂಬೇಡ್ಕರ್ ಅವರು ತಮ್ಮ ವಿದ್ಯಾರ್ಜನೆಗಾಗಿ ಪಟ್ಟ ಕಷ್ಟಗಳು, ಸಾಧಿಸಿದ ಪದವಿಗಳು, ಪಡೆದ ಅನುಭವಗಳನ್ನು ಅರಿಯಬೇಕು. ಅಷ್ಟಾಗಿಯೂ ಈ ಸಮಾಜಕ್ಕೆ ಒಳಿತನ್ನು ಉಂಟುಮಾಡುವ ಅವರ ಏಕಮೇವಾದ್ವಿತೀಯ ಗುರಿ ಕದಲಲೇ ಇಲ್ಲ. ಇದಕ್ಕೊಂದೇ ಒಂದು ಉದಾಹರಣೆ ಎಂದರೆ ಪಾಶ್ಚಾತ್ಯ ದೇಶಗಳಲ್ಲೇ ಅತ್ಯುತ್ತಮವಾದ ದೇಶ ಇಂಗ್ಲೆಂಡಿನಲ್ಲಿ ಅವರ ವಾಸಾನುಭವ, ಅತ್ಯಾಧುನಿಕ ಅಮೆರಿಕೆಯಲ್ಲಿ ಅವರು ಕಂಡುಕೊಂಡ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃಭಾವಗಳ ಜೊತೆಗೆ ಅನುಭವಿಸಿದ ಉಚ್ಚ ಮಾನವೀಕ ಸಾಂಸ್ಕೃತಿಕ–ಆರ್ಥಿಕ ಮಟ್ಟ ಅವರನ್ನು ಗುರಿಯಿಂದ ವಿಚಲಿತಗೊಳಿಸಲಿಲ್ಲ.

ಅವರು ಎಂದೂ ವಿದೇಶಗಳ ಅದ್ಭುತವಾದ ಅಲ್ಲಿನ ಸ್ವಚ್ಚತೆ–ಜೀವನ ಗಾಂಭೀರ್ಯ ಹಾಗೂ ಇಲ್ಲಿನ ಕೊಳಕು ಪರಿಸರ–ಶೋಷಣೆಯ ಬೇಗೆ ತಟ್ಟದೇ ನಿರ್ಲಿಪ್ತತೆಯಿಂದ ಅವರ ಬೌದ್ಧಿಕ–ಬೌತಿಕ ಮಟ್ಟಗಳಿಂದಾಗಿ ತಮ್ಮ ಗುರಿಯಿಂದ ವಿಚಲಿತರಾಗಲೇ ಇಲ್ಲ. ಅಲ್ಲೇ ಉಳಿದು ತಮ್ಮ ವಿದ್ವತ್ತಿನಿಂದ ಅಸಾಧಾರಣ ಸಾಧನೆಗಳನ್ನು ಮಾಡಿ ಚರಿತ್ರಾರ್ಹರಾಗುವ ಯೋಚನೆ ಅವರಲ್ಲಿ ಹುಟ್ಟಲೇ ಇಲ್ಲ. ಗಳಿಸಿಯೋ, ಶೋಷಿಸಿಯೋ ಚಿನ್ನದ ಪರಿಸರದಲ್ಲಿ ಬಾಳಬೇಕೆನಿಸಲೇ ಇಲ್ಲ. ಸ್ವಾರ್ಥದ ಅವಗುಣ ಅವರಲ್ಲಿ ಬರಲೇ ಇಲ್ಲ. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸೀ" ಅದೀಗ ರಾಷ್ಟ್ರೀಯತೆಯ ಉತ್ತುಂಗ ಶ್ರೇಯ. ತನ್ನ ಜನಗಳ ಅಧೋಗತಿ ಸ್ಥಿತಿಗಳನ್ನು ನಿವಾರಿಸಿ ದೇಶಕ್ಕಂಟ್ಟಿದ್ದ ಮಹಾ ಕಳಂಕವನ್ನು ತೊಡೆದು ಹಾಕುವ ಕೆಲಸದಲ್ಲಿ ಅವರು ಹಿಂದೆ ಸರಿದದ್ದೇ ಇಲ್ಲ. ಮಹಾನ್ ನಿಸ್ವಾರ್ಥಿ ಮಾನವೀಯತೆಯ ಗುಣ ಮೌಲ್ಯಗಳ ಒರತೆಯ ಚಿಲುಮೆ. ಹೃತ್ಪೂರ್ವಕ ನಿಷ್ಟ ದೇಶಪ್ರೇಮಿ.

ಬರೀ ಉಚ್ಚ ವಿದ್ಯಾರ್ಜನಿಯ ಸಾಧನೆ ಮಾತ್ರವಲ್ಲ. ಅವರಂದುಕೊಡಂತೆ ವಿದ್ಯೆಯ ಅತ್ಯುಚ್ಚ ಶ್ರೇಣಿ ಹೊರತಾಗಿಯೂ ಅಸ್ಪಶ್ಯತೆ ತಮ್ಮ ದೇಶದಲ್ಲಿ ಅನವರತವೂ ಅವರನ್ನು ಬೆಂಬಿಡದೆ ಹಿಂಬಾಲಿಸಿತು. 1956ರಲ್ಲಿ ಅವರು ಬೌದ್ಧರಾಗಿ ಮರಣ ಹೊಂದಿದರೂ ಇಂದಿಗೂ ಅಸ್ಪೃಶ್ಯರಾಗಿಯೇ ಪರಿಗಣಿಸಲ್ಪಡುತ್ತಿದ್ದಾರೆ. ಅಸ್ಪೃಶ್ಯ ಜನಾಂಗದವರ ಪರಿಸ್ಥಿತಿಯೂ, ಏನೇ ಅದ್ಭುತ ಕಾನೂನುಗಳಿದ್ದರೂ ಯಥಾಸ್ಥಿತಿ ವ್ಯವಸ್ಥೆ ಮುನ್ನಡೆಯುತ್ತಲೇ ಇದೆ. ಕೆಲ ವಿಚಾರವಾದಿ ಭಾರತೀಯರನ್ನು ಬಿಟ್ಟು ಉಳಿದ ಯಾರಿಗೂ ದೇಶದಲ್ಲಿ ಈ ಪರಿಸ್ಥಿತಿಯ ಬಗೆಗೆ ನಾಚಿಕೆಯೇ ಇಲ್ಲ. ದೇಶದ ಬಗೆಗೆ ಇರುವ ಪ್ರೀತಿಗಿಂತಲೂ ಹೆಚ್ಚಾದ ಪ್ರೇಮ ಸಂಪ್ರದಾಯಗಳಿಗೆ ಸಲ್ಲುತ್ತಿದೆ.

ಸಂಸ್ಕೃತಿಯ ಹೆಸರಲ್ಲಿ ದೇಶದ ಸಮಸ್ತರೂ ಒಗ್ಗೂಡುವ ಬದಲಿಗೆ ವಿಭಾಗಿಸಿ ಭೇದಿಸಿಕೊಂಡು ವಿಂಗಡಿಸಿ ವರ್ಗೀಕರಣ ಮಾಡಿ ಜಾತಿ, ವಿಜಾತಿ, ಉಪಜಾತಿಗಳಾಗಿ ಮಹಾನ್ ಪಾಪ ಎಸಗುತ್ತಿದ್ದಾರೆ. ಇಂದು ಬಾವಿ ನೀರಿನ, ದೇವಳ ಪೂಜೆ ಪುನಸ್ಕಾರಗಳ, ಹೂಳುವ ಸ್ಮಶಾನಗಳ ಈ ಸಾಂಸ್ಕೃತಿಕ ವಿವಿಧತೆಗಳನ್ನು ಪ್ರತ್ಯಕ್ಷ ಕಾಣಬಹುದು. ನೆರೆಹೊರೆಯವರ ಪ್ರೀತಿ, ಕೊಡು–ಕೊಳ್ಳು ಭಾವ ಇಲ್ಲದೆ ಈ ದೇಶದಲ್ಲಿ ಸಿಡಬು ಮಲೇರಿಯಾ ಬರಲಿ, ಪ್ಲೇಗ್ ಬರಲಿ, ಕಾಲರಾ ಬರಲಿ, ಜಾತಿ ವಿಂಗಡನೆಯ ಮೆಲೆಯೇ ಬದುಕಲು ಪ್ರಯತ್ನಿಸುತ್ತಾರೆ. ಇಂದಿಗೂ ಕುಂಬಾರರ ಓಣಿ, ಕೊರಗರ ಕಾಲೋನಿ, ಮತಿ ಕುಡಿಯರ ಮತಿ, ಅನು ಸೂಚಿತ ಜಾತಿಯವರ ಹೊಲೆಯರ/ಮಾದಿಗರ ಕೇರಿ, ಬ್ರಾಹ್ಮಣರ ಅಗ್ರಹಾರ, ಗಿರಿಜನರ ಹಾಡಿ/ತಾಂಡ ಇತ್ಯಾದಿ 6000 ವಿವಿಧ ಜಾತಿಗಳವರೂ ತಮ್ಮ ಸ್ವರಕ್ಷಣೆಗಾಗಿ ಒಟ್ಟಾಗಿ ವಾಸಿಸುವ ಬದಲು ಪ್ರತ್ಯೇಕವಾಗಿ ಬದುಕುತ್ತಿದ್ದಾರೆ. ಇದನ್ನು ಮಾಡಿದ್ದು ರಾಜಕೀಯವಲ್ಲ, ಸಂಸ್ಕೃತಿ ಅಲ್ಲ, ಪರಂಪರೆಯೂ ಅಲ್ಲ, ಕೇವಲ ಸ್ವಾರ್ಥ, ಅಪ್ಪಟ ಸ್ವಾರ್ಥ, ಅಸೂಯೆ, ಈ ದೇಶದಲ್ಲಿದೆ. ಸ್ವಜನ ಪಕ್ಷಪಾತ ಇದರ ಫಲಿತಾಂಶ, ಜಾತಿಯತೆಯೇ ಈ ಪರಿಸ್ಥಿತಿಯ ಅಡಿಪಾಯ. ಈ ಅಡಿಪಾಯದ ಮೇಲಣ ಮೇಲು–ಕೀಳು ಭಾವದ ಕಟ್ಟಡವನ್ನು ಕೆಡವಲು, ವಿದ್ಯೆಯಿಂದ ಆಗದೆ ಹೋದರೆ, ಸಂವಿಧಾನಬದ್ಧ ಕಾನೂನಿಂದ ಆಗದೆ ಹೋದರೆ ವ್ಯಕ್ತಿಯ ಒಳಗೇ ಹೊಕ್ಕಿರುವ ಅವಗುಣಗಳ

ಮೂಲೋತ್ಪಾಟನೆ ಮಾಡಲು ಚೆನ್ನಮಲ್ಲಿಕಾರ್ಜುನ ದೇವರಿಗೇ, ಅವರ ಭಕ್ತರಿಗೇ, ಒಳಗನರಿದು ಅಲ್ಲಿರುವ ಅವಗುಣ ಬಿಡದನ್ನಕ್ಕ ಇರಬಹುದಾದ ಪರಿಹಾರ ಮಾರ್ಗ ತೋರುವ ದಾರಿ ಎಂದರೆ ಸುನಾಮಿ ಎಂದೇ ಅರ್ಥ. ಇಲ್ಲವೇ ಮನಃಪರಿವರ್ತನೆ, ಮನಸ್ಸಾಕ್ಷಿ ವರ್ಧನೆ, ಅಂತಃಸಾಕ್ಷಿ ಪ್ರಮಾಣಿತ ಜೀವನಕ್ರಮ ಮಾತೃ ಭೂಮಿಯ ಮಕ್ಕಳೆಲ್ಲ ಬಂಧು-ಬಳಗವೆಂಬ ಸತ್ಯಭಾವನೆ ಹೊಂದಿರಬೇಕು.

ತನ್ನ ಮಾತೃಭೂಮಿಯ ಭಾಗವಾದ ಒಂದು ಸಮಾಜ ವಿಭಾಗವೇ ಸಂಪೂರ್ಣ ಶೋಷಣೆಗೊಳಗಾಗಿ ಸಮಾಜದ ಮುಖ್ಯವಾಹಿನಿಯಿಂದ, ಊರಿನ ಹೊರಗೆ ಅನಾರೋಗ್ಯಕರ ಕೇರಿ, ಓಣಿಗಳಲ್ಲಿ ಬಾಳಬೇಕಾಗಿ ಬಂದಿರುವ ಗುಂಪಿನಿಂದ ಬಂದಿರುವ ಅಂಬೇಡ್ಕರ್ ಅವರ ಹೃದಯಸಾಕ್ಷಿಪೂರಕ ಭಾವನಾತ್ಮಕ ರಾಷ್ಟ್ರಪ್ರೇಮ ಅನನ್ಯವಾದುದು.

ಇದನ್ನರಿತವರು ರಾಷ್ಟ್ರಪಿತ ಗಾಂಧೀಜಿ. ದೇಶ ಸ್ವಾತಂತ್ರ್ಯಕ್ಕಿಂತ ತಮ್ಮ ದೇಶಬಾಂಧವರಿಂದಲೇ ಶೋಷಣೆಗೆ ಒಳಗಾಗಿ ಅಸಹಾಯಕ ಜೀವನ ನಿರ್ವಹಿಸುತ್ತಿರುವ ತಮ್ಮ ಜನಾಂಗದ ಜನರ ಕನಿಷ್ಠ ಮಾನವೀಯ ಜೀವನಕ್ಕೆ ಅಗತ್ಯವಾದ ಸ್ವತಂತ್ರ ವಾತಾವರಣ ದೇಶಸ್ವಾತಂತ್ರ್ಯಕ್ಕಿಂತ ಪ್ರಮುಖವಾದ್ದು ಮತ್ತು ಅಧಿಕ ಅಗತ್ಯ ಜರೂರಾಗಿದ್ದು ಮಿಕ್ಕೆಲ್ಲಕ್ಕಿಂತ ಮೊದಲು ಅದನ್ನು ಪರಿಶೀಲಿಸಬೇಕು ಎಂದು ಹೇಳಿದ್ದನ್ನೇ ಸ್ವಾತಂತ್ರ್ಯಕ್ಕಾಗಿ ಹಸಿದು ಹಂಬಲಿಸುತ್ತಿದ್ದ ಇಡೀ ದೇಶ ಅಂಬೇಡ್ಕರ್ ಅವರು ದೇಶದ್ರೋಹಿ-ದೇಶಸ್ವಾತಂತ್ರ್ಯ ವಿರೋಧಿ ಎಂದು ಹುಯಿಲೆಬ್ಬಿಸಿದ್ದರು. ಆದರೆ ಪಾದರಕ್ಷೆ ಧರಿಸಿದವನಿಗೆ ಅದೆಲ್ಲಿ ಚುಚ್ಚುತ್ತದೆ ಎಂದು ತಿಳಿದಿರುತ್ತದೆ. ಅದೇರೀತಿ ಅಸ್ಪೃಶ್ಯತೆ ಎಂಬುದು ಎಲ್ಲೆಲ್ಲಿಯೂ ಚುಚ್ಚಿ ಚುಚ್ಚಿ ಮನುಷ್ಯನನ್ನು ನಿರ್ವೀರ್ಯನನ್ನಾಗಿಸುತ್ತದೆ ಎಂಬುದು ಎಲ್ಲರಿಗೂ ತಿಳಿಯಲಾಗುವ ವಿಷಯವಲ್ಲ, ಯಾರೂ ತಿಳಿಯಲಾಸಿಸುವುದೂ ಇಲ್ಲ. ಅದೊಂದು ಅನುಭವಿಸಿಯೇ ಅರಿಯಬೇಕಾದ ಅಮಾನವೀಯ ಅವಿವಾದಂಶ.

ತನ್ನ ಮಾತೃಭೂಮಿಯ ಭಾಗವಾದ ಒಂದು ಸಮಾಜ ವಿಭಾಗವೇ ಸಂಪೂರ್ಣ ಶೋಷಣೆಗೊಳಗಾಗಿ ಸಮಾಜದ ಮುಖ್ಯವಾಹಿನಿಯಿಂದ, ಊರಿನ ಹೊರಗೆ ಅನಾರೋಗ್ಯಕರ ಕೇರಿ, ಓಣಿಗಳಲ್ಲಿ ಬಾಳಬೇಕಾಗಿ ಬಂದಿರುವ ಗುಂಪಿನಿಂದ ಬಂದಿರುವ ಅಂಬೇಡ್ಕರ್ ಅವರ ಹೃದಯ ಸಾಕ್ಷಿಪೂರಕ ಭಾವನಾತ್ಮಕ ರಾಷ್ಟ್ರಪ್ರೇಮ ಅನನ್ಯವಾದುದು. ದೇಶ ಸ್ವಾತಂತ್ರ್ಯಕ್ಕಿಂತ ತಮ್ಮ ದೇಶಬಾಂಧವರಿಂದಲೇ ಶೋಷಣೆಗೆ ಒಳಗಾಗಿ ಅಸಹಾಯಕ ಜೀವನ ನಿರ್ವಹಿಸುತ್ತಿರುವ ತಮ್ಮ ಜನಾಂಗದ ಜನರ ಕನಿಷ್ಠ ಮಾನವೀಯ ಜೀವನಕ್ಕೆ ಅಗತ್ಯವಾದ ಸ್ವತಂತ್ರ ವಾತಾವರಣ ದೇಶಸ್ವಾತಂತ್ರ್ಯಕ್ಕಿಂತ ಪ್ರಮುಖವಾದದ್ದು ಮತ್ತು ಅಧಿಕ ಅಗತ್ಯ ಜರೂರಾಗಿದ್ದು ಮಿಕ್ಕಿಲ್ಲಕ್ಕಿಂತ ಮೊದಲು ಅದನ್ನು ಪರಿಶೀಲಿಸಬೇಕು ಎಂದು ಹೇಳಿದ್ದನ್ನೇ ಸ್ವಾತಂತ್ರ್ಯಕ್ಕಾಗಿ ಹಸಿದು ಹಂಬಲಿಸುತ್ತಿದ್ದ ಇಡೀ ದೇಶ ಅಂಬೇಡ್ಕರ್ ಅವರು ದೇಶದ್ರೋಹಿ-ದೇಶಸ್ವಾತಂತ್ರ್ಯ ವಿರೋಧಿ ಎಂದು ಹುಯಿಲೆಬ್ಬಿಸಿದ್ದರು.

ಗಾಂಧೀಜಿ ಅವರು ಅಂಬೇಡ್ಕರ್ ಅವರ ಮಾತೃದೇಶ ಪ್ರೇಮ, ಅವರ ಜನಗಳ ಬವಣೆ ಹಾಗೂ ಅವರ ಪ್ರತ್ಯೇಕತೆಯ ಆತಂಕಗಳನ್ನು ಚೆನ್ನಾಗಿ ಅರಿತಿದ್ದರು. ಆದರೆ ನಮಗೆ ಸ್ವಾತಂತ್ರ್ಯ ಬಂದು ಬಿಟ್ಟರೆ ನಮ್ಮ ಕಳಂಕಗಳನ್ನೆಲ್ಲ ಪರಿಹರಿಸಿಕೊಳ್ಳಬಹುದು ಎಂದು ನಿಜವಾಗಿ ನಂಬಿದ್ದವರು. ಗಾಂಧೀಜಿ ಬನಿಯ/ವೈಶ್ಯರು, ಮನುಧರ್ಮ ಶಾಸ್ತ್ರದ ವೈದಿಕ ಪ್ರವೃತ್ತಿಯ ಪದರುಗಳ ಪ್ರಸಾರ ಜನಜೀವನದಲ್ಲಿ ಎಷ್ಟರ ಮಟ್ಟಿಗೆ ಹರಡಿ ಹೊಕ್ಕಿಬಿಟ್ಟಿದೆ ಎಂಬುದು ಯಾರಿಗಾದರೂ ಹೊಳೆಯುವ ವಿಷಯ. ಸ್ವಾತಂತ್ರ್ಯ ಬಂತು. ಯಾರಿಗೆ ಸ್ವಾತಂತ್ರ್ಯ ಎಷ್ಟರ ಮಟ್ಟಿಗೆ ಯಾರ್ಯಾರಿಗೆ ಇತ್ತೋ ಅವರಿಗೇ. ಇಲ್ಲದಿದ್ದವರಿಗೆ ಈವರೆಗೂ ಇಲ್ಲ. ಸಮಾನತೆ ಕೇವಲ ರಾಜಕೀಯ ಸಮಾನತೆ ಮತದಾನದ ಸಮಾನತೆಗೆ ಅಂಬೇಡ್ಕರ್ ಅವರು ಸಂವಿಧಾನ ಕರಡು ಮಂಜೂರಾತಿ ಸಭೆಯಲ್ಲಿ ಪ್ರಪಂಚದ ಎಲ್ಲ ಸಂವಿಧಾನಗಳನ್ನೂ ಉಲ್ಲೇಖಿಸಿ ವಯಸ್ಕರ ಮತದಾನದ ಹಕ್ಕು ತತ್ವದ ನೆಲೆಯಲ್ಲಿ ಆ ರಾಜಕೀಯ ಸಮಾನತೆಯನ್ನು ಮಿಕ್ಕೆಲ್ಲ ಜೀವನಾಗತ್ಯ ಸಮಾನತೆಗಳನ್ನು ಬದಿಗೊತ್ತಿ ಮಂಜೂರು ಮಾಡಿಸಿಕೊಂಡರು. ಉಳಿದಂತೆ ಈಗ ನೋಡಿದರೆ ಸಮಾನತೆ ಮತ್ತು ಭ್ರಾತೃಭಾವ ಸಂವಿಧಾನದಲ್ಲಿ ಇದ್ದುಕೊಂಡು ಸ್ವಜನ ಜಾತಿಬಾಂಧವರೊಳಗೆ ಉಳಿದುಹೋಗಿದೆ. ಜಾತೀಯತೆಯ ಪೆಡಂಭೂತ, ಭಾರತೀಯ ಸಮಾಜಕ್ಕೆ ಒಡ್ಡಿರುವ ಅಪಚಾರ ಹಾಗೂ ಅಪ್ಪಟ ವೈಯಕ್ತಿಕ ರಾಷ್ಟ್ರಪ್ರೇಮಕ್ಕೆ ಅಪ್ಪಳಿಸಿರುವ ಗಂಡಾಂತರವನ್ನಿಲ್ಲಿ ಈಗ ಅರಿಯಬಹುದು. 'ಅರವತ್ತಕ್ಕೆ ಅರಳು-ಮರಳು' ಎಂಬ ನಾಣ್ನುಡಿ ಈಗ ಅರವತ್ತರ ಸ್ವಾತಂತ್ರ್ಯದಲ್ಲಿ ಕರ್ನಾಟಕದಲ್ಲಿ ಕೋಮುವಾದ-ಜಾತೀಯತೆಯ ಹೆಡೆ ಬಿಚ್ಚಿ ಹ್ಲೂಂಕರಿಸುತ್ತಿದೆ.

ಹೇಗೂ ಸಂವಿಧಾನದಲ್ಲಿ ಇಡೀ ಭಾರತದ ಏಕೈಕ ಪೌರತ್ವವನ್ನು ನಿರೂಪಿಸಿದೆ. ಒಂದೇ ನ್ಯಾಯಾಂಗ ಹಾಗೂ ಒಂದು ಅಖಿಲ ಭಾರತ ಸೇವಾ ವ್ಯವಸ್ಥೆ ಹೊಂದಿದೆ. ಭಾರತ ಒಕ್ಕೂಟದಲ್ಲಿ ಎಲ್ಲ ರಾಜ್ಯಗಳು ಒಳಗೊಂಡಿದ್ದು ಅವಕ್ಕೆ ಹೊರಹೋಗುವ ಹಕ್ಕಿರುವುದಿಲ್ಲ. ಹೀಗೆ ಇದೆ ನಮ್ಮ ರಾಷ್ಟ್ರ.

1949ರ ನವೆಂಬರ್ 26ರಂದು ಸಂವಿಧಾನ ಸಭೆ ಕರಡು ಸಂವಿಧಾನಕ್ಕೆ ಭಾರತ ಸಂವಿಧಾನವಾಗಿ ಒಪ್ಪಿಗೆ ಕೊಟ್ಟಿತು. ಅಂದು ಅಂಬೇಡ್ಕರ್ ಅವರು ಎಷ್ಟೇ ಕಷ್ಟವಾದರೂ ಪ್ರಜಾಪ್ರಭುತ್ವವನ್ನುಳಿಸಿಕೊಳ್ಳಲು ಕಳಕಳಿಯ ಕರೆ ಇತ್ತರು. ಪ್ರಜಾಪ್ರಭುತ್ವಕ್ಕೆ ಬರಬಹುದಾದ ಅಪಾಯ ಬಂದದ್ದು ವ್ಯಕ್ತಿಪೂಜೆಯಿಂದ ಎಂದರು. 'ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವವರು ಎಂದಿಗೂ ಅವರ ಸ್ವಾತಂತ್ರ್ಯವನ್ನು ಅವನು ಎಷ್ಟೇ ದೊಡ್ಡವನಾಗಿದ್ದರೂ ಕೂಡ ಅವನ ಒಬ್ಬನ ಇಚ್ಛೆಗೆ ಬಿಡಬಾರದು. ಸಂವಿಧಾನ ಸ್ವಭಾವ ಲಕ್ಷಣ ಬದಲಾಯಿಸುವಂತಹ ಅಧಿಕಾರ ಕೊಟ್ಟು ಯಾರೊಬ್ಬನನ್ನೂ ನಂಬಬಾರದು'. ಹೀಗೆ ಹೇಳಿ ಭಾರತದಲ್ಲಿ ಪ್ರಚಲಿತ ಇರುವ ಅಸಂಬದ್ಧ ಕುರುಡು ವ್ಯಕ್ತಿ ಪೂಜಾ ಸ್ವಭಾವದ ವಿರುದ್ಧ ಅವರು ಎಚ್ಚರಿಸಿದ್ದರು. ಭಾರತ ಭಕ್ತಿ ಪ್ರಧಾನ ದೇಶ. ಭಕ್ತಿ ಅಥವಾ ವ್ಯಕ್ತಿಪೂಜೆ ಕಟ್ಟಕಡೆಗೆ ಸರ್ವಾಧಿಕಾರಕ್ಕೆಡೆ ಮಾಡುತ್ತದೆ. ಇದು ಖಾತ್ರಿಯಾದರೆ ಅವನತಿಯ ಹಾದಿ ಎಂಬುದು ನಿಶ್ಚಯ ಎಂದಿದ್ದರು. ಎಷ್ಟು ಸತ್ಯ!

ಒಬ್ಬ ರಾಮಮನೋಹರ ಲೋಹಿಯಾ, ಒಬ್ಬ ಫಿರೋಜ್ ಗಾಂಧಿ, ಒಬ್ಬ ಜಯಪ್ರಕಾಶ್ ನಾರಾಯಣ, ಒಬ್ಬ ದೇವರಾಜ ಅರಸು, ಶಾಂತವೇರಿ ಗೋಪಾಲಗೌಡ, ಒಬ್ಬ ಟಿ. ಸಿದ್ದಲಿಂಗಯ್ಯ, ಒಬ್ಬ ಬಾಬಾ ಹಜಾರೆ ಇರುವ ಜನರನ್ನು ಸ್ವಾತಂತ್ರ್ಯ ಕಾಪಾಡಿಕೊಳ್ಳಲಿಕ್ಕಾಗಿ ಬಡಿದೆಬ್ಬಿಸುವ ಭಾರತದ ಪ್ರಜಾಪ್ರಭುತ್ವ ಅಂತ್ಯ ಕಾಣಲಾರದು. ಅಷ್ಟಕ್ಕೂ ಅಂಬೇಡ್ಕರ್ ಅವರು ಹೇಳಿರುವ ಮತ್ತೊಂದು ಅಮೂಲ್ಯ ಏನೆಂದರೆ ಸಂವಿಧಾನವೊಂದು ಎಷ್ಟೇ ಮಹತ್ತರವಾದುದಾಗಿದ್ದರೂ ಅದನ್ನು ಕಾರ್ಯಗತಗೊಳಿಸುವವರು ಅಧಮರಾಗಿದ್ದರೆ ಆ ಸಂವಿಧಾನದ ಫಲಿತಾಂಶ ಕೆಟ್ಟದ್ದೇ ಆಗುವುದು. ಸಂವಿಧಾನ ಒಂದು ಎಷ್ಟೇ ಕೆಟ್ಟದ್ದಾಗಿದ್ದರೂ ಅದನ್ನು ಕಾರ್ಯಗತಗೊಳಿಸುವವರು ಒಳ್ಳೆಯ ಪ್ರಜಾಪ್ರಭುತ್ವವಾದಿಗಳಾಗಿದ್ದರೆ ಅದರ ಫಲಿತಾಂಶ ಒಳ್ಳೆಯದೇ ಆಗುವುದೆಂದು ಹೇಳಲು ಯಾವ ಪ್ರವಾದಿಯೂ ಬೇಕಾಗಿಲ್ಲ ಎಂದಿದ್ದರು. ಈ ಎಚ್ಚರಿಕೆ ಸಕಲ ಭಾರತೀಯರಿಗೆ! ಅವರ ಮತದಾನದ ಹಕ್ಕನ್ನು ವಿವೇಚನೆಯಿಂದ ಚಲಾಯಿಸಲಿಕ್ಕೆ !! ಪ್ರತಿ ಪ್ರಜೆಯ ಜವಾಬ್ದಾರಿಯನ್ನು ಪ್ರಕಾಶಿಸಲಿಕ್ಕೆ!!

ಒಂದು ಸಂಜೆ ನೆಹರೂ ಮತ್ತು ಸರೋಜಿನಿನಾಯ್ಡು ಅವರು ಗಾಂಧೀಜಿಯವರನ್ನು ನೋಡಲು ಬಂದಾಗ ಖಿನ್ನವದನರಾಗಿದ್ದರು. ವಿಚಾರಿಸಲಾಗಿ ಅವರು ಸಂವಿಧಾನ ತಜ್ಞರೊಬ್ಬರ ಹುಡುಕಾಟದಲ್ಲಿದ್ದು ಏಷ್ಯಾ ಖಂಡದ ಹಲವು ದೇಶಗಳಿಗೆ ಸಂವಿಧಾನಗಳನ್ನು ರಚಿಸಿಕೊಟ್ಟ ತಜ್ಞ ಐವರ್ ಜೆನ್ನಿಂಗ್ಸ್ ಅವರನ್ನು ಕರೆಸುವ ಯೋಚನೆಯಲ್ಲಿದ್ದಾರೆ ಎಂದರು. ಗಾಂಧೀಜಿ ತಟ್ಟನೆ ಅಂಬೇಡ್ಕರ್ ಅವರ ಹೆಸರನ್ನು ಆ ಕೆಲಸಕ್ಕೆ ಸೂಚಿಸಿ ಅಲ್ಲಿಗೆ ಅದನ್ನು ಮುಗಿಸಿದ್ದರು. ಗಾಂಧೀಜಿಯವರ ನಂಬಿಕೆಯನ್ನು ಅಂಬೇಡ್ಕರ್ ಅವರು ಅತ್ಯುತ್ತಮ ಸಾಮಾಜಿಕ ಪ್ರಜಾಪ್ರಭುತ್ವದ ಭಾರತ ಸಂವಿಧಾನವನ್ನು ರಚಿಸಿಕೊಟ್ಟು ಎತ್ತರಿಸಿಕೊಂಡರು.

ಸಂವಿಧಾನ ಕರಡು ರಚನಾ ಸಭೆಯಲ್ಲಿ ಏಳು ಮಹನೀಯರಿದ್ದರು. ಅವರಲ್ಲಿಬ್ಬರು ಅನಾರೋಗ್ಯದಿಂದ ಬಳಲುತ್ತಿದ್ದರು. ಒಬ್ಬರು ವಿದೇಶ ಪ್ರವಾಸದಲ್ಲಿದ್ದರು. ಉಳಿದವರು ಅವರ ರಾಜ್ಯ ರಾಜಕೀಯದಲ್ಲಿ ತಲ್ಲೀನರಾಗಿದ್ದರು. ಹಾಗಾಗಿ ಅಧ್ಯಕ್ಷರಾದ ಅಂಬೇಡ್ಕರ್ ಒಬ್ಬರೇ ಸಕಲ ಜವಾಬ್ದಾರಿ ಹೊತ್ತು ಕರಡು ರಚಿಸಿ ಸಂವಿಧಾನ ಸಭೆಯಲ್ಲಿ ಪ್ರತಿ ಕಲಂ ಪ್ರಕರಣವನ್ನು ಮುನ್ನಡೆಸಿ ಸಂವಿಧಾನದ ಮಂಜೂರಾತಿ ಮಾಡಿಸಿದರು. ಇದಲ್ಲವೇ ಒಬ್ಬ ಧೂಳಗ ಧುರೀಣನಾದ ಅದ್ಭುತ! ಸಾಮಾನ್ಯರಲ್ಲಿ ಅಸಮಾನ್ಯ! ■

ಅಲೆಮಾರಿಗಳು: ಒಂದು **ಭಿನ್ನ** ವಾದ

(9ನೇ ಪುಟದಿಂದ)

ಸುತ್ತೋಲೆಗಳ ತಪ್ಪು, ಕಾನೂನು ವಿರೋಧಿ ಅಂಶಗಳಾಗಿವೆ. ಸರಕಾರಗಳು ಶ್ರೇಷ್ಠ ನ್ಯಾಯಾಲಯಗಳು ಅಸಿಂಧುವೆಂದು ಸಾರಿ ರದ್ದುಗೊಳಿಸಿದ ಹಿಂದಿನ ಸುತ್ತೋಲೆಗಳ ಅಂಶಗಳನ್ನು ಪುನಃ ನಂತರದ ಕಾಲಘಟ್ಟದಲ್ಲಿ ಮರೆಮಾಚಲು ವರದಿಗಳ ಮೂಲಕ ಪ್ರಕಟಿಸಿರುವುದು ನ್ಯಾಯಾಲಯಗಳ ಆದೇಶಗಳ ಉಲ್ಲಂಘನೆಯಾಗಿದ್ದು ಅಂಥ ವರ್ತನೆಗಳು ನ್ಯಾಯಾಲಯ ನಿಂದನೆಯ ಸ್ಪಷ್ಟ ನಿದರ್ಶನಗಳಾಗಿವೆ.

1920ರಲ್ಲಿ ಪ್ರಥಮಬಾರಿಗೆ ಹೈದರಾಬಾದಿನ ನಿಜಾಮ್ ಸರಕಾರವು ಶೈಕ್ಷಣಿಕವಾಗಿ ಮತ್ತು ಸಮಾಜಿಕವಾಗಿ ಅತ್ಯಂತ ಹಿಂದುಳಿದ ಜಾತಿಗಳನ್ನು ಗುರುತಿಸಿ ಪಟ್ಟಿಮಾಡಿ ಶೈಕ್ಷಣಿಕ ಮತ್ತು ಸಾಮಾಜಿಕ ಸೌಲಭ್ಯಗಳನ್ನು ಇತರೆ ಮುಂದುವರಿದ ಜಾತಿಗಳ ಜೀವನ ಮಟ್ಟಕ್ಕೆ ತರುವಂತೆ ಅನುಕೂಲ ಮಾಡಿಕೊಡಲು 34 ಜಾತಿಗಳ ದುರ್ಬಲವರ್ಗದ (ಡಿಪ್ರೆಸಡ್ ಕ್ಲಾಸ್) ಪಟ್ಟಿಯನ್ನು ಪ್ರಕಟಿಸಿತ್ತು. ಆ ಪಟ್ಟಿಯಲ್ಲಿ ಇತರೆ ಜಾತಿಗಳಾದ ಅನಾಮುಕ, ಬರ್‌ಬೂಕ್, ಮಾದಿಗ, ಮೆಹರ್, ಲಂಬಾಣಿ ಜಾತಿಗಳೊಂದಿಗೆ "ಜಂಗಮ" ಜಾತಿ ಇರುವುದನ್ನು ನೋಡಬೇಕು.

1920ರ ಈ ಡಿಪ್ರೆಸ್ಡ್ ಕ್ಲಾಸ್ ಪಟ್ಟಿಯೇ ಮುಂದೆ ಆಂಗ್ಲರ 1936 ರ "ದಿ **ಷೆಡ್ಯೂಲ್ಡ್ ಕ್ಯಾಸ್ಟ್ ಆ್ಯಕ್ಟ್ ಆಫ್ 1936 ಅಧಿನಿಯಮ**" ಕ್ಕೆ ಆಧಾರವಾಗಿದ್ದದ್ದು ಕಾನೂನು ಇತಿಹಾಸ ಬಲ್ಲವರಿಗೆ ತಿಳಿದ ವಿಷಯವಾಗಿದೆ. ಈ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಡಿಪ್ರೆಸ್ಡ್ ಕ್ಲಾಸಿನಲ್ಲಿದ್ದ ಎಲ್ಲಾ 34 ಜಾತಿಗಳನ್ನು ಸೇರಿಸಿ ಆಗಿನ ಆಂಗ್ಲ ಸರಕಾರ "**ಪರಿಶಿಷ್ಟ ಜಾತಿ ಪಟ್ಟಿ**"ಯ ಹೆಸರಿನಲ್ಲಿ ಜಾರಿಗೊಳಿಸಿತು. ಈ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ "**ಜಂಗಮ**" ಜಾತಿ ಇರುವುದನ್ನು ವಿರೋಧಿಸುವವರು ಗಮನಿಸಬೇಕು. ಬೇಡ ಜಂಗಮರ **ರಿ ಸ್ಟಡಿಯಲ್ಲಿ** ಹೇಳಿರುವಂತೆ 1950ಕ್ಕೆ ಮೊದಲು ಜಂಗಮರನ್ನು ಇತರೆ ಹಿಂದುಳಿದ ಸಮುದಾಯದಲ್ಲಿ ಸೇರಿಸಿದ್ದರೆನ್ನುವುದು ನಿಜ ಸಂಗತಿಗೆ ವಿರುದ್ಧವಾದದ್ದು, 1950ಕ್ಕಿಂತ ಮುಂಚಿತವಾಗಿ ಜಂಗಮರನ್ನು ಹಿಂದುಳಿದ ಜನಾಂಗದ ಪಟ್ಟಿಯಲ್ಲಿ ಸೇರಿಸಿದ್ದರೆನ್ನುವುದು ಕಾನೂನು ಇತಿಹಾಸವನ್ನು ತಿರುಚಿದ ತಪ್ಪು ಮಾಹಿತಿ ಮಾತ್ರವಾಗಿದೆ.

ಆಂಥ್ರೋಪಾಲಾಜಿಕಲ್ ಸರ್ವೆ ಆಫ್ ಇಂಡಿಯಾದವರ '**ರೀ ಸ್ಟಡಿ**' ವರದಿಯಲ್ಲಿಯೇ ಕೆಳ ಟಿಪ್ಪಣಿಯಲ್ಲಿ ಈ ರೀ ಸ್ಟಡಿ ವರದಿಯನ್ನು ಎಡ್ಗರ್ ಥರ್‌ಸ್ಟನ್ ಅವರ ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸೌತರ್ನ್ ಇಂಡಿಯಾ (ಮದ್ರಾಸ್ ಗೌರ್ಮೆಂಟ್ ಪ್ರೆಸ್, 1909 : ರಿ ಪ್ರಿಂಟ್ 1975 : ದೆಲ್ಲಿ (ಕಾಸ್ಮೋಪಬ್ಲಿಕೇಷನ್ಸ್) ಎಂದು ಗ್ರಂಥ ಋಣವನ್ನು ನಮೂದಿಸಲಾಗಿದೆ. ಬಾಲಗುರುಮೂರ್ತಿಯವರ ಈ ಲೇಖನದಲ್ಲಿ ಉಲ್ಲೇಖವಾಗಿರುವ ಈ ಗ್ರಂಥ ಋಣದ ಪುಸ್ತಕದಲ್ಲಿ ಗ್ರಂಥಕರ್ತರಾದ ಥರ್ಸ್ಟನ್.ಇ ಅವರು ಎಷ್ಟನೇ ಪುಟದಲ್ಲಿ ಬೇಡಜಂಗಮರ ಬಗ್ಗೆ ಎತ್ನೋಗ್ರಫಿ ಲೇಖನವನ್ನು ಬರೆದಿದ್ದಾರೆ ಎಂಬುದನ್ನು ಆಂಥ್ರೋಪಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು ಅವರೇ ತಿಳಿದುಕೊಂಡರೆ ಒಳಿತು. ಥರ್ಸ್ಟನ್ ಅವರು ತಮ್ಮ ಪುಸ್ತಕದಲ್ಲಿ ಎಲ್ಲಿಯೂ ಬೇಡ ಜಂಗಮರ ಕುರಿತು ವಿರುದ್ಧವಾಗಿ ಎಲ್ಲಿಯೂ ಉಲ್ಲೇಖ ಮಾಡಿರುವುದಿಲ್ಲ. ಆಂಥ್ರೋಪಾಲಾಜಿಕಲ್ ಅಧಿಕಾರಿಗಳ/ ಕ್ಷೇತ್ರ ಮಾಹಿತಿ ಮತ್ತು ವಿಷಯ ಸಂಗ್ರಹದ ಸಂಶೋಧನಾ ಕಾರ್ಯಕ್ರಮವು ಸೋಜಿಗವನ್ನು ಸೃಷ್ಟಿಸುವಲ್ಲಿ ಪವಾಡ ಸದೃಶ್ಯ ಕಾರ್ಯಮಾಡಿದೆ. ಎಲ್ಲಾ ಜಾತಿಗಳ ವಿಷಯ ಸಂಗ್ರಹ ಮಾಡುವಲ್ಲಿ ಆಂತ್ರೋಪಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಅಧಿಕಾರಿಗಳ ಈ ಸರ್ವೇಕ್ಷಣಾ ವರದಿಗಳನ್ನು ಓದಿದರೇ ಪ್ರತಿಯೊಂದು ವರದಿ ಅಂತ್ಯದಲ್ಲೂ ಥರ್‌ಸ್ಟನ್ ಇ ಅವರ ಮತ್ತು ಇತರೆ ಚಾರಿತ್ರಿಕ ಲೇಖಕರ ಪುಸ್ತಕಗಳಲ್ಲಿ ವಿಷಯಗಳ ಬಗ್ಗೆ ಗ್ರಂಥ ಋಣದ "ಲೇಖಕರು ಮತ್ತು ಪುಸ್ತಕ"ದ ಹೆಸರುಗಳನ್ನು ಕೆಳಗೆ ಪಟ್ಟಿಮಾಡಿದ್ದಾರೆ. ಅಚ್ಚರಿ ಎಂದರೆ ಎಲ್ಲಾ ಗ್ರಂಥ ಋಣದಲ್ಲಿ ನಮೂದಿಸಿದ ಪುಸ್ತಕಗಳಲ್ಲಿ ವರದಿಯ ವಿಷಯಗಳು ಮೂಲ ಲೇಖಕರಿಂದ ಪ್ರಸ್ತಾಪವಾಗಿರುವುದಿಲ್ಲ. ■

ಮಾಯಾ ಬೆಹನ್ ಸೋಲು ದಲಿತ ಚಳವಳಿಗೆ ಪಾಠವಾಗಬಲ್ಲದೇ...?

(7ನೇ ಪುಟದಿಂದ)

ಸಂಸ್ಕೃತಿ ಇತ್ಯಾದಿಗಳ ಹೆಸರಿನಲ್ಲಿ ನಡೆಯುತ್ತಾ ಬಂದು ಸ್ವಾತಂತ್ರ್ಯ ನಂತರ ಒಂದು ರಾಜಕೀಯ ಮೌಲ್ಯ/ವ್ಯವಸ್ಥೆಯಾಗಿ ರೂಪುಗೊಂಡ ಮೇಲ್ವರ್ಗದ ರಾಜಕೀಯ ಸಂಸ್ಥೆಗಳಲ್ಲಿ ನಾವು ನಮ್ಮ ರಾಜಕೀಯ ಅಗತ್ಯತೆಗಳನ್ನು ಪೂರೈಸಿಕೊಳ್ಳುತ್ತೇವೆ ಎಂಬುದು ಸಾಧ್ಯವಿಲ್ಲ ಎಂಬುದನ್ನು ಇತಿಹಾಸ ನಿರೂಪಿಸಿದೆ. ವಿವರವಾಗಿ ನೋಡುವುದಾದರೆ ಸಮಾನ್ಯವಾಗಿ ಭಾರತದ ದಲಿತ ಚಿಂತನೆ ನಮ್ಮದೇ ಜನ ಶತಮಾನಗಳ ಕಾಲ ಶೋಷಿಸುತ್ತಾ ಬಂದ ವ್ಯವಸ್ಥೆಯ ಭಾಗವಾಗಿ ಬಿಟ್ಟರೆ ವ್ಯವಸ್ಥೆಯ ಗುಣವನ್ನು ಬದಲಾಯಿಸಿಬಿಡಬಹುದು ಎಂದು ನಂಬುತ್ತದೆ. ಆ ಕಾರಣದಿಂದಲೇ ಮೀಸಲಾತಿಯಿಂದ ಶಿಕ್ಷಣ, ಶಿಕ್ಷಣದಿಂದ ಆಡಳಿತಾಂಗದಲ್ಲಿ ಪ್ರಾತಿನಿಧ್ಯ, ರಾಜಕೀಯ ಅವಕಾಶ ಕೊನೆಯದಾಗಿ ದಲಿತರೇ ರಾಜಕೀಯವನ್ನು ನಿಯಂತ್ರಿಸುವ ಬಗೆಗಳ ಕುರಿತು ದಲಿತ ಹೋರಾಟದ ಇತಿಹಾಸದಲ್ಲಿ ಪುಟಗಟ್ಟಲೆ ಬರವಣಿಗೆ ಸಿಗುತ್ತದೆ. ಆದರೆ ಒಂದು ಸ್ಥಾಪಿತ ಸಂಸ್ಥೆಯ ಸ್ವಭಾವವು ಅದರ ಭಾಗವಾಗಿರುವ ಜನರ ಒಟ್ಟು ಮೊತ್ತವೇನೂ ಆಗಿರುವುದಿಲ್ಲ ಎಂಬ ಅಂಶ ದಲಿತ ಸಂಘಟನೆಗಳು ಗಮನಿಸಿದಂತೆ ಕಾಣುವುದಿಲ್ಲ. ಇದಕ್ಕೆ ಭಾರತದ ಪ್ರಜಾಸತ್ತಾತ್ಮಕ ರಾಜಕೀಯ ಸಂಸ್ಥೆಗಳ ಕಾರ್ಯ ವೈಖರಿಯನ್ನು ಉದಾಹರಿಸಬಹುದು. ಸಂಸ್ಥೆಗಳಿಗೆ ಅವು ಸ್ಥಾಪನೆಯಾಗುವ ಹಂತದಲ್ಲಿಯೇ ಕೆಲವು ನಿರ್ಧಿಷ್ಟ ಮೌಲ್ಯಗಳು ಇರುತ್ತವೆ ಮತ್ತು ಅವು ಅನಂತವಾಗಿರುತ್ತವೆ. ಆದರೆ ಅದರಲ್ಲಿ ಭಾಗವಹಿಸುವ ವ್ಯಕ್ತಿಗೆ ಒಂದು ಕಾಲಮಿತಿಯಿರುತ್ತದೆ. ಅಲ್ಲದೆ ಆತ ಅಲ್ಲಿ ಆ ಸಂಸ್ಥೆಯ ಮೌಲ್ಯಗಳಿಗೆ ಪೂರಕವಾಗಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಕಾಲಾನಂತರ ಆತನು ಆ ವ್ಯವಸ್ಥೆಯ ಭಾಗವಾಗಿ ಬಿಡುತ್ತಾನೆ. ಇಲ್ಲವಾದರೆ ಅನಗತ್ಯ ಒತ್ತಡ ಎದುರಿಸಬೇಕಾಗುತ್ತದೆ. ಇದನ್ನು ನಾವು ಭಾರತದ ಬಹುಪಾಲು ದಲಿತ ನೌಕರ ಮತ್ತು ವಿದ್ಯಾವಂತರ ವರ್ತನೆಯಲ್ಲಿ ಬಹಳ ಸ್ಪಷ್ಟವಾಗಿ ಗುರುತಿಸಬಹುದು. ಸುಶೀಕ್ಷಿತ ದಲಿತರು ನನ್ನನ್ನು ವಂಚಿಸಿದರು ಎಂಬ ಅಂಬೇಡ್ಕರ್ ಅವರ ಹೇಳಿಕೆ ಇದನ್ನು ಪುಷ್ಠೀಕರಿಸುತ್ತದೆ. ಹಾಗೆ ನೋಡುವುದಾದರೆ ಉತ್ತರ ಪ್ರದೇಶದ ಕಳೆದ ಎರಡು ಚುನಾವಣಾ ಫಲಿತಾಂಶ ಮೀಸಲಾತಿಯ ಮೂಲಕ ರಾಜಕೀಯ ಮತ್ತು ಆಡಳಿತ ವಲಯಗಳಲ್ಲಿ ಹೆಚ್ಚು ಹೆಚ್ಚು ದಲಿತರು ಸೇರಿದರೆ ಇಡೀ ವ್ಯವಸ್ಥೆಯನ್ನು ದಲಿತರಿಗೆ ಪೂರಕವಾಗಿ ಅಥವಾ ತಳಸಮುದಾಯದ ಆಶೋತ್ತರಗಳಿಗೆ ಪೂರಕವಾಗಿ ಹಿಗ್ಗಿಸಬಹುದು ಎಂಬ ದೇಶದ ದಲಿತ ರಾಜಕಾರಣದ ಬಹಳ ಪ್ರಮುಖವಾದ ಒಂದು ಮಿಥ್ಯೆಯನ್ನು ಒಡೆದು ಹಾಕಿದೆ ಎನ್ನಬಹುದು. ಹೀಗೆ ಅಂದುಕೊಂಡರೆ ನಮಗೆ ಎದುರಾಗುವ ಮತ್ತೊಂದು ಪ್ರಮುಖವಾದ ಪ್ರಶ್ನೆ ಹಾಗಾದರೆ ಮುಂದಿನ ದಲಿತ ಹೋರಾಟದ ಮಾದರಿ ಹೇಗಿರಬೇಕೆಂಬುದು?

ಅದಕ್ಕೆ ಕೆಳಗಿನ ಕೆಲವು ಬದಲಾವಣೆಗಳನ್ನು ದಲಿತ ಹೋರಾಟ ತನ್ನ ಮುಂದಿನ ಚಿಂತನೆ ಮತ್ತು ಹೋರಾಟದ ಮಾದರಿಗಳಲ್ಲಿ ಅಳವಡಿಸಿಕೊಳ್ಳಬೇಕಿದೆ.

1. ಚುನಾವಣಾ ರಾಜಕಾರಣದ ಭಾಗವಾಗಿ ದಲಿತರನ್ನು ರಾಜಕೀಯ ನೆಲೆಯಿಂದ ಗುಂಪುಗೂಡಿಸುವ, ಅದಕ್ಕೆ ಪೂರಕವಾಗಿ ಕೆಲವು ಸಮಾಜಿಕ ಯೋಜನೆಗಳನ್ನು ಹಾಕಿಕೊಳ್ಳುವ ನಯವಂಚಕ ರಾಜಕೀಯ ಪಕ್ಷಗಳ ವಿರುದ್ಧವಾಗಿ ದಲಿತ ಚಳವಳಿ ಧ್ವನಿಯೆತ್ತಬೇಕು.
2. ರಾಜಕೀಯ ಅಧಿಕಾರಕ್ಕೆ ಬದಲಾಗಿ ದಲಿತರ ವಾಸ್ತವ ಬದುಕನ್ನು ಪ್ರತಿನಿಧಿಸುವ ಸಾಮಾಜಿಕ ಸಂಚಲನದ ಕಡೆ ಹೆಚ್ಚು ಹೆಚ್ಚು ಗಮನ ಹರಿಸಬೇಕು.
3. ಈ ದೇಶದ ತಳಸಮುದಾಯವನ್ನು ಅವರ ಬದುಕಿನ ನೆಲೆಯಲ್ಲಿಯೇ ಗುರುತಿಸುವ, ಅದಕ್ಕೆ ಪೂರಕವಾದ ಸಾಮಾಜಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ಕಟ್ಟುವ ಕುರಿತ ಸಂಶೋಧನೆಗಳನ್ನು ಹೆಚ್ಚು ಹೆಚ್ಚು ಪ್ರೋತ್ಸಾಹಿಸಬೇಕು.
4. ಒಟ್ಟಾರೆ ಪ್ರಚಲಿತ ರಾಜಕೀಯ ಮತ್ತು ಸಾಮಾಜಿಕ ಸಂಸ್ಥೆಗಳ ನೆಲೆಯಲ್ಲಿ ದಲಿತರನ್ನು ಸೇರಿಸುವ/ವಿವರಿಸುವ ಕುರಿತು ಮಾತನಾಡದೇ ನಿಜವಾದ ದಲಿತರ ಸಾಮಾಜಿಕ ಬದುಕನ್ನು ಪ್ರತಿನಿಧಿಸುವ ರಾಜಕೀಯ ಸಂಸ್ಥೆಗಳನ್ನು ಹುಟ್ಟುಹಾಕಬೇಕು ಮತ್ತು ಸಾಮಾಜಿಕ ನೀತಿಗಳನ್ನು ರೂಪಿಸಬೇಕು.
5. ಕೊನೆಯದಾಗಿ ಉತ್ತರ ಪ್ರದೇಶದ ಕಳೆದ 2 ಚುನಾವಣಾ ಫಲಿತಾಂಶವನ್ನು ಮಾದರಿಯಾಗಿಟ್ಟುಕೊಂಡು ದಲಿತ ಚಳವಳಿಯನ್ನು ರಾಜಕೀಯ ಪ್ರಾತಿನಿಧಿಕರಣವನ್ನು ಹೊರಗಿಟ್ಟು ಸಾಮಾಜಿಕ ನೆಲೆಯಿಂದ ಮರು ನಿರೂಪಿಸುವ ಕೆಲಸಕ್ಕೆ ದಲಿತಪರ ಚಿಂತನಾ ವರ್ಗ ಪ್ರಯತ್ನಿಸಬೇಕು. ■

ಒಳಮೀಸಲಾತಿಯೆಂಬ ಬೂದಿಮುಚ್ಚಿದ ಕೆಂಡ

ಪ್ರಗತಿಪರ ಚಿಂತಕರು, ಎಲ್ಲ ದಲಿತರ ಹಿತೈಷಿಗಳು ಒಳಮೀಸಲಾತಿ ಪ್ರಶ್ನೆಯನ್ನು ಮುಕ್ತ ಮನಸ್ಸಿನಿಂದ ಚರ್ಚಿಸಬೇಕು. ಸೂಕ್ತ ಸಂವಿಧಾನಾತ್ಮಕ ಪರಿಹಾರವನ್ನು ಕಂಡುಕೊಳ್ಳಬೇಕು. ಅದರ ಮೂಲಕ ಪರಿಶಿಷ್ಟ ಜಾತಿಗಳ ಒಗ್ಗಟ್ಟನ್ನು ಕಾಪಾಡಬೇಕು. ಜಾತ್ಯಾತೀತ ರಾಜಕಾರಣದ ಕನಸು ಕಾಣುವ ಯಾರಾದರೂ ಸರಿ, ಪರಿಶಿಷ್ಟ ಜಾತಿಗಳ ಸಮಸ್ಯೆಗಳ ಬಗ್ಗೆ ಹಲವು ಕೋನಗಳಲ್ಲಿ ಗಮನಿಸಬೇಕು.

ಡಾ. ಎಲ್. ಹನುಮಂತಯ್ಯ

ಮೀಸಲಾತಿಯನ್ನು ದಲಿತರ, ಹಿಂದುಳಿದವರ ಹಕ್ಕು ಎಂದೇ ಪ್ರತಿಪಾದಿಸಲಾಗುತ್ತಿದೆ. ಶತಶತಮಾನಗಳ ಕಾಲ ಈ ಸಮುದಾಯಗಳು ಅನುಭವಿಸಿದ ಅಲಿಖಿತ ಅಸಮಾನತೆಯಿಂದ ದೊರಕಿಸಿಕೊಡುವ ನ್ಯಾಯದ ಸಣ್ಣ ಪ್ರಮಾಣ ಇದೆಂದು ವ್ಯಾಖ್ಯಾನಿಸಲಾಗುತ್ತಿದೆ. ಮೀಸಲಾತಿಯಿಂದ ಸಂಪೂರ್ಣ ನ್ಯಾಯವನ್ನು ದೊರಕಿಸಿಕೊಡುವುದು ಸಾಧ್ಯವಾಗದಿದ್ದರೂ, ನ್ಯಾಯ ಕೊಡುವ ಮಾರ್ಗಗಳಲ್ಲಿ ಪ್ರಮುಖ ದಾರಿ ಎಂದೇ ಭಾವಿಸಲಾಗಿದೆ. ಮೇಲ್ನೋಟಕ್ಕೆ ಮೀಸಲಾತಿ ಕಣ್ಣಿಗೆ ರಾಚುವ ಸಾಧನವಾಗಿರುವುದರಿಂದ, ಇದರ ವ್ಯಾಪ್ತಿಗೆ ಬರದೆ ಇರುವವರ ಕಣ್ಣುರಿಗೆ ಕಾರಣವಾಗಿದೆ. ಸ್ವಾತಂತ್ರ್ಯನಂತರದ ಭಾರತದಲ್ಲಿ ಅನೇಕ ಬಾರಿ ಮೀಸಲಾತಿ ವಿರೋಧಿ ಹೋರಾಟಗಳು ನಡೆಯುತ್ತಿದ್ದರೂ, ಇದು ಪಟ್ಟಭದ್ರರ, ಸೀಮಿತ ಹಿತಾಸಕ್ತಿ ಉಳ್ಳವರ ಹೋರಾಟವೆಂಬುದು ಜಗಜ್ಜಾಹೀರಾಗಿದೆ. ಸ್ವಾತಂತ್ರ್ಯನಂತರದಲ್ಲಿ ಅಧಿಕಾರಕ್ಕೆ ಬಂದ ಪಕ್ಷಗಳಲ್ಲಿ ಪ್ರಗತಿಪರ ಚಿಂತನೆಯ ರಾಜಕಾರಣಿಗಳು ಮೀಸಲಾತಿಯನ್ನು ವಿಸ್ತರಿಸುವ ಮೂಲಕ ಪರೋಕ್ಷವಾಗಿ ಅದನ್ನು ಪ್ರತಿಪಾದಿಸುತ್ತ ಬಂದರು, ಮಾತ್ರವಲ್ಲದೆ ಇದರ ಅಗತ್ಯವನ್ನು ಕಾಲಕಾಲಕ್ಕೆ ಪರಿಷ್ಕರಿಸುತ್ತಲೂ ಬಂದಿದ್ದಾರೆ. ಸಂವಿಧಾನದ ಆಶಯಗಳಲ್ಲಿ ಒಂದಾದ ಸಮಾನತೆಯನ್ನು ತರುವ ಪ್ರಮುಖ ಅಸ್ತ್ರಗಳಲ್ಲಿ ಮೀಸಲಾತಿ ಈಗಲೂ ಅಗತ್ಯವಾದ ಸನ್ನೆಯಾಗಿದೆ.

ಪರಿಶಿಷ್ಟಜಾತಿಗಳಿಗೆ ಸಂವಿಧಾನ ಜಾರಿಗೆ ಬರುವ ಮೊದಲೇ ಮೀಸಲಾತಿ ಜಾರಿಗೊಳಿಸಿದ ರಾಜರು, ಬ್ರಿಟಿಷರ ಆಳ್ವಿಕೆಯೂ ಇತ್ತೆಂಬುದು ನಮ್ಮ ಚರಿತ್ರೆಯಲ್ಲಿ ದಾಖಲಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಇದಕ್ಕೆ ತಾತ್ವಿಕ ಮತ್ತು ಸಂವಿಧಾನಾತ್ಮಕ ನಿಲುವನ್ನು ಪ್ರತಿಪಾದಿಸಿದರು. ಸ್ವಾತಂತ್ರ್ಯಾನಂತರ ಬಹುಶಃ ದಲಿತರಿಗೆ ಮೀಸಲಾತಿ ಸಂವಿಧಾನದ ಭಾಗವಾದ್ದರಿಂದ ಅವರ ಹಕ್ಕಾಗಿ ಪರಿಣಮಿಸಿತು. ಅನೇಕ ಸಂಘಟನೆಗಳು ಹಕ್ಕೊತ್ತಾಯದ ಭಾಗವಾಗಿ ಪಡೆಯಲು ಪ್ರಯತ್ನಿಸಿದರು. ಆದರೂ ಸಂವಿಧಾನದ ಇತರ ಆಶಯಗಳಂತೆ ಅಪೂರ್ಣವಾಗೇ ಉಳಿದಿರುವ ವಲಯಗಳಲ್ಲಿ ಮೀಸಲಾತಿ ಕೂಡ ಒಂದು. ಈ ಮೀಸಲಾತಿಯನ್ನು ಪ್ರಾಮಾಣಿಕವಾಗಿ, ಪೂರ್ಣವಾಗಿ ಜಾರಿಗೊಳಿಸಿದ್ದರೆ ನಮ್ಮ ಪ್ರಗತಿ ಇನ್ನಷ್ಟು ತ್ವರಿತಗತಿಯಲ್ಲಿ ಆಗಬೇಕಾಗಿತ್ತು. ಹಿಂದುಳಿದಿರುವ ಬಹುತೇಕ ಸಮುದಾಯಗಳು ಪ್ರಧಾನಧಾರೆಗೆ ಬಂದಿರುತ್ತಿದ್ದವು. ಈಗ ಅಸ್ತಿತ್ವದಲ್ಲಿರುವಂತಹ ಅಂತರ ಒಟ್ಟು ಸಮಾಜದಲ್ಲಿ ಮತ್ತು ಪರಿಶಿಷ್ಟಜಾತಿಗಳ ನಡುವೆ ಇರುತ್ತಿರಲಿಲ್ಲವೆಂಬುದು ವಾಸ್ತವವೆಂದೇ ನಾನು ಭಾವಿಸುತ್ತೇನೆ.

ಕಳೆದ ಮೂರು ದಶಕಗಳಿಂದ ತೀವ್ರ ಚರ್ಚೆಗೆ ಒಳಗಾಗಿರುವ ಮತ್ತೊಂದು ಗಂಭೀರ ವಿಚಾರ ಒಳಮೀಸಲಾತಿ. ಹಿಂದುಳಿದ ವರ್ಗಗಳಲ್ಲಿ ಒಳಮೀಸಲಾತಿಯೆಂಬುದು ಅದು ಅಸ್ತಿತ್ವಕ್ಕೆ ಬಂದಾಗಿನಿಂದಲೂ ಜಾರಿಯಲ್ಲಿದೆ. ಒಳಮೀಸಲಾತಿ ಹಿಂದುಳಿದ ವರ್ಗಗಳಲ್ಲಿ ಚರ್ಚೆಯ ವಿಷಯವಲ್ಲ. ಅದೊಂದು ಒಪ್ಪಿತ ಮೌಲ್ಯ. ನೂರಾರು ಜಾತಿಗಳಿರುವ ಹಿಂದುಳಿದ ವರ್ಗ, ಹಿಂದುಳಿದ, ಅತಿಹಿಂದುಳಿದ ಎಂಬ ಶ್ರೇಣಿಗಳಿರುವುದರಿಂದ ಈ ರೀತಿಯ ಶ್ರೇಣೀಕರಣ ಮೀಸಲಾತಿ ನೀಡಿಕೆಯಲ್ಲೂ ಜಾರಿಗೆ ಬಂದು ಅತ್ಯಂತ ವೈಜ್ಞಾನಿಕವೆಂದು ಪ್ರತಿಪಾದಿಸಲ್ಪಟ್ಟಿದೆ. ಆದರೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳಲ್ಲಿ ಒಳಮೀಸಲಾತಿ ಜಾರಿಗೆ ಬರಬೇಕೆಂದು ಕೂಗು ಕೇಳಿದ ದಿನದಿಂದಲೂ ವಿವಾದಕ್ಕೆ ಒಳಗಾಗಿದೆ. ಇದೊಂದು ಆಶ್ಚರ್ಯಕರ, ಆಘಾತಕಾರಿ ಸಂಗತಿಯೂ ಹೌದು.

ದಕ್ಷಿಣ ಭಾರತದಲ್ಲಿ ಎಂಬತ್ತರ ದಶಕದಲ್ಲಿ ಆಂಧ್ರಪ್ರದೇಶದಲ್ಲಿ ಈ ಕೂಗು ದೊಡ್ಡ ಪ್ರಮಾಣದಲ್ಲಿ ಎದ್ದಿತು. ಇದರಲ್ಲಿ ಸತ್ಯವಿದೆಯೆಂದು ಆಳುವ ಕೆಲವು ಸರ್ಕಾರಗಳಿಗಾದರೂ ಮನವರಿಕೆಯಾಯಿತು. ಸುದೀರ್ಘ ಹೋರಾಟದ ಫಲವಾಗಿ ಆಂಧ್ರಪ್ರದೇಶದಲ್ಲಿ ಪರಿಶಿಷ್ಟಜಾತಿಗಳ ಮೀಸಲಾತಿ ಹೋರಾಟ ಎ.ಬಿ.ಸಿ.ಡಿ ವರ್ಗೀಕರಣವಾಯಿತು. ಆಂಧ್ರಪ್ರದೇಶದ ಈ ಹೋರಾಟ ದಕ್ಷಿಣ ಭಾರತಕ್ಕೆ ಹೊಸದು. ಆದರೆ ಪಂಜಾಬ್, ಹರಿಯಾಣದಂತಹ ರಾಜ್ಯಗಳಲ್ಲಿ 1975ರಷ್ಟು ಹಿಂದೆಯೇ ಈ ವರ್ಗೀಕರಣ ಜಾರಿಯಾಗಿತ್ತು. ಯಾವುದೇ ಸಂವಿಧಾನಿಕ ಬಿಕ್ಕಟ್ಟಿಲ್ಲದೆ ಇದು ಅನೇಕ ದಶಕಗಳ ಕಾಲ ಜಾರಿಯಲ್ಲಿತ್ತು. ಇದು ಪರಿಶಿಷ್ಟಜಾತಿಗಳ ನಡುವೆ ಸಮಾನತೆ ಸಾಧಿಸುವ ಸಾಧನವಾಗಿ ಕೆಲಸ ಮಾಡಿತ್ತು. ಸರ್ಕಾರದಿಂದ ಆರಂಭಗೊಂಡು ಸಾಮಾಜಿಕ ಚಳವಳಿಗಳು, ಪರಿಶಿಷ್ಟಜಾತಿಗಳ ವಿವಿಧ ಸಮುದಾಯಗಳು ಯಾವುದೇ ತಕರಾರಿಲ್ಲದೆ ಇದನ್ನು ಒಪ್ಪಿಕೊಂಡಿದ್ದವು ಇದೊಂದು ಪ್ರಗತಿಪರ, ಉದಾರವಾದಿ, ಸಮಾನತೆಯ ಹರಿಗೋಲಾಗಿ ಕೆಲಸ ಮಾಡುತ್ತಿತ್ತು. ಇತ್ತೀಚೆಗೆ ಆಂಧ್ರಪ್ರದೇಶದ ವರ್ಗೀಕರಣ ಕಾಯ್ದೆ ಸುಪ್ರೀಂಕೋರ್ಟಿಗೆ ತಲುಪಿ ತಾಂತ್ರಿಕ ಕಾರಣದಿಂದ ಅದನ್ನು ರದ್ದುಪಡಿಸಲಾಯಿತು. ಇದರ ಪರಿಣಾಮವಾಗಿ 1975ರಿಂದ ಜಾರಿಯಲ್ಲಿದ್ದ ಪಂಜಾಬ್, ಹರ್ಯಾಣ ರಾಜ್ಯಗಳಲ್ಲೂ ಈ ಒಳಮೀಸಲಾತಿಯನ್ನು ವಾಪಸ್ಸು ಪಡೆಯಲಾಯಿತು. ಸಂವಿಧಾನ ತಿದ್ದುಪಡಿಯೊಂದೇ ಇದಕ್ಕೆ ಈಗ ಉಳಿದಿರುವ ಸಾಂವಿಧಾನಿಕ ಮಾರ್ಗವಾಗಿದೆ. ಕೇಂದ್ರ ಸರ್ಕಾರ ಸಂವಿಧಾನ ತಿದ್ದುಪಡಿ ತರಲು ಮುಂದಾಗಿಲ್ಲ. ಪ್ರಯತ್ನಗಳು ಮುಂದುವರಿದಿವೆ. ಆದರೆ ಫಲ ಸಿಕ್ಕುತ್ತಿಲ್ಲ. ಇದರಿಂದ ಪರಿಶಿಷ್ಟ ಜಾತಿಯಲ್ಲಿನ ಅನುಮಾನದ ಹುತ್ತ ದಿನೇ ದಿನೇ ಬೆಳೆಯುತ್ತಲೇ ಇದೆ.

ಕರ್ನಾಟಕದ ಚಳವಳಿಯ ಮೂಲ ಮತ್ತು ಇದರ ಪರಿಣಾಮಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಕರ್ನಾಟಕದ ಪರಿಶಿಷ್ಟಜಾತಿಯಲ್ಲಿ ಸುಮಾರು 101 ಜಾತಿಗಳಿವೆ. ಈ 101 ಜಾತಿಗಳಲ್ಲಿ ಮುಖ್ಯವಾಗಿ ನಾಲ್ಕು ಗುಂಪುಗಳಿವೆ. 1976ರಲ್ಲಿ ನೇಮಕವಾದ ಹಾವನೂರು ಕಮಿಷನ್‌ನಲ್ಲಿ ಪರಿಶಿಷ್ಟಜಾತಿಗಳನ್ನು ಸುಮಾರು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿದೆ.

1. ಮಾದಿಗ ಮತ್ತು ಸಂಬಂಧಿತ ಜಾತಿಗಳು.
2. ಮಾಲ/ಹೊಲೆಯ ಮತ್ತು ಸಂಬಂಧಿತ ಜಾತಿಗಳು.
3. ಲಮಾಣಿ–ಬಂಜಾರ.
4. ಕೊರಮ–ಕೊರಚ ಇತ್ಯಾದಿ.

ಮೇಲಿನ ಎರಡು ಗುಂಪುಗಳು (1&2) ಅಸ್ಪೃಶ್ಯ ಸಮುದಾಯಗಳಾದರೆ 3&4 ಸ್ಪೃಶ್ಯ ಸಮುದಾಯಗಳು. ಅಂಬೇಡ್ಕರ್ ಅವರು ಪ್ರತಿಪಾದಿಸುವಂತೆ ಮೀಸಲಾತಿಯ ಪ್ರಮುಖ ಆಧಾರ ಅಸ್ಪೃಶ್ಯತೆ. ಅಸ್ಪೃಶ್ಯತೆಯ ಜೊತೆ ಅಷ್ಟೇ ಸಮಾನವಾದ ಸಾಮಾಜಿಕ ಪಿಡುಗುಗಳಿಗೆ ಸಿಕ್ಕಿಕೊಂಡಿರುವ ಸಮುದಾಯಗಳನ್ನು ಪರಿಶಿಷ್ಟ ಜಾತಿಗಳ ಗುಂಪಿನಲ್ಲಿ ಸೇರಿಸಲಾಯಿತು. ಆರಂಭದ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಮಾದಿಗ, ಹೊಲೆಯ,

ಕೊರಮ, ಕೊರಚ ಮತ್ತು ಕೆಲವು ಅಲೆಮಾರಿ ಜಾತಿಗಳನ್ನು ಮಾತ್ರ ಸೇರಿಸಲಾಗಿತ್ತು. ಕಾಲಾಂತರದಲ್ಲಿ ಸ್ಪೃಶ್ಯ ಜಾತಿಯಾದ ಭೋವಿ ಮತ್ತು ಅಲೆಮಾರಿ ಸಮುದಾಯವಾದ ಲಮಾಣಿ-ಬಂಜಾರವನ್ನು ಪರಿಶಿಷ್ಟಜಾತಿಗೆ ಸೇರಿಸಲಾಯಿತು. ಕರ್ನಾಟಕವನ್ನು ಹೊರತುಪಡಿಸಿದರೆ ಭೋವಿ ಮತ್ತು ಲಮಾಣಿ ಜಾತಿಗಳು ಬೇರೆ ಯಾವ ರಾಜ್ಯದಲ್ಲೂ ಪರಿಶಿಷ್ಟಜಾತಿಯ ಪಟ್ಟಿಯಲ್ಲಿಲ್ಲ. ಅಸ್ಪೃಶ್ಯರಷ್ಟೇ ಆರ್ಥಿಕವಾಗಿ ಹಿಂದುಳಿದಿದ್ದರೂ ಪರಿಶಿಷ್ಟಜಾತಿಯ ಪಟ್ಟಿಯಲ್ಲಿ ಸೇರ್ಪಡೆಮಾಡುವ ಮೂಲಕ ಅಸ್ಪೃಶ್ಯ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ ಎಂಬ ದೂರು ಬಹಳ ವರ್ಷಗಳಿಂದ ಕೇಳಿಬರುತ್ತಲೇ ಇದೆ. ಆದರೆ ಸದ್ಯ ರಾಜಕೀಯ ಕಾರಣಗಳಿಂದ ಈ ಪಟ್ಟಿಯನ್ನು ಪರಿಷ್ಕರಿಸುವ ಧೈರ್ಯವನ್ನು ಯಾವ ಸರ್ಕಾರವೂ ಮಾಡಲಾಗದ ಸ್ಥಿತಿ ತಲುಪಿದೆ. ಕರ್ನಾಟಕದಲ್ಲಿ ಮೊದಲಿಗೆ ಮೀಸಲಾತಿ ವರ್ಗೀಕರಣ ಮಾಡಬೇಕೆಂದು ಕೇಳಲಾರಂಭಿಸಿದ್ದು ಮಾದಿಗ ಸಮುದಾಯ. ಇದನ್ನು ಕೇಳಲು ಅವರಿಗಿದ್ದ ಸಮರ್ಥನೆ ಕೆಳಗಿನಂತಿದೆ.

ಮಾದಿಗ ಸಮುದಾಯ ಜನಸಂಖ್ಯೆಯಲ್ಲಿ ಶೇ 57.28ರಷ್ಟಿದೆ(ಪ.ಜಾ) ನಮ್ಮ ಜನಸಂಖ್ಯೆ ಪ್ರಮಾಣಕ್ಕೆ ಸರಿಯಾಗಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪಾಲು ದೊರೆತಿಲ್ಲ. ಆದ್ದರಿಂದ ಈಗಿರುವ ಸ್ಥಿತಿಯಲ್ಲೇ ಮುಂದುವರಿದರೆ ನಮ್ಮ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಆಗುವುದಿಲ್ಲ. ಆದ್ದರಿಂದ ಒಳಮೀಸಲಾತಿ ಜಾರಿಗೊಳಿಸಿ ಎಂದು ಪ್ರತಿಪಾದಿಸಿದೆ. ಪರಿಶಿಷ್ಟಜಾತಿಯಲ್ಲೇ ಅತಿಹೆಚ್ಚು ಜನಸಂಖ್ಯೆ ಇರುವ ಸಮುದಾಯಕ್ಕೆ ಕೆಲವರಿಗೆ ಸಿಕ್ಕಿರುವ ಮೀಸಲಾತಿಯಲ್ಲಿ ಶೇ. 15ರಲ್ಲಿ ಸುಮಾರು ಶೇ. 8ರಷ್ಟು ಸಿಗಬೇಕಾಗಿತ್ತು ಆದರೆ ಶೇ 2ರಷ್ಟೂ ಸಿಕ್ಕಿಲ್ಲವಾದ ಕಾರಣ ನಮ್ಮ ಸಂವಿಧಾನಾತ್ಮಕ ಪಾಲು ದೊರೆತಿಲ್ಲ ಅದಕ್ಕಾಗಿ ಒಳಮೀಸಲಾತಿ ಜಾರಿಗೊಳಿಸಿ ಎಂದು ಒತ್ತಾಯಿಸುತ್ತಿದೆ.

ಶೈಕ್ಷಣಿಕವಾಗಿ ಕೂಡ ಗಣನೀಯ ಪ್ರಮಾಣದ ಅಕ್ಷರಸ್ಥರಿಲ್ಲ ಮತ್ತು ತೀವ್ರ ಶೈಕ್ಷಣಿಕ ಪ್ರಗತಿ ಸಾಧಿಸಿರುವ ಸಮುದಾಯಗಳ ಜೊತೆ ಸ್ಪರ್ಧಿಸಿ ವೃತ್ತಿಪರ ಶಿಕ್ಷಣ ಪಡೆಯುವುದು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಸಮಾನತೆ ಸಾಧಿಸಲು ಒಳಮೀಸಲಾತಿಯೇ ಸದ್ಯದ ಪರಿಹಾರವೆಂದು ಹೇಳಲಾಗುತ್ತಿದೆ.

ಮಾದಿಗ ಸಮುದಾಯ ವ್ಯವಸಾಯದ ಜೊತೆ ಚರ್ಮಗಾರಿಕೆ, ಪೌರಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಶ್ರಮಜೀವಿಗಳೂ ಅನಕ್ಷರಸ್ಥರೂ ಆಗಿರುವ ಈ ಸಮುದಾಯ ಪರಿಶಿಷ್ಟಜಾತಿಯ ಉಳಿದ ಸಮುದಾಯಗಳ ಜೊತೆ ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಸ್ಪರ್ಧಿಸುವುದು ಸಾಧ್ಯವಿಲ್ಲವೆಂದು ಪ್ರತಿಪಾದಿಸಿ ಪಾರಂಪರಿಕ ಕಾರಣಗಳನ್ನು ನೀಡಿದೆ.

ಸಂವಿಧಾನದ ಆಶಯದಲ್ಲಿ ಶೇ.15ರ ಪ್ರಮಾಣದಲ್ಲಿ ಮೀಸಲಾತಿ ನಿಗಧಿಮಾಡಿರುವುದು ಜನಸಂಖ್ಯೆ ಪ್ರಮಾಣದಲ್ಲಿ ಆದ್ದರಿಂದ ಅದೇ ಅನುಪಾತದಲ್ಲಿ ಜನಸಂಖ್ಯಾ ಆಧಾರಿತ ಒಳಮೀಸಲಾತಿ ಜಾರಿಗೊಳಿಸಿದರೆ ಯಾರಿಗೂ ಅನ್ಯಾಯವಾಗುವುದಿಲ್ಲ ಎಂದು ವಾದಿಸಿತು.

ಈ ಒಳಮೀಸಲಾತಿಯನ್ನು ವಿರೋಧಿಸುವ ಗುಂಪು ಇದನ್ನು ಮಾನವೀಯ ಅಂತಃಕರಣದಿಂದ ನೋಡದೆ, ತಾಂತ್ರಿಕ ಕಾರಣಗಳನ್ನು ನೀಡಿ ವಿರೋಧಿಸಲಾಗುತ್ತಿದೆ. ಕೆಲವರು ಇದನ್ನು ದಲಿತರ ಒಗಟ್ಟನ್ನು ಕೆಡಿಸುವ ರಾಜಕೀಯ ಕ್ರಮ ಎನ್ನುತ್ತಾರೆ. ಹಲವರು ಈ ಸಮುದಾಯಗಳ ಮಧ್ಯೆ ಹೇಳಿಕೊಳ್ಳುವಷ್ಟು ಅಂತರ ಇಲ್ಲವೆಂತಲೂ, ಇದನ್ನೂ ಕೆಲವು ಸ್ವಾರ್ಥ ರಾಜಕಾರಣಿಗಳು ಹುಟ್ಟುಹಾಕಿರುವ ತಂತ್ರವೆಂದು ಅಲ್ಲಗಳೆಯಲಾಗುತ್ತಿದೆ.

ಕರ್ನಾಟಕದಲ್ಲಿ 1975ರಿಂದ ಹುಟ್ಟಿಕೊಂಡ ದಲಿತ ಸಂಘರ್ಷ ಸಮಿತಿ ಸ್ವಲ್ಪಮಟ್ಟಿಗೆ ಅಸ್ಪೃಶ್ಯ ಸಮುದಾಯಗಳ ಮಧ್ಯೆ ತೋರಿಕೆಯ ಒಗ್ಗಟ್ಟನ್ನು ಸಾಧಿಸಲು ಯಶಸ್ವಿಯಾಗಿತ್ತು. ದಲಿತರೆಂದು ಕರೆಯುವ ಮೂಲಕ ಅಸ್ಪೃಶ್ಯರು ಮತ್ತು ಇತರೆ ಪರಿಶಿಷ್ಟಜಾತಿಯ ಜಾತಿಗಳೆಲ್ಲವೂ ದಲಿತರೆಂಬ ವಿಶಾಲ ಅರ್ಥದ ಪದವನ್ನು ಬಳಸುವ ಮೂಲಕ ಒಳಗುದಿಯನ್ನು ಅದುಮಿ ಇಡಲಾಗಿತ್ತು. ಸಂಘಟನೆ ಬಡ್ತಿ, ಉದ್ಯೋಗ, ಸವಲತ್ತುಗಳನ್ನು ಪಡೆಯಲು ಹೋರಾಟ ಮಾಡುವಾಗ ಯಾವ ಸಮುದಾಯಕ್ಕೆ ಸಿಗುತ್ತದೆನ್ನುವುದಕ್ಕಿಂತ ಪಡೆಯುವಲ್ಲಿ ಯಶಸ್ವಿಯಾಗಿದ್ದೇವೆಂಬ ಹೆಮ್ಮೆ ಇರುತ್ತಿತ್ತು. ಆದರೆ ಅಸಮಾನತೆಯ ಹೊಗೆಯೊಂದು ಒಳಗೊಳಗೆ ಬಿಸಿಯಾಗಿತ್ತು ಎಂಬ ಸತ್ಯವನ್ನು ಮರೆಮಾಚಲಾಗಿತ್ತು. ವಿದ್ಯಾವಂತ ಅಸ್ಪೃಶ್ಯರು ತಮ್ಮ ಸವಲತ್ತು ಬಡ್ತಿಗಾಗಿ ಒಂದಾಗಿ ಹೋರಾಡುತ್ತಿದ್ದರೂ, ಅನಕ್ಷರಸ್ಥ ಅಸ್ಪೃಶ್ಯರ ನಡುವಿನ ಜಾತಿಗಳ ಪ್ರತ್ಯೇಕತೆ ನಿರಂತರವಾಗಿ ಮುಂದುವರಿದಿತ್ತು. ಹೊಲೆಯ ಮತ್ತು ಮಾದಿಗ ಸಮುದಾಯಗಳ ನಡುವೆ ವಿವಾಹ ಸಂಬಂಧಗಳೇರ್ಪಡಲಿಲ್ಲ. ಒಟ್ಟಿಗೆ ಬಾಳುವ ಯಾವುದೇ ಸಂಬಂಧಗಳಿಲ್ಲದಿದ್ದರೂ, ಅವೆರಡು ಎರಡು ಪ್ರತ್ಯೇಕ ಜಾತಿಗಳಾಗಿದ್ದಾಗಲೂ ಒಂದೇ ಎಂಬ ಹುಸಿಭಾವನೆಯನ್ನು ಬಿತ್ತಲಾಗಿತ್ತು.

ದಲಿತ ಸಂಘರ್ಷ ಸಮಿತಿ ಜಾತಿ, ವ್ಯಕ್ತಿ ಪ್ರತಿಷ್ಠೆ, ಸ್ವಾರ್ಥದಿಂದ ಅನೇಕ ಗುಂಪುಗಳಾಗಿದ್ದಾಗಲೂ ಏಕತೆಯನ್ನು ಸಾಧಿಸಲಾಗದಿದ್ದರೂ, ಒಳಮೀಸಲಾತಿ ಪ್ರಶ್ನೆ ಬಂದಾಗ ಅಸ್ಪೃಶ್ಯ ಜಾತಿಗಳು ಒಂದು ಎಂಬ ಬಿತ್ತನೆ ಮಾಡಲಾಯಿತು. ಅಸ್ಪೃಶ್ಯರ ಒಗ್ಗಟ್ಟನ್ನು ಕಾಪಾಡಲು ಅವರಿಗೆ ಸಮಪಾಲು ನೀಡುವುದೇ ಪರಿಹಾರ ಎಂಬ ಪಾಠವನ್ನು ಎಲ್ಲ ಪ್ರಗತಿಪರರೂ ಒಪ್ಪುತ್ತಾರೆ. ಆಂಧ್ರಪ್ರದೇಶದಲ್ಲಿ ಮಾದಿಗರ ಒಳಮೀಸಲಾತಿ ಹೋರಾಟಕ್ಕೆ ಪ್ರಗತಿಪರ ಮೂಲ ಸಮುದಾಯದ ಗದ್ದರ್ ಮುಂತಾದವರು ಬೆಂಬಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯ ಒಂದು ಗುಂಪು ಅಂದರೆ ಶ್ರೀಧರ ಕಲಿವೀರ, ಜಯಣ್ಣ ಮುಂತಾದವರು ಒಳಮೀಸಲಾತಿ ಹೋರಾಟಕ್ಕೆ ಬೆಂಬಲಿಸಿದ್ದು ಅಪರೂಪದ ಘಟನೆ. ಆದರೆ ಕರ್ನಾಟಕದ ಪ್ರಸಿದ್ಧ ದಲಿತ ಲೇಖಕರು, ಚಿಂತಕರು, ವಿಚಾರವಂತರು ಇದರ ಬಗ್ಗೆ ಮೌನವಹಿಸಿದ್ದು ಇಲ್ಲವೇ ದಾರಿತಪ್ಪಿಸುವ ಹೇಳಿಕೆ ನೀಡಿದ್ದು ಇತಿಹಾಸದ ದಾಖಲೆಯಾಗಿದೆ.

ಈ ಸವಲತ್ತುಗಳನ್ನು ಪಡೆದಿರುವ ಸಮುದಾಯ ನಾವು ಹೆಚ್ಚು ಅಂಕ ಪಡೆದು ಉದ್ಯೋಗ ಪಡೆದಿದ್ದೇವೆ ಎಂಬ ವಾದವಂತೂ ಸಾಕ್ಷಾತ್ ಹಿಂದೂಗಳ ಜಾತಿ ಪರವಾದ ವಾದದಂತೆಯೇ ಕೇಳಿಸುತ್ತದೆ. ಕೆಲವರು ಮೀಸಲಾತಿಯೇ ಜಾಗತೀಕರಣದಿಂದ ಅಪ್ರಸ್ತುತವಾಗುತ್ತಿರುವಾಗ ಒಳಮೀಸಲಾತಿಗೇನು ಅರ್ಥವಿದೆಯೆಂಬ ಮೊಂಡುವಾದ ಮಾಡುತ್ತಿದ್ದಾರೆ.

ಆಂಧ್ರಪ್ರದೇಶದ ಮೀಸಲಾತಿ ವರ್ಗೀಕರಣದಲ್ಲಿ ಮಾದಿಗ ಮೂಲ, ಆದಿ ಆಂಧ್ರ ಮತ್ತು ರೆಲ್ಲಿ ಗುಂಪುಗಳನ್ನು ಮಾಡಿ ಪರಿಶಿಷ್ಟರಲ್ಲೇ ಅಲ್ಪಸಂಖ್ಯಾತರಾದ ದಕ್ಕಲರು, ಮಾಸ್ಟೀಕರು, ಚಿಂದೊಳ್ಳಿ ಮುಂದಾದ ಸಮುದಾಯಗಳಿಗೆ ಸಾಮೂಹಿಕ ನ್ಯಾಯ ನೀಡಿದ್ದನ್ನು ಕಾಣಬಹುದಾಗಿದೆ. ಆಂಧ್ರಪ್ರದೇಶದಲ್ಲಿ ಒಳಮೀಸಲಾತಿ ಜಾರಿಯಲ್ಲಿದ್ದ ಅವಧಿಯಲ್ಲಿ ಒಂದೂ ಉದ್ಯೋಗ ಸಿಗದಿದ್ದ ಅಲ್ಪಸಂಖ್ಯಾತ ಸಮುದಾಯಗಳಿಗೆ ಉದ್ಯೋಗ ಮತ್ತು ಇಂಜಿನಿಯರಿಂಗ್, ಮೆಡಿಕಲ್ ಸೀಟ್‌ಗಳು ಸಿಗಲಾರಂಭಿಸಿದವು. ಈ ಸತ್ಯವನ್ನು ತಿಳಿದಿರುವ ಮಾದಿಗ ಮತ್ತಿತರ ಸಮುದಾಯಗಳು ಒಳಮೀಸಲಾತಿಯನ್ನು ಜಾರಿಗೊಳಿಸದೆ, ಸಮಾನ ಬೆಳವಣಿಗೆ, ಸಮಾಜಿಕ ನ್ಯಾಯ ಸಾಧ್ಯವಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ. ಇದರಿಂದ ಅಪಸ್ವರ ಅನುಮಾನ, ದ್ವೇಷ ಹುತ್ತಗಟ್ಟುತ್ತಿದೆ. ಇದರ ಪರಿಣಾಮ ರಾಜಕೀಯ ಪಕ್ಷಗಳು ಬಳಸಿಕೊಳ್ಳುತ್ತಿವೆ. ಪರಿಶಿಷ್ಟ ಜಾತಿಯಲ್ಲಿರುವ ವಿವಿಧ ಜಾತಿಗಳನ್ನು ವಿಭಜಿಸುವ ಮೂಲಕ ಅಧಿಕಾರಕ್ಕೆ ಬರುವ ತಂತ್ರವನ್ನು ಕೋಮುವಾದಿ ಪಕ್ಷಗಳು ಬಳಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಜಾತ್ಯಾತೀತ ಪಕ್ಷಗಳು ಸತ್ಯಕ್ಕೆ ಕಿವುಡುತನ ಪ್ರದರ್ಶಿಸುವ ಮೂಲಕ ಪರಿಶಿಷ್ಟ ಜಾತಿಗಳ ಒಗ್ಗಟ್ಟು ಮತ್ತು ಸಾಮಾಜಿಕ ನ್ಯಾಯವನ್ನು ಏಕಕಾಲಕ್ಕೆ ತಿರಸ್ಕರಿಸುತ್ತಿವೆ.

ಆದ್ದರಿಂದ ಪ್ರಗತಿಪರ ಚಿಂತಕರು, ಎಲ್ಲ ದಲಿತರ ಹಿತೈಷಿಗಳು ಅವರ ಶ್ರೇಯೋಭಿವೃದ್ಧಿಯಲ್ಲಿ ಆಸಕ್ತಿಯಿದ್ದರೆ ಒಳಮೀಸಲಾತಿ ಪ್ರಶ್ನೆಯನ್ನು ಮುಕ್ತ ಮನಸ್ಸಿನಿಂದ ಚರ್ಚಿಸಬೇಕು. ಸೂಕ್ತ ಸಂವಿಧಾನಾತ್ಮಕ ಪರಿಹಾರವನ್ನು ಕಂಡುಕೊಳ್ಳಬೇಕು. ಅದರ ಮೂಲಕ ಪರಿಶಿಷ್ಟ ಜಾತಿಗಳ ಒಗ್ಗಟ್ಟನ್ನು ಕಾಪಾಡಬೇಕು. ಜಾತ್ಯಾತೀತ ರಾಜಕಾರಣದ ಕನಸು ಕಾಣುವ ಯಾರಾದರೂ ಸರಿ, ಪರಿಶಿಷ್ಟ ಜಾತಿಗಳ ಸಮಸ್ಯೆಗಳ ಬಗ್ಗೆ ಹಲವು ಕೋನಗಳಲ್ಲಿ ಗಮನಿಸಬೇಕು. ಎಲ್ಲ ರಾ .ಕೀಯ ಪಕ್ಷಗಳು ಜಾತಿ ಪ್ರಶ್ನೆಯನ್ನ ರಾಜಕೀಯಕ್ಕೆ ಬಳಸಿಕೊಳ್ಳುವುದು ಸಾಮಾನ್ಯವಾದದ್ದು. ಅವರು ಸಂತರಲ್ಲ ಸಂತರೇ, ಜಾತಿ ರಾಜಕಾರಣದ ದಾಳಗಳಾಗಿರುವ ಈ ಸಂದರ್ಭವನ್ನು ರಾಜಕೀಯ ಚಿಂತಕರು ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ. ಇಲ್ಲವಾದರೆ ಕೋಮುವಾದಿಗಳು ಅಧಿಕಾರ ಹಿಡಿಯಲು, ಮುಂದುವರೆಯಲು ಜಾತ್ಯಾತೀತರೇ ಕಾರಣರಾಗುತ್ತಾರೆ. ಇದು ಈವತ್ತಿನ ಸತ್ಯ.

ನಮ್ಮಲ್ಲಿ ಏನೇ ಸೌಲಭ್ಯ ಬಂದ್ರೂನು ಆಯಾಯ ಜಾತಿಗಳಲ್ಲಿರತಕ್ಕಂತಹ ಬಲಾಢ್ಯ ವ್ಯಕ್ತಿಗಳು ಕಿತ್ತುಕೊಳ್ಳುವಂತಹ ಪರಂಪರೆ ಬೆಳೆದುಕೊಂಡು ಬಂದುಬಿಟ್ಟಿದೆ. ಅಧಿಕಾರ ಒಂದು ಕಡೆ ಬ್ರಾಹ್ಮಣರಿಂದ ಶೂದ್ರರ ಕಡೆಗೆ ಬಂದಿತಾದರೂ ಶೂದ್ರರು ಅದನ್ನು ದಲಿತರಿಗೆ ಕೊಡೋಕೆ ರೆಡಿ ಇಲ್ಲ. ದಲಿತರಲ್ಲಿ **Left, Right** ಜನಾಂಗ ಅಲ್ಪ-ಸ್ವಲ್ಪ ಅಧಿಕಾರದ ರುಚಿ ನೋಡಿತು. ಆದರೆ ಅದನ್ನ ಅವರು ದಕ್ಕಲಿಗರಿಗೋ, ಮತ್ತೊಬ್ಬರಿಗೋ ಕಲ್ಪಿಸಿಕೊಡೋಕೆ ರೆಡಿ ಇಲ್ಲ. ಇದನ್ನು ನಾವು ನಿಭಾಯಿಸುವ ಜರೂರು ಇದೆ. ಆದ್ರೆ ನಮ್ಮಲ್ಲಿ ಪ್ರಬಲವಾಗಿ ಬೇರುಬಿಟ್ಟಿರುವ ಯೋಚನೆ ಅಂದ್ರೆ 'ಮೀಸಲಾತಿ'ಯ ಮೂಲಕವೇ ಎಲ್ಲವನ್ನೂ ಬಗೆಹರಿಸಲು ಪ್ರಯತ್ನಿಸೋದು. ನಾವು ಒಂದನ್ನ ಮರೆತು ಬಿಟ್ಟಿದ್ದೀವಿ- ಜಾತಿ ವಿನಾಶ ನಮಗೆ ಗುರಿಯಾಗಬೇಕೇ ಹೊರತು. ಜಾತಿಯನ್ನ ಮತ್ತೆ ಭದ್ರಕೋಟೆ ಮಾಡುವುದಲ್ಲ. ನಾವು ಮೀಸಲಾತಿಯ ಕನ್ನಡಕಗಳನ್ನು ಬಿಟ್ಟು ಹೊರಗಡೆ ನೋಡಲಿಕ್ಕೆ ಸಾಧ್ಯವಾಗದೇ ಹೋದರೆ, ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ. ಮೀಸಲಾತಿ ಒಂದು ಕನಿಷ್ಠ ಕಾರ್ಯಕ್ರಮ. ತತ್‌ಕ್ಷಣದಲ್ಲಿ ವಿದ್ಯಾ ಕ್ಷೇತ್ರದಲ್ಲಿ, ಉದ್ಯೋಗ ಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ, ಪ್ರಾತಿನಿಧ್ಯ ಕೊಡುವುದೇ ಅದರ ಗುರಿ. ಅಸಮಾನತೆಯನ್ನು ಹೋಗಲಾಡಿಸುವುದಾಗಲೀ, ದಾರಿದ್ರ್ಯವನ್ನು ತೊಡೆದುಹಾಕುವುದಾಗಲೀ, ಹಸಿವನ್ನ ಇಂಗಿಸುವುದಾಗಲೀ, ನಿರುದ್ಯೋಗ ನಿವಾರಣೆಯಾಗಲೀ ಮೀಸಲಾತಿಯ ಗುರಿಯಲ್ಲ.

ಸಂದರ್ಶನ:
ಇಂದೂಧರ ಹೊನ್ನಾಪುರ
ಡಾ॥ ಡಿ. ಡೊಮಿನಿಕ್
ಡಾ॥ ಸಿ.ಜಿ ಲಕ್ಷ್ಮೀಪತಿ



ಪ್ರಶ್ನೆ: ಸ್ವತಂತ್ರ ಭಾರತದಲ್ಲಿ ಮೀಸಲಾತಿಯನ್ನು ಹೇಗೆ ರೂಪಿಸಿದರು? ಯಾವ ಆಧಾರದ ಮೇಲೆ ಈ ಎಸ್‌ಸಿ/ಎಸ್‌ಟಿ ಜಾತಿಗಳ ಪಟ್ಟಿಯನ್ನು ಸಿದ್ಧಪಡಿಸಿದರು? ಅದಕ್ಕೆ ಇರುವ Guidelines ಏನು? ಸಂವಿಧಾನದಲ್ಲಿ ಅದಕ್ಕೆ ಮಾರ್ಗ ಸೂಚಿಗಳಿವೆಯಾ? ಅಡ್‌ಮಿನಿಸ್ಟ್ರೇಟಿವ್ ಆರ್ಡರ್ ಯಾವುವು? ಅದರಲ್ಲಿ ಏನೇನು ಅಂಶಗಳಿವೆ? ಈ ಪ್ರಶ್ನೆಗಳಿಗೆ ನಿಮ್ಮ ಪ್ರತಿಕ್ರಿಯೆ ವಿವರವಾಗಿಯೇ ಬೇಕು.

ಆ ಲೋಕಲ್ ಬಾಡಿಗೆ, ಪ್ರಥಮ ಪ್ರಜೆಯಾಗುವಂತಹ ಅವಕಾಶವನ್ನು ಸಂವಿಧಾನದ ತಿದ್ದುಪಡಿಯ ಮೂಲಕ ನೀಡಲಾಗಿದೆ. ಇದೊಂದು ಗುಣಾತ್ಮಕವಾಗಿ ಬಹಳ ವಿಶೇಷವಾದ ಸಾಮಾಜಿಕ ನ್ಯಾಯ. ಸ್ಥಳೀಯ ಸಂಸ್ಥೆಗಳಲ್ಲಿ ವ್ಯಕ್ತವಾಗಿರುವುದೇನೆಂದರೆ ಕೇವಲ ದಲಿತರು ಮತ್ತು ಆದಿವಾಸಿಗಳಿಗೆ ಮಾತ್ರ ಮೀಸಲಾತಿಯನ್ನು ಸೀಮಿತ ಗೊಳಿಸದೆ, ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕೂಡ ಕಲ್ಪಿಸುವ ಒಂದು ಕಾಯ್ದೆ

ಸಂವಿಧಾನ ತಜ್ಞ ಪ್ರೊ॥ ರವಿವರ್ಮ ಕುಮಾರ್ ಸಂದರ್ಶನ

ಮೀಸಲಾತಿ ಒಂದು ಕನಿಷ್ಠ ಕಾರ್ಯಕ್ರಮ; ಪ್ರಾತಿನಿಧ್ಯ ಕೊಡುವುದಷ್ಟೇ ಅದರ ಗುರಿ

ಪ್ರೊ॥ ರವಿವರ್ಮ ಕುಮಾರ್: ಭಾರತದ ಸಂವಿಧಾನದಲ್ಲಿ ಸ್ಥೂಲವಾಗಿ ಮೂರು ಬಗೆಯ ಮೀಸಲಾತಿಗಳನ್ನು ನಾವು ಗಮನಿಸಬಹುದಾಗಿದೆ: ಮೊದಲನೇ ಮೀಸಲಾತಿ ರಾಜಕೀಯ ಕ್ಷೇತ್ರದಲ್ಲಿ; ಎರಡನೇ ಮೀಸಲಾತಿ ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ಮೂರನೇ ಮೀಸಲಾತಿ ಉದ್ಯೋಗದಲ್ಲಿ. ಮೊದಲನೇ ಮೀಸಲಾತಿ ಪ್ರಾರಂಭಿಕವಾಗಿ ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಪರಿಚ್ಛೇದ 330 ಮತ್ತು 332ರ ಪ್ರಕಾರ ಕೊಡಲಾಗಿತ್ತು. ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ನಂತರ ಸ್ಥಳೀಯ ಸಂಸ್ಥೆಗಳಲ್ಲಿ, ಅಂದರೆ ಕಾರ್ಪೋರೇಷನ್, ಮುನ್ಸಿಪಾಲಿಟಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪರವಾಗಿ ಮೀಸಲಾತಿ ನೀಡಲಾಗಿದೆ. ಗುಣಾತ್ಮಕವಾಗಿ ಸ್ಥಳೀಯ ಸಂಸ್ಥೆಗಳಲ್ಲಿ ಕೊಟ್ಟಿರುವಂತಹ ಮೀಸಲಾತಿ ಲೋಕಸಭೆ ಮತ್ತು ವಿಧಾನಸಭೆ ಮೀಸಲಾತಿಗಳಿಗಿಂತ ಹೆಚ್ಚು ಪ್ರಬುದ್ಧವಾದಂತಹದ್ದು.

ಅಂದರೆ ಮೀಸಲಾತಿಯನ್ನು ಕೇವಲ ಸದಸ್ಯತ್ವದಲ್ಲಿ ಮಾತ್ರ ಕೊಟ್ಟಿಲ್ಲ–ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಕೊಟ್ಟ ಹಾಗೆ. ಇಲ್ಲಿ, ಒಂದುಹೆಜ್ಜೆ ಮುಂದೆ ಹೋಗಿ ಅಧ್ಯಕ್ಷರು, ಉಪಾಧ್ಯಕ್ಷರು, ಮೇಯರ್ ಮತ್ತು ಉಪಮೇಯರ್–ಈ ಸ್ಥಾನಗಳಲ್ಲೂ ಕೂಡ ಮೀಸಲಾತಿಯನ್ನು ಕೊಡುವುದರ ಮೂಲಕ, ಪವಾಡ ಸದೃಶ್ಯವಾದಂತಹ ಸಾಮಾಜಿಕ ನ್ಯಾಯವನ್ನು ಸ್ಥಳೀಯ ಸಂಸ್ಥೆಗಳಲ್ಲಿ ಒದಗಿಸಲಾಗಿದೆ. ವಿಧಾನಸಭೆ ಮತ್ತು ಲೋಕಸಭೆಯಲ್ಲಿ ಕೊಟ್ಟಿರುವಂತಹ ಮೀಸಲಾತಿಯಿಂದ ಸರ್ವಕಾಲಕ್ಕೂ ದಲಿತರು ಕೇವಲ ಸದಸ್ಯತ್ವಕ್ಕೆ ಮಾತ್ರ ಸೀಮಿತವಾಗಿರುತ್ತಾರೆಯೇ ಹೊರತು, ಅಧಿಕಾರ ಹಿಡಿಯುವಲ್ಲಿ ಸಫಲರಾಗುವುದಿಲ್ಲ. ಮತ್ತೇ ಅಲ್ಲಿ ಕೊಟ್ಟಿರುವಂತಹ ಮೀಸಲಾತಿ–ಅದರಲ್ಲಿ ವಿಶೇಷವಾಗಿ ಅಂಬೇಡ್ಕರ್‌ರವರ ಪ್ರತ್ಯೇಕ ಮತದಾನದ ವ್ಯವಸ್ಥೆ ಫೇಲ್ ಆದ ನಂತರ ಬಹಳ ದೊಡ್ಡ ಅನಾಹುತ ಆಗಿದೆ. ಅದೇನೆಂದರೆ ಹಿಂದೆ ಒಬ್ಬರು ಮೌರ್ಯ ಅಂತ ಕೇಂದ್ರ ಸಚಿವರಾಗಿದ್ದರು. ಅವರು ಒಂದು ಮಾತು ಮಾರ್ಮಿಕವಾಗಿ ಹೇಳ್ತಾರೆ, "ನಾನು ಅಂದು ದೊರೆತ ಮೀಸಲಾತಿಯ ಮೂಲಕ ದಲಿತರಿಗೆ ಒಂದು ಧ್ವನಿಯಾಗಿ ಲೋಕಸಭೆಯಲ್ಲಿ ಕೆಲಸ ಮಾಡ್ತಿನಿ ಅಂದುಕೊಂಡಿದ್ದೆ. ಆದರೆ ಈಗ ಮೂರು–ನಾಲ್ಕು ಸಲ, ಚುನಾವಣೆ ಮೂಲಕ ಆಯ್ಕೆಯಾದ ನಂತರ, ನನಗೆ ಈಗ ಅನಿಸುತ್ತಿದೆ–ನಾವು ದಲಿತರ ಧ್ವನಿಯಾಗುವುದರ ಬದಲು, ಸರ್ಕಾರದ ಧ್ವನಿಯಾಗಿ ಪರಿವರ್ತಿತವಾಗಿದ್ದೇವೆ." ಇದು ಬಹಳ ಮಾರ್ಮಿಕವಾಗಿ ಹೇಳಿದ್ದಾಗಿದೆ.

ಆದರೂ ಕೂಡ ಸ್ಥಳೀಯ ಸಂಸ್ಥೆಗಳಲ್ಲಿ ಕೊಟ್ಟಿರುವಂತಹದ್ದು ಒಂದು ವಿಭಿನ್ನವಾದ ಮೀಸಲಾತಿ. ಅದರ ವೈಶಿಷ್ಟ್ಯತೆ ಇರುವುದು–ಒಬ್ಬನೇ ಒಬ್ಬ ಸದಸ್ಯ ಇದ್ದರೂ ಕೂಡ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಯ ಅಥವಾ ಗ್ರಾಮ ಪಂಚಾಯತಿಯ ಅಥವಾ ಒಂದು ಕಾರ್ಪೋರೇಷನ್ ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷತೆಯ ಮೂಲಕ ಇಡೀ 73 ಮತ್ತು 74ನೇ ತಿದ್ದುಪಡಿಗಳು ಮಾಡಿವೆ. ಅಧ್ಯಕ್ಷತೆ ಮತ್ತು ಅಧಿಕಾರ ಹಿಡಿಯುವಂತಹ ಸನ್ನಿವೇಶದಲ್ಲೂ ಕೂಡ ಅದನ್ನು ಮಾಡಲಾಗಿದೆ. ಇದು ಬಹಳ ಮುಖ್ಯವಾದಂತಹ ಒಂದು ಬೆಳವಣಿಗೆ.

ಸಂದರ್ಶನ

ಪ್ರಶ್ನೆ: ತಮಿಳುನಾಡಿನಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ದಲಿತರು ಅಧ್ಯಕ್ಷರಾಗುವ ಸಂದರ್ಭ ಬಂದಾಗೆಲ್ಲಾ, ಅನೇಕ ಕಡೆ ಸ್ಥಾನಗಳೆಲ್ಲಾ ಖಾಲಿ ಉಳಿದಿವೆ; ಯಾರು ಅಧ್ಯಕ್ಷರಾಗದೆ ಇರುವಂತಹ ಪರಿಸ್ಥಿತಿ ಇದೆ. ಅದನ್ನು ಹೇಗೆ ನಿಭಾಯಿಸೋದು?

ಪ್ರೊ॥: See, ಮೀಸಲಾತಿಯನ್ನು ಕೊಡಬಹುದೇ ಹೊರತು, ನೀವಾಗಿಯೇ ಅಧ್ಯಕ್ಷ ಸ್ಥಾನವನ್ನು ಏರಲಿಕ್ಕೆ ಬರೋದಿಲ್ಲ. ಮೀಸಲಾತಿ ಒಂದು ಸ್ಥಾನ ಕಲ್ಪಿಸುತ್ತದೆ. ಒಬ್ಬ ಅಭ್ಯರ್ಥಿ ಆ ಅವಕಾಶವನ್ನೇ ಬಳಸಿಕೊಳ್ಳಬೇಕು. ಎಲ್ಲಿಯವರೆಗೆ ಯಾರು ಮೀಸಲಾತಿಯ ಫಲಾನುಭವಿಗಳಿದ್ದಾರೋ ಅವರು ಮೀಸಲಾತಿಯ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕೆ ಮುಂದೆ ಬರುವುದಿಲ್ಲವೋ ಅಲ್ಲಿಯವರೆಗೆ ಅದು ಸಾಧ್ಯವಾಗುವುದಿಲ್ಲ. ನಾನಾ ರೀತಿಯಿಂದ ಅಡೆತಡೆಗಳು ಬರುತ್ತವೆ ನಿಜ–ಒಂದು ಮೇಲು ಜಾತಿಯವರ ಭಯ ಇರಬಹುದು. ಈಗ ಉದ್ಯೋಗದಲ್ಲಿ ಯಾರೂ ಶಿಕ್ಷಣ ಪಡೆಯದಿದ್ದರೆ ಮೀಸಲಾತಿ ಸಿಕ್ಕಲ್ಲ. ಇಂದಿಗೂ PUCನೇ ಪಾಸ್ ಮಾಡಿಲ್ಲದೇ ಇರುವ ಎಷ್ಟು ಸಮುದಾಯಗಳಿವೆ! ಆದ್ದರಿಂದ ಮೀಸಲಾತಿ ಕೊಡುವ ಪರಿಪಾಠ ಬೇರೆ. ಅದರ ಫಲವನ್ನು ಅನುಭವಿಸುವುದು ಬೇರೆ. ಇನ್ನೊಂದು ವಿಷಯ, ಅದು ಖಂಡಿತವಾಗಿಯೂ ಪ್ರದೇಶದಿಂದ ಪ್ರದೇಶಕ್ಕೆ, ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತದೆ.

ತಮಿಳುನಾಡಿನಲ್ಲಿ Intermediate Castes ಹೆಚ್ಚು ಪ್ರಬಲವಾಗಿವೆ. ಸುಮಾರು 100 ವರ್ಷದ ಬ್ರಾಹ್ಮಣೇತರ ಚಳವಳಿಯಲ್ಲಿ Intermediate Casteಗಳು ಬಹಳ ಪ್ರಬುದ್ಧಕ್ಕೆ ಬಂದವು. ಆದರೆ ಬಹಳ ಬಲಾಢ್ಯ ಸಮುದಾಯಗಳ\ಪ್ರಾತಿನಿಧ್ಯ ಬಂದಾಗ ಅವರ ಸಂಖ್ಯೆ ಹೆಚ್ಚು ಇರುವುದರಿಂದ ಅವರ ಪ್ರಾಬಲ್ಯ ಜಾಸ್ತಿ ಇರುತ್ತದೆ. ಏಕೆಂದರೆ by their number power they also interfere in political parties. ಈಗ ಕರ್ನಾಟಕದಲ್ಲೇ ತೆಗೆದುಕೊಳ್ಳಿ... ವೀರಶೈವರ Population 15%, ಒಕ್ಕಲಿಗರದ್ದು 11 ಅಥವಾ 12% ಇದೆ. ಆದರೆ ಅವರು ರಾಜಕೀಯ ಕ್ಷೇತ್ರದಲ್ಲಿ ಪಡೆದಿರುವ ಅವಕಾಶಗಳು ಮತ್ತು ಅಧಿಕಾರ, ಶೇ.15% ಇರುವ Schedule casteಗೆ ಇಲ್ಲ. ಮುಸ್ಲಿಮರು 13% ಇದ್ದರೂ ಇಲ್ಲ! ಶೇ 8ರಷ್ಟಿರುವ ಆದಿವಾಸಿಗಳಿಗೂ ಸಿಕ್ಕಿಲ್ಲ. ಆದರೆ, ಇಂದು ನನ್ನ ಅಭಿಪ್ರಾಯದಲ್ಲಿ ಆದಿವಾಸಿಗಳಿಗೆ ಒಂದು ಅಭೂತಪೂರ್ವವಾದ ಅವಕಾಶ ಒದಗಿ ಬಂದಿದೆ. Delimitation of constitue[illegible]ಯ ನಂತರ 15 ಕ್ಷೇತ್ರಗಳನ್ನು ವಿಧಾನಸಭೆಯಲ್ಲಿ Reserve ಮಾಡಲಾಗಿದೆ. ಕರ್ನಾಟಕದಲ್ಲಿ ಆದಿವಾಸಿಗಳಿಗೆ ಮೊಟ್ಟ ಮೊದಲಬಾರಿಗೆ ಸಿಕ್ಕಿರುವಂತಹ ಅವಕಾಶ ಇದು. ಆದಿವಾಸಿಗಳಲ್ಲಿ ಸಮಾನತೆ ಬಹಳ ಕಡಿಮೆ. ಬಹುಶಃ ಯಾವುದೇ ಕ್ಷೇತ್ರದಲ್ಲಿ ಇತರಕ್ಕಿಂತಹ ಅಸಮಾನತೆಗಿಂತಲೂ

ಆದಿವಾಸಿಗಳಲ್ಲಿ ಇರತಕ್ಕಂತಹ ಅಸಮಾನತೆ ಹೆಚ್ಚು. Majority of the tribes have no capacity to utilize political opportunities. ಆದ್ದರಿಂದ ಆದಿವಾಸಿಗಳ ಒಂದು ವರ್ಗ ಇಂದು ಬಹಳ ಪ್ರಬಲವಾಗಿ ಅಲ್ಲಿ ಕಾಣಿಸುತ್ತದೆ.

ಪ್ರಶ್ನೆ: ಇವತ್ತು ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯಲ್ಲಿರೋ ಸಮುದಾಯಗಳ ನಡುವೆ ದ್ವೇಷ ಬೆಳೆಯುತ್ತಿದೆ. ಪರಸ್ಪರ ಕೊಲ್ಲುವಷ್ಟರ ಮಟ್ಟಕ್ಕೆ ಹೋಗುತ್ತಿದ್ದಾರೆ. ಈ ಸಮಸ್ಯೆಯನ್ನು ನಮ್ಮ ಬುದ್ಧಿ ಜೀವಿಗಳಾಗಲೀ, ಚಳವಳಿಗಾರರಾಗಲೀ. ಇತರರಾಗಲೀ Open mindನಿಂದ Address ಮಾಡುತ್ತಾ ಇಲ್ಲ! ಎಲ್ಲ ಗೊತ್ತಿದ್ದರೂ ಮೌನವಾಗಿರುವ ಜಾಣತನವನ್ನ ತೋರಿಸ್ತಾ ಇದ್ದಾರೆ. ಇದನ್ನು ಹೇಗೆ ನಾವು ಬಗೆಹರಿಸಿಕೊಳ್ಳೋದು? ಬೆಳೆತಿರೋ ದ್ವೇಷನಾ ಕಡಿಮೆ ಮಾಡೋದು ಹೇಗೆ?.

ಪ್ರೊ: ಈ ವಿಚಾರವನ್ನು ನಾವು ಗಂಭೀರವಾಗಿಯೇ ಪರಿಗಣಿಸಬೇಕಾಗುತ್ತದೆ. ಕರ್ನಾಟಕದಲ್ಲಿ 101 ಪರಿಶಿಷ್ಟ ಜಾತಿಗಳಿವೆ. ಈ 101 ಜಾತಿಗಳನ್ನು ಸಮಾನ ದೃಷ್ಟಿಯಲ್ಲಿ ನೋಡಲಾಗುತ್ತದೆಯೇ ಹೊರತು, ಅವರ ನಡುವೆ ಇರತಕ್ಕಂತಹ ಅಸಮಾನತೆಯನ್ನು ಇದುವರೆಗೂ ಗುರುತಿಸಿಲ್ಲ. ಗುಣಾತ್ಮಕವಾಗಿ ಮತ್ತು ಸಂಖ್ಯಾತ್ಮಕವಾಗಿ ಗುರುತಿಸುವಲ್ಲಿ ಬಹಳ ದೊಡ್ಡ ಕಂದಕ ಇದೆ. ಒಂದೊಂದು ಜಾತಿಯ ನಡುವೆಯೂ ಅಸಮಾನವಾದ ನೆಲೆಗಳು ಇವೆ. ಅಸ್ಪೃಶ್ಯ ಜನಾಂಗಗಳಿಗೆ ಬಂದರೆ ಅಲ್ಲಿ ಕೂಡಾನು ಸಮಾನತೆ ಇಲ್ಲ. ಜಾತಿಯನ್ನು ಶೋಷಣೆ ಮಾಡಿಕೊಂಡು ಮುಂದುವರೆಯುವುದಕ್ಕೆ ಅವಕಾಶ ಮಾಡಿಕೊಟ್ಟಿದೆ.

ಈಗ ಕಾಡಿನಲ್ಲಿ ಹೋದರೆ ನಿಮಗೆ ಆಶ್ಚರ್ಯ ಆಗಬಹುದು! ಒಂದು ಪ್ರಾಣಿ ಇನ್ನೊಂದು ಪ್ರಾಣಿಯನ್ನು ತಿಂದು ಬದುಕುವುದು. ಆ ಪ್ರಾಣಿ ಮತ್ತೊಂದು ಪ್ರಾಣಿಯನ್ನು ಅದು ಹೀನಾಯ ಸ್ಥಿತಿಯಲ್ಲಿರುವುದನ್ನು ಲೆಕ್ಕಿಸದೆ ತಿನ್ನುತ್ತದೆ. ಅದಕ್ಕಿಂತ ಕೆಳಗೆ ಇರುವ ಪ್ರಾಣಿ ಹುಳ ಹುಪ್ಪಡಿಗಳನ್ನು ತಿನ್ನುತ್ತದೆ. ಹುಲಿ ಸಿಂಹಗಳಿಂದ ಹಿಡಿದು–ಹುಳ ಹುಪ್ಪಡಿಗಳವರೆಗೆ ಈ ತರಹದ ಒಂದು ಸರಣಿಯನ್ನು ನಾವು ನೋಡುತ್ತೇವೆ. ನಮ್ಮ ಜಾತಿ ವ್ಯವಸ್ಥೆಯಲ್ಲಿಯೂ ಕೂಡ ಅಂಥದೇ ಒಂದು ಪರಿಪಾಠವನ್ನು ನಾವು ಕಾಣ್ತೇವೆ. ಅಂದ್ರೆ ಯಾವ ಸನ್ನಿವೇಶದಲ್ಲೂ ಕೂಡ ಶೋಷಣೆಗೆ ಒಳಪಟ್ಟವರು, ಶೋಷಣೆ ಮಾಡುವ ಜಾತಿಯ ವಿರುದ್ಧ ಸೆಟೆದು ನಿಂತಿದ್ದು ಇಲ್ಲ. ಬದಲಾಗಿ ಶೋಷಣೆ ಮಾಡಿದ ಜಾತಿ ಮಾದರಿಯಾಗಿ, ಇನ್ನೊಂದು ಜಾತಿಯನ್ನೂ ಕೆಳಗೆ ತಳ್ಳಲಾಗುತ್ತದೆ. ಹಾಗಾಗಿ ಇಡೀ ಜಾತಿ ವ್ಯವಸ್ಥೆ ಅಂಬೇಡ್ಕರ್ ಹೇಳಿದಂತೆ, It is an ascending order of reverence & Descending order of contempt. Ascending order ಅಂದರೆ ಏರುತ್ತಾ ಹೋದಂತೆ ಗೌರವ ಹೆಚ್ಚಾಗುತ್ತಾ ಹೋಗುತ್ತದೆ ಮತ್ತು ಇಳಿಯುತ್ತಾ ಬಂದಂತೆ, ದ್ವೇಷ, ಅಸೂಯೆ, ಮತ್ಸರ, ಅಸಹನೆ ಜಾಸ್ತಿ ಆಗುತ್ತಾ ಹೋಗುತ್ತದೆ. That is one way

ಪ್ರಶ್ನೆ : ಈಗ ಈ ದಕ್ಕಲಿಗರಿಗೂ ಈ ಸೌಲಭ್ಯ ಸಿಕ್ಕಬೇಕು ಅಂತ ಒಬ್ಬನೇ ಒಬ್ಬನು ಪ್ರಯತ್ನ ಮಾಡ್ತಾ ಇಲ್ಲವಲ್ಲ. ಯಾಕೆ?

ಪ್ರೊ: "ಯಾಕೆ ಅಂತ ಅಂದರೆ ದಕ್ಕಲಿಗರಿಗೆ ಎಷ್ಟು ಓಟಗಳು ಇದ್ದಾವೆ? 423ರಲ್ಲಿ ಒಂದು 100 ಓಟು ಇದ್ದಾವಾ... 150 ಓಟು ಇದ್ದಾವಾ... ಅವನ್ನು ತಗೊಂಡು ಏನ್ಮಾಡ್ತೀರಾ? ದಕ್ಕಲಿಗರ ಓಟು ಉಪಯೋಗ ಇಲ್ಲವಲ್ಲ. **Democracy** ನಲ್ಲಿ ಇವತ್ತು ಓಟು ಎಷ್ಟು ಪ್ರಧಾನವಾಗಿದೆ, ಅಂದರೆ, ಓಟು ಇಲ್ಲದೆ ಇರುವವರಿಗೆ ಯಾರು ಗಮನ ಕೊಡ್ತಾರೆ?



ಬಹಳ ದೊಡ್ಡ ಕಂದಕ ಇದೆ. ಒಂದೊಂದು ಜಾತಿಗಳ ನಡುವೆ ಉದಾ: ಎಡಗೈ ಜಾತಿಯ ಜನಗಳ ಮೇಲೆ ಬಲಗೈ ಜಾತಿಯವರು ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ ಅನ್ನುವ ಆರೋಪ ಇದೆ. ಅಂದರೆ ಇದು ಇಲ್ಲಿಗೆ ನಿಲ್ಲೋದಿಲ್ಲ. ಇದು ಜಾತಿವ್ಯವಸ್ಥೆಯ ಒಂದು ಬಹಳ ದೊಡ್ಡ ದುರಂತ.

ಅದರಲ್ಲೂ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ದಲಿತ ಸಮುದಾಯಗಳಲ್ಲೇ ಸ್ಪೃಶ್ಯರಾದವರನ್ನು ಗುರುತಿಸಿ, ಅವರನ್ನು ಅಸ್ಪೃಶ್ಯಜಾತಿಗಳ ವಿರುದ್ಧ ನಿಲ್ಲುವಂತೆ ತಂತ್ರವನ್ನು ಹೆಣೆಯಲಾಗಿದೆ. ಇದನ್ನು ಅರಿಯದೆ ಬರೀ ಮೀಸಲಾತಿಯನ್ನು ಮಾತ್ರ ಚರ್ಚಿಸುತ್ತಿದ್ದರೆ ನಾವು ಗುರಿ ತಪ್ಪುತ್ತಿದ್ದೇವೆ ಅನಿಸುತ್ತೆ. ಹೌದಲ್ಲವೇ! ಅಂದರೆ ಜಾತಿವ್ಯವಸ್ಥೆಯ ನೀತಿ ಹೇಗಿದೆ ಎಂದರೆ, 'It is always one way traffic'. ಒದೆಯುವುದು ಮೇಲಿನಿಂದ ಕೆಳಕ್ಕೆ ಹೊರತು, ಕೆಳಗಿನಿಂದ ಮೇಲಕ್ಕೆ ಒದ್ದ ನಿದರ್ಶನವೇ ಇಲ್ಲಿ ಇಲ್ಲ. ಅದು ಸಾಧ್ಯವೂ ಇಲ್ಲ. ಯಾಕೆ ಅದು ಸಾಧ್ಯವಿಲ್ಲವೆಂದರೆ, ಜಾತಿ ವ್ಯವಸ್ಥೆಯಲ್ಲಿ ಕೃಷಿ ಕಾರ್ಮಿಕನನ್ನು ಕೆಳಗೆ ಒದೀಲಿಕ್ಕೆ ಇನ್ನೊಂದು ಜನಾಂಗವನ್ನು ಸೃಷ್ಟಿ ಮಾಡಲಾಗಿದೆ. ಶೋಷಣೆ ಮಾಡುವ ಬ್ರಾಹ್ಮಣರಿಂದ ಹಿಡಿದು ಭಂಗಿಗಳವರೆಗೆ ಈ ಶ್ರೇಣೀಕೃತ ಸಮಾಜದಲ್ಲಿ ಎಷ್ಟು ವ್ಯವಸ್ಥಿತವಾಗಿ ಇದನ್ನು ಅಡಕ ಮಾಡಲಾಗಿದೆಯೆಂದರೆ–ಒಂದು ಜಾತಿ ಇನ್ನೊಂದು traffic! This is never been reversed. ಅಸ್ಪೃಶ್ಯತೆ Abolish ಮಾಡ್ತಾನೂ Reverse ಆಗ್ಲಿಲ್ಲ. ಸಮಾನತೆಯನ್ನು ತಂದು ಕೊಟ್ಟಾಗಲೂ Reverse ಆಗ್ಲಿಲ್ಲ. ಯಾವ ರೀತಿ ಜಾತಿ ವ್ಯವಸ್ಥೆ ತನ್ನ ಕಪಿಮುಷ್ಟಿಯನ್ನು ಇನ್ನೂ ಭದ್ರವಾಗಿ ಚಾಲನೆಯಲ್ಲಿಟ್ಟದೆ ಎನ್ನುವುದಕ್ಕೆ ಒಂದು ಉದಾಹರಣೆ – ಈ 101 ಸಮುದಾಯಗಳನ್ನು ಅಂತ ಏನು ಗುರುತಿಸುತ್ತೇವೋ ಅವುಗಳ ಮಧ್ಯನೇ ಒಂದು ಅಸಮಾನತೆ ಇದೆ. ಅಲ್ಲಿನೂ ಶೋಷಣೆ ನಡಿತಾ ಇದೆ.

ಪ್ರಶ್ನೆ: ಹಾಗಾದ್ರೆ SC/ST ಸಮುದಾಯಗಳನ್ನ ಇಲ್ಲಿ ತನಕ Proper ಆಗಿ ಗುರುತಿಸಲಿಲ್ಲ ಅಂತ ನೀವು ಹೇಳ್ತಾ ಇದ್ದೀರಿ ಅನ್ಸುತ್ತೆ. ಹಾಗಾದ್ರೆ ಅದನ್ನ ಸರಿಯಾಗಿ ಗುರುತಿಸಿ ಸರಿಪಡಿಸುವ ವಿಧಾನಗಳು ಯಾವುವು?

ಪ್ರೊ: ನಾನು ಒಂದು simple ಆದ ಉದಾಹರಣೆ ಕೊಡ್ತೀನಿ–ಈಗ 101 ಜಾತಿಗಳಲ್ಲಿ ಸ್ಪೃಶ್ಯರು ಅಸ್ಪೃಶ್ಯರು, ಅಸ್ಪೃಶ್ಯರ ನಡುವೆ ಬಂದರೆ ಬಲಗೈ, ಕೆಳಗಡೆ ಎಡಗೈ, ಎಡಗೈಗಿನ್ನ ಕೆಳಗಡೆ ಬರುವವರು ದಕ್ಕಲಿಗರು ಇದ್ದಾರೆ. ಈ ದಕ್ಕಲಿಗರಿಗಿನ್ನ ಹೀನಾಯವಾಗಿ ಇರುವವರು ಅಂದರೆ ಅಲೆಮಾರಿಗಳು. ಅಲೆಮಾರಿ ಜನಾಂಗಗಳು ತೀವ್ರವಾದ ಅಸ್ಪೃಶ್ಯತೆಯನ್ನು ಅನುಭವಿಸುತ್ತಿವೆ. ನಿಲ್ಲಲಿಕ್ಕೆ ಒಂದು ಜಾಗವಿಲ್ಲದೆ, ನೆಲೆ ಇಲ್ಲದೆ, ಬದುಕುತ್ತಿವೆ. ಅವು ಅಳಿವಿನ ಅಂಚಿನಲ್ಲಿರುವ ಸಮುದಾಯಗಳು ಅಂತ

ಹೇಳಬಹುದು. ಸಿಳ್ಳೆಕ್ಯಾತ, ಹಕ್ಕಿ–ಪಿಕ್ಕಿ, ಹಂದಿ ಜೋಗಿ, ಹಂಡಿ ಜೋಗಿ ಮುಂತಾದವರು ಇದ್ದಾರೆ. ಹಂದಿ ಜೋಗಿ ಹಂದಿ ಸಾಕುವ ಕೆಲಸ ಮಾಡಿದರೆ, ಹಂಡಿ ಜೋಗಿಯವರು ಬರೀ ತಂಬೂರಿ ಹಿಡ್ಕೊಂಡು ಮಹಾಭಾರತದ ಕಥೆಗಳನ್ನ ಹಾಡಿಕೊಂಡು ಹೋಗ್ತಾರೆ. ಕಿಂದರಿಜೋಗಿಗಳು, ಬುಡಬುಡಕೆಯವರು, ಬೈಲಪತ್ತರ್, ಮುಂತಾದವರು, ನಮಗೆ ಆಶ್ಚರ್ಯ ಆಗ್‌ಬಿಡ್ತು, ಇವರೆಲ್ಲಾ ಇನ್ನುವೇ ತಮ್ಮ ಪ್ರಭೇದಗಳನ್ನ ಉಳಿಸಿಕೊಂಡು ಸಾಗಿದ್ದಾರೆ. ಅವರು ಅಳಿವಿನ ಅಂಚಿನಲ್ಲೇ ಸುತ್ತಾಡಿಕೊಂಡು ಗಿರಕಿಹೊಡಿತಾ ಇದ್ದಾರೆ. ಕರಡಿ ಕಲಂದರು ಅಂತ ಮುಸ್ಲಿಂ ಅಲೆಮಾರಿ ಸಮುದಾಯವೊಂದಿದೆ. ಅವರ ವೃತ್ತಿ ಕುಲಕಸುಬುಗಳು ಏನಿವೆ ಅವೆಲ್ಲಾ ಈಗ ನಾಶ ಆಗಿಬಿಟ್ಟಿವೆ.

ಹಕ್ಕಿ–ಪಿಕ್ಕಿಯವರು ಇವತ್ತು ಕಾಡಿನಲ್ಲಿಲ್ಲ. ಕಾಡಿನಲ್ಲಿ ಹಕ್ಕಿಗಳನ್ನ ಹಿಡಿಯಂಗಿಲ್ಲ. ಕರಡಿ ಕಲಂದರಗಳು ಕರಡಿಗಳನ್ನು ಹಿಡಿಯೋಂಗಿಲ್ಲ; ಆಡಿಸುವವರೂ ಇಲ್ಲ. ಸಿಳ್ಳೆ ಕ್ಯಾತ ಅವರು ತೊಗಲು ಗೊಂಬೆ Experts. ಆಶ್ಚರ್ಯ ಆಗುತ್ತೆ, ಅವರು ಎಷ್ಟು ಸರಳ ವಿಧಾನಗಳಲ್ಲಿ ಚರ್ಮವನ್ನು ಹದ ಮಾಡಿ ತೊಗಲು ಗೊಂಬೆಗಳನ್ನ ಮಾಡ್ತಾರೆ, ಅಂದರೆ ನೂರು ವರ್ಷಗಳು ಬೇಕಾದರೆ ಈ ಗೊಂಬೆಗಳು ಇರ್ತವೆ. ಅಷ್ಟು ಚೆನ್ನಾಗಿ ಮಾಡ್ತಾರೆ. But ಇವತ್ತು ಅವರಿಗೆ ಯಾವುದೇ ರೀತಿಯ ಪುರಸ್ಕಾರ ಇಲ್ಲ. ಮನ್ನಣೆನೂ ಇಲ್ಲ. So ಅವರು ಅಳಿವಿನಂಚಿನಲ್ಲಿಯೇ ಗಿರಕಿ ಹೊಡೀತಾ ಇದ್ದಾರೆ. ಅವರಲ್ಲಿ ಯಾರೂ ಓದಿದವರೂ ಇಲ್ಲ. ಮೀಸಲಾತಿಯ ಫಲವನ್ನೂ ಅನುಭವಿಸಿಲ್ಲ. ಮತ್ತೆ, ಒಂದು ವಿಷಯವನ್ನು ನಾವು ಬಹಳ ಮುಖ್ಯವಾಗಿ ತಿಳ್ಕೋಬೇಕು. ಏನೂ ಅಂತಂದ್ರೆ ಅವರಿಗೆ ನಾವು ಪ್ರಾಪಂಚಿಕವಾಗಿ ಕಟ್ಟಿಕೊಂಡಿರುವ ಕನಸುಗಳಿವೆಯಲ್ಲ–ಉದ್ಯೋಗ, ವರಮಾನ, ಶಿಕ್ಷಣ, ಡಾಕ್ಟರ್, ಎಂಜಿನಿಯರ್, ಲಾಯರ್ ಇವೆಲ್ಲ ಅವರ Dictoniaryಲೇ ಇಲ್ಲ. They don't even think about those things! ಅವ್ರು ಅಲೆಮಾರಿಗಳಾಗಿ ಊರಿಂದ ಊರಿಗೆ ಕಾಡಿನಿಂದ ಕಾಡಿಗೆ, ಸಾಗುತ್ತಾರೆ. ಅವರಿಗೆ ಯಾವುದೇ ಒಂದು ಕಾರ್ಯಕ್ರಮ ರೂಪಿಸಬೇಕಾದ್ರು, 'we have to keep their Cultural Ethos in our mind. ಮತ್ತೆ ಅವರಿಗೆ ಒಳ ಮೀಸಲಾತಿಯನ್ನು ಕಲ್ಪಿಸಲೇ ಬೇಕಾಗುತ್ತದೆ. ಇಂಥ ಹಲವಾರು ಸಮುದಾಯಗಳಿಗೆ ಮೀಸಲಾತಿಯೇ ಸಿಕ್ಕಿಲ್ಲ.

ಅಂದ್ರೆ, ನಮ್ಮಲ್ಲಿ ಏನೇ ಸೌಲಭ್ಯ ಬಂದ್ರೂನು ಆಯಾಯ ಜಾತಿಗಳಲ್ಲಿರತಕ್ಕಂತಹ ಬಲಾಢ್ಯ ವ್ಯಕ್ತಿಗಳು ಕಿತ್ತುಕೊಳ್ಳುವಂತಹ ಪರಂಪರೆ ಬೆಳೆದುಕೊಂಡು ಬಂದುಬಿಟ್ಟಿದೆ. ಈಗ ಅಧಿಕಾರ ಒಂದು ಕಡೆ ಬ್ರಾಹ್ಮಣರಿಂದ ಶೂದ್ರರ ಕಡೆಗೆ, ಶೂದ್ರರು ಅದನ್ನು ದಲಿತರಿಗೆ ಕೊಡೋಕೆ ರೆಡಿ ಇಲ್ಲ. ದಲಿತರಲ್ಲಿ Left, Right ರಲ್ಲೂ ಅಧಿಕಾರದ ಬಗ್ಗೆ ಜಾಗೃತಿ ಬೆಳೆಯಿತು. ಆದರೆ ಇದೇ ತೆರನ ಅದನ್ನ ಅವರು ದಕ್ಕಲಿಗರಿಗೋ, ಮತ್ತೊಬ್ಬರಿಗೋ ಕಲ್ಪಿಸಿಕೊಡೋಕೆ ರೆಡಿ ಇಲ್ಲ. ಇದನ್ನು ನಾವು ನಿಭಾಯಿಸುವ ಜರೂರು ಇದೆ. ಆದ್ರೆ ನಮ್ಮಲ್ಲಿ ಒಂದು ಪ್ರಬಲವಾಗಿ ಬೇರುಬಿಟ್ಟಿರುವ ಯೋಚನೆ ಅಂದ್ರೆ 'ಮೀಸಲಾತಿ'ಯ ಮೂಲಕವೇ ಎಲ್ಲವನ್ನೂ ಬಗೆಹರಿಸಲು ನೋಡ್ತಾ ಇದ್ದೀವಿ. ನಾವು ಒಂದನ್ನ ಮರೆತು ಬಿಟ್ಟಿದ್ದೀವಿ – **ಜಾತಿ ವಿನಾಶ ನಮಗೆ ಗುರಿಯಾಗಬೇಕೇ ಹೊರತು. ಜಾತಿಯನ್ನ ಮತ್ತೆ ಭದ್ರಕೋಟೆ ಮಾಡುವುದಲ್ಲ.** ನಾವು ಮೀಸಲಾತಿಯ ಕನ್ನಡಕಗಳನ್ನು ಬಿಟ್ಟು ಹೊರಗಡೆ ನೋಡಲಿಕ್ಕೆ ಸಾಧ್ಯವಾಗದೇ ಹೋದರೆ, ಅಸಮಾನತೆಯನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ. ಮೀಸಲಾತಿ ಒಂದು ಕನಿಷ್ಠ ಕಾರ್ಯಕ್ರಮ. ತತ್‌ಕ್ಷಣದಲ್ಲಿ ವಿದ್ಯಾ ಕ್ಷೇತ್ರದಲ್ಲಿ, ಉದ್ಯೋಗ ಕ್ಷೇತ್ರದಲ್ಲಿ ರಾಜಕೀಯ ಕ್ಷೇತ್ರದಲ್ಲಿ, ಪ್ರಾತಿನಿಧ್ಯ ಕೊಡುವುದೇ ಅದರ ಗುರಿ. ಅಸಮಾನತೆಯನ್ನು ಹೋಗಲಾಡಿಸುವುದಾಗಲೀ, ದಾರಿದ್ರ್ಯವನ್ನು ತೊಡೆದುಹಾಕುವುದಾಗಲೀ, ಹಸಿವನ್ನ ಇಂಗಿಸುವುದಾಗಲೀ, ನಿರುದ್ಯೋಗ ನಿವಾರಣೆಯಾಗಲೀ ಮೀಸಲಾತಿಯ ಗುರಿಯಲ್ಲ. ಮೀಸಲಾತಿ ಒಂದು ಬಹಳ ಚಿಕ್ಕ ಕಿಂಡಿ. ಪ್ರಾತಿನಿಧ್ಯ ಕೊಡೋದು ಅಷ್ಟೇ. ತತ್‌ಕ್ಷಣದಲ್ಲಿ ಪ್ರಾತಿನಿಧ್ಯ ಕೊಡಬೇಕು.

ಪ್ರಶ್ನೆ: ಹಾಗಾದರೆ, ಈ ಬಗ್ಗೆ ಸಂವಿಧಾನದಲ್ಲಿ ಏನಾದರೂ ವಿವರಗಳು ಅಡಕವಾಗಿಯೇ?

ಪ್ರೊ: ಭಾರತದ ಸಂವಿಧಾನದಲ್ಲಿ ಬಹಳ ಚೆನ್ನಾಗಿ ಈ ವಿಷಯಗಳು ಅಡಕವಾಗಿವೆ. Now we should not consider this as the end of the road. But reservation is only a begging. It is the basic minimum. But that is not the maximum to achieve. ನಾವು ಏನ್ಮಾಡ್ತಿದ್ದೀವಿ–ಮೀಸಲಾತಿಯೇ ಎಲ್ಲಾ ಸಮಸ್ಯೆಗೂ ಉತ್ತರ ಎಂದು ಭಾವಿಸಿದ್ದೇವೆ. ನಾನು ನಿಮಗೆ ಒಂದು ಉದಾಹರಣೆ ಕೊಡ್ತೀನಿ... ಇಂದೂಧರ್ ನೀವು ಯೋಚ್ನೆ ಮಾಡಿ, ದಿನನಿತ್ಯ ನೀವು ಇದರಲ್ಲೇ ವ್ಯವಸಾಯ ಮಾಡ್ತ ಇರೋರು. ನಾನು ಹಿಂದುಳಿದ ಆಯೋಗದ Chairman ಆಗಿದ್ದಾಗ ನನಗೆ ಯೋಚ್ನೆ ಬಂದಿತ್ತು... ಏನು ಅಂತಂದ್ರೆ ಮೀಸಲಾತಿಯನ್ನು ಬದಿಗಿಟ್ಟು ಬಿಡಿ. ಮೀಸಲಾತಿಯು ಅದರಷ್ಟಕ್ಕೆ ಅದು ನಡೆಕೊಂಡು ಹೋಗ್ತಾ ಇರಲಿ. ಅದನ್ನು ಇನ್ನು ಹೆಚ್ಚು ಶ್ರೀಮಂತವಾಗಿ ಮಾಡೋದಾದರೆ ಮಾಡೋಣ. ಅದು ಬೇರೆ ವಿಚಾರ.

ಆದರೆ ಒಂದು ಸಮುದಾಯವೇ ನಶಿಸಿ ಹೋಗುತ್ತಿರುವಾಗ ನಾವು ಮೀಸಲಾತಿಯ ಬಗ್ಗೆ ಯೋಚಿಸುತ್ತೇವೆ. ಇದು ಸರಿಯಲ್ಲ. ಇಂಥ ಸಮುದಾಯಗಳನ್ನು ನಾವು ಯಾರೂ ಗಣನೆಗೆ ತಗೋತಾ ಇಲ್ಲ. ಅದು ನಾಶ ಆದ್ರು ಆಗ್ಲಿ ಅಂದುಬಿಟ್ಟು, ಅದರಲ್ಲಿ ಯಾರಾದರೂ ಎಸ್‌ಎಸ್‌ಎಲ್‌ಸಿ ಮಾಡಿದ್ರೆ, ನಾವು ಕ್ಲರಿಕಲ್ ಪೋಸ್ಟ್ ಕೊಡಬೌದ ಅಂತ ಯೋಚಿಸ್ತೇವೆ. ಹೆಚ್ಚಿಗೆ ಅಂತ ಅಂದ್ರೆ ಒಬ್ಬನಿಗೆ/ಳಿಗೆ ಅನುಕೂಲ ಆಗಬಹುದು ಅಷ್ಟೆ. But we never think about the community. We only think about individuals in that community. ಅಂದ್ರೆ ಇಡೀ ಸಮುದಾಯದ ನೋವನ್ನು ಅದು ಒಬ್ಬ ವ್ಯಕ್ತಿಯ ಸಂಕಟವಾಗಿ ಪರಿವರ್ತನೆ ಮಾಡುತ್ತೇವೆ.

But ನಾನ್ Chairman ಆಗಿದ್ದಾಗ ಸರ್ಕಾರದ ಜೊತೆ, ವಿಶೇಷವಾಗಿ ಕಾಗೋಡು ತಿಮ್ಮಪ್ಪನವರು Social Welfare minister ಆಗಿದ್ದಾಗ 'ಪ್ರತಿಯೊಂದು ಜಾತಿಯ ಸಂಪೂರ್ಣ ಜನಗಣತಿ ಮಾಡಲು ನಮಗೊಂದು ಅವಕಾಶ ಕೊಡಿ.' ಅಂತ ಕೇಳಿದೆ. 'ಯಾತಕ್ಕೆ ಅಂತ ಕೇಳಿದ್ರು,' ಅವರು ಕೇಳಿದ್ರು, ಏಕೆಂದರೆ ನಾವು Socio - educational backwardness map ಮಾಡ್ತೀವಿ. ಪ್ರತಿಯೊಂದು ಜಾತಿಯ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಮಟ್ಟವನ್ನು ಗುರುತಿಸುತ್ತೇವೆ. ಈಗ ಇರುವಂತಹ ಸಾಮಾಜಿಕ ಶ್ರೇಣೀಕರಣಕ್ಕಿಂತಲೂ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಗುಣಮಟ್ಟವನ್ನು ಕಂಡು ಹಿಡಿಯುತ್ತೇವೆ. ಪ್ರತಿಯೊಂದು ಜಾತಿಗೂ ಹೀಗೆ ಕಂಡುಹಿಡಿದು ಅದಕ್ಕೊಂದು ಇಂಡೆಕ್ಸ್ ಕೊಡುತ್ತೇವೆ. ಅಂದ್ರೆ ಹೀಗೆ ಮಾಡೋದ್ರಿಂದ ಯಾರ್‍ಯಾರು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿ ಸಾಧಿಸಿದ್ದಾರೆಂದು ತಿಳಿಯುತ್ತದೆ. ಅಂದ್ರೆ, ಶಿಕ್ಷಣ ಇಲ್ಲದೇ ಇರೋರಿಗೆ ಶಿಕ್ಷಣ ಕೊಡಬಹುದು.

ನನ್ನ ಮುಂದೆ ಒಂದು ಅರ್ಜಿ ಆಗ ಬಂದಿತ್ತು. ತೆಲಗುಗೌಡ ಅಂತ... ಅದೊಂದು ಸಣ್ಣ ಸಮುದಾಯವಾಗಿತ್ತು. ಅವರು ತಮ್ಮನ್ನ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿ ಅಂತ ಮನವಿ ಸಲ್ಲಿಸಿದ್ದರು. ಆದರೆ ಇವರನ್ನ ಏಕೆ ಯಾರೂ ಗುರುತಿಸಿಲ್ಲ... ಹಾವನೂರು ವರದಿಯಲ್ಲೂ ಗುರುತಿಸಿಲ್ಲ. ಏಕೆಂದರೆ ಮುಂದುವರೆದಿದ್ದಾರೆ ಅಂತನೇ ಇರಬೇಕು... ಚಿನ್ನಪ್ಪ ವರದಿಯಲ್ಲಿ ಏನಾದರು ಹೇಳಿದ್ದಾರಾ? ಅಲ್ಲೂ ತೆಲುಗುಗೌಡ ಪದ ಬಂದಿಲ್ಲ. ಗೆಜೆಟ್ ವರದಿಯಲ್ಲಿ ತೆಗೆದು ನೋಡಿದೆ... ಎಲ್ಲಿಯೂ ಕೂಡ ವರದಿ ಬಂದಿಲ್ಲ. ಸರಿ ಸಮೀಕ್ಷೆ ಕೈಗೊಂಡೆ. ಆದೇ ಸಂದರ್ಭದಲ್ಲಿ ಅವರ ಪರವಾಗಿ ಪಾರ್ಲಿಮೆಂಟ್ ಮೆಂಬರ್ ಬಂದರು. MLA, Chairmanಗಳು ಎಲ್ಲರೂ ಬಂದರು... ನೋಡಿದರೆ... ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ಕಮ್ಯೂನಿಸ್ಟ್ ಎಲ್ಲರೂ ಬಂದಿದ್ದರು. ನನಗೆ ಆಶ್ಚರ್ಯ ಆಯಿತು. ಒಂದು ಹೆಸರು ಗೊತ್ತಿಲ್ಲದೆ ಇರುವ Caste ಬಗ್ಗೆ ಯಾಕೆ ಇಷ್ಟು ಅಂತ ನೋಡಿದರೆ, ಹತ್ತು –12 ಹಳ್ಳಿಗಳಲ್ಲಿ ಒಂದೇ ಕಡೆ 25000 ಜನರಿದ್ದಾರೆ... ಅಂದರೆ ಅವರಲ್ಲಿ Votes ಇರೋದು 10,000. ಆದ್ದರಿಂದಲೇ ಎಲ್ಲರಿಗೂ ಅವರು ಬೇಕಾಗಿದ್ದಾರೆ... ಇದನ್ನು ಕ್ಷೌರಿಕರು ಮಾಡೋಕೆ ಆಗುತ್ತಾ? ದಕ್ಕಲಿಗರು ಮಾಡೋಕೆ ಆಗುತ್ತಾ? ಹಕ್ಕಿಪಿಕ್ಕಿಯವರು ಮಾಡೋಕೆ ಆಗುತ್ತಾ... ಬುಡಬುಡಿಕೆಯವರು ಮಾಡೋಕೆ ಆಗುತ್ತಾ? ಆಗೊಲ್ಲಾ. Because ಅವರೆಲ್ಲಾ ಚದುರಿದ್ದಾರೆ. So, ನಮ್ಮಲ್ಲಿ ಇದನ್ನೇ ಸ್ವಾರ್ಥ ರಾಜಕೀಯ ಅನ್ನೋದು. ಇಲ್ಲಿ ಮತದಾನ ಇಲ್ಲದವರಿಗೆ ಯಾವುದೇ ಮೌಲ್ಯ ಇಲ್ಲದಂತೆ ಆಗಿ ಬಿಟ್ಟಿದೆ. ಮತದಾನ ಇಲ್ಲದೆ ಇರುವ ಸಮುದಾಯದ ಪರಿಸ್ಥಿತಿ ಇದಾಗಿದೆ.

ಆದರೆ ಇಂದು ನಾವು ಶಿಕ್ಷಣ ಇರುವವರಿಗೆ ಶಿಕ್ಷಣ ಕೊಡ್ತಿದ್ದೀವಿ. ಇದರಿಂದಾಗಿ ಜನಸಂಖ್ಯೆಯಲ್ಲಿ ಬಲಾಢ್ಯರಾಗಿರುವವರಿಗೆ ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ಪ್ರಾತಿನಿಧ್ಯ ಪಡೆದಿದ್ದರೂ ಸಹ ಮತ್ತೆ ಅವರಿಗೇ Political reservation ಕೊಡ್ತೀವಿ... ಇದು ವಿಪರ್ಯಾಸವಲ್ಲವೇ? ಬಲಾಢ್ಯವಾಗಿರುವಂತಹ ಧನಿಕ ಸಮುದಾಯಗಳಿಗೆ ಸ್ಕಾಲರ್‌ಶಿಪ್ ಕೊಡ್ತೀವಿ ಅಂದ್ರೆ ಉಳಿದವರಿಗೆ ಏನೂ ಪ್ರಯೋಜನ ಇಲ್ಲ. ಇದನ್ನು ಗಣನೆಗೆ ಇಟ್ಕೊಂಡು, ನಾನು ಅದನ್ನ ನಿಭಾಯಿಸಲು ಒಂದು ಸೂತ್ರ ಕೊಟ್ಟೆ, ಏನು ಅಂತ ಅಂದ್ರೆ ಪ.ಜಾ.ಯವರನ್ನೇ ಉದಾಹರಣೆಗೆ ತಗೆದುಕೊಳ್ಳಿ, ನಮಗೆ ಸುಲಭವಾಗಿ ಕೈಗೆ ಸಿಗುವಂತಹವರು ಇವರು, ಇವರ ಪಟ್ಟಿ ಇದೆ-101 ಜಾತಿಗಳಿಗೆ 101 ರ್‍ಯಾಂಕ್ ಕೊಡ್ತೀವಿ... ನಂಬರ್ 1, 2, 3, 4. ... & 101 ಈ ರ್‍ಯಾಂಕ್ given in the social educational and Economic profile ಕೊಟ್ಟುಬಿಟ್ಟು, ಮೀಸಲಾತಿ ಅದರ ಪಾಡಿಗೆ ಅದು ನಡಕೊಂಡು ಹೋಗಲಿ... mix ಮಾಡಬೇಡಿ.

ಈ ಪಟ್ಟಿಯನ್ನು ತಲೆಕೆಳಗೆ ಮಾಡಿ ಇಟ್ಕೊಳ್ಳಿ, ಕೆಳಗಡೆ ಇರೋದನ್ನ ಮೇಲೆ ತೆಗೆದುಕೊಳ್ಳಿ. ಹೀಗೆ ನಿಮಗೆ 101 ರ್‍ಯಾಂಕ್ ಸಿಗುತ್ತದೆ. You start from 101. 101ನೇ ರ್‍ಯಾಂಕ್‌ನಲ್ಲಿರೋ ಜಾತಿಯನ್ನು ಅಂದರೆ ಉದಾಹರಣೆಗೆ ದಕ್ಕಲಿಗ ಜಾತಿ ಬರಬಹುದು ಅಂತ ಇಟ್ಕೊಳ್ಳೋಣ. ಇದನ್ನು ರಾಜ್ಯದ್ಯಾಂತ ಡಿಕ್ಲೇರ್ ಮಾಡಿಬಿಡಿ. ಇಂಥ ಸಮುದಾಯಗಳಿಗೆ ಆದ್ಯತೆಯ ಮೇರೆಗೆ ಒಂದೊಂದು ವಾರ ಮೀಸಲಿಟ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ. ರಾಜ್ಯದ ಪ್ರತಿಯೊಬ್ಬ D C ಗೂ Direction ಕೊಡಿ. ಎಲ್ಲೆಲ್ಲಿ ದಕ್ಕಲಿಗರು ಇದ್ದಾರೋ ಹುಡುಕಿ ಗುರುತು ಹಚ್ಚಿ, ಅವರ ಸಮಸ್ಯೆಗಳಿಗೆ ಆ ವಾರದಲ್ಲೇ ಪರಿಹಾರ ಕೊಡಿ. ಉದ್ಯೋಗ ಇಲ್ಲದೆ ಇದ್ದವರಿಗೆ ಉದ್ಯೋಗ ಕೊಡಿ, ಶಿಕ್ಷಣ ಇಲ್ಲದೆ ಇರುವವರಿಗೆ ಶಿಕ್ಷಣ ಕೊಡಿ, ಮನೆ ಇಲ್ಲದವರಿಗೆ ಮನೆ ಕೊಡಿ. ಒಂದು ಸಮುದಾಯಕ್ಕೆ ನೀವು ಒಂದು ವಾರ ಮೀಸಲಾತಿಯನ್ನು ಕೊಟ್ಟುಬಿಡಿ.



ಈಗ ದಕ್ಕಲಿಗ ಸಮುದಾಯವನ್ನು ಉದಾಹರಣೆ ಕೊಡ್ತೀನಿ. 1981ರಲ್ಲಿ ನಡೆದ ಸೆನ್ಸಸ್ ಪ್ರಕಾರ ಕರ್ನಾಟಕದಲ್ಲಿ ದಕ್ಕಲಿಗರು ಇದ್ದದ್ದು 282. ಅದರಲ್ಲಿ ದಕ್ಕಲ್, ದೊಕ್ಕಲವಾರ ಎನ್ನುವ ಇನ್ನೆರಡೂ ಹೆಸರುಗಳಲ್ಲಿ 141 ಜನ ಬಂದಿದ್ದಾರೆ. ಅವರ ಒಟ್ಟು ಸಂಖ್ಯೆ 423 ಜನ. ಗಂಡಸರು, ಹೆಂಗಸರು, ಮುದುಕರು, ಮಕ್ಕಳು ಎಲ್ಲಾ ಸೇರಿ 423 ಜನ. ಅಂದರೆ ಬಹುಶಃ 100 ಫ್ಯಾಮಿಲಿ. ಈಗ 200 ಡಬಲ್ ಆಗಿದೆಯಾ, ತ್ರಿಬಲ್ ಆಗಿದೆಯಾ? 300 ಅಂತ ಇಟ್ಕೊಳ್ಳಿ. So ಈ ವಾರ ದಕ್ಕಲಿಗರ weak ಅಂತ ಡಿಕ್ಲೇರ್ ಮಾಡಿದ್ರೆ... ನಾವು ಈ 300 ಕುಟುಂಬಗಳಿಗೆ ಅವರ ಯೋಗಕ್ಷೇಮವನ್ನು ಈ ವಾರವೊಂದರಲ್ಲಿ ಇಡೀ Stateನಲ್ಲಿ ಮಾಡಬಹುದಲ್ಲವೇ! ಅವರಿಗೆ ಸಾಲ ಕೊಡಿ, ಅವರಿಗೆ ಹಸು ಕೊಡಿ, ಒಂದು ಎಕರೆನೋ-2 ಎಕರೆನೋ ಜಮೀನು ಕೊಡಿ, ಯಾರ್‍ಯಾರು ಅಕ್ಷರದಿಂದ ಆಚೆಗಿದ್ದಾರೋ ಅವರನ್ನ ಕರ್ಕೊಂಡು ಬಂದು Schoolಗೆ ಸೇರ್ಸಿ. ಯಾರ್‍ಯಾದರೂ ಆಕಸ್ಮಾತ್ ಉದ್ಯೋಗ ಅಂತಂದ್ರೆ ಅವರನ್ನ ಕರ್ಕೊಂಡು ಬಂದು ಉದ್ಯೋಗ ಸೃಷ್ಟಿ ಮಾಡಿ. SC/ST Corporationನಿಂದ ಅವರಿಗೆ ಸಾಲ ಕೊಡ್ಸಿ, ಒಂದು Industryನ ಮಾಡಿ ಕೊಡಿ or Industrial training ಕೊಡಿ. One weakನಲ್ಲಿ Are you not going to lift that community?. ಇವರನ್ನು ಅಸ್ಪೃಶ್ಯತೆಯಿಂದ ಹೊರತರಬಹುದಲ್ಲವೇ! ಒಂದು ವೀಕ್‌ನಲ್ಲಿ ಇದು ಸಾಧ್ಯವಾಗುತ್ತಲ್ಲವೇ?

101 ಸಮುದಾಯಗಳಲ್ಲಿ ಬಹುಶಃ ಒಂದು 90 ಸಮುದಾಯಗಳನ್ನು ಇಷ್ಟು ಸುಲಭವಾಗಿ ನಿಭಾಯಿಸಬಹುದಲ್ಲವೇ? So 2 years ಒಳಗಡೆ ಈ 90 ಸಮುದಾಯಗಳಿಗೆ ಪರಿಹಾರ ಕಂಡುಕೊಳ್ಳಬಹುದಲ್ಲವೇ? ನಾವು ನಮ್ಮ ಇಂಡೆಕ್ಸ್‌ನಲ್ಲಿ ಮೇಲಕ್ಕೆ ಹೋಗುವಷ್ಟರಲ್ಲಾಗಲೇ atleast ಈ ತಳ ಸಮುದಾಯಗಳಲ್ಲಿ ಪರಿಹಾರ ಕಂಡುಕೊಳ್ಳಬಹುದಲ್ಲವೇ? ಆದರೆ ಈ ಕೆಲಸ ನಾವು ಯಾಕೆ ಮಾಡ್ತಾ ಇಲ್ಲ? ಯಾಕೆ ಅಂತ ಅಂದ್ರೆ reservation ಕೊಟ್ರೆ ನಮ್ಮ ಕೆಲಸ ಮುಗೀತು ಅಂತ ಯೋಚಿಸುತ್ತೇವೆ. ಅಲ್ಲಿಗೆ ಮುಗೀತು ನಮ್ಮ ಕೆಲಸ. ಹೀಗೆ ಯೋಚನೆ ಮಾಡುವುದರಿಂದ ಪ್ರಸ್ತುತ Globalizationನ ಸನ್ನಿವೇಶದಲ್ಲಿ ಮೂಲತಃ ಹೆಚ್ಚು ಅರಿಸ್ಟೋಕ್ರಾಸಿ ವ್ಯಕ್ತಿಗಳನ್ನು ಸೃಷ್ಟಿ ಮಾಡುತ್ತಿದ್ದೇವೆ ಅಷ್ಟೆ.

ಒಂದು Community ನಲ್ಲಿ ಎಲ್ಲಾ ನಿರುದ್ಯೋಗಿಗಳು ಇರೋದಿಲ್ಲ. ಈಗ ಹೊಲೆಯ ಸಮುದಾಯವನ್ನೇ ತೆಗೆದುಕೊಳ್ಳಿ... ಅಲ್ಲೂ ನಿರುದ್ಯೋಗಿಗಳು ಇದ್ದಾರೆ. ಆದರೆ ಎಲ್ಲರೂ ನಿರುದ್ಯೋಗಿಗಳಲ್ಲ. ಎಲ್ಲರೂ ಕೃಷಿಕಾರ್ಮಿಕರೇನೂ ಅಲ್ಲ. ಸೊ ಅಂಥವರನ್ನು ಬಿಟ್ಟು ಬಿಡೋಣ. Landless labors ಬೇರೆ, ಏನೂ ಗತಿಯಿಲ್ಲದೆ ಇರುವವರಿಂದ ಶುರುಮಾಡೋಣ. ಒಂದು ಸಮುದಾಯದ Socio educational and economic profileಗೆ ಬಂದ ಮೇಲೆ, we will take group consideration based on Regional consideration or village consideration or rural or urban, ಅಲ್ಲಿ ನಾನಾ ವಿಧದಲ್ಲಿ ನಾವು ಸಮಸ್ಯೆಗಳನ್ನು ಪರಿಹರಿಸುತ್ತಾ ಹೋಗಬಹುದು. ಇದು ಗಾಂಧೀಜಿಯ Conceptನಲ್ಲಿ ಅಂತ್ಯೋದಯ ಅನ್ನುತ್ತಾರೆ. I think this is what should have been done. ನಮ್ಮಲ್ಲಿ ಮೀಸಲಾತಿ ಬಗ್ಗೆನೇ ತಲೆಕೆಡಿಸ್ಕೊಂಡು ಆ ಭ್ರಮೆ ಮೇಲೆ ನಾವು ಗಿರಕಿ ಹೊಡೀತಾ ಇರ್ತೀವಿ. ಮೀಸಲಾತಿ ಅನ್ನೋದು very very small relief; that is not an end. "But only a beginning of the rule. "ನಾವು ಗಾಡಿ start ಮಾಡಿ ಅಲ್ಲೇ ನಿಲ್ಲಿಸಿ ಬಿಟ್ಟಿದ್ದೀವಿ. ಮುಂದಕ್ಕೆ ಹೋಗಲೇ ಇಲ್ಲ.

ಪ್ರಶ್ನೆ: ಕಳೆದ 30-40 ವರ್ಷಗಳಿಂದಲೂ ಈ ಸಾಮಾಜಿಕ ಚಳವಳಿ, ವಿಶೇಷವಾಗಿ ದಲಿತ ಚಳವಳಿಗಳ ಎಲ್ಲಾ ನಾಯಕರು ನಿಮಗೆ ಬಹಳ ಹತ್ತಿರದ ಸ್ನೇಹಿತರೇ ಆಗಿದ್ದಾರೆ. ಆದರೆ ಈ ನಾಯಕರುಗಳೆಲ್ಲ ಆಯಾ ಸಮುದಾಯದ ಒಳಗೆ ಇರುವ ದುರ್ಬಲರ ಬಗ್ಗೆ ಆಲೋಚನೆ ಮಾಡ್ತಾ ಇಲ್ಲಲ್ಲ...

ಪ್ರೊ: 2001ನೇ ಇಸ್ವಿ ಸೆನ್ಸಸ್ ರೆಡಿ ಆಗೋದಿಕ್ಕೆ ತಯಾರಿ ನಡೀತಾ ಇತ್ತು. 2001ನೇ ಇಸವಿಯ ಸೆನ್ಸಸ್‌ನಲ್ಲಿ ತಲೆಗೆ 15 ರೂಪಾಯಿ ಖರ್ಚು ಮಾಡ್ತಾ ಇದ್ದರು. ನಾನು ಹೇಳಿದೆ... ನನಗೆ 1 ರೂಪಾಯಿ ಕೊಡಿ ಸಾಕು. ಇಡೀ 5 ಕೋಟಿ ಜನಸಂಖ್ಯೆಯ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ಮನೆ ಮನೆಗೆ ಹೋಗಿ ಮಾಡಿ ಮುಗಿಸಿ ಕೊಡ್ತೀನಿ. ಪ್ರತಿ ಜಾತಿಯ Profileನ ನಿಮಗೆ ಕೊಡ್ತೀನಿ, ಒಂದು ರ್‍ಯಾಂಕ್ ಲಿಸ್ಟ್ ತಯಾರು ಮಾಡಿ, ಕರ್ನಾಟಕದಲ್ಲಿ 400 ಜಾತಿನೋ-500 ಜಾತಿನೋ ಅವು ಎಷ್ಟು ಇದ್ದವೋ, ಅಷ್ಟು ಜಾತಿಗಳಿಗೆ 400-500 ರ್‍ಯಾಂಕ್‌ಗಳನ್ನು ಕೊಟ್ಟು ಒಂದು ಪಟ್ಟಿ ತಯಾರು ಮಾಡೋಣ... ಅದನ್ನು ಇಟ್ಕೊಂಡು ಕಾರ್ಯಕ್ರಮ ಆರಂಭಿಸಿ. ಕಾಗೋಡು ತಿಮ್ಮಪ್ಪನವರು controversial ಆಗುತ್ತೆ ಅಂತ ಕೈ ಬಿಟ್ಟು ಬಿಟ್ರು.

ಪ್ರಶ್ನೆ: ಈಗ ಈ ದಕ್ಕಲಿಗರಿಗೂ ಈ ಸೌಲಭ್ಯ ಸಿಕ್ಕಬೇಕು ಅಂತ ಒಬ್ಬನೇ ಒಬ್ಬನು ಪ್ರಯತ್ನ ಮಾಡ್ತಾ ಇಲ್ಲವಲ್ಲ. ಯಾಕೆ?

ಪ್ರೊ: "ಯಾಕೆ ಅಂತ ಅಂದರೆ ದಕ್ಕಲಿಗರಿಗೆ ಎಷ್ಟು ಓಟಗಳು ಇದ್ದಾವೆ? 423ರಲ್ಲಿ ಒಂದು 100 ಓಟು ಇದ್ದಾವಾ... 150 ಓಟು ಇದ್ದಾವಾ... ಅವನ್ನು ತಗೊಂಡು ಏನ್ಮಾಡ್ತೀರಾ? ದಕ್ಕಲಿಗರ ಓಟು ಉಪಯೋಗ ಇಲ್ಲವಲ್ಲ. Democracy ನಲ್ಲಿ ಇವತ್ತು ಓಟು ಎಷ್ಟು ಪ್ರಧಾನವಾಗಿದೆ, ಅಂದರೆ, ಓಟು ಇಲ್ಲದೆ ಇರುವವರಿಗೆ ಯಾರು ಗಮನ ಕೊಡ್ತಾರೆ?

ರಾಮದಾಸ್ ಬದುಕಿದಾಗ ಒಂದು ಘಟನೆ ಹೇಳಿದ್ರು... ಅವರ ಮನೆಯ ಎದುರುಗಡೆ ಒಂದು ಕ್ಷೌರಿಕ ಅಂಗಡಿ ಇಟ್ಟುಕೊಂಡಿದ್ದ. ಮಾನಸಗಂಗೋತ್ರಿಯ Post graduate Departmentನಲ್ಲಿ ಪಾಠ ಮಾಡುತ್ತಿದ್ದ ಒಬ್ಬ ಪ್ರೊಫೆಸರ್ ಕ್ಷೌರ ಮಾಡಿಸಿಕೊಂಡ ನಂತರ ದುಡ್ಡು ಕೊಡದೆ ನಂತರ ಕೊಡುವುದಾಗಿ ಹೇಳಿ ಹೋದರು. ನಂತರ ಸ್ನಾನ ಮಾಡಿಕೊಂಡು ಬಂದವರೇ ತಗೋ ನಿನ್ನ ದುಡ್ಡು ಎಂದು ಹೊರಗಡೆಯಿಂದಲೇ ಎಸೆದು, ಹೋದರಂತೆ... ಅಂದರೆ ಇದೂ ಸಹ ಅಸ್ಪೃಶ್ಯತೆಯೇ

"ನಾನು ಅಂದು ದೊರೆತ ಮೀಸಲಾತಿಯ ಮೂಲಕ ದಲಿತರಿಗೆ ಒಂದು ಧ್ವನಿಯಾಗಿ ಲೋಕಸಭೆಯಲ್ಲಿ ಕೆಲಸ ಮಾಡ್ತಿನಿ ಅಂದುಕೊಂಡಿದ್ದೆ. ಆದರೆ ಈಗ ಮೂರು-ನಾಲ್ಕು ಸಲ, ಚುನಾವಣೆ ಮೂಲಕ ಆಯ್ಕೆಯಾದ ನಂತರ, ನನಗೆ ಈಗ ಅನಿಸುತ್ತಿದೆ - ನಾವು ದಲಿತರ ಧ್ವನಿಯಾಗುವುದರ ಬದಲು, ಸರ್ಕಾರದ ಧ್ವನಿಯಾಗಿ ಪರಿವರ್ತಿತವಾಗಿದ್ದೇವೆ."

-ಕೇಂದ್ರದ ಮಾಜಿ ಸಚಿವ ಮೌರ್ಯ

ಆಗಿದೆ ಅಲ್ಲವೇ? ಈ ನೋವನ್ನು ಯಾರ ಹತ್ತಿರ ಹೇಳಿಕೊಳ್ಳೋದು? ಇಂತಹ ಪರಿಸ್ಥಿತಿಯಲ್ಲಿ ಕ್ಷೌರಿಕರು ಇದ್ದಾರೆ... ಅವರ ಓಟು ಒಂದು ಕಡೆ ಇಲ್ಲ: ಅವರ Vote ಯಾರಿಗೂ ಬೇಕಾಗಿಲ್ಲ. ಊರಿಗೆ ಎರಡು, ಐದು ಹತ್ತು Vote ತಗೊಂಡು ಏನು ಮಾಡೋದು.

ಅದಕ್ಕೆ ಬದಲಾಗಿ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ನನ್ನ ಮುಂದೆ ಒಂದು ಅರ್ಜಿ ಆಗ ಬಂದಿತ್ತು. ತೆಲುಗುಗೌಡ ಅಂತ... ಅದೊಂದು ಸಣ್ಣ ಸಮುದಾಯವಾಗಿತ್ತು. ಅವರು ತಮ್ಮನ್ನ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿ ಅಂತ ಮನವಿ ಸಲ್ಲಿಸಿದ್ದರು. ಆದರೆ ಇವರನ್ನ ಯಾಕೆ ಯಾರೂ ಗುರುತಿಸಿಲ್ಲ... ಹಾವನೂರು ವರದಿಯಲ್ಲೂ ಗುರುತಿಸಿಲ್ಲ ಏಕೆಂದರೆ ಮುಂದುವರೆದಿದ್ದಾರೆ ಅಂತನೇ ಇರಬೇಕು... ಚಿನ್ನಪ್ಪ ರೆಡ್ಡಿ ವರದಿಯಲ್ಲಿ ಏನೇದಾರು ಹೇಳಿದ್ದಾರಾ? ಅಲ್ಲೂ ತೆಲುಗುಗೌಡ ಪದ ಬಂದಿಲ್ಲ. ಗೆಜೆಟ್ ವರದಿಯಲ್ಲಿ ತೆಗೆದು ನೋಡಿದೆ... ಎಲ್ಲಿಯೂ ಕೂಡ ವರದಿ ಬಂದಿಲ್ಲ. ಸರಿ ಸಮೀಕ್ಷೆ ಕೈಗೊಂಡೆ. ಅದೇ ಸಂದರ್ಭದಲ್ಲಿ ಅವರ ಪರವಾಗಿ ಪಾರ್ಲಿಮೆಂಟ್ ಮೆಂಬರ್ ಬಂದರು. MLA, Chairmanಗಳು ಎಲ್ಲರೂ ಬಂದರು... ನೋಡಿದರೆ... ಕಾಂಗ್ರೆಸ್ BJP, JDS, ಕಮ್ಯೂನಿಸ್ಟ್ ಎಲ್ಲರೂ ಬಂದಿದ್ದರು. ನನಗೆ ಆಶ್ಚರ್ಯ ಆಯಿತು. ಒಂದು ಹೆಸರು ಗೊತ್ತಿಲ್ಲದೆ ಇರುವ Caste ಬಗ್ಗೆ ಯಾಕೆ ಇಷ್ಟು ಆಸಕ್ತಿ ಅಂತ ನೋಡಿದರೆ, ಹತ್ತು-12 ಹಳ್ಳಿಗಳಲ್ಲಿ ಒಂದೇ ಕಡೆ 25000 ಜನರಿದ್ದಾರೆ... ಅಂದರೆ ಅವರಲ್ಲಿ Votes ಇರೋದು 10,000. ಆದ್ದರಿಂದಲೇ ಎಲ್ಲರಿಗೂ ಅವರು ಬೇಕಾಗಿದ್ದಾರೆ... ಇದನ್ನು ಕ್ಷೌರಿಕರು ಮಾಡೋಕೆ ಆಗುತ್ತಾ? ದಕ್ಕಲಿಗರು ಮಾಡೋಕೆ ಆಗುತ್ತಾ? ಹಕ್ಕಿಪಿಕ್ಕಿಯವರು ಮಾಡೋಕೆ ಆಗುತ್ತಾ... ಬುಡಬುಡಿಕೆಯವರು ಮಾಡೋಕೆ ಆಗುತ್ತಾ? ಆಗೊಲ್ಲಾ, Because ಅವರೆಲ್ಲಾ ಚದುರಿದ್ದಾರೆ. So, ನಮ್ಮಲ್ಲಿ ಇದನ್ನೇ ಸ್ವಾರ್ಥ ರಾಜಕೀಯ ಅನ್ನೋದು. ಇಲ್ಲಿ ಮತದಾನ ಇಲ್ಲದವರಿಗೆ ಯಾವುದೇ ಮೌಲ್ಯ ಇಲ್ಲದಂತೆ ಆಗಿ ಬಿಟ್ಟಿದೆ. ಮತದಾನ ಇಲ್ಲದೆ ಇರುವ ಸಮುದಾಯದ ಪರಿಸ್ಥಿತಿ ಇದಾಗಿದೆ.

ಪ್ರಶ್ನೆ: ಸಾಂಸ್ಕೃತಿಕ ಎಥೋಸ್ ಎಂದು ಹೇಳೀದಿರಲ್ಲಾ... ಅವರನ್ನ ಈ ಕಾರ್ಯಕ್ರಮಗಳಿಂದ ಅಷ್ಟೇನೆ ನೋಡೋಕೆ ಆಗುವುದಿಲ್ಲ. But ಅವರ ಸಾಂಸ್ಕೃತಿಕ ಜಗತ್ತನ್ನು ನಾವು ಏಕೆ ಗಮನಿಸಿಲ್ಲ?

ಪ್ರೊ: ಹೌದು... ನಾನೊಂದು ಉದಾಹರಣೆ ನಿಮಗೆ ನೀಡಬೇಕು. ಈ ಸಮುದಾಯಗಳಲ್ಲಿ ಮಕ್ಕಳೆಂದರೆ ಪ್ರೀತಿ ಜಾಸ್ತಿ. ಅವರನ್ನು ಬಿಟ್ಟು ಈ ಸಮುದಾಯಗಳು ಇರುವುದಿಲ್ಲ. ನೀವು ಬೇಕಾದಂತಹ ಅರಮನೆ ಕೊಟ್ರು ಅವರು ತಮ್ಮ ಮಕ್ಕಳನ್ನೇ ಬಿಟ್ಟು ಹೋಗಲ್ಲ. ಕಾಡಿಗೆ ಹೋದ್ರೂ ಕೂಡ ಮಕ್ಕಳು ಜೊತೆಲ್ಲೇ ಇರಬೇಕು. ಸ್ವಿರ್ಜರ್ ಲ್ಯಾಂಡ್‌ನಲ್ಲಿ ಇದೇ ತರಹ 'ಜಿಪ್ಸಿ'ಗಳು ಇದ್ದರು. ಅಲ್ಲಿನ ಸರ್ಕಾರ ಒಂದು ತೀರ್ಮಾನ ಮಾಡ್ತು... ಈ ಜಿಪ್ಸಿಗಳು ಶಿಕ್ಷಣ ಮಕ್ಕಳಿಗೆ ಕೊಡುತ್ತಾ ಇಲ್ಲ... ಇದು ಬಹಳ ತಪ್ಪು ಅಂತ ಹೇಳಿ, ಸಿಟ್ಜರ್‌ಲ್ಯಾಂಡ್ ಸರ್ಕಾರ ಎಲ್ಲ ಜಿಪ್ಸಿ ಮಕ್ಕಳನ್ನು concider ಮಾಡಿ, ತಂದೆ ತಾಯಿಗಳಿಂದ ಬೇರ್ಪಡಿಸಿ ಶಿಕ್ಷಣ ಕೊಡಲಾರಂಭಿಸಿತು... ಆದರೆ ಬರುಬರುತ್ತಾ ಬಹಳ ದೊಡ್ಡ ಅನಾಹುತವೇ ನಡೆದು ಹೋಯಿತು... ಆ ಮಕ್ಕಳು ತಮ್ಮ ಸಮುದಾಯದಿಂದ ಬೇರ್ಪಟ್ಟರು... ಸರ್ಕಾರ appoligosed to ಜಿಪ್ಸಿಸ್. ತಮ್ಮ ನಿರ್ಧಾರದಿಂದ ಸರ್ಕಾರ ವಾಪಸ್ಸಾಯಿತು.

ಅಭಿವೃದ್ಧಿ ಅನ್ನೋದು ಒಂದು ಸಮುದಾಯದ ಸಂಸ್ಕೃತಿಗೆ ಸಂಬಂಧಿಸಿದ್ದು ಆಗಿದೆ. ಇದನ್ನು ಸಹ ನಾವು ಗಮನಿಸಬೇಕಾಗಿದೆ. ಈ ಸಮುದಾಯಗಳಿಗೆ ಅವರ ಭಾಷೆಯಲ್ಲಿ ಪಳಗಿರುವ ಮತ್ತು ಅವರ ಸಂಸ್ಕೃತಿಯ ಬಗ್ಗೆ ತಿಳಿದಿರುವ ಟೀಚರ್ಸ್ ದೊರೆತಲ್ಲಿ ಅವರ ಶಿಕ್ಷಣ ಸುಲಭವಾದೀತು...ಆದರೆ ಇದನ್ನು ಅರಿಯದೆ ಬ್ರಿಟಿಷರು ಇಂಥ ಸಮುದಾಯಗಳನ್ನು 1793ರಲ್ಲಿ Regulation ಮಾಡಿ Thuggi & Decoit department establish ಮಾಡಿದರು. ಮತ್ತೆ 1860 ರಲ್ಲಿ India pinal code ನಲ್ಲಿ ಮತ್ತೊಂದು ಪ್ರಾಪಿಷನ್ ಸೇರಿಸಿದರು. ಅದು ಸಾಕಾಗಿಲ್ಲ ಅಂತ 1897 ರಲ್ಲಿ ಕ್ರಿಮಿನಲ್ ಟ್ರೈಬ್ಸ್ ಆ್ಯಕ್ಟ್ ಅಂತ ಒಂದು ಕಾನೂನು ಮಾಡಿದರು. ಇದು ಕೂಡ ಸಾಕಷ್ಟು ಪ್ರಭಾವ ಬೀರಲಿಲ್ಲ ಅಂತ 1924ರಲ್ಲಿ ಒಂದು ಹೊಸ ಕ್ರಿಮಿನಲ್ ಟ್ರೈಬ್ಸ್ ಆ್ಯಕ್ಟನ್ನು ತಂದು, ಅದರ ಪ್ರಕಾರ ಯಾರನ್ನ ಕ್ರಿಮಿನಲ್ ಟ್ರೈಬ್ಸ್ ಅಂತ ಡಿಕ್ಲೇರ್ ಮಾಡ್ತರೋ ಅವರನ್ನು ಖಾಯಂ ಆಗಿ House arrest ಮಾಡಿದರು. ಅವರು ಅಲ್ಲೇ ಹುಟ್ಟಬೇಕು, ಅಲ್ಲೇ ಸಾಯಬೇಕು. ಇಂಥ ಕಾನೂನಿನಡಿ ಕೆಲವು ಸಮುದಾಯಗಳನ್ನು ಹಾಗೆ ನಾಶ ಮಾಡಿದರು. ಆದ್ದರಿಂದ ಒಂದು ಸಮುದಾಯದ ಅಭಿವೃದ್ಧಿಗೆ ಅವರ ಸಾಂಸ್ಕೃತಿಕ ಇತಿಹಾಸದ ಅರಿವು ಮುಖ್ಯವಾಗುತ್ತದೆ. ಅನೇಕ ರೀತಿಯ ವಿಷಯಗಳ ಬಗ್ಗೆ ಯೋಚಿಸುವ ಜರೂರು ಇಂದು ಇದೆ. ಬರೀ ಮೀಸಲಾತಿ ಎಂದು ಹೋದಲ್ಲಿ ಇಂಥ ಸಂಗತಿಗಳು ಮರೆಯಾಗಿಬಿಡುತ್ತವೆ. ಪರಿಶಿಷ್ಟ ಜಾತಿಯ ಎಷ್ಟು ಮೆಂಬರ್‌ಗಳನ್ನು ಜನ ಆರಿಸಿ ಲೋಕ ಸಭೆಗೆ ಕಳಿಸಿದ್ದೇವೆ. ಅವರ್‍ಯಾರೂ ಸಹ ಇಂಥದ್ದರ ಬಗ್ಗೆ ಯೋಚಿಸಿ ಒಂದು ಕಾನೂನು ಮಾಡಬಹುದಿತ್ತಲ್ಲವೇ?

Untouchabality ಹೋಗಲಾಡಿಸುವುದಕ್ಕೆ ಇವತ್ತು ಪೌರ ಕಾರ್ಮಿಕರಿಗೆ ವೇತನ ನೀಡುವ ಬದಲು Outsource ಮಾಡ್ತಾ ಇದ್ದಾರೆ. ಅವರೆಲ್ಲಾ ಈಗ ರೆಡ್ಡಿಗಳ ಗುಲಾಮರಾಗಿ ದುಡೀತಾ ಇದ್ದಾರೆ. 1800 ರೂಪಾಯಿ ಕೊಡ್ತಾ ಇದ್ದಾರೆ. ಆದರೆ ಕಾರ್ಪೋರೇಷನ್‌ನಲ್ಲಿ ಖಾಯಂ ಆಗಿರುವ ಪೌರ ಕಾರ್ಮಿಕರು 8000 ತೆಗೆದುಕೊಳ್ಳುವಾಗ ಈ Contract labour act ತಂದು ಜನರಿಗೆ ಮೋಸ ಮಾಡುತ್ತಿದ್ದಾರೆ. ಇಂಥದ್ದರ ಬಗ್ಗೆ ಹೋರಾಟಗಳು ನಡೆಯಬೇಕಿವೆ. ಇದಕ್ಕೇನೂ ದೊಡ್ಡ ಚಳುವಳಿ ಕಟ್ಟ ಬೇಕಾಗಿಲ್ಲ. ನಮಗೆ ನೋಡುವ ಕಣ್ಣು ಬೇಕಾಗಿದೆಯಷ್ಟೆ. ನಮ್ಮ ನಗರದಲ್ಲಿರುವ ಆಟೋ ಚಾಲಕರ ಸಮಸ್ಯೆಗಳ ಬಗ್ಗೆ ಸ್ವಲ್ಪ ಯೋಚಿಸಿ... ಅವರೆಲ್ಲಾ ಫೈಲ್ಸ್ ಕಾಯಿಲೆಯಿಂದ ನರಳುತ್ತಾರೆ. ಅವರಿಗೆ ಬೇಕಾಗಿರುವ ಆರೋಗ್ಯ ಕಾರ್ಯಕ್ರಮವೇನಾದರೂ ನಾವು ಯೋಚಿಸಿದ್ದೇವೆಯೇ? ಇಲ್ಲವಲ್ಲಾ! ಇಂಥವರು ನಮ್ಮ ಸುತ್ತಮುತ್ತಲೂ ಅನೇಕರು ಇದ್ದಾರೆ...

ದೇವರಾಜ ಅರಸು ಒಬ್ಬರೇ ಇಡೀ ದೇಶದಲ್ಲಿ ಕ್ರಾಂತಿಕಾರಿ ಪರಿಹಾರ ಕಾಯ್ದೆ ಮೂಲಕ landless laboursಗಳನ್ನು ಜಮೀನ್ದಾರರ ಕಪಿಮುಷ್ಟಿಯಿಂದ ಬಿಡುಗಡೆ ಮಾಡಿದ್ರು. ... ಇಂದೂಧರ್ ನಿಮ್ಮಗೆ ಜ್ಞಾಪಕ ಇರಬೇಕು. ಭೂ ಪರಿಹಾರ ಕಾಯ್ದೆ ಜಾರಿಗೆ ಬಂದಾಗ ಜನ ಮೆರವಣಿಗೆಯಲ್ಲಿ ಬಂದು ಅವರು ಅಡವಿಟ್ಟಿದ್ದ ಸಾಮಾನುಗಳನ್ನು ಹೊತ್ತುಕೊಂಡು ಹೋದ್ರು. ಹಂಡೆ, ಬಿಂದಿಗೆಗಳನ್ನ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋದ್ರು. ದೇವರಾಜ ಅರಸು ಅವರಿಗೆ ಕೃತಜ್ಞತೆ ಹೇಳಬೇಕು. ಒಂದು ಋಣ ಪರಿಹಾರ ಕಾಯ್ದೆಯಿಂದ ಎಷ್ಟು ಪರಿಣಾಮಕಾರಿಯಾಗಿ ಕೆಲಸ ಆಯ್ತು. ಇವತ್ತು ರೈತರಿಗೆ ಈ ಕಾಯ್ದೆ ಮಾಡಲಾಗುವುದಿಲ್ಲವೇ? ಯಡಿಯೂರಪ್ಪ ಹಸ್ರು ಶ್ಯಾಲ್ ಹಾಕ್ತಾನೆ... ಅವನಿಗೆ ಭೂ ಪರಿಹಾರ ಕಾಯ್ದೆ ಮಾಡಲು ಹೇಳಬೇಕೇ! PTCL act ಮೂಲಕ ದೇವರಾಜ್ ಅರಸ್ ಎಷ್ಟು ಜನ ದಲಿತರಿಗೆ... ಕನಿಷ್ಠ ಅಂದರೆ ಎರಡರಿಂದ ಮೂರು ಲಕ್ಷ ದಲಿತರಿಗೆ ಭೂಮಿ ವಾಪಸ್ ಬಂತು. land reform actನಿಂದ 10 ಲಕ್ಷ ಜನಗಳಿಗೆ ಜಮೀನು ದೊರಕಿತು. ಇಂದಿಗೂ ಮಠಗಳ ಹತ್ತಿರ ಸಾವಿರಾರು ಎಕ್ಕರೆ ಜಮೀನು ಇದೆ. ಅದನ್ನು ಪಿಟಿಸಿಎಲ್ ಕಾನೂನಿನಡಿ ತಂದು ಭೂಮಿ ಇಲ್ಲದವರಿಗೆ ನೀಡಬಹುದಲ್ಲವೇ?...

ಪ್ರಶ್ನೆ: ಮೀಸಲಾತಿ ಮತ್ತು ಒಳ ಮೀಸಲಾತಿಗಳ ಚರ್ಚೆ ಬಂದು ಎಲ್ಲಾ ಸಮುದಾಯಗಳು ಒಡೆದು ಛಿದ್ರವಾಗಿ ಬಿಟ್ಟವೆಯಲ್ಲಾ?

ಪ್ರೊ: ...ಸ್ವಾಮಿ ನೀವು ಇದನ್ನು ಫೋಕಸ್ ಮಾಡಿ, ಅವೆಲ್ಲಾ ಸರಿಯಾಗುತ್ತವೆ. You think of total employment. think of eradication of poverty, think of eradication of untuchability. ಎಲ್ಲಾ ಸರಿ ಹೋಗುತ್ತವೆ. ಮೀಸಲಾತಿಯಡಿ Opportunity ಬಹಳ ಕಡಿಮೆ ಇದೆ. ಎಡಗೈ ಮತ್ತು ಬಲಗೈ ಜಗಳ ತುಂಬಾ ಜಾಸ್ತಿಯಾಗಿದೆ. ಹೌದು... ಆಮೇಲೆ ದಲಿತರಲ್ಲಿ ಇರತಕ್ಕಂತಹ ಪ್ರತಿಯೊಂದು ಜಾತಿಯೂ ಅವರವರ ಜಾತಿ ಹೆಸ್ರಲ್ಲಿ ಸಂಘಟಿತರಾ...ತ್ತಾ ಇದ್ದಾರೆ. ಆಗಲಿ ಬಿಡಿ. ಆದರೆ ನಮ್ಮ ಗುರಿ ಅಂತಿಮವಾಗಿ ಜಾತಿ ವಿನಾಶ!

■

ಬರಹರೂಪಕ್ಕೆ ಇಳಿಸಿದವರು: ಹರೀಶ ಎಂ.ಸಿ, ದೀಪಕ್‌ಕುಮಾರ್ ಎಸ್.ಕೆ
ಎಂ.ಎ. ವಿದ್ಯಾರ್ಥಿಗಳು

ಅಸ್ಪೃಶ್ಯತೆಯ ವಿರುದ್ಧದ ಹೋರಾಟದಲ್ಲಿ ಕಮ್ಯುನಿಷ್ಟರು

ಜಿ.ಎನ್ ನಾಗರಾಜ್ ಸಿಪಿಐ(ಎಂ) ಮುಖಂಡರು

ಮಾರ್ಕ್ಸ್‌ವಾದಿಗಳು 'ಜಾತಿ ದಮನ, ಅಸ್ಪೃಶ್ಯತೆಯ ವಿರುದ್ಧದ ಹೋರಾಟಗಳನ್ನು ವರ್ಗ ಶೋಷಣೆಯ ವಿರುದ್ಧದ ಹೋರಾಟದೊಂದಿಗೆ ಬೆಸೆಯಬೇಕು ಎಂಬುದನ್ನು ಒಪ್ಪಿಕೊಳ್ಳುತ್ತದೆ. ವರ್ಗ ಸಂಘರ್ಷ ಮುಖ್ಯವಾಗಿ ಭೂ ಸುಧಾರಣೆ ಇವು ಜಾತಿ ಪದ್ಧತಿಯನ್ನು ತಾನೇ ತೊಲಗಿಸುತ್ತದೆ ಎಂಬ ಸರಳ ತಿಳುವಳಿಕೆ ಹಲವು ಕಾಲ ಮಾರ್ಕ್ಸ್‌ವಾದಿಗಳನ್ನು ಕಾಡುತ್ತಿದ್ದಿತು. ಅದರಿಂದಾಗಿ ಅಸ್ಪೃಶ್ಯತೆ ವಿರುದ್ಧದ, ಜಾತಿ ವಿನಾಶದ ಹೋರಾಟಗಳಿಗೆ ಕೊಡಬೇಕಾದ ಗಮನವನ್ನು ನೀಡಲಿಲ್ಲ ಎಂಬುದನ್ನು ಪ್ರಾಂಜಲವಾಗಿ ಒಪ್ಪಿಕೊಂಡಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ದಲಿತರ ಸಮಸ್ಯೆಗಳನ್ನು ಅಸ್ಪೃಶ್ಯತೆಯ ಆಚರಣೆಯನ್ನು, ಬೇಧದ ಪ್ರಶ್ನೆಗಳನ್ನು ಎತ್ತಿಕೊಂಡು ಹಲವು ಹೋರಾಟಗಳನ್ನು ಮಾಡಿದೆ.

ರಾಮಚಂದ್ರ ಬಾಬಾಜಿ ಮೋರೆ ಅಥವಾ ಆರ್.ಬಿ.ಮೋರೆ, ಇವರ ಹೆಸರನ್ನು ದಲಿತ ಚಳುವಳಿಯಲ್ಲಿರುವ ಯಾರಾದರೂ ಕೇಳಿದ್ದಾರೆಯೇ? ಯಾರ ನೆನಪಿನಲ್ಲಾದರೂ ಉಳಿದಿದೆಯೇ? ಖಂಡಿತಾ ಇಲ್ಲ. ಮಹಾರಾಷ್ಟ್ರದ ಹೊರಗಂತೂ ಯಾರಿಗೂ ಗೊತ್ತಿಲ್ಲದಂತೆ ಅವರ ಹೆಸರು ಮರೆಯಾಗಿ ಬಿಟ್ಟಿದೆ.

ಭಾರತದ ದಲಿತ ಚಳುವಳಿಯ ಇತಿಹಾಸದಲ್ಲಿ ಚಳುವಳಿಯ ಧ್ರುವತಾರೆ ರಾಷ್ಟ್ರ ನಾಯಕ ಡಾ.ಅಂಬೇಡ್ಕರ್‌ರವರ ಜೊತೆಗೇ ಪ್ರಕಾಶಮಾನವಾಗಿ ಬೆಳಗಬೇಕಾದ ಹೆಸರದು. ಆದರೆ ಒಂದು ನಿರ್ದಿಷ್ಟ ಕಾರಣದಿಂದ ಅದು ದಲಿತ ಚಳುವಳಿ ಇತಿಹಾಸದಿಂದ ಮರೆಮಾಚಲಾಗಿದೆ.

ಆರ್.ಬಿ.ಮೋರೆಯವರು 1903ರಲ್ಲಿ ಮಹಾಡ್ ತಾಲ್ಲೂಕಿನ ಲಡಾವಳಿ ಎಂಬ ಗ್ರಾಮದಲ್ಲಿ ಜನಿಸಿದವರು. ಮಹಾಡ್ ತಾಲ್ಲೂಕಿನ ದಾಸಗಾಂವ್ ಎಂಬ ಊರಿನಲ್ಲಿ ವಾಸಮಾಡಿ ಅಲ್ಲಿಯೇ ದಲಿತರಿಗಾಗಿದ್ದ ಪ್ರತ್ಯೇಕ ಪ್ರಾಥಮಿಕ ಶಾಲೆಯಲ್ಲಿ ಓದಿದವರು. ಆದರೆ ದಲಿತರ ಅಸ್ಪೃಶ್ಯತೆಯ ಕಾರಣಕ್ಕಾಗಿ ಅವರಿಗೆ ಶಿಕ್ಷಣ ಮುಂದುವರೆಸಲು ಸ್ಕಾಲರ್‌ಶಿಪ್ ದೊರೆತರೂ ಕೂಡ ತಾಲೂಕು ಕೇಂದ್ರವಾದ ಮಹಾಡ್‌ನ ಪ್ರೌಢಶಾಲೆಯಲ್ಲಿ ಪ್ರವೇಶ ದೊರಕಲಿಲ್ಲ.

ಅಗಲೇ, 11ರ ಸಣ್ಣ ವಯಸ್ಸಿನಲ್ಲಿಯೇ ಮಹಾಡ್‌ನಲ್ಲಿ ಅಸ್ಪೃಶ್ಯತೆಯ ವಿರುದ್ಧ ಅವರ ಹೋರಾಟ ಆರಂಭವಾಯಿತು. ಮಹಾಡ್‌ನಲ್ಲಿಯ ಕೆಲವು ಸಮಾಜ ಸುಧಾರಕರ ನೆರವಿನಿಂದ ಜಿಲ್ಲಾಧಿಕಾರಿ ಸೇರಿದಂತೆ ವಿವಿಧ ಅಧಿಕಾರಿಗಳಿಗೆ, ಪತ್ರಿಕೆಗಳಿಗೆ ಪತ್ರ ಬರೆದು ಕೊನೆಗೂ ಪ್ರೌಢಶಾಲೆಯಲ್ಲಿ ಪ್ರವೇಶಾವಕಾಶ ದೊರಕಿಸಿಕೊಂಡರು. ಇದು ಮಹಾಡ್ ತಾಲ್ಲೂಕಿನಲ್ಲಿ ಅಲೆಯಂತೆ ಹಬ್ಬಿತು. ಆ ವಿದ್ಯಾರ್ಥಿ ದೆಸೆಯಿಂದಲೇ ಇಂತಹ ಅನ್ಯಾಯದ ಅನೇಕ ಪ್ರಕರಣಗಳನ್ನು ಎತ್ತಿಕೊಂಡು ಪತ್ರ ಸಮರ ಆರಂಭಿಸಿದರು. ಹಳ್ಳಿಗಳಿಂದ ಮಹಾಡ್‌ಗೆ ಸಾರ್ವಜನಿಕ ಸ್ಥಳಗಳಲ್ಲಿ ದಲಿತರು ಮೀನು, ತರಕಾರಿ ಮಾರುವುದಕ್ಕೆ ಅವಕಾಶಕ್ಕಾಗಿ ಹೋರಾಡಿ ಜಯಗಳಿಸಿದರು. ಮಹಾಡ್‌ನಲ್ಲಿ ದಲಿತರಿಗಾಗಿಯೇ ಅವರು ಆರಂಭಿಸಿದ ಹೋಟೆಲ್ ಒಂದು ದಲಿತ ಸೈನಿಕರ, ದಲಿತ ಕ್ರಿಯಾಶೀಲರ ಕೇಂದ್ರವಾಯಿತು.

ಕೆರೆಯ ನೀರಿಗಾಗಿ ಹೋರಾಟ

ಈ ಎಲ್ಲ ಹೋರಾಟಗಳ ಮುಂದುವರಿಕೆಯಾಗಿ ಅವರು 1926ರಲ್ಲಿ ಕೊಂಕಣಸ್ಥ ಮಹಾಡ್ ಸೇವಾ ಸಂಘವನ್ನು ಕಟ್ಟಿದರು. ಈ ಸಂಘಕ್ಕೆ ಆರ್.ಬಿ.ಮೋರೆಯವರು ಪ್ರಧಾನ ಕಾರ್ಯದರ್ಶಿಯಾದರೆ ಭಿಕಾಜಿ ಗಾಯಕವಾಡ್ ಅದರ ಅಧ್ಯಕ್ಷರು. ದಲಿತರ ಅನೇಕ ರೀತಿಯ ಸಂಕಟಗಳನ್ನು ನೋಡುತ್ತಾ ರೋಸಿ ಹೋಗಿದ್ದ ಮೋರೆ ತಮ್ಮ ಊರಿಂದ ದಾಸಗಾಂವ್ ಗ್ರಾಮದಲ್ಲಿದ್ದ ಕ್ರಾಪೋರ್ಡ್‌ನ ಕೆರೆಯೆಂಬ ಸಾರ್ವಜನಿಕ ಕೆರೆಯಲ್ಲಿ ನೀರನ್ನು ಉಪಯೋಗಿಸುವುದಕ್ಕಾಗಿ ಜೊತೆಗಾರರೊಂದಿಗೆ ದಾಸಗಾಂವ್ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಪ್ರಚಾರ ಆರಂಭಿಸಿದರು. 1926ರ ಡಿಸೆಂಬರ್ ನಾಲ್ಕರಂದು ಪ್ರಸಿದ್ಧ ಮಹಾಡ್ ಸತ್ಯಾಗ್ರಹಕ್ಕಿಂತ ಮೂರು ತಿಂಗಳು ಮೊದಲೇ ನೂರಾರು ಜನ ದಲಿತರು ಕೆರೆಯ ನೀರನ್ನು ಉಪಯೋಗಿಸುವ ನೇರ ಕಾರ್ಯಕ್ರಮಕ್ಕೆ ಕೈ ಹಾಕಿದರು. ಇದು ಇಡೀ ಜಿಲ್ಲೆಯಲ್ಲಿಯೇ ಮಿಂಚಿನಂತಹ ಪ್ರಭಾವ ಬೀರಿತು.

ಈ ಪ್ರದೇಶದಲ್ಲಿ ದಲಿತರ ಸಮಾವೇಶ ಒಂದನ್ನು ಸಂಘಟಿಸಿ ಅದಕ್ಕೆ ಡಾ.ಅಂಬೇಡ್ಕರ್‌ರವರನ್ನು ಕರೆಯಬೇಕೆಂದು 1924ರಿಂದಲೇ ಪ್ರಯತ್ನಿಸಿ ಕೊನೆಗೆ ಅವರು ಮಾರ್ಚ್ 19–20ಕ್ಕೆ ಮಹಾಡ್‌ಗೆ ಬರುವುದೆಂದು ನಿಶ್ಚಿತವಾಯಿತು. ದಾಸಗಾಂವ್ ಗ್ರಾಮದ ಕ್ರಾಪೋರ್ಡ್‌ನ ಕೆರೆಯ ಹೋರಾಟದ ಯಶಸ್ಸಿನಿಂದ ಸ್ಫೂರ್ತಿಗೊಂಡ ವಾತಾವರಣದಲ್ಲಿ ಮೋರೆ ಮತ್ತು ಸಂಗಡಿಗರು ಹಳ್ಳಿ ಹಳ್ಳಿಗೆ ಹೋಗಿ ಸಭೆಗಳನ್ನು ನಡೆಸಿ ಮಹಾಡ್ ಸಮಾವೇಶದ ಯಶಸ್ಸಿಗಾಗಿ ಹಗಲಿರುಳೂ ದುಡಿದರು.



ಆರ್.ಬಿ. ಮೋರೆ

1927ರ ಮಾರ್ಚ್ 19ರಂದು 5000ಕ್ಕೂ ಮಿಕ್ಕ ದಲಿತರು ಮಹಾಡ್‌ನಲ್ಲಿ ಸೇರಿದರು. ಡಾ.ಅಂಬೇಡ್ಕರ್‌ರವರ ಭಾಷಣ ಅವರಲ್ಲಿ ಮತ್ತಷ್ಟು ಸ್ಫೂರ್ತಿ ತುಂಬಿತು. ಇದರಿಂದ ಉತ್ತೇಜಿತರಾಗಿ ಮರುದಿನ 20ರಂದು ಮಹಾಡ್‌ನ ಚವದಾರ್ ಕೆರೆಯ ನೀರಿನ ಉಪಯೋಗದ ಹಕ್ಕನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು. ಮತ್ತು ಅಂಬೇಡ್ಕರ್‌ರವರ ನೇತೃತ್ವದಲ್ಲಿ ಸಾವಿರಾರು ದಲಿತರು ಕೆರೆಯ ನೀರನ್ನು ಸ್ಪರ್ಶಿಸಿದರು. ಇದರಿಂದ ಉದ್ರಿಕ್ತರಾದ ಮೇಲು ಜಾತಿಗಳ ಸನಾತನಿಗಳು ಈ ಚಳುವಳಿಕಾರರ ಮೇಲೆ, ಊರಿನ ದಲಿತರ ಮನೆ, ಅಂಗಡಿಗಳ ಮೇಲೆ ಧಾಳಿ ಮಾಡಿದರು. ಈ ಹೋರಾಟದ ಸುದ್ದಿ ಮರುದಿನ ಇಡೀ ದೇಶಕ್ಕೆ ಹಬ್ಬಿತು. ಅಂಬೇಡ್ಕರ್‌ರವರು ರಾಷ್ಟ್ರೀಯ ನಾಯಕರಾಗಿ ಹೆಸರಾದರು.

ದಳ ಈ ಚಳುವಳಿಯ ಯಶಸ್ಸಿನ ಜೊತೆಯಲ್ಲಿಯೇ "ಬಹಿಷ್ಕೃತ ಭಾರತ' ಎಂಬ ಪತ್ರಿಕೆಯನ್ನು ಮೋರೆಯವರ ಸಹಾಯದೊಂದಿಗೆ ಆರಂಭಿಸಲು ಅಂಬೇಡ್ಕರರು ನಿಶ್ಚಯಿಸಿದರು. ಕೇವಲ 10 ದಿನಗಳ ನಂತರ ಏಪ್ರಿಲ್ 1, 1927ರಂದು ಹೊರ ಬಂದ ಮೊದಲ ಸಂಚಿಕೆ ಮಹಾಡ್ ಸಮಾವೇಶ ಹಾಗೂ ಸತ್ಯಾಗ್ರಹದ ಬಗ್ಗೆ ಆರ್.ಬಿ.ಮೋರೆಯವರ ಲೇಖನವನ್ನು ಒಳಗೊಂಡಿತ್ತು. ಈ ಲೇಖನದಲ್ಲಿಯೇ ಮಹಾಡ್‌ನಲ್ಲಿಯ ಧಾಳಿ, ದಮನಗಳನ್ನು ಎದುರಿಸಲು ಮತ್ತೊಂದು ಸಮಾವೇಶವನ್ನೂ ಸಂಘಟಿಸುವ ತೀರ್ಮಾನವನ್ನು ಘೋಷಿಸಿದ್ದರು.

ಮಹಾಡ್‌ನ ಎರಡನೇ ಸಮಾವೇಶಕ್ಕಾಗಿ ಭರದಿಂದ ಸಿದ್ಧತೆಗಳು ಆರಂಭವಾದವು. ಈ ಸಿದ್ಧತೆಗಳ ಭಾಗವಾಗಿ

ಸಮಾವೇಶದ ಮೇಲೆ ನಡೆಯಬಹುದಾದ ಧಾಳಿಗಳಿಂದ ರಕ್ಷಿಸಿಕೊಳ್ಳಲು ಕಾಂಗ್ರೆಸ್ ಸೇವಾದಳದ ಉದಾಹರಣೆಯಿಂದ ಅಂಬೇಡ್ಕರ್ ಸೇವಾ ದಳ ಎಂಬ ಸಂಘಟನೆಯನ್ನು ಮೋರೆಯವರು ಮತ್ತು ಅವರ ಜೊತೆಗಾರರು ಕಟ್ಟಿದರು. ಇದರಲ್ಲಿ ಬ್ರಿಟಿಷ್ ಸೈನ್ಯದಿಂದ ನಿವೃತ್ತರಾಗಿದ್ದ ಸೈನಿಕರು ಮತ್ತು ದಲಿತ ಯುವಕರು ಪ್ರಮುಖರಾಗಿದ್ದರು. ಈ ಸೇವಾ ದಳಕ್ಕೆ ಮುಂದೆ ಅಂಬೇಡ್ಕರರು ಸಮತಾ ಸೈನಿಕ ದಳ ಎಂಬ ಹೆಸರು ಬದಲಾಯಿಸಿದರು.

ಎರಡನೇ ಮಹಾಡ್ ಸಮಾವೇಶ 1927ರ ಡಿಸೆಂಬರ್ 25–26ರಂದು ನಡೆಸಲಾಯಿತು. ಈ ಸಮಾವೇಶದ ಸಮಯದಲ್ಲಿ ಕೋರ್ಟ್ ಕೆರೆಯ ನೀರನ್ನೂ ಕುಡಿಯಲು ಬಳಸಲು ಮೋರೆ, ಗಾಯಕವಾಡ್ ಮೊದಲಾದವರು ಒತ್ತಾಯಿಸಿದರು. ಅನೇಕರು ಈ ಕ್ರಮಕ್ಕೆ ಮುಂದಾಗಲು ಹಿಂಜರಿದಾಗ, ಅದಕ್ಕೆ ಬದಲಾಗಿ ಮನುಸ್ಮೃತಿಯನ್ನು ಸುಡಲಾಯಿತು. ಈ ಸಮಾವೇಶದ ಭಾಗವಾಗಿ ಮೊದಲ ಬಾರಿಗೆ ದಲಿತ ಮಹಿಳೆಯರ ಸಮಾವೇಶವನ್ನು ನಡೆಸಲಾಯಿತು.

ಹೀಗೆ ಮೋರೆಯವರು ಅಂಬೇಡ್ಕರರ ನಾಯಕತ್ವದಲ್ಲಿ ನಡೆದ ಮಹಾಡ್ ಸಮಾವೇಶ ಮತ್ತು ಚಳುವಳಿಗಳೆಲ್ಲದರ ಮುಖ್ಯ ಸಂಘಟಕ ಮತ್ತು ಸಹಾಯಕರಾಗಿದ್ದರು. ಮುಂದೆ ಕೂಡ ಕೊಂಕಣ ಪ್ರಾಂತ್ಯದ ಪಾಳೆಯಗಾರಿ ಪದ್ಧತಿಯಾದ 'ಖೋತ್' ಪದ್ಧತಿಯ ವಿರುದ್ಧ ಹೋರಾಟದಲ್ಲಿ ತೊಡಗಿದರು. ಈ ಸಂದರ್ಭದಲ್ಲಿಯೇ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಬಿ.ಟಿ.ರಣದಿವೆ, ಶ್ಯಾಮರಾವ್ ಮತ್ತು ಗೋದಾವರಿ ಪರುಳೇಕರ್‌ರವರ ಸಂಪರ್ಕಕ್ಕೆ ಬಂದು ಮಾರ್ಕ್ಸ್‌ವಾದದ ಕಡೆ ಆಕರ್ಷಿತರಾದರು.

ಕಮ್ಯೂನಿಸ್ಟರಾದ ಮೇಲೂ ಅಂಬೇಡ್ಕರರು ನಿಧನರಾಗುವವರೆಗೂ ಅವರ ನೆಚ್ಚಿನ ಸಹವರ್ತಿಗಳಾಗಿ ಮುಂದುವರೆದರು. ಅವರು ಮಹಾರಾಷ್ಟ್ರದ ಕಮ್ಯೂನಿಸ್ಟ್ ಚಳುವಳಿಯ ನೇತಾರರಲ್ಲೊಬ್ಬರಾದರು. ಪಕ್ಷದ ಮರಾಠಿ ಮುಖವಾಣಿ ಜೀವನ್ ಮಾರ್ಗ್‌ನ ಸ್ಥಾಪಕ ಸಂಪಾದಕರಾದರು. ಬಾಂಬೆಯ ಗಿರಣಿ ಕಾರ್ಮಿಕರ ನಡುವೆ, ಕೊಂಕಣದ ರೈತರ ನಡುವೆ ಜಾತಿ ಪದ್ಧತಿಯ ಹಾಗೂ ಅಸ್ಪೃಶ್ಯತೆಯ ವಿರುದ್ಧ ಪ್ರಚಾರ ಮಾಡಿದರು. ಅವರ ಪುತ್ರನೂ ಕಮ್ಯೂನಿಸ್ಟ್ ಚಳುವಳಿಯ ಒಬ್ಬ ನಾಯಕನಾಗಿ ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿದ್ದರು.

ಮಹಾಡ್ ಪ್ರದೇಶದ ದಲಿತ ಚಳುವಳಿ ಇಡೀ ದೇಶದ ದಲಿತ ಚಳುವಳಿಯ ನಾಯಕ ಪಾತ್ರವನ್ನು ವಹಿಸಿದ ಚಳುವಳಿ. ಇಂತಹ ಚಳುವಳಿಯ ಮುಖ್ಯ ನಾಯಕರಾದ ಮೋರೆಯವರ ಹೆಸರು ಅವರು ಮುಂದೆ ಕಮ್ಯೂನಿಸ್ಟರಾದರೆಂದೇ ದಲಿತ ಚಳುವಳಿಯ ಇತಿಹಾಸದಿಂದ ಕೈ ಬಿಡಲಾಯಿತು. ಹೀಗೆ ಒಂದು ಕಡೆ ಮೋರೆ ಹಾಗೂ ಕಮ್ಯೂನಿಸ್ಟ್ ಚಳುವಳಿಗೆ ಹಾಗೂ ಮತ್ತೊಂದು ಕಡೆ ದಲಿತ ಚಳುವಳಿಗೂ ಅನ್ಯಾಯವೆಸಗಲಾಯಿತು. ಇದು ಮೋರೆಯವರ ಬಗ್ಗೆ ಮಾತ್ರವಲ್ಲ ದೇಶದ ಅನೇಕ ರಾಜ್ಯಗಳಲ್ಲಿ ಕಮ್ಯೂನಿಸ್ಟರು ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆಯ ವಿರುದ್ಧ ಹೂಡಿದ ಸಮರವನ್ನು ಮರೆ ಮಾಡುವುದರಲ್ಲಿ ಪಾತ್ರ ವಹಿಸಿದೆ.

ಜಾತಿ ಪದ್ಧತಿ, ಜಾತಿ ವ್ಯವಸ್ಥೆ ಎಂಬ ಮಾತುಗಳು ಬರುವಾಗೆಲ್ಲಾ ಅದೊಂದು ಸಾಮಾಜಿಕ ಅನಿಷ್ಟ, ಭಾರತಕ್ಕೆ ವಿಶಿಷ್ಟವಾಗಿರುವ ಸಾಮಾಜಿಕ ಪದ್ಧತಿ ಎಂದು ಅದನ್ನು ವರ್ಣಿಸಲಾಗುತ್ತದೆ. ಹಾಗೆಯೇ ಮಾರ್ಕ್ಸ್‌ವಾದಿಗಳು ಕೇವಲ ವರ್ಗ ವಿಭಜನೆ ಹಾಗೂ ವರ್ಗ ಸಂಘರ್ಷದ ಬಗ್ಗೆ ಮಾತನಾಡುತ್ತಾ ಜಾತಿ ಎಂಬ ವಾಸ್ತವವನ್ನು ಪರಿಗಣಿಸುವುದೇ ಇಲ್ಲ. ಆದುದರಿಂದ ಜಾತಿ ವ್ಯವಸ್ಥೆ ಆಧಾರಿತವಾದ ಭಾರತಕ್ಕೆ ಕಮ್ಯುನಿಸಂ ಅಥವಾ ಮಾರ್ಕ್ಸ್‌ವಾದ ಸೂಕ್ತವಲ್ಲ ಎಂಬ ವಾದಗಳನ್ನು ಸಮಾಜವಾದಿಗಳು ಹಾಗೂ ಇತರ ಕೆಲವು ಬುದ್ಧಿ ಜೀವಿಗಳು, ಸಮಾಜ ವಿಜ್ಞಾನಿಗಳು ಹೂಡುತ್ತಾ ಬಂದಿದ್ದಾರೆ.

ಕಮ್ಯುನಿಸ್ಟ್ ಚಳುವಳಿ ಮತ್ತು ಜಾತಿ ವ್ಯವಸ್ಥೆ:

ಆದರೆ ಅದೇ ಸಂದರ್ಭದಲ್ಲಿ ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಬೆಳೆಯುತ್ತಾ ಬಂದಿದೆ, ಭಾರತದಲ್ಲಿ ಒಂದು ಗಣನೀಯ ರಾಜಕೀಯ ಶಕ್ತಿಯನ್ನು ಗಳಿಸಿದೆ. ಮತ್ತು ಅದಕ್ಕೂ ಮಿಗಿಲಾದ ಪಾತ್ರವನ್ನು ನಿರ್ವಹಿಸುತ್ತಾ ದೇಶದ ಚರಿತ್ರೆಯ ಅನೇಕ ತಿರುವುಗಳಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ಪ. ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಹಾಗೂ ದೇಶದ ಕೆಲವು ಜಿಲ್ಲೆಗಳಲ್ಲಿ ನಿರಂತರ ಜನ ಬೆಂಬಲವನ್ನು ಪಡೆದಿದೆ. ಆಯಾ ಪ್ರದೇಶಗಳ ಸಾಮಾಜಿಕ ಆರ್ಥಿಕ ವಾಸ್ತವವನ್ನು–ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಒಡ್ಡಿದ ಸವಾಲನ್ನು ಎದುರಿಸದೆ ಈ ಜನ ಬೆಂಬಲ ಸಾಧ್ಯವೇ?

ಭಾರತದ ಮಾರ್ಕ್ಸ್‌ವಾದಿ ನಾಯಕರಲ್ಲಿ ನವರತ್ನಗಳೆಂದು ಪ್ರಸಿದ್ಧರಾದ 5–6 ದಶಕಗಳ ಕಾಲ ಪಾಲಿಟ್‌ಬ್ಯೂರೊ ಸದಸ್ಯರಾಗಿದ್ದ ಎ.ಕೆ.ಗೋಪಾಲನ್, ಇ.ಎಂ.ಎಸ್.ನಂಬೂದರಿಪಾದ್, ಪಿ.ಸುಂದರಯ್ಯ, ಪಿ.ರಾಮಮೂರ್ತಿ, ಬಿ.ಟಿ.ರಣದಿವೆ, ಜ್ಯೋತಿ ಬಸು, ಪ್ರಮೋದ್ ದಾಸ್ ಗುಪ್ತ, ಹರ್‌ಕಿಶನ್ ಸಿಂಗ್ ಸುರ್ಜಿತ್, ಎಂ.ಬಸವಪುನ್ನಯ್ಯ ಇವರೆಲ್ಲರೂ ಜಾತಿವ್ಯವಸ್ಥೆಯ ಅಸ್ಪೃಶ್ಯತೆಯ ವಿರುದ್ಧ ವಯಕ್ತಿಕವಾಗಿ ಸಿಡಿದೆದ್ದವರು ಮಾತ್ರವಲ್ಲ, ತಮ್ಮ ಪ್ರದೇಶದಲ್ಲಿ, ರಾಜ್ಯಗಳಲ್ಲಿ ದಲಿತರ ದೇವಸ್ಥಾನ ಪ್ರವೇಶ, ನೀರಿನ ಹಕ್ಕು, ಸಾಮೂಹಿಕ ಭೋಜನ, ಅಂತರ್ಜಾತಿ ವಿವಾಹ, ಪಾಠಶಾಲೆ, ಇಂತಹ ಅಸ್ಪೃಶ್ಯತಾ ವಿರೋಧಿ ಕಾರ್ಯಕ್ರಮಗಳಲ್ಲಿ ಹಾಗೂ ಅವರ ಸಂಘಟನೆ, ಹೋರಾಟ ಇವುಗಳಲ್ಲಿ ವ್ಯಾಪಕವಾಗಿ ತೊಡಗಿಕೊಂಡಿದ್ದವರೇ. ಹಾಗೆಯೇ ವಿವಿಧ ರಾಜ್ಯಗಳ ನಾಯಕರಾಗಿ, ರೈತ ಚಳುವಳಿಯ ನಾಯಕರಾಗಿ ಬೆಳೆದವರು ಕೂಡ ಅಸ್ಪೃಶ್ಯತಾ ವಿರೋಧಿ, ಜಾತಿ ವಿನಾಶಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡವರೇ ಆಗಿದ್ದಾರೆ. ಈ ಎಲ್ಲ ಹೋರಾಟ, ಕಾರ್ಯಕ್ರಮಗಳ ವಿವರಣೆಗೆ ಇಲ್ಲಿ ಸ್ಥಳಾವಕಾಶವಿಲ್ಲದಿರುವುದರಿಂದ ಕೆಲವು ಪ್ರಮುಖ ಚಳುವಳಿಗಳ ಉದಾಹರಣೆಯನ್ನೂ ಇಲ್ಲಿ ನೀಡಲಾಗಿದೆ.

ಗುರುವಾಯೂರು ದೇವಾಲಯ ಪ್ರವೇಶ ಚಳುವಳಿ :

ಭಾರತದ ಲೋಕಸಭೆಯ ಮೊಟ್ಟ ಮೊದಲ ಹಾಗೂ ದೀರ್ಘ ಕಾಲ ವಿರೋಧ ಪಕ್ಷದ ನಾಯಕರಾಗಿದ್ದ ಎ.ಕೆ.ಗೋಪಾಲನ್‌ರವರು ಭೂ ಹೋರಾಟಗಳ ಅಗ್ರಗಣ್ಯ ನಾಯಕರಾಗಿ ಪ್ರಸಿದ್ಧ ಹೆಸರು. ಅವರು ತಮ್ಮ ಸಾರ್ವಜನಿಕ ಸೇವೆಯಲ್ಲಿ ಮೊಟ್ಟ ಮೊದಲ ಹಾಗೂ ತೀವ್ರವಾಗಿ ಹೊಡೆತ ತಿಂದಿದ್ದು, ಎರಡನೇ ಜೈಲುವಾಸ ಅನುಭವಿಸಿದ್ದು. ನಂತರ ಅದೇ ವರ್ಷದಲ್ಲಿ ನವೆಂಬರ್‌ನಲ್ಲಿ ಆರಂಭವಾದ ಗುರುವಾಯೂರಿನ ಪ್ರಸಿದ್ಧ ಕೃಷ್ಣನ ದೇವಾಲಯ ಪ್ರವೇಶದ ಸತ್ಯಾಗ್ರಹವಂತೂ ಹಲವು ಹಂತಗಳ ಒಂದು ವರ್ಷ ಕಾಲದ ದೀರ್ಘ ಚಳುವಳಿಯಾಯಿತು. ಕಾಲ್ನಡಿಗೆ ಜಾಥಾದ ಮೂಲಕ ದಾರಿಯಲ್ಲಿನ ಎಲ್ಲ ಹಳ್ಳಿಗಳಲ್ಲಿ ಜಾಗೃತಿಯನ್ನೂ ಮೂಡಿಸುತ್ತಾ ಆರಂಭವಾಯಿತು. ದೇವಾಲಯದ ಎದುರು ಹಲವು ತಿಂಗಳುಗಟ್ಟಲೆ ಸತ್ಯಾಗ್ರಹ ಶಿಬಿರ, ನಂತರ ಕೇರಳಾದ್ಯಂತ ಒಂದು ಸಾವಿರ ಕಿ.ಮೀ.ಗಳ, 500 ಸಾರ್ವಜನಿಕ ಸಭೆಗಳ ಜಾಥಾ ಇವುಗಳಲ್ಲಿ ಅನೇಕ ಕಾಂಗ್ರೆಸ್ ನಾಯಕರೂ ಭಾಗವಹಿಸಿದ್ದರು. ಎ.ಕೆ.ಜಿ. ಈ ಸತ್ಯಾಗ್ರಹದ ಕ್ಯಾಪ್ಟನ್ ಆಗಿ, ಜಾಥಾ ನಾಯಕನಾಗಿದ್ದರು.

ಇದೇ ಅಸ್ಪೃಶ್ಯತಾ ಚಳುವಳಿಯ ಸಂದರ್ಭದಲ್ಲಿ ಗೋಪಾಲನ್ ಅವರ ತಂದೆ, ಹೆಂಡತಿಯೊಂದಿಗೆ ಸಂಬಂಧ ಮುರಿದು ಬಿತ್ತು.

ರಾಷ್ಟ್ರೀಯ ಕಮ್ಯೂನಿಸ್ಟ್ ನಾಯಕ ಇ.ಎಂ.ಎಸ್ ನಂಬೂದರಿಪಾದ್, ಇತ್ತೀಚೆಗೆ ಮುಖ್ಯಮಂತ್ರಿಯಾಗಿದ್ದ ವಿ.ಎಸ್ ಅಚ್ಯುತಾನಂದನ್ ಸೇರಿದಂತೆ ಕೇರಳದ ಅನೇಕ ನಾಯಕರು ತಮ್ಮ ಜಾತಿಗಳಲ್ಲಿನ ಕಂದಾಚಾರಗಳ ವಿರುದ್ಧ ಹಾಗೂ ಜಾತಿ ವ್ಯವಸ್ಥೆಯಲ್ಲಿ ಬ್ರಾಹ್ಮಣ್ಯದ ಬಿಗಿಹಿಡಿತದ ವಿರುದ್ಧ, ಎರಡು ಲೋಟ ಪದ್ಧತಿ, ನೀರಿನ ನಿಷೇಧಗಳು ದಾರಿಯ ನಿಷೇಧಗಳಂತಹ ಅಸ್ಪೃಶ್ಯತೆಯ ಆಚರಣೆಗಳ ವಿರುದ್ಧ ತೀವ್ರ ಹೋರಾಟಗಳನ್ನು ಹೂಡಿದವರು.

ಜಾತಿವ್ಯವ್ಯವಸ್ಥೆಯ ವಿರುದ್ಧದ ಇತಂಹ ದೃಢ ಹೋರಾಟಗಳ ಫಲವಾಗಿ ವಿವಿಧ ಜಾತಿಗಳ ಅದರಲ್ಲಿಯೂ ಕೆಳ ಜಾತಿಗಳು ಮತ್ತು ದಲಿತರ ನಾಯಕರುಗಳನೇಕರು ಕಮ್ಯೂನಿಸ್ಟ್ ಪಕ್ಷವನ್ನು ಸೇರಿದರು ಎಂಬುದನ್ನು ಇ.ಎಂ.ಎಸ್ ನಂಬೂದರಿಪಾದ್‌ರವರು ಗುರುತಿಸಿದ್ದಾರೆ. ಈ ಪ್ರಕ್ರಿಯೆಯ ಭಾಗವಾಗಿ ಸಿಪಿಐ(ಎಂ) ಪಕ್ಷ ಕೇರಳದ ಹಿಂದುಳಿದ ಜಾತಿಗಳ, ದಲಿತರ ನಡುವೆ ಗಟ್ಟಿ ನೆಲೆಯನ್ನು ಪಡೆದುಕೊಂಡಿದೆ.

ತಮಿಳುನಾಡಿನಲ್ಲಿ, ಮುಂದೆ ಸಿಪಿಐ(ಎಂ)ನ ಪಾಲಿಟ್ ಬ್ಯೂರೋ ಸದಸ್ಯರಾದ, ಸಿಐಟಿಯುನ ಸ್ಥಾಪಕ ಪ್ರಧಾನ ಕಾರ್ಯದರ್ಶಿಯಾದ ಪಿ. ರಾಮಮೂರ್ತಿಯವರು ದಲಿತರ ನಡುವೆ ವಿದ್ಯಾಭ್ಯಾಸ, ಸ್ವಚ್ಛತೆಗಳನ್ನು ಹರಡುವುದಕ್ಕಾಗಿ ದುಡಿದರು. ದಲಿತರಿಗೆ

ದೇವಾಲಯದಲ್ಲಿ ಪ್ರವೇಶ ದೊರಕಿಸುವುದಕ್ಕಾಗಿ ಐಯ್ಯಂಗಾರ್ ಜಾತಿಯ ಪಾರ್ಥಸಾರಥಿ ದೇವಾಲಯದ ಟ್ರಸ್ಟ್ ನಿಯಮಾವಳಿಗಳಲ್ಲಿನ ಸಂದು ಗೊಂದುಗಳನ್ನು ಬಳಸಿಕೊಂಡು ಇನ್ನೂರು ಚಮ್ಮಾರರನ್ನು ಟ್ರಸ್ಟ್ ಸದಸ್ಯರನ್ನಾಗಿ ಮಾಡುವುದರಲ್ಲಿ ಹೈಕೋರ್ಟಿನವರೆಗೂ ಹೋರಾಡಿ ಜಯಶೀಲರಾದರು. ಚಮ್ಮಾರರು ಮತ್ತು ಕುಟುಂಬದವರುಗಳೆಲ್ಲಾ ದೇವಾಲಯ ಪ್ರವೇಶ, ಪೂಜೆಯ ಹಕ್ಕು ಮಾತ್ರವಲ್ಲದೆ ಆಡಳಿತದ ಹಕ್ಕನ್ನು ದೊರಕಿಸಿದರು.

ಆಂಧ್ರದಲ್ಲಿ ತೆಲಂಗಾಣ ರೈತ ಹೋರಾಟದ ಅಪ್ರತಿಮ ನಾಯಕ, ಮುಂದೆ ಹಲವು ವರ್ಷಗಳ ಕಾಲ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಯಾಗಿದ್ದ ಪಿ. ಸುಂದರಯ್ಯನವರು ತಮ್ಮ ಸಾರ್ವಜನಿಕ ಜೀವನದ ಆರಂಭದಲ್ಲಿಯೇ ತಮ್ಮ ಗ್ರಾಮದಲ್ಲಿ ದಲಿತ ಜೀತಗಾರರು, ಕೂಲಿಕಾರರನ್ನು ಸಂಘಟಿಸಿ ಅವರಿಗಾಗಿ ಪಾಠಶಾಲೆ, ಕ್ಲಿನಿಕ್‌ಗಳನ್ನು ಆರಂಭಿಸಿದರು. ದಲಿತರೇ ಮಾಲೀಕರಾದ ಸಹಕಾರಿ ಅಂಗಡಿಯನ್ನು ಸ್ಥಾಪಿಸಿದರು. ಇದರಿಂದ ಮೇಲಜಾತಿಗಳ ಶ್ರೀಮಂತರ ಮೇಲೆ ಅವಲಂಬನವನ್ನು ತಪ್ಪಿಸಿದರು ಮತ್ತು ದಲಿತರಲ್ಲಿ ಎಚ್ಚರವನ್ನು ಮೂಡಿಸಿದರು. ಎಲ್ಲಕ್ಕಿಂತ ಮಿಗಿಲಾಗಿ ಊರಿನ ಎಲ್ಲಾ ಕುಡಿಯುವ ನೀರನ್ನು ಸೇದುವ ಬಳಸಿಕೊಳ್ಳುವ ಹಕ್ಕಿಗಾಗಿ ಹೋರಾಟವನ್ನು ಹೂಡಿ ಯಶಸ್ವಿಯಾದರು. ಈ ಚಳುವಳಿ ಸುತ್ತಮುತ್ತಲಿನ ಗ್ರಾಮಗಳಿಗೆ ಹಬ್ಬಿ ನಲ್ಲೂರು ಜಿಲ್ಲೆಯಲ್ಲಿಯೇ ಅಸ್ಪ್ರಶ್ಯತೆಯ ವಿರುದ್ಧ ದಿಟ್ಟ ಹೋರಾಟಗಾರರೆಂದು ಹೆಸರಾದರು. ಈ ಚಟುವಟಿಕೆಗಳಿಂದಾಗಿ ತಮ್ಮ ಹತ್ತಿರದ ಬಂಧುಗಳ ಬಹಿಷ್ಕಾರಕ್ಕೆ ಒಳಗಾದರೂ ಕೂಡ ದೃಢವಾಗಿ ಅಸ್ಪ್ರಶ್ಯತೆಯ ವಿರುದ್ಧ ಹೋರಾಟವನ್ನು ಸಾಗಿಸಿದರು.

ತೆಲಂಗಾಣ ಹೋರಾಟ ಎಂಬ ಇಂದ್ರಜಾಲ ಮತ್ತು ಇತರ ಭೂ ಹೋರಾಟಗಳು

"ಈ ಕಮ್ಯೂನಿಸ್ಟರಲ್ಲಿ ಏನು ಇಂದ್ರಜಾಲ ಅಥವ ಮಂತ್ರವಿದೆಯೋ ಗೊತ್ತಿಲ್ಲ! 'ದೊರೆಯೇ, ನಾನು ನಿನ್ನ ಗುಲಾಮ. ನಿನ್ನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇನೆ' ಎಂದು ಹೇಳುತ್ತಿದ್ದ ಜನರನ್ನೇ ಹೀರೋಗಳನ್ನಾಗಿ ಮಾಡಿಬಿಟ್ಟಿದ್ದಾರೆ. ಶೂನ್ಯದಿಂದ, ಬಂಜರು ಮಣ್ಣಿನಿಂದ ದೊಡ್ಡ ಹೀರೋಗಳನ್ನು ಸೃಷ್ಟಿಸಿಬಿಟ್ಟಿದ್ದಾರೆ."

ಇದು ಆಂಧ್ರದ ಪ್ರಸಿದ್ಧ ಪತ್ರಕರ್ತ ಸುರವರಂ ಪ್ರತಾಪರೆಡ್ಡಿಯವರು ತೆಲಂಗಾಣ ಹೋರಾಟದ ಸಂದರ್ಭದಲ್ಲಿ ತಮ್ಮ ಪತ್ರಿಕಾ ವರದಿಯಲ್ಲಿ ಮಾಡಿದ ಉದ್ಗಾರ. ತೆಲಂಗಾಣ ಪ್ರದೇಶದ ಮೂರು ಜಿಲ್ಲೆಗಳಲ್ಲಿ 1946 ರಿಂದ 1950ರವರೆಗೂ ವಿವಿಧ ರೂಪದಲ್ಲಿ ನಡೆದ, ಭಾರತದ ಅತ್ಯಂತ ವ್ಯಾಪಕ ಮತ್ತು ಧೀರ ಹೋರಾಟದ ಸಂದರ್ಭ ಅದು. ಭೂ ಮಾಲೀಕರು ಹಾಗೂ ನಿಜಾಂ ಸರ್ಕಾರದ ಪೋಲಿಸರು ಹಾಗೂ ಸೈನಿಕರನ್ನು ಮೂರು ಸಾವಿರಕ್ಕಿಂತ ಹೆಚ್ಚು ಹಳ್ಳಿಗಳು ಮತ್ತು ಪಟ್ಟಣಗಳಿಂದ ಹೊಡೆದು ಹೂಡಿಸಿದ ಸಶಸ್ತ್ರ ಹೋರಾಟ ಅದು. ಈ ಸಂದರ್ಭದಲ್ಲಿ ಗ್ರಾಮ ರಾಜ್ಯ ಸಮಿತಿಗಳನ್ನು ರಚಿಸಿ ಈ ವಿಶಾಲ ಪ್ರದೇಶದಲ್ಲಿ ಮೂರು– ನಾಲ್ಕು ವರ್ಷಗಳ ಕಾಲ ಅಡಳಿತ ನಡೆಸಲಾಯಿತು. ಈ ಸಮಿತಿಗಳಲ್ಲಿ ಅಂದಿನ ಕಾಲದಲ್ಲಿಯೇ ಗಣನೀಯ ಸಂಖ್ಯೆಯಲ್ಲಿ ದಲಿತರು ಸದಸ್ಯರಾಗಿ ಆಡಳಿತದಲ್ಲಿ ಭಾಗವಹಿಸಿದ್ದರು. ಗ್ರಾಮ ರಕ್ಷಣಾ ದಳಗಳಲ್ಲಿ ಬಹುಸಂಖ್ಯಾತರಾಗಿದ್ದರು. ದಲಿತರು–ದಲಿತರಲ್ಲದವರು ಒಗ್ಗೂಡಿ ನಿರಂತರವಾಗಿ ವರ್ಷಗಳ ಕಾಲ ಸೆಣಸಿದ್ದರ ಫಲವಾಗಿ ಮೂಡಿದ ಸೌಹಾರ್ದ ಭಾವನೆ ಮುಂದೆ ಈ ಪ್ರದೇಶದಲ್ಲಿ ಅಸ್ಪ್ರಶ್ಯತೆಯನ್ನು ತೊಡೆದು ಹಾಕಲು ಅನುಕೂಲ ವಾತಾವರಣವನ್ನು ನಿರ್ಮಿಸಿತು.

ಹಳ್ಳಿಗಳಲ್ಲಿ ಭೂ ಮಾಲೀಕರಿಗೆ ಸೇರಿದ 10 ಲಕ್ಷ ಎಕರೆಗಿಂತ ಹೆಚ್ಚು ಭೂಮಿ ಗೇಣಿದಾರರ, ಭೂ ಹೀನರ ಕೈಗೆ ವರ್ಗವಣೆಯಾಗಿ ಭೂ ಮಾಲೀಕರ ಶಕ್ತಿಯನ್ನು ಗಣನೀಯವಾಗಿ ಕುಗ್ಗಿಸಿತು. ಹಿಂದುಳಿದ ಜಾತಿಗಳ ಹಾಗು ದಲಿತರಿಗೆ ಭೂ ಹಂಚಿಕೆಮಾಡಿ ಅವರ ಶಕ್ತಿ, ಸ್ಥೈರ್ಯ ಹಾಗು ಆತ್ಮ ಗೌರವಗಳನ್ನು ಹೆಚ್ಚಿಸಿತು. ಜಾತಿ ವ್ಯವಸ್ಥೆಯ ಹಾಗು ಅಸ್ಪೃಶ್ಯತೆಯ ಆಚರಣೆಗಳ ಕಟ್ಟುನಿಟ್ಟು ಪಾಲನೆಯ ಸಂರಕ್ಷಕರಂತೆ ವರ್ತಿಸುತ್ತಿದ್ದ ಭೂ ಮಾಲೀಕರ ದಬ್ಬಾಳಿಕೆಯ ಶಕ್ತಿ ದುರ್ಬಲಗೊಂಡದ್ದು ಹಾಗು ದಲಿತರಲ್ಲಿ ಮೂಡಿದ ಎಚ್ಚರವೂ ಅಸ್ಪೃಶ್ಯತೆ ಸಡಿಲಗೊಳ್ಳಲು ಕಾರಣವಾಯಿತು.

ಅನೇಕ ಭೂ ಹೋರಾಟಗಳು

ಮೂವತ್ತರ ದಶಕದಿಂದಲೇ ಆರಂಭವಾಗಿ 1945–47ರ ನಡುವೆ ಭಾರತದ ಅನೇಕ ರಾಜ್ಯಗಳಲ್ಲಿ ಭುಗಿಲೆದ್ದ ಅನೇಕ ಭೂ ಹೋರಾಟಗಳು ಇಂತಹುದೇ ಪರಿಣಾಮವನ್ನು ಬೀರಿದವು. ಪಶ್ಚಿಮ ಬಂಗಾಳದ ಹಲವು ಜಿಲ್ಲೆಗಳಿಗೆ ಹಬ್ಬಿದ 'ತೇಭಾಗ' ಹೋರಾಟ, ಕೇರಳದ ಉತ್ತರ ಮಲಬಾರಿನ ಹಲವು ಜಿಲ್ಲೆಗಳಿಗೆ ವ್ಯಾಪಿಸಿದ್ದ 'ಚಿರಸ್ಮರಣೆ' ಕಾದಂಬರಿಯ ಪ್ರಸಿದ್ಧ ಕಯ್ಯೂರು ಹೋರಾಟ, ಹಾಗೆಯೇ ಪುನ್ನಪ್ರ–ವೈಯಲಾರ್ ಹೋರಾಟ, ತಮಿಳುನಾಡಿನ ತಂಜಾವೂರು ಹೋರಾಟ, ಅಸ್ಸಾಂನ ಸುರ್ಮಾ ಕಣಿವೆ ಹೋರಾಟ, ಮಹಾರಾಷ್ಟ್ರದ ವಾರಲೀಯರ ಹೋರಾಟಗಳು ಜಾತಿ ವ್ಯವಸ್ಥೆಯ ಬೇರನ್ನು ಅಲುಗಾಡಿಸಿದ ಅಸ್ಪೃಶ್ಯತೆಯ ನಿರ್ಬಂಧಗಳನ್ನು ಸಡಿಲಿಸಿದ ಪ್ರಸಿದ್ಧ ಹೋರಾಟಗಳು.

ಎಡ ರಂಗ ಸರ್ಕಾರಗಳು

ಕೇರಳ, ಪಶ್ಚಿಮ ಬಂಗಾಳ, ತ್ರಿಪುರಗಳಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಜಾತಿ ವ್ಯವಸ್ಥೆ, ಅಸ್ಪ್ರಶ್ಯತೆಯ ವಿರುದ್ಧದ ಹೋರಾಟಗಳು ಮತ್ತು ಭೂ ಹೋರಾಟಗಳ ನಡುವೆ ಹಾಕಿದ ಬೆಸುಗೆ ಸ್ವಾತಂತ್ರ್ಯಾನಂತರವೂ ಮುಂದುವರೆಯಿತು. ತೀವ್ರ ಭೂ ಸುಧಾರಣೆಗಾಗಿ ಭೂ ಮಾಲೀಕರ ಶಕ್ತಿಯನ್ನು ಅಲುಗಾಡಿಸುವದಕ್ಕಾಗಿ ಹಾಗೂ ಅಸ್ಪ್ರಶ್ಯತೆಯ ಆಚರಣೆಗಳ ವಿರುದ್ಧ ಹೋರಾಟಗಳು ನಡೆದವು. ಇವುಗಳ ಪರಿಣಾಮವಾಗಿ 1957ರಲ್ಲಿ ಇಡೀ ದೇಶದಲ್ಲಿ ವ್ಯಾಪಿಸಿದ್ದ ಕಾಂಗ್ರೆಸ್‌ನ ಏಕ ಪಕ್ಷ ಅಧಿಕಾರವನ್ನು ಮುರಿದು ಮೊದಲ ಬಾರಿಗೆ ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಅಧಿಕಾರಕ್ಕೆ ಬಂದಿತು.

ಪಶ್ಚಿಮ ಬಂಗಾಳ ಒಂದರಲ್ಲಿಯೇ 15 ಲಕ್ಷ ಭೂಹೀನ ದಲಿತ ಕುಟುಂಬಗಳಿಗೆ ಭೂಮಿಯನ್ನು ಮತ್ತು ಭೂ ಸಾಗುವಳಿಯ ಕಾನೂನು ಬದ್ಧ ಹಕ್ಕನ್ನು ನೀಡುವುದರಲ್ಲಿ ಯಶಸ್ಸು ಕಂಡಿತು. ಇದು ಕೇವಲ ಸರ್ಕಾರದ ಆಡಳಿತಾತ್ಮಕ ಕ್ರಮವಾಗಿರದೇ 1967ರ ಭೂ ಅಕ್ರಮಣ ಚಳುವಳಿ, 1978ರ ಬರಗಾಲ ಚಳುವಳಿಯ ಮೂಲಕ ಸಾಧಿಸಲಾಯಿತು. ಇದರಿಂದ ದಲಿತರಲ್ಲಿ ಮೂಡಿದ ಎಚ್ಚರ, ವಿದ್ಯಾಭ್ಯಾಸದ ಅವಕಾಶಗಳು ಮತ್ತು ಅವರು ರೈತರಾಗಿ ತಲೆಎತ್ತಿ ನಡೆಯಲು ಮೂಡಿದ ವಾತಾವರಣ ಇವುಗಳು ಅಸ್ಪೃಶ್ಯತೆಯ ಆಚರಣೆಗಳಿಗೆ ದೊಡ್ಡ ಪೆಟ್ಟು ನೀಡಿದವು.

ಭೂ ಸುಧಾರಣಾ ಕಾನೂನು, ಭೂ ಹೋರಾಟಗಳ ಜೊತೆ ಜೊತೆಗೆ ಕೇರಳ, ಪಶ್ಚಿಮ ಬಂಗಾಳ, ತ್ರಿಪುರ ರಾಜ್ಯಗಳಲ್ಲಿ ಅಡಳಿತ ವಿಕೇಂದ್ರಿಕರಣದ – ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಗಣನೀಯವಾಗಿ ಅಧಿಕಾರವನ್ನು ವಿಕೇಂದ್ರಿಕರಿಸಿದ ತೀವ್ರ ಸುಧಾರಣೆ ಕೂಡ ಗಮನಾರ್ಹ. ಭೂ ಮಾಲೀಕರ ಶಕ್ತಿಯನ್ನು ಕುಗ್ಗಿಸಿದ ನಂತರ ನಡೆದ ಈ ಪಂಚಾಯತ್‌ರಾಜ್ ಚುನಾವಣೆಗಳಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಕೂಲಿಕಾರರು, ಬಡ ರೈತರು ಆಯ್ಕೆಯಾಗಿ ಬರಲು ಹಾಗೂ ಅಧ್ಯಕ್ಷ ಪದವಿಗಳಿಗೆ ಮೀಸಲಾತಿ ಬರುವ ಮೊದಲೇ ದಲಿತರನೇಕರು ಪಂಚಾಯತ್ ರಾಜ್ ಸಂಸ್ಥೆಗಳ ಅಧ್ಯಕ್ಷ ಪದವಿಯನ್ನು ಪಡೆಯಲು ಅವಕಾಶವಾಯಿತು.

ಇದರಿಂದಾಗಿ ಅನೇಕ ಮೀಸಲು ಅಲ್ಲದ ಸಾಮಾನ್ಯ ಕ್ಷೇತ್ರಗಳಲ್ಲಿಯೂ ದಲಿತರು ಗೆದ್ದು ಬಂದರು. ಇದು ಶಾಸಕರ ಸ್ಥಾನಗಳಿಗೂ ವಿಸ್ತರಿಸಿ ಅನೇಕ ದಲಿತರು ಸಾಮಾನ್ಯ ಕ್ಷೇತ್ರದಿಂದ ಗೆದ್ದು ಬರುವ ಒಂದು ವಿಶಿಷ್ಟ ಸಾಧನೆ ಪಶ್ಚಿಮ ಬಂಗಾಳದ್ದಾಯಿತು. ಮತ್ತೊಂದು ವಿಶೇಷವೆಂದರೇ ಸರ್ಕಾರಿ ಉದ್ಯೋಗಗಳಲ್ಲಿಯೂ ಮುಖ್ಯವಾಗಿ ಶಿಕ್ಷಕ ಹುದ್ದೆಗಳಲ್ಲಿ ದಲಿತರು ತಮ್ಮ ಮೀಸಲಾತಿಯ ಪ್ರಮಾಣವನ್ನು ಮೀರಿ ಆಯ್ಕೆಯಾಗಲು ಸಾಧ್ಯವಾಯಿತು. ಉದಾಹರಣೆಗೆ ಪಶ್ಚಿಮ ಬಂಗಾಳದ ಪ್ರಾಥಮಿಕ ಶಿಕ್ಷಕರಲ್ಲಿ ಶೇ. 27ರಷ್ಟು ಹಾಗೂ ಪ್ರೌಢಶಾಲಾ ಶಿಕ್ಷಕರಲ್ಲಿ ಶೇ 29ರಷ್ಟು ದಲಿತರಾಗಿದ್ದಾರೆ.

ಜಾತಿ ಪದ್ಧತಿಯ ವಿಶ್ಲೇಷಣೆ:

ಹೀಗೆ ಕಮ್ಯೂನಿಸ್ಟರು ತಮ್ಮ ಪಕ್ಷದ ಆರಂಭದ ದಿನಗಳಿಂದಲೇ ಜಾತಿ ವ್ಯವಸ್ಥೆಯ ಹಾಗೂ ಅಸ್ಪೃಶ್ಯತೆಯ ವಿರುದ್ಧ ಹೋರಾಟಗಳಲ್ಲಿ ತೊಡಗಿದುದಕ್ಕೆ ಎಲ್ಲ ರೀತಿಯ ಅಸಮಾನತೆಯ ವಿರುದ್ಧ ಸಿಡಿದೆದ್ದು, ಮನುಷ್ಯ-ಮನುಷ್ಯರ ನಡುವೆ ಸಮಾನತೆಯನ್ನು ಸ್ಥಾಪಿಸಬೇಕೆಂಬ ಮಾರ್ಕ್ಸ್‌ವಾದದ ಮೂಲಭೂತ ತುಡಿತ ಪ್ರಮುಖ ಆಧಾರ. ಅದೇ ಸಮಯದಲ್ಲಿ ಭಾರತದ ವಿಶಿಷ್ಠ ಸಾಮಾಜಿಕ ರಚನೆಯಾದ ಜಾತಿ ಪದ್ಧತಿಯನ್ನು ಆಳವಾಗಿ ವಿಶ್ಲೇಷಿಸಿ ಈ ಪದ್ಧತಿಯ ಉಗಮಕ್ಕೆ ಕಾರಣ ಹಾಗೂ ಅದರ ನಿರ್ಮೂಲನೆಯ ದಾರಿಯನ್ನು ಅನ್ವೇಷಿಸಿದ್ದು ಒಂದು ಮುಖ್ಯ ಕಾರಣ. 1922ರಿಂದಲೇ ಇಂತಹ ಚಿಂತನೆಯನ್ನು ಗುರುತಿಸಬಹುದಾದರೂ 1928ರಲ್ಲಿ ರೂಪುಗೊಂಡ ಮೊತ್ತ ಮೊದಲ ಕ್ರಿಯಾ ಯೋಜನೆಯಲ್ಲಿ ಅದರ ಸ್ಪಷ್ಟ ನಿರೂಪಣೆಯನ್ನೂ ನಾವು ನೋಡಬಹುದು.

"ಬ್ರಿಟಿಷರ ಆಡಳಿತ, ಭೂ ಮಾಲಕ ಪದ್ಧತಿ, ಪ್ರತಿಗಾಮಿ ಜಾತಿ ವ್ಯವಸ್ಥೆ ,ಮತೀಯ ಮೋಸಗಳು ಮತ್ತು ಭೂತಕಾಲದ ಎಲ್ಲ ಗುಲಾಮಿ ಹಾಗೂ ರೈತ ಸುಲಿಗೆಯ ಪರಂಪರೆಗಳು ಭಾರತದ ಜನತೆಯ ಉಸಿರು ಕಟ್ಟಿಸುತ್ತಿವೆ ಮತ್ತು ಅವರ ವಿಮೋಚನೆಯ ದಾರಿಗೆ ಅಡ್ಡಗಲ್ಲುಗಳಾಗಿವೆ.

ಇವುಗಳು, 20ನೇಯ ಶತಮಾನದಲ್ಲಿಯೂ ಭಾರತದಲ್ಲಿ ಬೇರೆಯವರನ್ನು ಭೇಟಿ ಮಾಡಲಾಗದ, ಎಲ್ಲರೂ ಉಪಯೋಗಿಸುವ ಭಾವಿಗಳಲ್ಲಿ ನೀರು ಕುಡಿಯಲಾಗದ, ಎಲ್ಲರೂ ಕಲಿಯುವ ಶಾಲೆಗಳಲ್ಲಿ ಕಲಿಯಲಾಗದ ಪರ್ಯಾಯ ಜನ ಸಮುದಾಯವನ್ನು ಕಾಣುವ ಸ್ಥಿತಿಯನ್ನು ತಂದೊಡ್ಡಿವೆ.

ಭಾರತ ಕಮ್ಯೂನಿಸ್ಟ್ ಪಕ್ಷವು ಗುಲಾಮಗಿರಿ, ಜಾತಿ ವ್ಯವಸ್ಥೆ ಮತ್ತು ಜಾತಿ ಬದ್ಧ ಅಸಮಾನತೆಯ ಎಲ್ಲ ರೂಪಗಳ (ಸಾಮಾಜಿಕ ಸಾಂಸ್ಕೃತಿಕ ಇತ್ಯಾದಿ) ವಿರುದ್ಧ ಹೋರಾಡುತ್ತದೆ. ಭಾರತ ಕಮ್ಯೂನಿಸ್ಟ್ ಪಕ್ಷವು ದೇಶದ ಎಲ್ಲ ಪರಯಾ ದುಡಿಯುವ ಜನರ ಮತ್ತು ಎಲ್ಲ ಶ್ರಮಿಕರ ಸಂಪೂರ್ಣ ಮತ್ತು ಶಾಶ್ವತ ಸಮಾನತೆಗಾಗಿ ಹೋರಾಡುತ್ತದೆ."

ಪಾಳೆಯಗಾರಿ ಭೂ ಸಂಬಂಧಗಳೇ ಜಾತಿ ವ್ಯವಸ್ಥೆಯ ಹಾಗೂ ಅಸ್ಪೃಶ್ಯತೆಯ ಅಡಿಪಾಯ. ಅದನ್ನು ಅಲುಗಾಡಿಸದೇ ಜಾತಿ ವ್ಯವಸ್ಥೆಯನ್ನು, ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುವುದು ಸಾಧ್ಯವಿಲ್ಲ ಎಂಬುದು ಮಾರ್ಕ್ಸ್‌ವಾದಿಗಳ ದೃಢ ಅಭಿಪ್ರಾಯ.

ಇದು ಪಕ್ಷದ ಗುರಿ ಹಾಗೂ ಕಾರ್ಯಕ್ರಮದ ಘೋಷಣೆಯಾದರೆ ಜಾತಿ ಪದ್ಧತಿಯ ಸ್ವರೂಪ ಮತ್ತು ಮೂಲದ ಬಗ್ಗೆ ಇ.ಎಂ.ಎಸ್.ನಂಬೂದರಿಪಾದ್‌ರವರು ಹೀಗೆ ವಿವರಿಸಿದ್ದಾರೆ.

"ಗ್ರೀಸ್, ರೋಮ್ ಮತ್ತು ಕೆಲವು ಪಶ್ಚಿಮ ಏಷ್ಯಾ ದೇಶಗಳಲ್ಲಿ ಬೆಳೆದು ಬಂದ ಗುಲಾಮಿ ಪದ್ಧತಿಗೂ ಭಾರತದಲ್ಲಿ ಉಗಮವಾದ ವರ್ಣ-ಜಾತಿ ವ್ಯವಸ್ಥೆಗೂ ಮೂಲಭೂತ ವ್ಯತ್ಯಾಸವಿಲ್ಲ. ಒಂದು ವ್ಯತ್ಯಾಸವೆಂದರೆ ಗುಲಾಮಿ ವ್ಯವಸ್ಥೆಯಲ್ಲಿ ಬಹು ಸಂಖ್ಯೆಯ ಜನರನ್ನು ಗುಲಾಮರೆಂದು ಘೋಷಿಸಿ ಬಹಿರಂಗವಾದ, ನೇರವಾದ ದಮನದ ಮೂಲಕ ಶೋಷಣೆ ಮಾಡಲಾಗುತ್ತಿತ್ತು, ಆದರೆ ಭಾರತದಲ್ಲಿ ಇದನ್ನೇ ಜಾತಿಯ ಹೆಸರಿನಲ್ಲಿ ಮಾಡಲಾಗುತ್ತಿತ್ತು.

ವರ್ಣ-ಜಾತಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಾಗ ಅದನ್ನು ನಿರಂತವಾಗಿ ಮುಂದುವರೆಸಲಿಕ್ಕೆ ಹಾಗೂ ಸಮರ್ಥಿಸಿಕೊಳ್ಳಲಿಕ್ಕೆ ಒಂದು ವಿಶಿಷ್ಟ ಧಾರ್ಮಿಕ ಮತ್ತು ಸೈದ್ಧಾಂತಿಕ-ತತ್ವ ಶಾಸ್ತ್ರೀಯ ಚೌಕಟ್ಟನ್ನು ಈ ಶೋಷಣಾ ವ್ಯವಸ್ಥೆಯ ಸುತ್ತ ರೂಪಿಸಲಾಯಿತು. ಹಿಂದೂ ಧರ್ಮ, ಹಿಂದೂ ತತ್ವ ಶಾಸ್ತ್ರ ಮತ್ತು ಹಿಂದೂ ಸಂಸ್ಕೃತಿ ಎಂದರೆ ಇದೇ (ಭಾರತದ ಸ್ವಾತಂತ್ರ್ಯ ಚಳುವಳಿಯ ಚರಿತ್ರೆ).

ಎಲ್ಲಾ ಜಾತಿ, ಉಪಜಾತಿಗಳ ಜನರೂ ಜಾತಿ ವ್ಯವಸ್ಥೆಯು ಸ್ವತಃ ದೇವರೇ ಸೃಷ್ಟಿಸಿದ್ದೆಂದು ಮತ್ತು ಈ ಜನ್ಮದಲ್ಲಿ ಜಾತಿ ವ್ಯವಸ್ಥೆಗೆ ತಲೆಬಗ್ಗಿ ನಡೆದರೆ ಮುಂದಿನ ಜನ್ಮದಲ್ಲಿ ಸುಖ ಸಂತೋಷಗಳು ಲಭಿಸುತ್ತವೆಂದು ನಂಬಿಸಲಾಯಿತು.

ಕೇರಳವು ಬ್ರಾಹ್ಮಣ್ಯದ ಶ್ರಮ ವಿಭಜನೆಯ ವ್ಯವಸ್ಥೆಯನ್ನು ಅಂಗೀಕರಿಸುವುದರ ಜೊತೆಗೆ ಅದನ್ನು ಮತ್ತಷ್ಟು ಕೆಟ್ಟ ಅಸ್ಪೃಶ್ಯತೆ ಮತ್ತು ಅ-ದರ್ಶನೀಯ ವ್ಯವಸ್ಥೆಯಾಗಿ ಬೆಳೆಸಿತು. (ಕೇರಳ ನಿನ್ನೆ, ಇಂದು, ನಾಳೆ)

ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ವಿವರಿಸಿರುವಂತೆ :

ಅಸ್ಪೃಶ್ಯತೆಯ ಶಾಪದ ಜೊತೆಯಲ್ಲಿಯೇ ದಲಿತರಿಗೆ ಯಾವುದೇ ಆಸ್ತಿಯ ಮೇಲೆ ಹಕ್ಕು ಇರಲಿಲ್ಲ. ಮೇಲ್ಜಾತಿಯವರು ಉಂಡು ಬಿಸಾಡಿದ, ಹಳಸಿದ ಆಹಾರವನ್ನು ದಲಿತರು ಸೇವಿಸಬೇಕಾಗಿತ್ತು. ಸಾರ್ವಜನಿಕ ಬಾವಿಗಳಿಂದ ನೀರನ್ನು ತರಲು ಅವಕಾಶ ಕೊಡುತ್ತಿರಲಿಲ್ಲ; ದೇವಸ್ಥಾನಗಳ ಪ್ರವೇಶವನ್ನು ನಿರಾಕರಿಸಲಾಗಿತ್ತು. ಜ್ಞಾನ ಮತ್ತು ಶಿಕ್ಷಣದ ಹಕ್ಕುಗಳಿಂದ ದೂರವಿಡಲಾಗಿತ್ತು. ಮೇಲ್ಜಾತಿಯವರ ಮಲ ಹೊರುವ ಕೆಲಸ ಮಾಡಬೇಕಾಗಿತ್ತು. ಸಾರ್ವಜನಿಕ ಸ್ಮಶಾನಗಳನ್ನು ಬಳಸಲು ಅವಕಾಶವಿರಲಿಲ್ಲ , ಮೇಲ್ಜಾತಿಯವರು ವಾಸಿಸುವ ಹಳ್ಳಿಯ ಮುಖ್ಯ ಭಾಗದಲ್ಲಿ ಇವರಿಗೆ ವಾಸಿಸುವ ಅವಕಾಶ ಇರಲಿಲ್ಲ , ಭೂಮಿ ಮತ್ತು ಇತರೆ ಆಸ್ತಿಗಳ ಮಾಲೀಕರಾಗುವುದನ್ನು ದಲಿತರಿಗೆ ನಿರಾಕರಿಸಲಾಗಿದ್ದರಿಂದಾಗಿ ಆರ್ಥಿಕ ಚಲನಶೀಲತೆಯನ್ನುಂಟು ಮಾಡುವ ಯಾವುದೇ ಮೂಲವನ್ನು ಹೊಂದಲು ಅವಕಾಶವಿರಲಿಲ್ಲ. ಹೀಗಾಗಿ ದಲಿತರು ಸಾಮಾಜಿಕ ಬಹಿಷ್ಕಾರ ಮತ್ತು ಆರ್ಥಿಕ ತಾರತಮ್ಯಕ್ಕೆ ಶತಮಾನಗಳ ಕಾಲ ಒಳಗಾಗಿದ್ದರು. ಒಂದಿಲ್ಲೊಂದು ವಿಧಾನದಲ್ಲಿ ದೇಶದ ಹಲವಾರು ಭಾಗಗಳಲ್ಲಿ ಇದು ಇಂದಿಗೂ ಮುಂದುವರೆಯುತ್ತಿದೆ.

ಸ್ವಾತಂತ್ರ್ಯ ನಂತರದ ಸುಮಾರು 60 ವರ್ಷಗಳ ನಂತರವೂ ಸಹ ಜಾತಿ ವ್ಯವಸ್ಥೆಯಲ್ಲಿ ಯಾವುದೇ ಮೂಲಭೂತ ಬದಲಾವಣೆಯಾಗಿಲ್ಲ. ಏಕೆಂದರೆ ಬಂಡವಾಳಶಾಹಿ ವರ್ಗ ಭೂಮಾಲಕತ್ವದೊಂದಿಗೆ ರಾಜಿ ಮಾಡಿಕೊಂಡಿದ್ದು ಜಾತಿ ಪೂರ್ವಾಗ್ರಹಗಳಿಗೆ ಪೋಷಣೆ ನೀಡಿತು. ಭೂಸಂಬಂಧಗಳ ಅಮೂಲಾಗ್ರ ಪರಿವರ್ತನೆ ಅಸ್ಪೃಶ್ಯತೆ ಮತ್ತು ಜಾತಿ ವ್ಯವಸ್ಥೆಗೆ ಬಲವಾದ ಹೊಡೆತ ನೀಡಬಹುದಾಗಿತ್ತು. ಆದರೆ ಸ್ವಾತಂತ್ರ್ಯ ನಂತರವೂ ಭೂ ಸಂಬಂಧಗಳ ಮೂಲರಚನೆ ಬದಲಾಗಲಿಲ್ಲ.

ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯನ್ನೂ ಸಿಪಿಐ(ಎಂ) ನಾಯಕರು ವಿಶ್ಲೇಷಿಸುವುದರ ಜೊತೆಗೇ ಭಾರತದ ಮಾರ್ಕ್ಸ್‌ವಾದಿ ಇತಿಹಾಸಕಾರರಾದ ಡಿ.ಡಿ.ಕೊಸಾಂಬಿ, ಇರ್ಫಾನ್ ಹಬೀಬ್, ರೊಮಿಲಾ ಥಾಪರ್, ಆರ್.ಎಸ್.ಶರ್ಮ ಕೆಲವು ಮಾರ್ಕ್ಸ್‌ವಾದಿ ಸಮಾಜ ಶಾಸ್ತ್ರಜ್ಞರು ಅನೇಕ ಅಧ್ಯಯನ-ಸಂಶೋಧನೆಗಳನ್ನು ಮಾಡಿದ್ದಾರೆ.

ಅಂಬೇಡ್ಕರ್ ಮತ್ತು ಮಾರ್ಕ್ಸ್‌ವಾದಿಗಳ ಸಾಮ್ಯತೆ, ಭಿನ್ನತೆ

ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ಬಗ್ಗೆ ಮಾರ್ಕ್ಸ್‌ವಾದಿಗಳ ವಿಶ್ಲೇಷಣೆಯು ಆರಂಭದಿಂದಲೂ ಗಾಂಧಿ ...ಯುವರ ಹಾಗೂ ಕಾಂಗ್ರೆಸ್‌ನವರ ವಾದಕ್ಕಿಂತ, 19-20 ನೆಯ ಶತಮಾನಗಳ ಅನೇಕ ಮೇಲ್ಜಾತಿ ಸಮಾಜ ಸುಧಾರಕರ ವಾದಕ್ಕಿಂತ ಭಿನ್ನವಾಗಿರುವುದನ್ನು ಗಮನಿಸಬಹುದು. ವರ್ಣಾಶ್ರಮ ಧರ್ಮ, ವೈದಿಕ ಧರ್ಮ, ಅವರ ತತ್ವ ಶಾಸ್ತ್ರ ಮತ್ತು ಸಂಸ್ಕೃತಿಗಳನ್ನೇ ಧಿಕ್ಕರಿಸದೆ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆಯ ನಿರ್ಮೂಲನೆ ಸಾಧ್ಯವಿಲ್ಲ ಎಂಬುದರಲ್ಲಿ, ಜಾತಿ ವ್ಯವಸ್ಥೆ ಎಂಬುದು ಒಂದು ಸಾಮಾಜಿಕ ರೂಪ ಮಾತ್ರವಲ್ಲ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಆಯಾಮಗಳ ಮೇಳವ ಎಂಬುದರಲ್ಲಿ, ಜಾತಿ ವ್ಯವಸ್ಥೆಯ ಸೈದ್ಧಾಂತಿಕ ಆಧಾರಗಳಿಂದ ಹುಟ್ಟು, ವಿವಾಹ, ಪುನರ್ ಜನನದಲ್ಲಿನ ನಂಬಿಕೆ, ದೈವಸೃಷ್ಠಿ ಇಂತಹುವುಗಳ ಬಗ್ಗೆ ಅಂಬೇಡ್ಕರ್‌ರವರ ಹಾಗೂ ಮಾರ್ಕ್ಸ್‌ವಾದಿಗಳ ವಿಶ್ಲೇಷಣೆಯಲ್ಲಿ ಸಂಪೂರ್ಣ ಸಾಮ್ಯತೆಯಿದೆ.

ಅಂಬೇಡ್ಕರ್‌ರವರಂತೆಯೇ ಮಾರ್ಕ್ಸ್‌ವಾದಿಗಳು ದಲಿತರಿಗೆ ಮೀಸಲಾತಿಯ ಕಟ್ಟಾ ಸಮರ್ಥಕರು. (ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ಕೂಡ 1957ರ ಪ್ರಥಮ ಕಮ್ಯೂನಿಸ್ಟ್ ಸರ್ಕಾರ ಕೇರಳದಲ್ಲಿ ಜಾರಿಗೆ ತಂದಿತು.) ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಮಹಾಡ್‌ನ ಕೆರೆಯ ಸ್ಪರ್ಶ, ನಾಸಿಕ್‌ನ ದೇವಾಲಯ ಪ್ರವೇಶದಂತಹ ನೇರ ಸಾಮಾಜಿಕ ಕಾರ್ಯಾಚರಣೆಗಳು, ಮೀಸಲಾತಿ, ಮಹಾರ್ ವತನ ವಿರೋಧಿ, ಖೇತಿ ಭೂ ಸಂಬಂಧದ ವಿರೋಧದಂತಹ ಆರ್ಥಿಕ ಕ್ರಮಗಳೆರಡೂ ಬೇಕೆಂಬುದನ್ನು ಮಾರ್ಕ್ಸ್‌ವಾದಿಗಳು. ಕಾರ್ಯತಃ ಒಪ್ಪಿಕೊಂಡಿದ್ದರು ಮತ್ತು ಅಂತಹದೇ ಹಲವು ಹೋರಾಟಗಳನ್ನು ಹೂಡಿದ್ದರು ಎಂಬುದನ್ನೂ ಮೇಲೆ ನೋಡಿದ್ದೇವೆ.

ಡಾ. ಅಂಬೇಡ್ಕರ್‌ರವರ ಆರ್ಥಿ...ಚಾರಗಳು ಮಾರ್ಕ್ಸ್‌ವಾದಿಗಳ ಆರ್ಥಿಕ ವಿಚಾರಗಳೊಂದಿಗೆ ಸಾಮ್ಯತೆ ಹೊಂದಿವೆಯೇ ಹೊರತು ಗಾಂಧಿವಾದಿಗಳು, ಕಾಂಗ್ರೆಸ್ಸಿಗರು ಹಾಗೂ ಲೋಹಿಯಾವಾದಿಗಳೂ ಸೇರಿದಂತೆ ಯಾವುದೇ ರೀತಿಯ ಸಮಾಜವಾದಿಗಳೊಂದಿಗೂ ತಿಲ ಮಾತ್ರ ಸಾಮ್ಯವನ್ನು ಹೊಂದಿಲ್ಲ. ಡಾ.ಅಂಬೇಡ್ಕರರು "ಸರ್ಕಾರವು ಸಂಪತ್ತಿನ ಸಮಾನ ಹಂಚಿಕೆ ಸಾಧ್ಯವಾಗುವಂತೆ ಗರಿಷ್ಠ ಮಟ್ಟದ

(46ನೇ ಪುಟಕ್ಕೆ)

ಬುದ್ಧ, ಮಾರ್ಕ್ಸ್ ಮತ್ತು ಅಂಬೇಡ್ಕರ್



ಡಾ॥ ಸಿದ್ದನಗೌಡ ಪಾಟೀಲ್ ಸಿಪಿಐ ಮುಖಂಡರು

"ಎಲ್ಲಿ ದುರಾಶೆ ಇರುವುದೋ ಅಲ್ಲಿ ಹೊಂದಬೇಕೆಂಬ ಹಂಬಲವಿರುತ್ತದೆ. ಈ ವಿಧಾನದಲ್ಲೇ ಇದನ್ನು ಅರ್ಥಮಾಡಿಕೊಳ್ಳಬೇಕು. ಯಾರೇ ಆಗಲಿ, ಯಾವುದನ್ನೇ ಆಗಲಿ, ಯಾವ ರೂಪದಲ್ಲೇ ಆಗಲಿ ಹೊಂದಬೇಕೆಂಬ ಹಂಬಲ ಎಲ್ಲಿ ಇರುವುದಿಲ್ಲವೋ ಅಲ್ಲಿ ದುರಾಶೆ ಸುಳಿಯಲು ಸಾಧ್ಯವೆ?" – ಬುದ್ಧ

"ಜನರೂ, ಉತ್ಪಾದನಾ ಸಾಧನಗಳೂ, ಆಸ್ತಿ–ಪಾಸ್ತಿಗಳೂ ವಿವಿಧ ಭಾಗಗಳಲ್ಲಿ ಹಂಚಿ ಹೋಗಿರುವ ಪರಿಸ್ಥಿತಿಯನ್ನು ಬೂರ್ಷ್ವಾಸೀಯು ಹೆಚ್ಚು ಹೆಚ್ಚಾಗಿ ನಾಶಮಾಡುತ್ತ ಹೋಗುತ್ತದೆ. ಅದು ಜನರನ್ನೆಲ್ಲ ಒಂದೇಕಡೆ ಸೇರಿಸಿದೆ. ಉತ್ಪಾದನಾ ಸಾಧನಗಳನ್ನು ಕೇಂದ್ರೀಕರಿಸಿದೆ ಮತ್ತು ಆಸ್ತಿಯನ್ನು ಕೆಲವೇ ವ್ಯಕ್ತಿಗಳ ಕೈಯಲ್ಲಿ ಏಕತ್ರಗೊಳಿಸಿದೆ"

– ಮಾರ್ಕ್ಸ್–ಎಂಗೆಲ್



ಸಾಮಾಜಿಕ ವಿಕಾಸದ ನಿರ್ಧಿಷ್ಟ ಕಾಲಘಟ್ಟದಲ್ಲಿ ನಾವು ನಿಂತಿದ್ದೇವೆ. ಕಳೆದ ಶತಮಾನದಲ್ಲಿ ನಮ್ಮ ಹಿಂದಿನ ಪೀಳಿಗೆಯವರು ತಮ್ಮ ತ್ಯಾಗ, ಬಲಿದಾನಗಳಿಂದ, ಸಾಮ್ರಾಜ್ಯಶಾಹಿಗಳಿಂದ ಪಡೆದ 'ಸ್ವಾತಂತ್ರ್ಯ'ವನ್ನು ಇನ್ನೂ ಉತ್ತಮಪಡಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿ ನಮ್ಮ ಮೇಲಿತ್ತು. ನಿಜ, ನಾವು ಪಡೆದಿದ್ದು ಸ್ವಾತಂತ್ರ್ಯವೇ ಅಲ್ಲ ಅದು ಕೇವಲ ಅಧಿಕಾರ ಹಸ್ತಾಂತರ ಎಂಬ ವಾದವಿದೆ. ಆ ಹಸ್ತಾಂತರಕ್ಕಾದರೂ ನಡೆದ ಹೋರಾಟಗಳೆಷ್ಟು ಎಂಬುದನ್ನು ಸ್ಮರಿಸಿ, ಸಾಮ್ರಾಜ್ಯಶಾಹಿಗಳಿಂದ ದೇಶಿ ಬಂಡವಾಳಗಾರರಿಗೆ ಮತ್ತು ಭೂ ಮಾಲೀಕರಿಗೆ ದೊರೆತ ಸ್ವಾತಂತ್ರ್ಯವನ್ನು ಈ ದೇಶದ ಸಾಮಾನ್ಯ ಪ್ರಜೆಗೆ ತಲುಪಿಸುವಲ್ಲಿ ನಾವೇನು ಮಾಡಿದ್ದೇವೆ, ಮಾಡುತ್ತಿದ್ದೇವೆ ಎಂಬುದರತ್ತ ಇಂದು ಗಮನಹರಿಸಬೇಕಾಗಿದೆ. ಜಾಗತೀಕರಣದ ಹೆಸರಿನಲ್ಲಿ ಸಾಮ್ರಾಜ್ಯಶಾಹಿ ಮತ್ತೆ ವಿಶ್ವವನ್ನು ವ್ಯಾಪಿಸಿದೆ. ಬಡದೇಶಗಳ ಸುಲಿಗೆಗೆ ವಿಶ್ವದ ಎಲ್ಲ ದೇಶಗಳ ಬಂಡವಾಳಗಾರರು ಒಗ್ಗಟ್ಟಾಗಿದ್ದಾರೆ. ವಿಶ್ವ ಸಂಸ್ಥೆಯನ್ನೂ ಒಳಗೊಂಡು ಎಲ್ಲ ದೇಶಗಳ ಪ್ರಜಾಪ್ರತಿನಿಧಿ ವೇದಿಕೆಗಳಿಗೆ ವಿಶ್ವ ವ್ಯಾಪಾರ ಸಂಘಟನೆ (WTO) ತನ್ನ ಹಿತಾಸಕ್ತಿಯ ಜಾರಿಗೆ ಆದೇಶಗಳನ್ನು ಕೊಡುತ್ತಿದೆ. ಭಾರತದ ಪಾರ್ಲಿಮೆಂಟ್‌ನ್ನೂ ಒಳಗೊಂಡು ವಿಶ್ವದ ಬಹುತೇಕ ಸರಕಾರಗಳು ತಮ್ಮ ಪ್ರಜೆಗಳ ಹಿತಾಸಕ್ತಿಯನ್ನು ಬಲಿಕೊಟ್ಟು ಅದರ ಆಜ್ಞಾಧಾರಕರಾಗುತ್ತಿವೆ. ಎಂಥ ಬೆಲೆ ತೆತ್ತರೂ ಚಿಂತೆಯಿಲ್ಲ. ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗೆ ಬದ್ಧರಾಗಿದ್ದೇವೆಂದು ನಮ್ಮ ದೇಶದ ಆಳುವ ವರ್ಗ ತನ್ನ ನೀತಿಯನ್ನು ರೂಪಿಸುತ್ತಿದೆ. ಕಾಂಗ್ರೆಸ್, ಬಿಜೆಪಿ ಪಕ್ಷಗಳು ಮತ್ತವರ ಮೈತ್ರಿಕೂಟದಲ್ಲಿರುವ ಪ್ರಾದೇಶಿಕ ಪಕ್ಷಗಳು ನವಸಾಮ್ರಾಜ್ಯಶಾಹಿಯ ಆರ್ಥಿಕ ನೀತಿಗೆ ಬದ್ಧವಾಗಿವೆ. ವಿಶ್ವದ ಸಮಾಜವಾದಿ ಬಣದ ಪತನದ ನಂತರ ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ನೀತಿಗೆ ಪರ್ಯಾಯವಿಲ್ಲವೆಂದು ಘೋಷಿಸುತ್ತಿವೆ. ಇದನ್ನು ವಿಶ್ವದ ಪ್ರಗತಿಪರ ಶಕ್ತಿಗಳು ಒಪ್ಪದೇ ಪರ್ಯಾಯವಿದೆ ಎಂದು ಹೇಳುತ್ತವೆಯಾದರೂ ಒಂದು ಐಕ್ಯ ಕಾರ್ಯಾಚರಣೆ ರೂಪಿಸುತ್ತಿಲ್ಲ. ನಮ್ಮ ದೇಶದ ಜನಪರವಾದ ಸಂಘಟನೆಗಳು, ಪಕ್ಷಗಳು ಪ್ರತ್ಯೇಕ ನೆಲೆಗಳಿಂದಲೇ ತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸುತ್ತಿವೆ. ಇಂದಿನ ಸಾಮ್ರಾಜ್ಯಶಾಹಿ ಜಾಗತೀಕರಣದ ನೀತಿಯಿಂದ ತೀವ್ರ ಸಂಕಷ್ಟವನ್ನು ಎದುರಿಸುತ್ತಿರುವ ರೈತ, ಕಾರ್ಮಿಕ, ದಲಿತ ಜನಸಮೂಹ ವಿವಿಧ ಸಿದ್ಧಾಂತ, ಸಂಘಟನೆಗಳಡಿಯಲ್ಲಿ ಹರಿದು ಹಂಚಿ ಹೋಗಿದೆ. ಸ್ವಾತಂತ್ರ್ಯಾ ನಂತರದ ಸುಮಾರು ಅರ್ಧ ಶತಮಾನ ಈ ದೇಶದ ರೈತ, ಕಾರ್ಮಿಕ, ದಲಿತ ಜನಸಮೂಹವನ್ನು ಪ್ರತಿನಿಧಿಸುವ ಸಂಘಟನೆಗಳು ವಿವಿಧ ಸಿದ್ಧಾಂತದಡಿ ಹಂಚಿಹೋಗಿ ಪರಸ್ಪರ ಪೈಪೋಟಿಯಲ್ಲಿ ನಿರತವಾದವು. ಅದರಲ್ಲೂ ತಮ್ಮದೇ ಕ್ರಾಂತಿಕಾರಿ ನಿಲುವು ಎಂಬುದನ್ನು ಸಾಬೀತುಪಡಿಸಲು ಹೆಣಗಾಡಿದವು. ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ ಹೀಗೆ ವಿಭಿನ್ನ ಸಿದ್ಧಾಂತದಡಿ ಹೋರಾಡಿದ ಸಂಘಟನೆಗಳು. ಪರಸ್ಪರ ಕಚ್ಚಾಡುತ್ತಲೇ ಪ್ರಭುತ್ವದ ವಿರುದ್ಧ ಪ್ರತ್ಯೇಕ ಬಣಗಳಾಗಿಯೇ ಉಳಿದವು. ಈ ಪ್ರತ್ಯೇಕತೆ ಕೇವಲ ಸೈದ್ಧಾಂತಿಕ ಭಿನ್ನತೆಯಾಗಿ ಉಳಿಯದೇ ಪ್ರತಿಯೊಂದು ಸಂಘಟನೆಯಲ್ಲಿಯೂ ಆಂತರಿಕ ಭಿನ್ನಾಭಿಪ್ರಾಯ ತಲೆದೋರಿ ಒಂದೇ ಸಿದ್ಧಾಂತದಡಿ ಹತ್ತಾರು ಬಣಗಳು ಹುಟ್ಟಿ ತಾವು ಪ್ರತಿನಿಧಿಸುವ ಜನಸಮೂಹದ ಹಿತಾಸಕ್ತಿಯ ಹಿನ್ನೆಡೆಗೆ ಕಾರಣವಾದವು. ದೇಶದ ಕಮ್ಯುನಿಸ್ಟ್ ಚಳುವಳಿ, ಸಮಾಜವಾದಿ ಚಳುವಳಿ, ದಲಿತ ಚಳುವಳಿಗಳಲ್ಲಾದ ವಿಘಟನೆಗಳು ಇಂದು ಈ ದೇಶದ ಜನಪರ ಚಳುವಳಿಗಳ ರಾಜಕೀಯ ಉದ್ದೇಶವನ್ನೇ ಬಲಿತೆಗೆದುಕೊಂಡಿವೆ. 1964ರಲ್ಲಿ ಭಾರತದ ದುಡಿವ ವರ್ಗದ ಪ್ರಬಲ ರಾಜಕೀಯ ಪಕ್ಷವಾದ ಭಾರತ ಕಮ್ಯುನಿಸ್ಟ್ ಪಕ್ಷದಲ್ಲುಂಟಾದ ಒಡಕು ದೇಶದ ಶ್ರಮಜೀವಿ ವರ್ಗದ ರಾಜಕೀಯ ಚಳುವಳಿಗೆ ಬಗೆದ ದ್ರೋಹವೇ ಆಗಿತ್ತು. ಅಂದಿನ ಒಡಕುವಾದಿಗಳ ಕೃತ್ಯದಿಂದ ಒಡಕಿನೊಳಗೊಂದು ಒಡಕುಂಟಾಗಿ ಇಂದು ದೇಶದಾದ್ಯಂತ ನಕ್ಸಲ್‌ವಾದಿಗಳನ್ನೂ ಒಳಗೊಂಡು ಮಾರ್ಕ್ಸ್‌ವಾದವನ್ನೇ ನಂಬಿ ಹೋರಾಡುತ್ತಿರುವ ಪಕ್ಷ ಮತ್ತು ಸಂಘಟನೆಗಳ ಸಂಖ್ಯೆ ಹೆಚ್ಚಾಗಿದೆಯೇ ಹೊರತು ನಿರ್ಧಿಷ್ಟ ಸಂದರ್ಭದಲ್ಲಿ ಸೂಕ್ತ ಮಧ್ಯ ಪ್ರವೇಶ ಮಾಡುವ ಶಕ್ತಿ ಕಡಿಮೆಯಾಗಿದೆ. ಆದರೆ ಆ ಎಲ್ಲ ಗುಂಪುಗಳ ಮಧ್ಯೆ ಕನಿಷ್ಠ

ಸಹಮತವೂ ಇಲ್ಲದೆ ತಮ್ಮ ಕ್ರಾಂತಿಕಾರಿತ್ವವನ್ನು ಕಳೆದ ಅರ್ಧ ಶತಮಾನದಿಂದ ಸಾಬೀತುಪಡಿಸುವ ಪ್ರಯತ್ನದಲ್ಲಿಯೇ ಇದ್ದಾರೆ. ಇದ್ದುದರಲ್ಲಿ ಸಿಪಿಐ–ಸಿಪಿಎಂ ಐಕ್ಯ ಹೋರಾಟದ ಕಾರ್ಯಕ್ರಮವನ್ನು ಹೊಂದಿವೆಯಾದರೂ, ಸಿಪಿಐ ಕಮ್ಯುನಿಸ್ಟ್ ಬಣಗಳ ಒಗ್ಗೂಡಿಕೆಗೆ ಕೊಟ್ಟ ಕರೆ ಜಾರಿಯಾಗುವ ಲಕ್ಷಣಗಳು ಸಧ್ಯದಲ್ಲಿ ಕಾಣುತ್ತಿಲ್ಲ.

ಈ ದೇಶದ ದಲಿತ ಚಳುವಳಿಯ ಪರಿಸ್ಥಿತಿಯೂ ಕಮ್ಯುನಿಸ್ಟ್ ಚಳುವಳಿಗಿಂತ ಭಿನ್ನವೇನಾಗಿಲ್ಲ. ಅಸ್ಪೃಶ್ಯ ಹಾಗು ದಮನಿತ ಜನ ಸಮೂಹದ ರಾಜಕೀಯ ವೇದಿಕೆಯಾಗಿ ಬಾಬಾಸಾಹೇಬ ಅಂಬೇಡ್ಕರ್ ಅವರು 1936ರಲ್ಲಿ ಸ್ವತಂತ್ರ ಕಾರ್ಮಿಕ ಪಕ್ಷ (ಇಂಡಿಪೆಂಡೆಂಟ್ ಲೇಬರ್ ಪಾರ್ಟಿ) ಕಟ್ಟಿದರು. ಈ ಪಕ್ಷ ಮುಂದೆ 1942ರಲ್ಲಿ ಅಖಿಲ ಭಾರತ ಸೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ (ಎಐಎಸ್‌ಸಿಎಫ್) ಆಗಿ ಪರಿವರ್ತನೆಯಾಯಿತು. ಆ ಸಂದರ್ಭದಲ್ಲಿಯೇ ಹಲವಾರು ದಲಿತ ಮುಖಂಡರು ಕಾಂಗ್ರೆಸ್‌ನಲ್ಲಿಯೇ ತಮ್ಮ ನೆಲೆಯನ್ನು ಗುರ್ತಿಸಿಕೊಂಡಿದ್ದರು. ಮುಂದೆ ಅಂಬೇಡ್ಕರ್ ಅವರ ಆಶಯದಂತೆ, ಅವರು ರೂಪಿಸಿದ ನೀತಿಯ ಆಧಾರದ ಮೇಲೆ (ಅವರ ಆಕಸ್ಮಿಕ ನಿಧನದ ನಂತರ) 1957ರಲ್ಲಿ ರಿಪಬ್ಲಿಕನ್ ಪಾರ್ಟಿ (ಆರ್.ಪಿ.ಐ) ಸ್ಥಾಪನೆಯಾಯಿತು. ಸ್ವತಂತ್ರ ಕಾರ್ಮಿಕ ಪಕ್ಷದಿಂದ ರಿಪಬ್ಲಿಕನ್ ಪಾರ್ಟಿ ಸ್ಥಾಪನೆಗೆ ತಯಾರಿವರೆಗಿನ ಅಂಬೇಡ್ಕರ್ ಅವರ ರಾಜಕೀಯ ಕಾರ್ಯಕ್ರಮಗಳು ಹಲವಾರು ಬದಲಾವಣೆಯನ್ನು ಕಂಡಿದ್ದವು. ಅದರಲ್ಲೂ 1952ರ ಸ್ವತಂತ್ರ ಭಾರತದ ಮೊದಲ ಚುನಾವಣೆಯಲ್ಲಾದ ಹಿನ್ನಡೆ ಅವರಿಗೆ ತಮ್ಮ ರಾಜಕೀಯ ಚಳುವಳಿಯನ್ನು ಇನ್ನೂ ವಿಸ್ತೃತಗೊಳಿಸಬೇಕೆಂಬ ಛಲ ಮೂಡಿಸಿತು. ಪರಿಣಾಮವಾಗಿಯೇ ರಿಪಬ್ಲಿಕನ್ ಪಾರ್ಟಿಯ ತತ್ವಗಳಲ್ಲಿ "ಮನುಷ್ಯನಿಂದ ಮನುಷ್ಯನ, ಒಂದು ವರ್ಗದಿಂದ ಇನ್ನೊಂದು ವರ್ಗದ, ಒಂದು ದೇಶದಿಂದ ಇನ್ನೊಂದು ದೇಶದ ಮೇಲೆ ನಡೆವ ದಬ್ಬಾಳಿಕೆ ಹಾಗೂ ಶೋಷಣೆಗಳಿಂದ ವಿಮೋಚನೆಗೊಳಿಸುವುದು" ಎಂಬ ಗುರಿಯನ್ನು ಸೇರಿಸುತ್ತಾರೆ. ಆದರೆ ಇಂಥ ಆಶಯದ ಪಕ್ಷ ಸ್ಥಾಪನೆಯಾಗುವಾಗಿನ ಅವರ ಗೈರು ಹಾಜರಿ ಮುಂದೆ ದಲಿತ ಚಳುವಳಿಯ ಒಡಕಿಗೆ ಕಾರಣವಾಗುತ್ತದೆ. ಅಂಬೇಡ್ಕರ್ ಅವರ ಕೊನೆಯ ದಿನಗಳಲ್ಲಿಯೇ ದಲಿತ ಸಂಘಟನೆಗಳ ರಾಜಕೀಯ ನಾಯಕರಲ್ಲಿ ಹಲವಾರು ಭಿನ್ನಾಭಿಪ್ರಾಯಗಳು ಉಂಟಾಗಿದ್ದವು. ಇವೆಲ್ಲ ಬೆಳವಣಿಗೆಗಳು ಅಂಬೇಡ್ಕರ್ ಅವರಿಗೆ ಬೇಸರವನ್ನುಂಟು ಮಾಡಿದ್ದವು. ಗಾಂಧೀಜಿ ಅವರ ನೀತಿಗಳು, ಪೂನಾ ಒಪ್ಪಂದದ ನೋವು, ಅಸಹಾಯಕತೆ, ಪ್ರಥಮ ಚುನಾವಣೆಯಲ್ಲಿ ಹಿನ್ನಡೆ, ಬೌದ್ಧ ಧರ್ಮಕ್ಕೆ ಮತಾಂತರದ ಸಂದರ್ಭದಲ್ಲಿಯೇ ಅಸ್ಪೃಶ್ಯರ ನಡುವಿನ ಭಿನ್ನ ಮತಗಳು, ಇವೆಲ್ಲವುಗಳಾಚೆ ಅಸ್ಪೃಶ್ಯ ಜಾತಿಗಳಲ್ಲೇ ಉಂಟಾಗಿದ್ದ ಅನೈಕ್ಯತೆಯ ಪರಿಣಾಮವಾಗಿ ದಲಿತ ಚಳುವಳಿಯನ್ನು ಮುಂದಕ್ಕೆ ಕೊಂಡೊಯ್ಯುವ ನಾಯಕತ್ವದ ಕೊರತೆ ಈ ಎಲ್ಲ ಅಂಶಗಳು ಅವರ ಆತಂಕಕ್ಕೆ ಕಾರಣವಾಗಿದ್ದವು. ಖ್ಯಾತ ಕಮ್ಯುನಿಸ್ಟ್ ನಾಯಕರಾಗಿದ್ದ ಹಿರೇನ್ ಮುಖರ್ಜಿ ಅವರು 'ಅಂಬೇಡ್ಕರ್ ಅವರು ಅಸಂತುಷ್ಟ ಹಾಗೂ ನಿರಾಶಾಭಾವದಿಂದ ನಿಧನರಾದರು' ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ನಿಧನದ ಸಂದರ್ಭದಲ್ಲಿ ಹೇಳುತ್ತಾರೆ. ಅಂಬೇಡ್ಕರ್ ಅವರ ಕನಸಿನ ರಿಪಬ್ಲಿಕನ್ ಪಾರ್ಟಿ 1975ರಲ್ಲಿ ನಾಗಪುರದಲ್ಲಿ ತನ್ನ ಏಳನೇ ಅಧಿವೇಶನ ನಡೆಸುವಷ್ಟರಲ್ಲಿ ಒಡಕಿಗೆ ಬಲಿಯಾಗುತ್ತದೆ. ಗಾಯಕವಾಡ, ಗವಾಯಿ, ಖೋಬ್ರಗಾಡೆ, ಕಾಂಬಳೆ ಹೀಗೆ ಹಲವಾರು ನಾಯಕರು ಭಿನ್ನ ಗುಂಪುಗಳ ನಾಯಕರಾಗುತ್ತಾರೆ. ಮುಂದೆ ಮಹಾರಾಷ್ಟ್ರದಲ್ಲಿ ಆರಂಭವಾದ ದಲಿತ ಪ್ಯಾಂಥರ್ಸ್ ಚಳುವಳಿ ರಿಪಬ್ಲಿಕನ್ ಪಾರ್ಟಿಗೆ ಪ್ರತಿಯಾಗಿ ಹುಟ್ಟಿಕೊಳ್ಳುತ್ತದೆ. ನಂತರ ದಲಿತ ಪ್ಯಾಂಥರ್ಸ್ ಸಹಿತ ವಿಭಜನೆಗೊಳ್ಳುತ್ತದೆ. ದೇಶದಾದ್ಯಂತ ನಡೆದ ದಲಿತ ಚಳುವಳಿಯ ಒಡಕುಗಳು ಆರ್.ಪಿ.ಐ.ನಿಂದ ಇಂದಿನ ಬಿ.ಎಸ್.ಪಿ.ವರೆಗೆ ಅಸಂಖ್ಯ ಪಂಗಡಗಳಾಗಿ ಇಂದು ಮೂಲ ಆಶಯದ ಹಿನ್ನಡೆಗೆ ಕಾರಣವಾಗಿವೆ. ನಮ್ಮ ರಾಜ್ಯದಲ್ಲಂತೂ ಆರ್.ಪಿ.ಐ, ಬಿ.ಎಸ್.ಪಿ ಹೊರತುಪಡಿಸಿ ಕಾಂಗ್ರೆಸ್, ಜೆಡಿಎಸ್, ಬಿ.ಜೆ.ಪಿ ಜೊತೆ ಹಲವು ದಲಿತ ಸಂಘಟನೆಗಳಿದ್ದರೆ ರಾಜಕೀಯೇತರ ದಲಿತ ಸಂಘಟನೆಗಳೂ ಹಲವಾರು ಅಸ್ತಿತ್ವದಲ್ಲಿವೆ.

ಸಮಾಜವಾದಿ ಚಳುವಳಿ ಇಂದು ತಲುಪಿದ ಸ್ಥಿತಿಯನ್ನು ಗಮನಿಸಿದರೆ ದೊಡ್ಡ ನಿರಾಶೆಯೇ ಕಾದಿದೆ. ಅಂಬೇಡ್ಕರ್ ಅವರು ಮೊದಲ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಪ್ರಜಾ ಸೋಶಲಿಸ್ಟ್ ಪಾರ್ಟಿ (ಪಿ.ಎಸ್.ಪಿ) ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದರು. ಹಲವಾರು ಪಕ್ಷಗಳ ಮಧ್ಯೆ ಅವರು ಆ ಪಕ್ಷವನ್ನು ಆಯ್ಕೆ ಮಾಡಿಕೊಂಡದ್ದು ಗಮನಾರ್ಹ. ನಮ್ಮ ರಾಜ್ಯದಲ್ಲೂ ಒಂದು ಶಕ್ತಿಯಾಗಿದ್ದ ಪ್ರಜಾ ಸೋಶಿಯಲಿಸ್ಟ್ ಪಾರ್ಟಿ ಇಂದು ಅಸ್ತಿತ್ವವನ್ನೇ ಕಳೆದುಕೊಂಡಿದೆ. ಕರ್ನಾಟಕದ ರೈತ ಚಳುವಳಿಯ ಕಾಗೋಡು ಸತ್ಯಾಗ್ರಹ ಮೂಲಕ ಒಂದು ರಾಜಕೀಯ ಶಕ್ತಿಯಾಗಿದ್ದ ಸಮಾಜವಾದಿ ಚಳುವಳಿ ಇಂದು ಬಂಡವಾಳಶಾಹಿ ಪಕ್ಷಗಳಲ್ಲಿ ಹರಿದು ಹಂಚಿ ಹೋಗಿದೆ. ಕೆಲವು ಸಮಾಜವಾದಿಗಳು ಇಂದು ಬಿ.ಜೆ.ಪಿ.ಯಲ್ಲೂ ನೆಲೆ ಕಂಡುಕೊಂಡಿದ್ದಾರೆ. ಬಹುಶಃ ಸಮಾಜವಾದಿ ತತ್ವದ ವಿಕೇಂದ್ರೀಕರಣ ನೀತಿಯನ್ನು ಅವರು ಪಕ್ಷವನ್ನು ವಿಕೇಂದ್ರೀಕರಣಗೊಳಿಸುವಲ್ಲಿಯೇ ಸಾಧಿಸಿದ್ದಾರೆ ಎನ್ನುವಂತಾಗಿದೆ. ಇಂದು ಬಿ.ಜೆ.ಪಿ.ಯ ನಾಯಕತ್ವದ ಎನ್.ಡಿ.ಎ ಬಲಗೊಳ್ಳಲು ಹಲವಾರು ಸಮಾಜವಾದಿ ಚಿಂತಕರೇ ಕಾರಣರಾಗಿದ್ದಾರೆ. ಇನ್ನೂ ಕೆಲವರು ಪ್ರಭುತ್ವದ ಭಾಗವಾಗಿಯೇ ಇದ್ದಾರೆ. ಇದರಾಚೆಗೂ ಅಲ್ಲಲ್ಲಿ ಕೆಲವು ಸಮಾಜವಾದಿ ಚಿಂತನೆಯ ವ್ಯಕ್ತಿಗಳು, ಗುಂಪುಗಳು ಜನಪರ ಹೋರಾಟಗಳಲ್ಲಿ ಕ್ರಿಯಾಶೀಲವಾಗಿವೆ ಎಂಬುದೂ ಸತ್ಯ.

ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಪ್ರಭುತ್ವವನ್ನು ಎದುರಿಸಿ ಜನಪರವಾಗಿ ಹೋರಾಡುವಲ್ಲಿ ಕಮ್ಯುನಿಸ್ಟ್ ಚಳುವಳಿ, ಸಮಾಜವಾದಿ ಚಳುವಳಿ, ದಲಿತ ಚಳುವಳಿಗಳು ಮಹತ್ವದ ಪಾತ್ರವನ್ನು ವಹಿಸಿವೆ ಎಂಬುದನ್ನು ಮರೆಯುವಂತಿಲ್ಲ. ಮಾರ್ಕ್ಸ್‌ವಾದಿ, ಲೋಹಿಯಾವಾದಿ, ಅಂಬೇಡ್ಕರ್‌ವಾದಿ ಚಿಂತನೆ, ತತ್ವ ಸಿದ್ಧಾಂತದಡಿಯಲ್ಲಿ ಬಿಡಿಬಿಡಿಯಾಗಿ ಹೋರಾಟ ನಡೆಸಿದರೂ ಆ ಎಲ್ಲ ಹೋರಾಟಗಳ ಗುರಿ ಮಾತ್ರ ಜನವಿರೋಧಿ ಪ್ರಭುತ್ವ ಹಾಗು ಸಾಮಾಜಿಕ ನ್ಯಾಯದ ಗುರಿಯೇ ಆಗಿತ್ತು. ಇಂದಿಗೂ ಸಹ ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ನಮ್ಮ ಪ್ರಭುತ್ವದ ನೀತಿಯ ಕುರಿತು ಈ ಎಲ್ಲ ಸಂಘಟನೆಗಳಿಗೂ ಏಕರೂಪವಾದ ಅಭಿಪ್ರಾಯವಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡುವಾಗ ಮತ್ತು ಸ್ವಾತಂತ್ರ್ಯ ಪಡೆದ ಹೊಸತರಲ್ಲಿ ಈ ಎಲ್ಲ ಸಿದ್ಧಾಂತಗಳಡಿಯ ಪಕ್ಷ ಮತ್ತು ಸಂಘಟನೆಗಳು ತಮ್ಮ ನೀತಿಯೇ ಸರಿ, ತಮ್ಮ ನಂಬಿಕೆಯೇ ಸರಿ ಎಂಬ ನಿಲುವಿನಿಂದ ತಮ್ಮದೇ ಆದ ಕಾರ್ಯಕ್ರಮವನ್ನು ಪ್ರತ್ಯೇಕವಾಗಿ ಜಾರಿಮಾಡಲು ಪ್ರಯತ್ನಿಸಿದ್ದೂ ಇದೆ. ಆ ಸಂದರ್ಭದಲ್ಲಿ ಪ್ರಭುತ್ವವನ್ನು ನೋಡುವ ದೃಷ್ಟಿಕೋನ, ಪ್ರಭುತ್ವದ ಗುಣ ಲಕ್ಷಣಗಳನ್ನು ವಿಶ್ಲೇಷಿಸುವ ವಿಷಯದಲ್ಲಿ ಹಲವಾರು ಭಿನ್ನಾಭಿಪ್ರಾಯಗಳಿವೆ. ಅವೆಲ್ಲ ಅಂದಿನ ಸಮಾಜೋ ರಾಜಕೀಯ, ಸಮಾಜೋ ಆರ್ಥಿಕ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಉಂಟಾದ ಭಿನ್ನಾಭಿಪ್ರಾಯಗಳೇ ಹೊರತು ಆಶಯ ಅಥವಾ ಗುರಿಯನ್ನು ಕುರಿತು ಹೊಂದಿದ ಮೂಲಭೂತ ಅಥವಾ ಪರಿಹರಿಸಲಸಾಧ್ಯವಾದ ಭಿನ್ನಾಭಿಪ್ರಾಯಗಳಾಗಿರಲಿಲ್ಲ. ಉದಾಹರಣೆಗೆ ಅಂಬೇಡ್ಕರ್ ಅವರಿಗೆ ಮಾರ್ಕ್ಸ್‌ವಾದದ ಬಗ್ಗೆ ಭಿನ್ನಾಭಿಪ್ರಾಯಗಳಿರಲೇಯಿಲ್ಲವೆಂತಲ್ಲ. ಖಂಡಿತ ಭಿನ್ನಾಭಿಪ್ರಾಯಗಳಿದ್ದವು. ಹಾಗಂತ ಅಂಬೇಡ್ಕರ್ ಅವರು ಮಾರ್ಕ್ಸ್‌ವಾದವನ್ನು ತಿರಸ್ಕರಿಸಿರಲಿಲ್ಲ. ಮಾರ್ಕ್ಸ್ ಅವರ ಸಿದ್ಧಾಂತಗಳ ಮೂಲ ತಿರುಳನ್ನು ಬುದ್ಧ ತತ್ವಗಳಿಗೆ ತುಲನೆ ಮಾಡುತ್ತ ತಮ್ಮ 'ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್' ಲೇಖನದಲ್ಲಿ ಈ ಕೆಳಗಿನ ಅಂಶಗಳನ್ನು ಮಾರ್ಕ್ಸ್‌ವಾದದಿಂದ ದಾಖಲಿಸುತ್ತಾರೆ.

ಭಾರತದಲ್ಲಿ ಪ್ರಭುತ್ವವನ್ನು ಎದುರಿಸಿ ಜನಪರವಾಗಿ ಹೋರಾಡುವಲ್ಲಿ ಕಮ್ಯುನಿಸ್ಟ್ ಚಳುವಳಿ, ಸಮಾಜವಾದಿ ಚಳುವಳಿ, ದಲಿತ ಚಳುವಳಿಗಳು ಮಹತ್ವದ ಪಾತ್ರವನ್ನು ವಹಿಸಿವೆ ಎಂಬುದನ್ನು ಮರೆಯುವಂತಿಲ್ಲ. ಮಾರ್ಕ್ಸ್‌ವಾದಿ, ಲೋಹಿಯಾವಾದಿ, ಅಂಬೇಡ್ಕರ್‌ವಾದಿ ಚಿಂತನೆ, ತತ್ವ ಸಿದ್ಧಾಂತದಡಿಯಲ್ಲಿ ಬಿಡಿಬಿಡಿಯಾಗಿ ಹೋರಾಟ ನಡೆಸಿದರೂ ಆ ಎಲ್ಲ ಹೋರಾಟಗಳ ಗುರಿ ಮಾತ್ರ ಜನವಿರೋಧಿ ಪ್ರಭುತ್ವ ಹಾಗು ಸಾಮಾಜಿಕ ನ್ಯಾಯದ ಗುರಿಯೇ ಆಗಿತ್ತು. ಇಂದಿಗೂ ಸಹ ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ನಮ್ಮ ಪ್ರಭುತ್ವದ ನೀತಿಯ ಕುರಿತು ಈ ಎಲ್ಲ ಸಂಘಟನೆಗಳಿಗೂ ಏಕರೂಪವಾದ ಅಭಿಪ್ರಾಯವಿದೆ.

(42ನೇ ಪುಟಕ್ಕೆ)

ದಲಿತ ಮಹಿಳಾ ಸಮಸ್ಯೆಗಳು ಇತರ ಮಹಿಳಾ ಸಮಸ್ಯೆಗಳಿಗಿಂತ ತೀರಾ ಭಿನ್ನವಾಗಿದ್ದು, ಅವಳು ನಿತ್ಯ ಅತ್ಯಾಚಾರ-ದೌರ್ಜನ್ಯಕ್ಕೆ ಒಳಗಾಗುತ್ತಿರುವುದರಿಂದ, ಅವಳಿಗೆ ರಕ್ಷಣಾತ್ಮಕ ಸ್ವಾತಂತ್ರ್ಯದ ಅವಶ್ಯಕತೆ ಇದೆ. ಸದ್ಯದ ಸಂದರ್ಭದಲ್ಲಿ ಅವಳಿಗೆ ವಿವಾಹ ವ್ಯವಸ್ಥೆಯೇ ಸೂಕ್ತವಾದುದು. ಹಾಗೂ ಅವಳು ಹೋರಾಡಬೇಕಿರುವುದು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ. ಆದ್ದರಿಂದ ಸದ್ಯದ ಸಂದರ್ಭದಲ್ಲಿ ಅವಳ ಆದ್ಯತೆ ಲೈಂಗಿಕ ಸ್ವಾತಂತ್ರ್ಯವಲ್ಲ; ಸಾಮಾಜಿಕ ಸಮಾನತೆ.



ದಲಿತ ಮಹಿಳೆ ಸಮಸ್ಯೆಗಳು ಸವಾಲುಗಳು

ಡಾ॥ ಅನಸೂಯ ಕಾಂಬಳೆ

ದಲಿತ ಲೋಕದ ಮಹಿಳೆಯ ಕುರಿತು ಮಾತನಾಡುವುದೆಂದರೆ, ಈ ನೆಲದ ಕಟ್ಟ ಕಡೆಯ ಪ್ರಜೆ ಕುರಿತು ಮಾತನಾಡುವುದಾಗಿದೆ. ಇಲ್ಲಿ 'ದಲಿತ' ಪದದ ಚರ್ಚೆಗೆ ಇಳಿಯದೆ 'ಎಲ್ಲ ಶೋಷಿತರೂ ದಲಿತರೇ' ಎಂಬ ವಿಶಾಲ ವ್ಯಾಪ್ತಿಗೆ ಒಳಪಡಿಸದೆ ಕೇವಲ ಅಸ್ಪೃಶ್ಯತೆಗೊಳಗಾದ ಜಾತಿ ವ್ಯವಸ್ಥೆಯ ನೆಲೆಗಟ್ಟನಲ್ಲಿ ವಿಶ್ಲೇಷಿಸಬಯಸುತ್ತೇನೆ.

ದಲಿತ ಮಹಿಳೆ ಎಂಬ ಕಾರಣಕ್ಕಾಗಿ ಆಕೆ ಬಹುಮುಖ ದೌರ್ಜನ್ಯಕ್ಕೆ ಒಳಗಾಗಿದ್ದಾಳೆ. ಸಾಮಾನ್ಯ ಸ್ತ್ರೀಯರಂತೆ ಕುಟುಂಬ ಹಾಗೂ ಸಮುದಾಯದ ಪುರುಷರಿಂದ ಶೋಷಣೆಗೊಳಗಾಗುವುದರ ಜೊತೆಗೆ ದಲಿತ ಮಹಿಳೆ ಎಂಬ ಕಾರಣಕ್ಕೆ ಮೇಲ್ಜಾತಿಗಳ ಜಮೀನುದಾರರ ಹಾಗೂ ಬಂಡವಾಳಶಾಹಿಗಳ ದೌರ್ಜನ್ಯಕ್ಕೂ ಒಳಗಾಗಿದ್ದಾಳೆ; ಒಳಗಾಗುತ್ತಲೂ ಇದ್ದಾಳೆ.

ದಲಿತ ಮಹಿಳೆ ಎಂದಾಕ್ಷಣವೇ ಕಟ್ಟುವ ಚಿತ್ರಣ-ವಾಸಕ್ಕೆ ಸೂರಿಲ್ಲದ, ಮೈಮೇಲೆ ಹಾಕಿಕೊಳ್ಳಲು ಬಟ್ಟೆಯೂ ಇಲ್ಲದ, ಸದಾ ಹಸಿವಿನಿಂದ ಬಳಲುತ್ತಿರುವ ಕೊಳಗೇರಿಯಲ್ಲಿ ವಾಸಿಸುತ್ತಿರುವ ಬಡಕಲು ಶರೀರದ ಹೆಣ್ಣು ಮಗಳು. ಕುಡಿಯಲು ಶುದ್ಧ ನೀರು, ಉಸಿರಾಡಲು ಸ್ವಚ್ಛಗಾಳಿಯೂ ಸುಳಿಯದ ವಾತಾವರಣದಲ್ಲಿ ಬದುಕು ನೂಕುವ ಈ ಹೆಣ್ಣು ಮಗಳು ತನ್ನನ್ನು ತಾನು ಸುಧಾರಿಸಿಕೊಳ್ಳಲಾಗದ ಹಾಗೂ ತನ್ನ ಸ್ವಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಅವಕಾಶವೇ ಇಲ್ಲದ ಅಹಿತಕರ ವಾತಾವರಣದಲ್ಲಿ ಸಿಕ್ಕು ನಲುಗುತ್ತಿದ್ದಾಳೆ.

ಮನುಪೂರ್ವ ಯುಗದಲ್ಲಿ ಸ್ವತಂತ್ರಳಾಗಿದ್ದ ಸ್ತ್ರೀಯರ ಸ್ಥಾನಮಾನಗಳು ಮನುವಿನ ಕಾಲದಲ್ಲಿ ಅಧೋಗತಿಗಿಳಿದವು. ಮನು ತನ್ನ ಶಾಸನಗಳಲ್ಲಿ ಹೆಣ್ಣನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿಸಿದ. ಹೆಣ್ಣಿನ ಸ್ವಾತಂತ್ರ್ಯವನ್ನು ಮೂಲೆಗುಂಪಾಗಿಸಿ ಪುರುಷನ ಅಧೀನದಲ್ಲಿರಿಸಿದ. ಮನು ದಲಿತ ಹೆಣ್ಣಿಗೆ ಇನ್ನಷ್ಟು ಧಾರ್ಮಿಕ ಹೇರಿಕೆಗಳನ್ನಿಟ್ಟು ಪಾತಾಳಕ್ಕೆ ತುಳಿದ. ಮೇಲ್ವರ್ಗದ ಜನರ ಭೋಗಕ್ಕಾಗಿ ದಲಿತ ಹೆಣ್ಣುಗಳನ್ನು ಬಳಸಿಕೊಳ್ಳುವುದಕ್ಕಾಗಿ ಪ್ರತ್ಯೇಕ ಶಾಸನಗಳನ್ನು ರೂಪಿಸಿದ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

"ಅಸ್ಪೃಶ್ಯರ ಹೆಂಗಸರು ಚಿನ್ನ-ಬೆಳ್ಳಿಯ ಒಡವೆಗಳನ್ನಾಗಲೀ, ಬೆಲೆ ಬಾಳುವ ಸೀರೆ-ರವಿಕೆಗಳನ್ನಾಗಲಿ ಉಡಬಾರದು. ಹಿಂದೂ ಮಹಿಳೆಯರ ಹೆರಿಗೆ ಮುಂತಾದ ಸೂತಕಗಳ ಮತ್ತು ಕೆಟ್ಟ ಬಟ್ಟೆಗಳನ್ನು ಅಸ್ಪೃಶ್ಯರ ಹೆಂಗಸರೇ ಶುಚಿ ಮಾಡಬೇಕು. ಅವರು ಮಾಡುವ ಸೇವೆಗಳಿಗೆ ಅಸ್ಪೃಶ್ಯರು ಯಾವುದೇ ರೀತಿಯ ಪ್ರತಿಫಲಗಳನ್ನು ಕೇಳಬಾರದು. ಒಂದು ವೇಳೆ ಈ ಎಲ್ಲ ಕಟ್ಟಳೆಗಳನ್ನು ಅಸ್ಪೃಶ್ಯರು ಮೀರುವುದು ಕಂಡು ಬಂದಲ್ಲಿ ಅಂಥವರನ್ನು ನಿರ್ದಾಕ್ಷಣ್ಯವಾಗಿ ಊರಿಂದ ಬಹಿಷ್ಕರಿಸಲಾಗುವುದು. ಅಥವಾ ಈ ಕಟ್ಟಳೆಗಳನ್ನು ಅಸ್ಪೃಶ್ಯರು ಒಪ್ಪಿಕೊಳ್ಳದಿದ್ದಲ್ಲಿ ಹಿಂದೂ ಶಾಸ್ತ್ರಗಳು ಕುಪಿತಗೊಂಡು ಅಸ್ಪೃಶ್ಯರ ವಿರುದ್ಧ ಉಗ್ರವಾದ ಶಾಸನಗಳನ್ನು ಮಾಡಬೇಕಾಗುತ್ತದೆ.
(ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು; ಸಂಪುಟ-4: ಪುಟ-164)

ಇಷ್ಟಕ್ಕೆ ನಿಲ್ಲದೆ ಇನ್ನೂ ಮುಂದುವರೆದು ದಲಿತ ಮಹಿಳೆಯರನ್ನು ಭೋಗಿಸಲು ತಮಗೆ ಅನುಕೂಲವಾದ ನಿಯಮಗಳನ್ನು ಮಾಡಿದರು. "ಶೂದ್ರನಿಗೆ ಶೂದ್ರ ಸ್ತ್ರೀ ಮಾತ್ರ ಹೆಂಡತಿಯಾಗಬಲ್ಲಳು. ವೈಶ್ಯನಿಗೆ ವೈಶ್ಯ ಮತ್ತು ಶೂದ್ರ ಸ್ತ್ರೀ, ಕ್ಷತ್ರಿಯನಿಗೆ ಕ್ಷತ್ರಿಯ, ವೈಶ್ಯ, ಶೂದ್ರ ಸ್ತ್ರೀ, ಬ್ರಾಹ್ಮಣನಿಗೆ ನಾಲ್ಕು ವರ್ಣಗಳ ಸ್ತ್ರೀಯರು ಹೆಂಡತಿಯಾಗಬಲ್ಲರು" (2-13)

"ಕ್ರಮಾನುಸಾರವಾಗಿ ಪಟ್ಟಿ ಮಾಡಲ್ಪಟ್ಟ ತಮ್ಮ ಪಕ್ಕದ ಕೆಳಜಾತಿಯ ಹೆಂಡತಿಯಿಂದ ದ್ವಿಜರು ಪಡೆದ ಪುತ್ರರು, ಅವರ ತಾಯಂದಿರ ಅಂತಾರ್ಗತ ಕಳಂಕದ ಕಾರಣ, ಅನಂತರರು (ಪಕ್ಕದ ಕೆಳಜಾತಿಗೆ ಸೇರಿದವರು) ಎಂಬ ಹೆಸರಿನಿಂದ ಕರೆಯಲ್ಪಟ್ಟಿದ್ದಾರೆ.

ಅಂದರೆ, ಮಗು ತಂದೆಯ ವರ್ಣವನ್ನು ಪಡೆಯದೆ, ತಾಯಿಯ ವರ್ಣವನ್ನು ಪಡೆಯುತ್ತದೆ. "ಮನುವು ಮಗುವಿನ ವರ್ಣದ ನಿಯಮವನ್ನು ತಂದೆಯ ವರ್ಣಕ್ಕನುಸಾರವಾಗಿ ಪಿತೃವರ್ಣದಿಂದ ತಾಯಿಯ ವರ್ಣಕ್ಕನುಸಾರವಾಗಿ ಮಾತೃ ವರ್ಣಕ್ಕೆ ಬದಲಿಸಿದ್ದಾನೆ. (ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು: ಸಂಪುಟ-4 ಪುಟ - 275)

ಮನುವಿನ ಈ ನಿಯಮ ಕೆಳಜಾತಿಯ ಮಹಿಳೆಯರಿಗೆ ಮಾತ್ರ ಅನ್ವಯಿಸುತ್ತದೆ ಎಂಬುದನ್ನು ಮರೆಯಬಾರದು. ಅಲ್ಲದೆ ಇನ್ನೂ ಮುಂದುವರೆದು 'ಕೆಳಜಾತಿಯ ಹೆಂಗಸು ಮೇಲು ಜಾತಿಯ ಪುರುಷನ ಸಂಬಂಧದಿಂದ ಏಳು ಸಂತತಿಯನ್ನು ಪಡೆದರೆ, ಅವಳು ಉಚ್ಚ ಜಾತಿಯಲ್ಲಿ ಹುಟ್ಟುತ್ತಾಳೆ" ಎಂದು ಘೋಷಿಸಿದ.

1. ವಿದ್ಯೆಯ ನಿರಾಕರಣೆ.
2. ಆಸ್ತಿ ಹೊಂದುವಂತಿಲ್ಲ.
3. ಭೋಗದ ವಸ್ತು.
4. ಜಾತಿಯನ್ನು ಗಟ್ಟಿಗೊಳಿಸುವುದು.
5. ಆದಾಯ ಮೂಲವಾದ ಕೆಲಸಗಳಿಂದ ದೂರ ಇಡುವುದು.

ಯಾವ ವೈಜ್ಞಾನಿಕ ಕಾರಣಗಳನ್ನು ಹೊಂದದ ಇವು ದೇವರು ಮತ್ತು ಧರ್ಮದ ಹೆಸರಿನಲ್ಲಿ ಬಿತ್ತಿದ ಮೌಢ್ಯಗಳು. ಈ ಹಿನ್ನೆಲೆಯಲ್ಲಿ ಭಾರತೀಯ ಸಂಸ್ಕೃತಿಯ ಮೌಲ್ಯವೆಂದೇ ಬಿಂಬಿಸಲಾದ ಪಾತಿವ್ರತ್ಯ ಪಟ್ಟದಿಂದ ದಲಿತ ಮಹಿಳೆಯನ್ನು ಹೊರಗಿಟ್ಟು ಪಾಪ-ಪುಣ್ಯಗಳ ಹೇರಿಕೆಯಿಂದ ವೇಶ್ಯಾವಾಟಿಕೆ, ದೇವದಾಸಿ ಪದ್ಧತಿ, ಸೂಳೆಗಾರಿಕೆಯನ್ನು ಪೋಷಿಸುವುದೇ ಆಗಿತ್ತು.

ಇಂಥ ಅಸಹ್ಯ ಮತ್ತು ಅವಮಾನಕರವಾದ ನಿಯಮಗಳನ್ನು ರೂಪಿಸಿದ-ಮನು ಅವಳ ಆತ್ಮಗೌರವವನ್ನೂ, ಸ್ವಾಭಿಮಾನವನ್ನೂ ಮೂಲೆ ಗುಂಪಾಗಿಸಿದ. ದೈವ ಮತ್ತು ದೇವರ ಹೆಸರಿನಲ್ಲಿ ಅವಳನ್ನು ಅಜ್ಞಾನ ಅಂಧಕಾರಗಳಲ್ಲಿಟ್ಟ, ಇದರಿಂದಾಗಿ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಅಸಮಾನತೆಯಿಂದಾಗಿ ದಲಿತ ಮಹಿಳೆಯ ಸ್ಥಿತಿ ಚಿಂತಾಜನಕವಾಯಿತು.

ಇಲ್ಲಿ ಆರ್ಥಿಕತೆ ಅನ್ನುವುದು ಹಸಿವಿನ ಮೂಲದ್ದು, ದಲಿತರ ವೃತ್ತಿಗೂ ಹಸಿವಿಗೂ ಅವಿನಾಭಾವ ಸಂಬಂಧವಿದೆ. ದಲಿತ ಮತ್ತು ಬಹುಸಂಖ್ಯಾತ ಶ್ರಮಜೀವಿಗಳ ವೃತ್ತಿಗಳೆಲ್ಲ ಆದಾಯ ರಹಿತವಾದವುಗಳು. ಅವರ ವೃತ್ತಿಗಳು ಅವರನ್ನೇ ಶೋಷಿಸಿವೆ. ಅವರ ವೃತ್ತಿ ಅವರ ಉಪಜೀವನವನ್ನು ಪೂರೈಸದ ಹಾಗೂ ಮತ್ತೊಂದು ವೃತ್ತಿಯನ್ನು ಪ್ರಯತ್ನಪೂರ್ವಕವಾಗಿ ಕೈಗೊಳ್ಳದ ಸಾಮಾಜಿಕ ನಿರ್ಬಂಧಕ್ಕೊಳಪಟ್ಟಿವೆ.

ಅದಕ್ಕೆಂದೇ ಅಂಬೇಡ್ಕರ್‌ರು ದೇಶದ ಸಮಸಂಖ್ಯೆಯಲ್ಲಿರುವ ಮಹಿಳೆಯರು ಶೂದ್ರರಿಗಿಂತ ಹೆಚ್ಚು ಶೋಷಿತರಾಗಿದ್ದಾರೆಂದೂ, ಅದರ ಮೂಲಬೇರುಗಳಿರುವುದು ಮನುಸ್ಮೃತಿಯಲ್ಲೆಂದೂ, ಅದು ಶೂದ್ರ ಮತ್ತು ಮಹಿಳೆಯರ ಹಕ್ಕುಗಳನ್ನೇ ನಿರಾಕರಿಸಿ ಗುಲಾಮರನ್ನಾಗಿಸಿದೆ ಎಂದು ಅದನ್ನು ಸುಟ್ಟರು.

ಇಂದು ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದ್ದರೂ, ದಲಿತ ಹೆಣ್ಣಿನ ಪರಿಸ್ಥಿತಿ ಬದಲಾಗಿಲ್ಲ. ಮನುಸ್ಮೃತಿಯ ಅಘೋಷಿತ ನಿಯಮಗಳು ಮೇಲ್ಜಾತಿಯ ಜನರಲ್ಲಿ ಜೀವಂತವಾಗಿದೆ. ಇದರಿಂದಾಗಿ ದಲಿತ ಮಹಿಳೆಯ ಮೇಲಿನ ಅತ್ಯಾಚಾರ-ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಲೇ ಇವೆ. ಬಹುಸಂಖ್ಯಾತ ಮಹಿಳೆಯರ ಸಮಸ್ಯೆಗಳಾದ ಅವಿದ್ಯೆ, ಅಜ್ಞಾನ, ದೇವದಾಸಿ ಪದ್ಧತಿ, ವೇಶ್ಯಾವೃತ್ತಿ, ಅತ್ಯಾಚಾರ, ವರದಕ್ಷಿಣೆ ಸಮಸ್ಯೆ, ಅಧಿಕಾರ ವಂಚಿತತೆ, ಅನಾರೋಗ್ಯ, ಬಾಲ್ಯವಿವಾಹ, ಬಡತನ, ಮದ್ಯಪಾನ, ಸಮಾನ ವೇತನ, ಕನಿಷ್ಠಕೂಲಿ, ಎಂಡೋಸಲ್ಫಾನ್ ರಸಗೊಬ್ಬರದಿಂದ ಕಾಡುತ್ತಿರುವ ಭೀಕರ ರೋಗಗಳು, ಅಂಗವೈಕಲ್ಯತೆ ಮುಂತಾದ ಭೀಕರ ಸಮಸ್ಯೆಗಳು ಅವಳನ್ನು ಕಾಡುತ್ತಿವೆ.

ಇಂಥ ಸಮಸ್ಯೆಗಳ ಅರಿವು ಮತ್ತು ಕಾನೂನಿನ ನೆರವು ಪಡೆಯುವ ಪ್ರಜ್ಞೆ ಅವಳಿಗಿಲ್ಲ. ಇದಕ್ಕೆಲ್ಲ ಬಡತನ ಮತ್ತು ಶಿಕ್ಷಣ ವಂಚಿತತೆಯೇ ಕಾರಣ. ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವವನ್ನು ಅಳವಡಿಸಿಕೊಳ್ಳದೇ ಸಾಂಪ್ರದಾಯಿಕ ಶಿಕ್ಷಣವನ್ನು ನೀಡುತ್ತಿರುವುದರಿಂದ ಅಕ್ಷರಸ್ಥ ಅಜ್ಞಾನಿಗಳನ್ನು ಸೃಷ್ಟಿಸಲಾಗುತ್ತಿದೆ.

ಈ ಎಲ್ಲಾ ಸಮಸ್ಯೆಗಳನ್ನು ಪುರೋಹಿತಶಾಹಿ (ಮನುವಾದಿ) ಬಂಡವಾಳಶಾಹಿ ವ್ಯವಸ್ಥೆ ಪೋಷಿಸುತ್ತಿದೆ. ಧಾರ್ಮಿಕ ಕಟ್ಟುಪಾಡುಗಳಿಗೆ ಪುರೋಹಿತ ವ್ಯವಸ್ಥೆ ಕಾರಣವಾದರೆ, ಬಡತನಕ್ಕೆ ಬಂಡವಾಳಶಾಹಿ ವ್ಯವಸ್ಥೆ ಕಾರಣವಾಗಿದೆ. ಸತಿ, ವಿಧವೆ, ದೇವದಾಸಿ ಬಾಲ್ಯವಿವಾಹ ಇತ್ಯಾದಿಗಳು ಪುರೋಹಿತ ವ್ಯವಸ್ಥೆ ಅಧೀನಕ್ಕೊಳಪಟ್ಟಿದ್ದರೆ, ವರದಕ್ಷಿಣೆ ಅತ್ಯಾಚಾರ, ಲೈಂಗಿಕ ಕಿರುಕುಳ ಅನಾರೋಗ್ಯ, ಅವಿದ್ಯೆ, ವೇಶ್ಯಾವೃತ್ತಿ, ಬಾಲಾಪರಾಧ, ಗಂಡಂದಿರ ಕುಡಿತ ಮುಂತಾದವುಗಳು ಬಂಡವಾಳಶಾಹಿ ವ್ಯವಸ್ಥೆಯ ಅಧೀನಕ್ಕೊಳಪಟ್ಟಿದೆ.

ಆದರೆ ದೇವದಾಸಿ, ವೇಶ್ಯಾವೃತ್ತಿಗೆ ದಲಿತರ ಬಡತನವೇ ಕಾರಣವೆಂಬಂತೆ ಬಿಂಬಿಸುವ ಅಧ್ಯಯನಗಳು ನಡೆದಿವೆ. ಉದಾಹರಣೆಗೆ "ದಲಿತ ಮಹಿಳೆ: ಶೋಷಣೆಯ ಅಧ್ಯಯನಗಳು" ಎಂಬ ಹರ್ಷದ್. ಆರ್. ತ್ರಿವೇದಿಯ (1976)ಅಧ್ಯಯನವು ಮಹಿಳೆಯರು ಹೇಗೆ ಪ್ರಲೋಭನೆಗೆ ಒಳಗಾಗಿ ವೇಶ್ಯಾಗಾರಿಕೆಯನ್ನು ವೃತ್ತಿಯನ್ನಾಗಿ ಒಪ್ಪಿಕೊಂಡರು ಎಂದು ತಿಳಿಸುತ್ತಾ, ಅದರ ಮುಂದುವರಿಕೆಗೆ ಕಾರಣವನ್ನು ಹೀಗೆ ತಿಳಿಸುತ್ತಾರೆ. "ಒಂದು ವರ್ಷದಲ್ಲಿ ಕೇವಲ ಮೂರು ತಿಂಗಳಕಾಲ ಮಾತ್ರ ಒಂದು ಹಳ್ಳಿಯಲ್ಲಿ ಬಹಳಷ್ಟು ಹರಿಜನ ಕುಟುಂಬವರ್ಗ ಪೂರ್ಣ ಕೂಲಿಯನ್ನು ಪಡೆಯುತ್ತವೆ. ಬರಗಾಲದಲ್ಲಿ ಇದು ಕೂಡ ಸಾಧ್ಯವಾಗುವುದಿಲ್ಲ. ಈ ಬಗೆಯ ತೀವ್ರ ಕ್ಷೋಭೆಗೊಳಗಾದ ಸಂದರ್ಭಗಳಲ್ಲಿ ಅವರು ಬೇರೆ ಬಗೆಯ ಆದಾಯದ ಮೂಲಗಳಿಗಾಗಿ ನೋಡುತ್ತಾರೆ. ದೇವದಾಸಿಯ ಧಾರ್ಮಿಕ ಭಿಕ್ಷೆಯಾದ 'ಜೋಗ' ಕೂಡ ಲಾಭದಾಯಕ ಕೆಲಸವಾಗುವುದಿಲ್ಲ. ದೇವದಾಸಿಯರು ಮತ್ತು ದೇವದಾಸಿಯಲ್ಲದವರು ಈ ಇಬ್ಬರೂ ಒಳಗೊಳ್ಳುವ ವ್ಯಾಪಾರಿ ವೇಶ್ಯಾವೃತ್ತಿ. ಇತ್ತೀಚಿನ ದಿನಗಳಲ್ಲಿ ಹೆಚ್ಚು ಆದಾಯವನ್ನು ತರುತ್ತದೆ. ತನ್ನ ಸಂದರ್ಶಕರಿಂದ ಹಣವನ್ನು ತರಬಲ್ಲಳು ಎಂಬ ಕಾರಣದಿಂದ ಇತ್ತೀಚಿನ ವರ್ಷಗಳಲ್ಲಿ ಪ್ರತಿಯೊಂದು ಹರಿಜನ ಕುಟುಂಬವು ಒಬ್ಬ ಮಗಳನ್ನು ದೇವದಾಸಿಯನ್ನಾಗಿ ಅರ್ಪಿಸಲು ಇಷ್ಟಪಡುತ್ತದೆ. ಹಾಗೂ ಗಿರಾಕಿಗಳನ್ನು ಆಕರ್ಷಿಸಲು ಸುಂದರಿಯೂ ಹೆಚ್ಚು ಸಮರ್ಥಳೂ ಆದ ಹುಡುಗಿಯರನ್ನೇ ಈ ರೀತಿ ಬಿಡಲು ಆರಿಸುತ್ತಾರೆ" (ದೇವದಾಸಿ ಸಂಪ್ರದಾಯ ಡಾ.ಜೋಗನ್ ಶಂಕರ್, ಪುಟ-22) ಆದರೆ ಈ ಅಧ್ಯಯನವು ಧಾರ್ಮಿಕ ರಕ್ಷಣೆಯಲ್ಲಿ ವೇಶ್ಯಾವೃತ್ತಿಯನ್ನು ಮುಂದುವರಿಸಿಕೊಂಡು ಬರುತ್ತಿರುವುದನ್ನು ಹಾಗೂ ಮೇಲ್ಜಾತಿ ಜನರ ಭೋಗಕ್ಕಾಗಿಯೇ ಈ ವ್ಯವಸ್ಥೆಯನ್ನು ಸೃಷ್ಟಿಸಲಾಗಿದೆ ಎಂಬುದನ್ನು ಮರೆಮಾಚುತ್ತದೆ. ದಲಿತ ಜನರ ಬಡತನವನ್ನೇ ಮುಂದೆ ಇಟ್ಟು ಅದರ ಹಿಂದೆ ಇರುವ ನಿಜವಾದ ವೈರಿಯನ್ನು ಮರೆಮಾಚುತ್ತದೆ. ಈ ದೇವದಾಸಿ ಪದ್ಧತಿ ದಲಿತ ಮಹಿಳೆಯರ ಆತ್ಮಗೌರವವನ್ನು ನಾಶಮಾಡಿದೆ.

ಡಾ. ಜೋಗನ್‌ಶಂಕರ್ ಅವರು-"ಈ ಪದ್ಧತಿಯನ್ನು ವ್ಯವಸ್ಥೆ ಮಾಡಲು ಹಾತೊರೆಯುವ ಆಡಳಿತಗಾರರು, ಜಮೀನುದಾರರು, ಅಧಿಕಾರಿಗಳು ಮತ್ತು ಹಣವುಳ್ಳವರು ಈ ವ್ಯವಸ್ಥೆಯ ಪ್ರಯೋಜನ ಪಡೆದರು. ಧಾರ್ಮಿಕ ಕವಚದ ಆಶೀರ್ವಾದದಿಂದ ನಾನಾ ಬಗೆಯ ದೇವಾಲಯಗಳು ಮತ್ತು ಪುರೋಹಿತರು ಮತ್ತು ಧಾರ್ಮಿಕ ಮುಖಂಡರು ಈ ಪದ್ಧತಿಯ ಉಳಿಕೆಯನ್ನು ಉತ್ತೇಜಿಸಿದರು" (ದೇವದಾಸಿ ಸಂಪ್ರದಾಯ: ಪುಟ-142) ಎಂದು ಈ ಪದ್ಧತಿಯ ಮುಂದುವರಿಕೆಗೆ ಕಾರಣವನ್ನು ಸ್ಪಷ್ಟಪಡಿಸಿದ್ದಾರೆ.

1. ಮುಂಬೈಯ ದೇವದಾಸಿ ಸಂರಕ್ಷಣಾ ಶಾಸನ-1934
2. ಮದ್ರಾಸ್ ದೇವದಾಸಿ (ಸಮರ್ಪಣಾ ನಿಲುಗಡೆ) ಶಾಸನ-1982,
3. ಕರ್ನಾಟಕ ದೇವದಾಸಿ (ಸಮರ್ಪಣಾ ನಿಷೇಧ) ಶಾಸನ-1982

ಈ ಕಾನೂನುಗಳು ಜಾರಿಯಲ್ಲಿದ್ದರೂ ಈ ಪದ್ಧತಿ ಮುಂದುವರೆದುಕೊಂಡು ಹೋಗುತ್ತಿರುವುದು ವ್ಯವಸ್ಥೆಯ ಹುನ್ನಾರವೇ ಆಗಿದೆ.

ತಮ್ಮ ಭೋಗ ಜೀವನಕ್ಕೆ ಅನುಕೂಲವಾಗುವಂತ ಶಾಸನಗಳನ್ನು ರೂಪಿಸಿದ ಪುರೋಹಿತ/ಧಾರ್ಮಿಕ ವ್ಯವಸ್ಥೆ ದಲಿತರ ಅಮಾನವೀಯ ಸ್ಥಿತಿಗೆ ಕಾರಣವಾದರೂ ನೇರವಾಗಿ ದಲಿತ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ದೌರ್ಜನ್ಯವೆಸಗಿದವರು ಬಂಡವಾಳಶಾಹಿಗಳು ಮತ್ತು ಗ್ರಾಮೀಣ ಪ್ರದೇಶದ ಜಮೀನುದಾರರು ಹಾಗೂ ಪಾಳೇಗಾರರು. ಕೂಲಿ ಮಾಡುವ ದಲಿತ ಮಹಿಳೆಯರು ದಿನಂಪ್ರತಿ ಅತ್ಯಾಚಾರಕ್ಕೊಳಗಾಗುತ್ತಿದ್ದಾರೆ. ಆದರೆ ದಾಖಲಾತಿ ಪ್ರಕರಣಗಳು ಕಡಿಮೆ.

1. 1994ರಲ್ಲಿ ತನ್ನನ್ನು ಹರಾಜು ಮಾಡಲಾಗುತ್ತಿದೆ. ಹರಾಜು ತಡೆಯುವಂತೆ ಕೋರಿ 25 ವರ್ಷ ವಯಸ್ಸಿನ ಆದಿವಾಸಿ

(43ನೇ ಪುಟಕ್ಕೆ)

ಪ್ರೀಯ ಓದುಗರೇ,

ದಲಿತ ಚಳವಳಿ ಶಕ್ತಿಹೀನವಾಗುತ್ತಿದೆ, ದಾರಿ ತಪ್ಪುತ್ತಿದೆ, ಅವಕಾಶವಾದಿಯಾಗುತ್ತಿದೆ, ಸೈದ್ಧಾಂತಿಕ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದೆ – ಇವೇ ಮೊದಲಾದ ದೂರುಗಳು ಈಗ ನಿರಂತರವಾಗಿ ಕೇಳಿಬರುತ್ತಿವೆ. ಇಂತಹ ದೂರು–ಆಪಾದನೆಗಳ ಬಗ್ಗೆ ದಲಿತ ಮುಖಂಡರು ಏನೆನ್ನುತ್ತಾರೆ ಎಂಬ ಕುತೂಹಲ 'ಸಂವಾದ'ಕ್ಕೆ ಇತ್ತು. ಹಾಗಾಗಿ ಇಂಥ ಪ್ರಶ್ನೆಗಳನ್ನು ಕ್ರೋಢೀಕರಿಸಿ ದಲಿತ ಚಳವಳಿಯ ಮುಖಂಡರ ಮುಂದೆ ಇಟ್ಟೆವು. ಅವರಲ್ಲಿ ಕೆಲವರು ಮಾತ್ರ ಉತ್ತರ ನೀಡಿದ್ದಾರೆ. ಅವುಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಉಳಿದ ನಾಯಕರ ಉತ್ತರಗಳು ಬಂದ ನಂತರ ಮುಂದಿನ ಸಂಚಿಕೆಗಳಲ್ಲಿ ಅವುಗಳನ್ನು ಪ್ರಕಟಿಸಲಾಗುವುದು. ಈ ಕುರಿತಂತೆ ವ್ಯಾಪಕ ಚರ್ಚೆ ಆಗಬೇಕೆಂಬುದು 'ಸಂವಾದ'ದ ಆಶಯ. ಇದರಲ್ಲಿ ನೀವೂ ಭಾಗವಹಿಸಬಹುದು. ದಲಿತ ಸಂಘಟನೆಗಳ ಐಕ್ಯತೆಗೆ ಈ ಚರ್ಚೆ ಸಹಕಾರಿಯಾಗಬಹುದೆಂಬ ಆಶಯ ನಮ್ಮದು. – ಸಂಪಾದಕ

ಒಂದಾಗದಿದ್ದರೆ ಪರಿಹಾರ ಇಲ್ಲ

ಗುರುಪ್ರಸಾದ್ ಕೆರೆಗೋಡು
ರಾಜ್ಯ ಸಂಚಾಲಕರು
ದಲಿತ ಸಂಘರ್ಷ ಸಮಿತಿ

1. ದಲಿತ ಚಳುವಳಿ ಹೊಡೆದು ಛಿದ್ರವಾಗಿದೆ, ಅದಕ್ಕೆ ಮೊದಲಿನ ಶಕ್ತಿ ಇಲ್ಲ, ಈಗ ಚಳುವಳಿ ದುರ್ಬಲವಾಗಿದೆ ಎಂಬ ಮಾತುಗಳು ಪ್ರಾರಂಭದ ಸಂಖ್ಯಾಬಲ ಅಥವಾ ರ್‍ಯಾಲಿಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವಂತಾದ್ದಾಗಿದೆ. ಆ ಮೊದಲಿನ ಸಂಘಟನಾತ್ಮಕ ಬಲವು ಹಲವಾರು ಕಾರಣಗಳಿಂದ ಈಗ ಇಲ್ಲದಿರುವುದು ನಿಜವಾದರೂ ತನ್ನ ಮೂಲ ತತ್ವಗಳು ಮತ್ತು ಆಶಯಗಳಿಂದ ದಲಿತ ಚಳುವಳಿ ದೂರ ಸರಿದಿಲ್ಲ ಎಂಬುದನ್ನು ಮರೆಯಬಾರದು. 70–80ರ ದಶಕದಲ್ಲಿದ್ದ ದಲಿತರ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ ಸ್ಥಿತಿಗತಿಗೂ ನಂತರದ ಪರಿಸ್ಥಿತಿಗೂ ಸಾಕಷ್ಟು ಬದಲಾವಣೆಗಳನ್ನು ನಾವು ಗುರುತಿಸಬಹುದು. ಈ ಹಿನ್ನಲೆಯಲ್ಲಿ ಬದಲಾದ ದಲಿತರ ಆದ್ಯತೆಗಳಿಗನುಗುಣವಾಗಿ ಚಳುವಳಿ ರೂಪಿಸುವಲ್ಲಿ ಈಗಿನ ಚಳುವಳಿಯ ನಾಯಕತ್ವ ಎಲ್ಲೋ ಸೋತಿದೆ ಎಂದೆನಿಸುತ್ತದೆ.

ಆರಂಭದ ದಲಿತ ಚಳುವಳಿಯಿಂದ ಬಂದ ಕೆಲವರು ಕೆಲವು ಕಾರಣಾಂತರಗಳಿಂದ ಬೇರೆ ಬೇರೆ ಬಣಗಳಾಗಿ ಗುರುತಿಸಿಕೊಂಡು ಚಳುವಳಿಯಲ್ಲಿ ತೊಡಗಿಕೊಂಡಿದ್ದಾರೆ. ಸೈದ್ಧಾಂತಿಕ ಸ್ಪಷ್ಟತೆ ಕಂಡುಕೊಳ್ಳುವ ನಿಟ್ಟಿನಲ್ಲಿ ಅಂದಿನ ನಾಯಕತ್ವ ಸಕಾಲಿಕ ನಿಲುವುಗಳನ್ನು ಕೈಗೊಳ್ಳದ ಕಾರಣದಿಂದ ಈ ಅವಾಂತರ ಸೃಷ್ಟಿಯಾಗಿದೆ. ಆದರೆ ಅಸಂಖ್ಯಾತ ಕಾರ್ಯಕರ್ತರ ದೃಷ್ಟಿಯಲ್ಲಿ ಚಳುವಳಿ ಏಕ ಘಟಕವಾಗೇ ಉಳಿದಿದೆ. ಆದ್ದರಿಂದ ಸ್ವಾರ್ಥ ರಾಜಕೀಯದ ಆಮಿಷ, ಸ್ವಪ್ರತಿಷ್ಠೆಗಳಿಂದ ಕೂಡಿದ ಗುಂಪುಗಳನ್ನು ಹೊರತುಪಡಿಸಿ ಉಳಿದ ಸಮಾನ ಮನಸ್ಕರೆಲ್ಲಾ ಸೇರಿ ಒಕ್ಕೂಟದಡಿ ಚಳುವಳಿ ಮಾಡಿದರೆ ಈಗಲೂ ಪ್ರಬಲವಾದ ಚಳುವಳಿ ರೂಪಿಸಲು ಸಾಧ್ಯವಿದೆ.

2. ಅಂಬೇಡ್ಕರ್, ದಲಿತ, ಹಿಂದುಳಿದ ಎನ್ನುವ ಪದಗಳಿಗೆ ಈಗಲೂ ಕಿಮ್ಮತ್ತಿದೆ. ಹಾಗಾಗಿಯೇ ಎಲ್ಲೂ ಸಲ್ಲದ ಕೆಲವು ನಿರಾಶ್ರಿತ ಮಂದಿ ಈ ಮೇಲಿನ ಪದಗಳನ್ನು ಬಳಸಿಕೊಂಡು ಸಂಘ–ಸಂಸ್ಥೆ, ಸಂಘಟನೆ ಕಟ್ಟಿಕೊಂಡು ತಮ್ಮ ಸ್ವಾರ್ಥ ಸಾಧಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಇದು ರಾಜಧಾನಿ ಬೆಂಗಳೂರಿನಲ್ಲಷ್ಟೇ ನಡೆಯುತ್ತಿದೆ. ಇತರೆ ಜಿಲ್ಲೆ, ತಾಲ್ಲೂಕುಗಳಲ್ಲಲ್ಲ. ರಾಜಧಾನಿ ಬಿಟ್ಟರೆ ಇಂತವರ ಬೇಳೆ ಬೇರೆಡೆ ಬೇಯುವುದಿಲ್ಲ. ಜನರ ಕೆಲಸ ಮಾಡದವರನ್ನು ಯಾರೂ ಗುರುತಿಸುವುದಿಲ್ಲ. ಹಾಗಾಗಿ ಇಂತವರಿಗೆ ಯಾವುದೇ ಮನ್ನಣೆ ಇಲ್ಲ. ಬೆಂಗಳೂರಿನ ಸಮಸ್ಯೆಯನ್ನು ಇಡೀ ಕರ್ನಾಟಕದ ಸಮಸ್ಯೆ ಎಂದು ಭಾವಿಸಬೇಕಿಲ್ಲ.

ಹಾಗಾಗಿ ಆರಂಭದ ದಲಿತ ಚಳುವಳಿಯಿಂದ ಬಂದ ಕೆಲವು ಗುಂಪುಗಳು ಈಗಲಾದರೂ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಒಕ್ಕೂಟದಡಿ ಕೆಲಸ ಮಾಡಬೇಕು. ಇಲ್ಲ ತಮ್ಮ ಭಿನ್ನಾಭಿಪ್ರಾಯ ಮರೆತು ಒಂದಾಗಬೇಕು. ಇಲ್ಲದಿದ್ದರೆ ಈ ಸಮಸ್ಯೆಗೆ ಪರಿಹಾರ ಇಲ್ಲ.

3. ದಲಿತ ಚಳುವಳಿಯ ವಿವಿಧ ಬಣಗಳು ಖಂಡಿತ ಒಂದಾಗಲಿಕ್ಕೆ ಸಾಧ್ಯವಿದೆ. ಏಕೆಂದರೆ ಇವುಗಳ ನಡುವೆ ಯಾವುದೇ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಲ್ಲ. ಕೇವಲ ವೈಯಕ್ತಿಕ ಭಿನ್ನಾಭಿಪ್ರಾಯ, ವೈಯಕ್ತಿಕ ಪ್ರತಿಷ್ಠೆ ಅಥವಾ ನಾಯಕತ್ವದ ಪ್ರಶ್ನೆಗಳಷ್ಟೇ ಈ ಬಣಗಳ ಸೃಷ್ಟಿಗೆ ಕಾರಣವಾಗಿರುವುದು. ಹಾಗಾಗಿ ಇದಕ್ಕೆ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡರೆ, ಜೊತೆಗೆ ರಾಜಕೀಯದ ತೊಡಕು ನಿವಾರಿಸಿಕೊಂಡರೆ ಈ ಸಮಸ್ಯೆ ಬಗೆಹರಿಯುತ್ತದೆ.

ಯಾವುದೋ ಒಂದು ಬಣ ಮತ್ತೊಂದು ಬಣದಲ್ಲಿ ವಿಲೀನಗೊಂಡರೆ ಅಥವಾ ಯಾರೋ ಒಬ್ಬರು ತಮ್ಮ ಸ್ಥಾನ ತ್ಯಜಿಸಿದ ಮಾತ್ರಕ್ಕೆ ದಲಿತ ಚಳುವಳಿ ಒಂದಾಗುತ್ತದೆಂದು ಹೇಳಲು ಬರುವುದಿಲ್ಲ. ಬದಲಾಗಿ ಹಾಲಿ ದಲಿತ ಚಳುವಳಿಯ ಸಮಾನ ಮನಸ್ಕ ಮುಖಂಡರುಗಳು ಒಂದೆಡೆ ಸೇರಿ ಒಂದಾಗಲು ಇರುವ ತೊಡಕುಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು ಮತ್ತು ಮೊದಲಿಗೆ ಒಕ್ಕೂಟ ರಚಿಸಿಕೊಂಡು ಒಕ್ಕೂಟದಡಿ ಕೆಲಸ ಮಾಡಬೇಕು. ಈ ಸ್ಥಿತಿ ನಿರ್ಮಾಣವಾದರೆ ಒಂದಾಗುವ ದಿಕ್ಕಿನತ್ತ ಹೆಜ್ಜೆ ಇಟ್ಟಂತಾಗುತ್ತದೆ.

ವೈಯಕ್ತಿಕವಾಗಿ ಹೇಳುವುದಾದರೆ ನಾನಾಗಲಿ ನಮ್ಮ ಸಂಘಟನೆಯಾಗಲಿ ಒಂದಾಗುವ ಪ್ರಯತ್ನಕ್ಕೆ ಹಿನ್ನಡೆಯಾಗುವಂತೆ ನಡೆದುಕೊಳ್ಳುವುದಿಲ್ಲ. ಒಟ್ಟು ತೀರ್ಮಾನಕ್ಕೆ ಬದ್ಧರಾಗಿ ಎಲ್ಲರೊಳಗೊಂದಾಗಿ ಸಾಮಾನ್ಯ ಕಾರ್ಯಕರ್ತನಾಗಿರುವುದಕ್ಕೂ ನಾನೂ ಸಿದ್ಧ.

4. ಕೋಮುವಾದಿ ಬಿಜೆಪಿ ಪಕ್ಷ ನಮ್ಮ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಮತಾಂಧ ಶಕ್ತಿಗಳು ವಿಜೃಂಭಿಸುತ್ತಿರುವುದು ಇದಕ್ಕೆ ಕಾರಣ. ಸಂಘ–ಪರಿವಾರ ಹಿಂದೆಂದಿಗಿಂತಲೂ ಈಗ ಹೆಚ್ಚು ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಬಿಜೆಪಿ ಸರ್ಕಾರ ಕೂಡ ಸಂವಿಧಾನದ ವಿಧಿ ವಿಧಾನಗಳನ್ವಯ ಆಡಳಿತ ನಡೆಸದೆ ಪಂಚಾಂಗವನ್ನು ಆಧರಿಸಿ ಕೆಲಸ ಮಾಡುತ್ತಿದೆ. ಹೋಮ, ಹವನ, ಪೂಜೆ ಪುನಸ್ಕಾರಗಳಲ್ಲೇ ಅಧಿಕಾರಸ್ಥರು ತಲ್ಲೀನರಾಗಿದ್ದಾರೆ. ಮಠಾಧಿಪತಿಗಳು ವಿಧಾನಸೌಧದ ಮೂರನೇ ಮಹಡಿಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾ ಆಡಳಿತದಲ್ಲಿ ಮೂಗು ತೂರಿಸುತ್ತಿದ್ದಾರೆ. ಹಾಗಾಗಿ ಸಹಜವಾಗಿಯೇ ಕೆಳಜಾತಿ, ಹಿಂದುಳಿದ, ಶೋಷಿತ ವರ್ಗಗಳ ಹಿತಾಸಕ್ತಿ ಮೂಲೆಗುಂಪಾಗಿ ಅನಾಥ ಸ್ಥಿತಿ ಅನುಭವಿಸುತ್ತಿದ್ದಾರೆ.

ಈ ಹಿನ್ನಲೆಯಲ್ಲಿ ದಲಿತ ಚಳುವಳಿ ಸಂವಿಧಾನ, ಪ್ರಜಾಪ್ರಭುತ್ವದ ಉಳುವಿಗಾಗಿ ಜನ ಜಾಗೃತಿ ಕಾರ್ಯಕ್ರಮಗಳನ್ನು ವ್ಯಾಪಕವಾಗಿ ಹಮ್ಮಿಕೊಳ್ಳಬೇಕು. * ಮಠ ಮಾನ್ಯಗಳ ಆಸ್ತಿ ಮುಟ್ಟುಗೋಲು * ಮತಾಂಧ ಸಂಘಟನೆಗಳ ನಿಯಂತ್ರಣ * ಎಲ್ಲಾ ಜಾತಿಗಳಿಗೂ ರಾಜಕೀಯ ಪ್ರಾತಿನಿಧ್ಯ * ಆರ್ಥಿಕವಾಗಿ ಸಬಲರಲ್ಲದ ಜಾತಿಗಳಿಗೆ ಬಜೆಟ್‌ನಲ್ಲಿ ಪ್ರಾತಿನಿಧ್ಯ ಕಲ್ಪಿಸಿ ಅವರ ಅಭಿವೃದ್ಧಿಗೆ ಹಣ ಒದಗಿಸುವುದು. ಇತ್ಯಾದಿ... ಕಾರ್ಯಕ್ರಮಗಳನ್ನು ದಲಿತ ಚಳುವಳಿ ಕೈಗೆತ್ತಿಗೊಳ್ಳಬೇಕು. ಹಿಂದುತ್ವದ ಪ್ರಭಾವ ನೇರವಾಗಿ ಕಣ್ಣಿಗೆ ಕಾಣಿಸುವುದಿಲ್ಲ.

'ಸಂವಾದ' ಕೇಳಿದ ಪ್ರಶ್ನೆಗಳು

01. ದಲಿತ ಚಳವಳಿ ದುರ್ಬಲವಾಗಿರುವುದಕ್ಕೆ ಕಾರಣಗಳೇನು? ಮತ್ತೆ ಪ್ರಭಲ ದಲಿತ ಚಳವಳಿಯನ್ನು ಕಟ್ಟಲು ಸಾಧ್ಯವೇ?

02. ದಲತ ಚಳವಳಿ ವಿವಿಧ ಬಣಗಳಾಗಿ ಒಡೆಯುವ ಪ್ರಕ್ರಿಯೆ ಮುಂದುವರೆದೇ ಇದೆ. ಇದಕ್ಕೆ ಕಾರಣಗಳೇನು? ದಲಿತ ಚಳವಳಿಗೆ ವಿವಿಧ ಬಣಗಳ ಅಗತ್ಯ ಇದೆಯೇ? ಇದೆ ಎಂದರೆ ಯಾಕೆ? ವಿವರಿಸಿ?

03. ದಲಿತ ಚಳವಳಿಯ ವಿವಿಧ ಗುಂಪುಗಳನ್ನು ಒಂದುಗೂಡಿಸಲು ಸಾಧ್ಯವೇ? ಸಾದ್ಯವಾಗುವುದಾದರೆ ಅದಕ್ಕೆ ಏನು ಮಾಡಬೇಕು? ವಿವಿಧ ಬಣಗಳನ್ನು ಒಂದುಗೂಡಿಸುವ ಪ್ರಯತ್ನ ಆರಂಭವಾದಾದರೆ ಅದಕ್ಕೆ ನೀವು ಸಿದ್ಧರಿರುವಿರಾ? ಅಗತ್ಯ ಬಿದ್ದರೆ ನಿಮ್ಮ ಸ್ಥಾನಗಳನ್ನು ಬಿಟ್ಟುಕೊಟ್ಟು, ನಿಮ್ಮ ಸಂಘಟನೆಯನ್ನು ವಿಸರ್ಜಿಸಿ, ಒಂದೇ ಸಂಘಟನೆಯಡಿ ಕೆಲಸಮಾಡಲು ಸಿದ್ಧರಿದ್ದೀರಾ?

04. ಈ ಹೊತ್ತು ಪ್ರಭಲವಾಗುತ್ತಿರುವ ಹಿಂದೂತ್ವದ ಪ್ರಭಾವ, ಆ ಮೂಲಕ ಸೃಷ್ಟಿಯಾಗುತ್ತಿರುವ ದಲಿತ ವಿರೋಧಿ ಸ್ಥಿತಿಯನ್ನು ನಿರ್ವಹಿಸುವುದಕ್ಕೆ ಕೈಗೊಳ್ಳಬೇಕಾದ ಕ್ರಮಗಳೇನು?

05. ಅಂಬೇಡ್ಕರ್ ತತ್ವ–ಸಿದ್ಧಾಂತಗಳನ್ನು ಇಂದು ಪುನರ್ ವ್ಯಾಖ್ಯಾನಿಸುವ ಅಗತ್ಯ ಇದೆಯೇ? ದಲಿತ ಚಳವಳಿ ಈ ಹೊತ್ತಿನ ಸವಾಲುಗಳನ್ನು ಎದುರಿಸಲು ಸಜ್ಜಾಗಿದೆಯೇ?

06. 'ದಲಿತ' ಪರಿಕಲ್ಪನೆಯನ್ನು ಕೇವಲ ಅಸ್ಪೃಶ್ಯ ಸಮುದಾಯಗಳನ್ನು ಕುರಿತಂತೆ ಮಾತ್ರ ಬಳಸಬೇಕೆಂಬ ವಾದಕ್ಕೆ ನಿಮ್ಮ ಪ್ರತಿಕ್ರಿಯೆ ಏನು? ಹೊಲೆಯ ಮತ್ತು ಮಾದಿಗ ಜಾತಿಗಳನ್ನು ಬಿಟ್ಟು ಇತರೆ ದಲಿತ ಜಾತಿಗಳು ಚಳವಳಿಯ ಭಾಗವಾಗದೇ ಇರುವುದಕ್ಕೆ ಕಾರಣಗಳೇನು?

07. ದಲಿತ ಸಮುದಾಯದೊಳಗೆ ಸೇರುವ ಬಹುತೇಕ ಎಲ್ಲ ಜಾತಿಗಳೂ ತಮ್ಮ ತಮ್ಮ ಜಾತಿಗಳ ಹೆಸರಿನಲ್ಲಿ ಪ್ರತ್ಯೇಕ ಸಂಘಗಳನ್ನು ಕಟ್ಟಿಕೊಂಡು ಸಂಘಟಿತರಾಗುತ್ತಿರುವಾಗ ದಲಿತ ಚಳವಳಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವೇ?

08. ಒಳ ಮೀಸಲಾತಿಗಾಗಿ ಮಾದಿಗ ಸಮುದಾಯ ತೀವ್ರ ಒತ್ತಾಯ ಮಾಡುತ್ತಿದೆ. ಆದರೆ ದಲಿತ ಚಳವಳಿ ನಾಯಕರು ಮಾತ್ರ ಈ ಬಗ್ಗೆ ಬಹಿರಂಗವಾಗಿ ಏನನ್ನೂ ಮಾತನಾಡುತ್ತಿಲ್ಲ. ಈ ಬಗ್ಗೆ ನಿಮ್ಮ ಸ್ಪಷ್ಟ ಅಭಿಪ್ರಾಯವೇನು?

09. ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಅಸ್ಪೃಶ್ಯರಲ್ಲದ ಜಾತಿಗಳನ್ನು ಸೇರಿಸಿರುವ ಬಗ್ಗೆ ನಿಮ್ಮ ಅಭಿಪ್ರಾಯವೇನು? ಅಸ್ಪೃಶ್ಯರಲ್ಲದವರನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈ ಬಿಡಬೇಕೆಂಬ ಕೂಗಿನ ಬಗ್ಗೆ ನೀವು ಏನು ಹೇಳುತ್ತೀರಿ?

10. ದಲಿತ ಚಳವಳಿಯ ಆರಂಭದ ದಿನಗಳಲ್ಲಿ ಅದರ ಭಾಗವಾಗಿದ್ದ ದಲಿತ ಮಹಿಳೆಯರು ಈಗ ಕಾಣಿಸುತ್ತಿಲ್ಲ ಯಾಕೆ? ದಲಿತ ಮಹಿಳೆಯರ ಸಮಸ್ಯೆಯನ್ನು ದಲಿತ ಚಳವಳಿ ಕಡೆಗಣಿಸುತ್ತಿದೆಯೇ?

11. ದಲಿತ ರಾಜಕಾರಣವನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರಿ? ಚುನಾವಣೆಗಳಲ್ಲಿ ಸ್ಪರ್ಧಿಸುವ ದಲಿತ ಚಳವಳಿಯ ಅಭ್ಯರ್ಥಿಗಳು ದಲಿತರ ಮತಗಳನ್ನು ಪಡೆದುಕೊಳ್ಳುವಲ್ಲಿಯೂ ವಿಫಲವಾಗುತ್ತಿರುವುದು ಯಾಕೆ?

12. ಮುಂಬರುವ ದಿನಗಳಲ್ಲಿ ದಲಿತರು ಒಂದು ದೊಡ್ಡ ಶಕ್ತಿಯಾಗಿ ಬೆಳೆಯಲು ಯಾವ ಕಾರ್ಯಕ್ರಮ ಮತ್ತು ತಂತ್ರಗಾರಿಕೆಯನ್ನು ಅನುಸರಿಸಬೇಕು?

ಆರಂಭದ ದಲಿತ ಚಳುವಳಿಯಿಂದ ಬಂದ ಕೆಲವರು ಕೆಲವು ಕಾರಣಾಂತರಗಳಿಂದ ಬೇರೆ ಬೇರೆ ಬಣಗಳಾಗಿ ಗುರುತಿಸಿಕೊಂಡು ಚಳುವಳಿಯಲ್ಲಿ ತೊಡಗಿಕೊಂಡಿದ್ದಾರೆ. ಸೈದ್ಧಾಂತಿಕ ಸ್ಪಷ್ಟತೆ ಕಂಡುಕೊಳ್ಳುವ ನಿಟ್ಟಿನಲ್ಲಿ ಅಂದಿನ ನಾಯಕತ್ವ ಸಕಾಲಿಕ ನಿಲುವುಗಳನ್ನು ಕೈಗೊಳ್ಳದ ಕಾರಣದಿಂದ ಈ ಅವಾಂತರ ಸೃಷ್ಟಿಯಾಗಿದೆ. ಆದರೆ ಅಸಂಖ್ಯಾತ ಕಾರ್ಯಕರ್ತರ ದೃಷ್ಟಿಯಲ್ಲಿ ಚಳುವಳಿ ಏಕ ಘಟಕವಾಗೇ ಉಳಿದಿದೆ. ಆದ್ದರಿಂದ ಸ್ವಾರ್ಥ ರಾಜಕೀಯದ ಆಮಿಷ, ಸ್ವಪ್ರತಿಷ್ಟೆಗಳಿಂದ ಕೂಡಿದ ಗುಂಪುಗಳನ್ನು ಹೊರತುಪಡಿಸಿ ಉಳಿದ ಸಮಾನ ಮನಸ್ಕರೆಲ್ಲಾ ಸೇರಿ ಒಕ್ಕೂಟದಡಿ ಚಳುವಳಿ ಮಾಡಿದರೆ ಈಗಲೂ ಪ್ರಬಲವಾದ ಚಳುವಳಿ ರೂಪಿಸಲು ಸಾಧ್ಯವಿದೆ.

ಹಾಗಾಗಿ ಪರೋಕ್ಷವಾಗಿಯೇ ಅದಕ್ಕೆ ಪೆಟ್ಟು ಕೊಡುವಂತ ಕಾರ್ಯಕ್ರಮಗಳಿಗೆ ಆಧ್ಯತೆ ನೀಡಬೇಕು.

5. ಅಂಬೇಡ್ಕರ್ ವಿಚಾರಧಾರೆಗಳು ಸಾರ್ವತ್ರಿಕವಾಗಿ ತಮ್ಮ ಪ್ರಸ್ತುತೆಯನ್ನು ಯಾವತ್ತಿಗೂ ಉಳಿಸಿಕೊಂಡಿವೆ. ಆದರೆ ಪ್ರಜಾತಂತ್ರವಾದಿ, ಸಮಾಜವಾದಿ ದಾರ್ಶನಿಕ ಅಂಬೇಡ್ಕರ್‌ರವರ ಚಿಂತನೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸಂಘಟನೆಗಳು ವಿಫಲವಾಗಿವೆ. ಅಥವಾ, ತಮಗೆ ಅನುಕೂಲಕರ ರೀತಿಯಲ್ಲಿ ಬಳಸುತ್ತಿವೆ. ದೇಶದ ರಾಜಕಾರಣ ಕೂಡ ಈ ವಿಚಾರದಲ್ಲಿ ಸೋತಿದೆ. ಈ ಮಾತಿಗೆ ಬಿಎಸ್‌ಪಿ ಕೂಡ ಹೊರತಲ್ಲ.

ಆದ್ದರಿಂದ ಬದಲಾಗಬೇಕಿರುವುದು ಅಂಬೇಡ್ಕರ್ ತತ್ವ–ಸಿದ್ಧಾಂತಗಳಲ್ಲ, ಅದನ್ನು ಮರು ವ್ಯಾಖ್ಯಾನಿಸುವ ಅಗತ್ಯವೂ ಇಲ್ಲ. ಬದಲಾಗಿ ಇಡೀ ಭಾರತೀಯ ಸಮಾಜವೇ ಬದಲಾವಣೆಗೆ ಒಳಪಡಬೇಕು. ಜಾಗತೀಕರಣದ ಹಾನಿಗೆ ಪರ್ಯಾಯವಾಗಿ ಅಂಬೇಡ್ಕರ್ ವಿಚಾರಧಾರೆಯಲ್ಲೇ ಉತ್ತರ ಕಂಡುಕೊಳ್ಳಬಹುದು. ತೇಪೆ ಹಚ್ಚುವ ಭೂ ಸುಧಾರಣಾ ಕ್ರಮದಿಂದ ಯಾವುದೇ ಪ್ರಯೋಜನವೂ ಆಗುವುದಿಲ್ಲ. ಉತ್ಪಾದನಾ ಕ್ಷೇತ್ರಗಳಾದ ಕೃಷಿ. ಕೈಗಾರಿಕೆ, ಉದ್ಯೋಗ ಮುಂತಾದವುಗಳು ಸಾಮೂಹಿಕ ಒಡೆತನ ಅಥವಾ ಸರ್ಕಾರಿ ಸ್ವಾಮ್ಯತೆಗೆ ಒಳಪಡಬೇಕು. ಅಂಬೇಡ್ಕರ್‌ರವರ ಇಂತಹ ಉತ್ಕೃಷ್ಟ ವಿಚಾರಗಳನ್ನು ಈ ದೇಶದ ಯಾವ ಚಳುವಳಿಯೂ ಗಂಭೀರವಾಗಿ ಕೈಗೆತ್ತಿಕೊಂಡಿಲ್ಲ ಅಷ್ಟೆ.

ಹಾಗಾಗಿ ದಲಿತ ಚಳುವಳಿ ಈಗಲೂ ಅಂಬೇಡ್ಕರ್ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಹೋರಾಟಕ್ಕೆ ಇಳಿದಲ್ಲಿ ಇವತ್ತಿನ ಎಲ್ಲಾ ಸವಾಲುಗಳನ್ನೂ ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಿದೆ.

6. ದಲಿತರು ಎಂದರೆ ಅಸ್ಪೃಶ್ಯರು. ಜಾತಿಯಿಂದ ಅವಮಾನಿತರಾದವರು. ಮತ್ತೂ ಹೇಳಬೇಕೆಂದರೆ ಯಾರು ಹಿಂದೂ ಚಾತುರ್ವರ್ಣದ ಶ್ರಮ ವಿಭಜನೆಯ ಕುತಂತ್ರಕ್ಕೆ ಬಲಿಯಾಗಿ ಕೀಳು ವೃತ್ತಿಯನ್ನೇ ತಲತಲಾಂತರಗಳಿಂದ ಮಾಡುತ್ತಾ ಜಾತಿಯ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುತ್ತಾರೋ ಅಂತವರನ್ನೆಲ್ಲಾ ದಲಿತ ಪದದ ವ್ಯಾಪ್ತಿಗೆ ಬಳಸಬಹುದು.

ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ತೀರಾ ಕೆಳಗೆ, ಊರಾಚೆಗೆ ತಳ್ಳಲ್ಪಟ್ಟ ಅಸ್ಪೃಶ್ಯರಾದ ಹೊಲೆಯ–ಮಾದಿಗ ಜಾತಿಗಳ ಮೇಲೆಯೇ ಹೆಚ್ಚಾಗಿ ದೌರ್ಜನ್ಯ ನಡೆಯುತ್ತಿದ್ದುದರಿಂದ ಸಹಜವಾಗಿಯೇ ಈ ಸಮುದಾಯಗಳು ಚಳುವಳಿಯಲ್ಲಿ ಮುಂಚೂಣಿಯಲ್ಲಿ ನಿಲ್ಲಲ್ಪಟ್ಟವು. ಇನ್ನಿತರ ಊರೊಳಗಿನ ಕೆಳಜಾತಿಗಳ ಮೇಲೆ ದೌರ್ಜನ್ಯ ನಡೆದರೂ ಅವು ಅಸ್ಪೃಶ್ಯ ಸಮುದಾಯದೊಟ್ಟಿಗೆ ಬರಲು ಮನಸ್ಸು ಮಾಡದ ಕಾರಣ ಅವು ಚಳುವಳಿಯ ಭಾಗವಾಗದೆ ದೂರ ಉಳಿದವು.

ಆದರೂ ಚಳುವಳಿಯು ಪ್ರಜ್ಞಾಪೂರ್ವಕವಾಗಿ ಅವರನ್ನು ಒಳಗೊಳ್ಳುವುದಕ್ಕೆ ನಿರಂತರ ಪ್ರಯತ್ನ ಮಾಡುತ್ತಲೇ ಇದೆ.

7. ದಲಿತ ಸಮುದಾಯದ ಒಳಗೆ ಬರುವ ಜಾತಿಗಳು ಇತ್ತೀಚೆಗೆ ಪ್ರತ್ಯೇಕವಾಗಿ ಜಾತಿಸಂಘಟನೆ ಕಟ್ಟಿಕೊಳ್ಳುತ್ತಿರುವುದು ನಿಜ. ಆದರೆ ಮಾದಿಗ ಸಮುದಾಯ ಬಿಟ್ಟರೆ ಇನ್ನಾವುದೂ ಚಳುವಳಿಯ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತಿಲ್ಲ. ಬದಲಾಗಿ ಇವೆಲ್ಲಾ ಕೇವಲ

(41ನೇ ಪುಟಕ್ಕೆ)

ವಿ. ನಾಗರಾಜ್
ರಾಜ್ಯ ಸಂಯೋಜಕರು.
ದಸಂಸ (ಸಂಯೋಜಕ)

ವ್ಯಕ್ತಿ ಪ್ರತಿಷ್ಠೆ ಮತ್ತು ಸ್ವಾರ್ಥ ಹಿತಾಸಕ್ತಿಗೆ ಒಳಗಾಗಿ ಸ್ಪಷ್ಟ ಸಿದ್ಧಾಂತಗಳಿಲ್ಲದೆ, ಸಂವಿಧಾನ ಚೌಕಟ್ಟಿಗೆ ಬದ್ಧರಾಗದೇ ಇರುವುದು ವಿವಿಧ ಬಣಗಳಾಗಿ ಒಡೆಯಲು ಕಾರಣವಾಗಿದೆ.

ವ್ಯಕ್ತಿ ಪ್ರತಿಷ್ಠೆ, ಸ್ವಾರ್ಥ ಬಣಗಳಾಗಲು ಕಾರಣ

1. ಸಂವಿಧಾನ, ಸಿದ್ಧಾಂತ ಇಲ್ಲದಿರುವುದು ಮತ್ತು ದಲಿತ ಸಂಘಟನೆ ವಿವಿಧ ಬಣಗಳಾಗಿರುವುದೇ ಚಳುವಳಿಯು ದುರ್ಬಲವಾಗಿರುವುದಕ್ಕೆ ಕಾರಣ.

2\. ವ್ಯಕ್ತಿ ಪ್ರತಿಷ್ಠೆ ಮತ್ತು ಸ್ವಾರ್ಥ ಹಿತಾಸಕ್ತಿಗೆ ಒಳಗಾಗಿ ಸ್ಪಷ್ಟ ಸಿದ್ಧಾಂತಗಳಿಲ್ಲದೆ, ಸಂವಿಧಾನ ಚೌಕಟ್ಟಿಗೆ ಬದ್ಧರಾಗದೇ ಇರುವುದು ವಿವಿಧ ಬಣಗಳಾಗಿ ಒಡೆಯಲು ಕಾರಣವಾಗಿದೆ.

* ವಿವಿಧ ಬಣಗಳ ಅಗತ್ಯವಿಲ್ಲ:

3\. ಒಂದುಗೂಡಿಸಲು ಸಾಧ್ಯ

ಅದಕ್ಕೆ:
* ಕನಿಷ್ಠ ಆತ್ಮೀಯತೆ ಬೆಳೆಸಿಕೊಳ್ಳುವುದು ಮತ್ತು ಒಬ್ಬರನೊಬ್ಬರು ಸ್ಪಂದಿಸುವುದು.
* ಆಯಾ ನಾಯಕರೊಂದಿಗೆ ಗುಂಪಾಗಿ ಚರ್ಚಿಸುವುದು
* ತಲೆದೋರಿರುವ ಭಿನ್ನಾಭಿಪ್ರಾಯಗಳನ್ನು ಕಂಡುಕೊಳ್ಳುವುದು
* ಅವು ಸಂಘಟನಾತ್ಮಕ ಅಥವಾ ವೈಯಕ್ತಿಕ ಎಂದು ಪ್ರತ್ಯೇಕಿಸಿ ಸರಿಪಡಿಸುವುದು.
* ಸ್ವ-ವಿಮರ್ಶೆ ಮತ್ತು ವಿಮರ್ಶೆ ಮಾಡುವುದು
* ಕ್ರಮಬದ್ಧವಾಗಿ ನಡೆಯುವಂತೆ ನೋಡಿಕೊಳ್ಳುವುದು

4\. ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ವೈಚಾರಿಕ ಸಂಘಟನೆ ಪ್ರಬಲಗೊಂಡರೆ-ಹಿಂದುತ್ವವಾದ ದುರ್ಬಲಗೊಳ್ಳುವುದು. ಇದು ಸಂಘಟನೆಯ ಕ್ರಿಯಾಯೋಜನೆಗಳು ಮತ್ತು ಕಾರ್ಯಕ್ರಮಗಳ ಮೇಲೆ ಅವಲಂಬಿತವಾಗಿರುತ್ತದೆ.

5\. ಅಂಬೇಡ್ಕರ್ ಸಿದ್ಧಾಂತಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡು ಕಾರ್ಯರೂಪಕ್ಕೆ ತರಲು ಆಗದೇ ಇರುವಾಗ ಪುನರ್ ವ್ಯಾಖ್ಯಾನಿಸುವ ಅಗತ್ಯವಿಲ್ಲ. ಪ್ರಸ್ತುತ ಸವಾಲುಗಳನ್ನು ಎದುರಿಸಲು ಸಜ್ಜಾಗಿಲ್ಲ.

6\. ಈ ವಾದ ಸರಿಯಲ್ಲ. ಇತರೆ ದಲಿತ ಜಾತಿಗಳು ಸಂಘಟನೆಯಲ್ಲಿ ಭಾಗವಾಗದೇ ಇರುವುದಕ್ಕೆ ಕಾರಣ:
* ಸಂಘಟನೆಯನ್ನು ಕೆಲವೇ ಜಾತಿಗಳಿಗೆ ಸಿಮೀತಗೊಳಿಸುತ್ತಾ ಹೋದದ್ದು.
* ಇತರೆ ಜಾತಿಗಳ ನಡುವಿನ ವೈರುಧ್ಯಗಳು, ಸಮಸ್ಯೆಗಳು, ಬಿನ್ನಾಭಿಪ್ರಾಯಗಳನ್ನು ಅರ್ಥ ಮಾಡಿಕೊಂಡು ಪರಿಹರಿಸಲು ಮುಂದಾಗದೆ ಇರುವುದು.
* ಜಾತಿ ವ್ಯವಸ್ಥೆಯ ಸಡಿಲಿಕೆಗೆ ಮತ್ತು ಬದಲಾವಣೆಗೆ ಪರ್ಯಾಯ ಕಾರ್ಯಕ್ರಮಗಳು ರೂಪಿಸಲಾಗದೇ ಇರುವುದು.
* ಇತರೆ ದಲಿತ ಜಾತಿಗಳಲ್ಲಿರುವ ಅಸ್ಪೃಶ್ಯ ಭಾವನೆ, ಮೌಢ್ಯಗಳನ್ನು ಹೋಗಲಾಡಿಸುವಂತಹ ವೈಚಾರಿಕ ಪ್ರಜ್ಞಾವಂತರನ್ನು ಗುರುತಿಸಿ, ನಾಯಕತ್ವ ನೀಡಿ ಮುಖ್ಯವಾಹಿನಿಗೆ ತರದೇ ಹೋದದ್ದು.

7\. ಇತರೆ ದಲಿತ ಜಾತಿಗಳನ್ನು ಕಡೆಗಣಿಸಿದಾಗ ಪ್ರತ್ಯೇಕ ಸಂಘಗಳನ್ನು ಕಟ್ಟಿಕೊಳ್ಳುವುದು ಸಹಜ. ಆ ಬಗ್ಗೆ ಸಂಘಟನೆ ಕೆಲಸ ಮಾಡಿದರೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯ.

8\. ನಾವೂ ಮಾತನಾಡಬೇಕು, ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಬೇಕು.

9\. ಜಾತೀಯತೆ ಹೋಗಲಾಡಿಸುವ ಪ್ರಯತ್ನಗಳಲ್ಲಿರುವ ನಮಗೆ ಈ ಮಡಿವಂತಿಕೆ ಸರಿಯಿಲ್ಲ. ಈ ಬಗ್ಗೆ ನಮ್ಮ ವಿರೋಧವಿಲ್ಲ, ಈ ಕೂಗು ಸರಿಯಲ್ಲ.

10\. ಇದು ಸಂಘಟಕರ ಮತ್ತು ನಾಯಕರ ದೌರ್ಬಲ್ಯ. ಮಹಿಳೆಯರ ಸಬಲೀಕರಣದ ಬಗ್ಗೆ ಸಮಗ್ರವಾದ ಚಿಂತನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಲಿಲ್ಲ. ಅದುದರಿಂದ ದೂರ ಸರಿಯಲು ಕಾರಣವಾಯಿತು.
* ಹೌದು ಮಹಿಳೆಯರನ್ನು ಸಂಘಟನೆ ಮುಖ್ಯವಾಹಿನಿಗೆ ತರದೇ ಕಡೆಗಣಿಸಲಾಗಿದೆ.

11\. ದಲಿತ ರಾಜಕಾರಣ :
* ಸಂವಿಧಾನ ಬದ್ಧವಾಗಿ ದಲಿತರು ಎಲ್ಲಾ ಕ್ಷೇತ್ರಗಳನ್ನು ಪ್ರವೇಶಿಸಿ (ಆಕ್ರಮಿಸಿ) ವ್ಯವಸ್ಥೆಯನ್ನು ಬದಲಿಸುವಂತಹ ಮುಖ್ಯವಾಹಿನಿಗೆ ಬಂದಾಗ ಅಗುವ ಬದಲಾವಣೆಯ ಪರ್ವವೇ ದಲಿತ ರಾಜಕಾರಣ.
* ಚುನಾವಣೆಗಳಲ್ಲಿ ಸ್ಪರ್ಧಿಸುವ ದಲಿತ ಸಂಘಟನೆಯ ಅಭ್ಯರ್ಥಿಗಳು ದಲಿತರ ಮತಗಳನ್ನು ಪಡೆದುಕೊಳ್ಳುವಲ್ಲಿಯೂ ವಿಫಲವಾಗಿರುವುದು; ದಲಿತೇತರರ ವಿರೋಧಿಗಳಾಗಿರುವುದು ಮತ್ತು ದಲಿತರಲ್ಲಿಯೇ ಒಗಟ್ಟು ಇಲ್ಲದೇ ವಿವಿಧ ಪಕ್ಷಗಳಿಗೆ ಹಂಚಿ ಹೋಗಿರುವುದು.

12\. ಪ್ರಬಲ ಸಂಘಟನೆ ಆಗಬೇಕು:
* ಹಿಂದಿನ ಎಲ್ಲಾ ವೈಫಲ್ಯಗಳನ್ನು ಚಿಂತನೆ ಮತ್ತು ವಿಮರ್ಶೆಗೆ ಒಳಪಡಿಸಬೇಕು.
* ಆಂತರಿಕ ಮತ್ತು ಬಾಹ್ಯ ಸಂಘಟನೆಯ ಬಗ್ಗೆ ನಿಖರತೆ ಇರಬೇಕು.
* ಸಂಘಟನೆ-ಚಳುವಳಿ-ಬದಲಾವಣೆ ಈ ಕುರಿತಂತೆ ತಜ್ಞರ ಸಮಿತಿ ರಚಿಸಿಕೊಳ್ಳಬೇಕು.
* ಶಾಸಕಾಂಗ-ಕಾರ್ಯಾಂಗ-ನ್ಯಾಯಾಂಗಗಳ ಬಗ್ಗೆ ಸಂಘಟನೆಯ ಸ್ಪಷ್ಟ ನಿಲುವು ಇರಬೇಕು. ಮತ್ತು ಅವು ವಿಫಲವಾದಲ್ಲಿ ಕಾರ್ಯಕ್ರಮಗಳ ಮೂಲಕ ಎಚ್ಚರಿಸಿ ಜಾರಿಗೆ ತರುವಂತಾಗಬೇಕು.
* ಅಭಿವೃದ್ಧಿ ಕುರಿತಂತೆ ತನ್ನದೇ ರೂಪುರೇಷೆಗಳನ್ನು ಸಿದ್ಧಪಡಿಸಿಕೊಳ್ಳಬೇಕು.
* ಭೂಮಿ, ಕೃಷಿ, ಕೈಗಾರಿಕೆ, ಬಂಡವಾಳ, ಆರ್ಥಿಕ, ವಿಜ್ಞಾನ, ತಂತ್ರಜ್ಞಾನ, ಮಾರುಕಟ್ಟೆ, ವಿದ್ಯೆ ಮತ್ತು ಇತರೆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಣಲು ಪರಿಣಿತಿ ಹೊಂದಿದ ಪ್ರಜ್ಞಾವಂತರ ಪಡೆಯನ್ನು ನೇಮಿಸಕೊಳ್ಳಬೇಕು.
* ಇದಕ್ಕೆಲ್ಲಾ ಕ್ರಮಬದ್ಧ ಆಡಳಿತ, ಶಿಸ್ತು, ಸಮಯಪ್ರಜ್ಞೆ, ಯೋಜನೆ, ಕ್ರಿಯಾಶೀಲ ನಾಯಕತ್ವ, ವಿಷಯವಾರು ನಾಯಕತ್ವಗಳಿಗೆ ಸಿದ್ಧಗೊಳ್ಳಬೇಕು.
* ಕೌಶಲ್ಯ ಮತ್ತು ಶ್ರಮದ ಹಂಚಿಕೆ ಸೂಕ್ತ ವ್ಯಕ್ತಿಗಳ ಆಯ್ಕೆ-ಆಯ್ಕೆ ಕ್ರಮ ಮುಂತಾದವು ನಡೆಯಬೇಕು.
* ವಿಭಾಗವಾರು ಸ್ವತಂತ್ರ ಜವಾಬ್ದಾರಿ ಮತ್ತು ಅದರ ಪರಿಶೀಲನೆ ನಡೆಯಬೇಕು.
* ಪೂರಕ ಸಾಹಿತ್ಯ, ಪ್ರಚಾರ-ಆಗಬೇಕು.
* ರಾಜ್ಯ-ರಾಷ್ಟ್ರ ಮಟ್ಟದ ಪ್ರಗತಿಪರ ಚಿಂತಕರ ವೇದಿಕೆ ನಿರ್ಮಾಣವಾಗಬೇಕು.
* ಅಂತರ ರಾಜ್ಯ ಸಂಘಟನೆ.
* ಕಾಲಕಾಲಕ್ಕೆ ತಜ್ಞರಿಂದ ಸಲಹೆ-ತಂತ್ರಗಾರಿಕೆ ಪಡೆಯಬೇಕು. ಇವೆಲ್ಲವುಗಳ ಪರಿಪಕ್ವತೆ ಇದ್ದಾಗ ಒಂದು ದೊಡ್ಡ ಶಕ್ತಿಯಾಗಿ ಬೆಳೆಯಲು ಸಾಧ್ಯವಾಗಬಹುದು.

■

ಅಂಬೇಡ್ಕರ್ ತತ್ವ-ಸಿದ್ಧಾಂತ ಪುನರ್‌ವ್ಯಾಖ್ಯಾನ ಬೇಕಿಲ್ಲ

ಲಕ್ಷ್ಮೀನಾರಾಯಣ ನಾಗವಾರ

ರಾಜ್ಯ ಸಂಚಾಲಕರು
ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ

1. ದಲಿತ ಚಳುವಳಿ ದುರ್ಬಲವಾಗಿಲ್ಲ. ವಿಘಟನೆಯಾಗಿದೆ. ಸಂಘಟನೆ, ಚಳುವಳಿಗಳೂ ಬೆಳೆಯುವಾಗ ಹಲವಾರು ಭಿನ್ನಾಭಿಪ್ರಾಯಗಳು ಬರುವ ಹಿನ್ನಲೆಯಲ್ಲಿ ವಿಘಟನೆಯಾಗಿದೆ.

ಮತ್ತೇ ಪ್ರಬಲ ಚಳುವಳಿಯನ್ನು ಕಟ್ಟಲು ಸಾಧ್ಯವಿದೆ. ಆ ಹಿನ್ನಲೆಯಲ್ಲಿ ನಮ್ಮ ಗುಂಪುಗಳ ನಾಯಕರ ಸಮನ್ವಯತೆಯ ಪ್ರಕ್ರಿಯೆ ಪ್ರಾರಂಭವಾಗಿದೆ. ಇದರ ಪೂರಕವಾಗಿ ನಾವೆಲ್ಲಾ ಇದ್ದೇವೆ.

2. ದಲಿತ ಚಳುವಳಿ ಬಣಗಳಾಗಿ ವಿಘಟನೆಯಾಗಿರುವುದು ನಿಜ. ದಲಿತ ಚಳುವಳಿಗೆ ಬಣಗಳ ಅಗತ್ಯವಿಲ್ಲ. – ಆದರೆ ಚಳುವಳಿ ಸೈದ್ಧಾಂತಿಕವಾಗಿ ಕರ್ನಾಟಕದಲ್ಲಿ ವಿಘಟನೆಯಾಗಿದ್ದು 1996ರಲ್ಲಿ ಬಿಎಸ್‌ಪಿಯು ಬಿಜೆಪಿ ಜೊತೆ ಅಧಿಕಾರಕ್ಕಾಗಿ ಉತ್ತರ ಪ್ರದೇಶದಲ್ಲಿ ಹೊಂದಾಣಿಕೆ ಮಾಡಿಕೊಂಡ ಸಂದರ್ಭದಲ್ಲಿ ಬಿಟ್ಟರೇ, ಬೇರೆ ಎಲ್ಲಾ ಸಂದರ್ಭಗಳಲ್ಲೂ ವೈಯಕ್ತಿಕ ನೆಲೆಯಲ್ಲಿ ವಿಘಟನೆಯಾಗಿದೆ.

3. ವಿವಿಧ ಬಣಗಳನ್ನು ಒಗ್ಗೂಡಿಸಲು ಸಾಧ್ಯವಿದೆ. ಏಕೆಂದರೆ ನಮ್ಮ ಸಂಘಟನೆ ವತಿಯಿಂದ ಮೂರು ವರ್ಷಗಳ ಹಿಂದೆ ಮೈಸೂರಿನಲ್ಲಿ ಡಾ. ರಾಮಮನೋಹರ ಲೋಹಿಯಾ ಜನ್ಮ ಶತಮಾನೋತ್ಸವ ಹಿನ್ನಲೆಯಲ್ಲಿ ನಡೆದ ರಾಜ್ಯಮಟ್ಟದ ಅಧ್ಯಯನ ಶಿಬಿರದಲ್ಲಿ ನಾನೇ ಖುದ್ದು ದಲಿತ ಚಳುವಳಿಯ ಸಂಸ್ಥಾಪಕರಲ್ಲೊಬ್ಬರಾದ ಶ್ರೀ ದೇವನೂರು ಮಹಾದೇವ ಅವರಿಗೆ ಪ್ರೊ॥ ಬಿ.ಕೆ., ಇಲ್ಲ ನೀವು, ಸಿದ್ದಲಿಂಗಯ್ಯ ಇದ್ದೀರಿ. ನೀವು ಹಿರಿಯರಾಗಿ ನಮ್ಮನ್ನು ಒಟ್ಟಿಗೆ ಕರೆದು ಮಾತನಾಡಿ ಒಂದಾಗಲು ಪ್ರಯತ್ನ ಮಾಡಬೇಕೆಂದು ಮನವಿ ಮಾಡಿದೆ.

ಇದರ ಪೂರಕವಾಗಿ ದೇವನೂರು ಮಹಾದೇವ ಅವರ ಪ್ರಯತ್ನದಿಂದಾಗಿ ದಸಂಸ ಸಂಘಟನೆಯಿಂದ ವಿಘಟನೆಯಾದ ನಾಲ್ಕು ಗುಂಪುಗಳನ್ನು ಒಟ್ಟುಗೂಡಿಸಿ ಒಂದೇ ವೇದಿಕೆಯಲ್ಲಿ ಮೈಸೂರಿನಲ್ಲಿ ಅಂಬೇಡ್ಕರ್ ಜಯಂತಿ ಆಚರಿಸುವ ಮೂಲಕ ಒಂದುಗೂಡುವ ಪ್ರಯತ್ನ ಯಶಸ್ವಿಯಾಗಿದ್ದು ನಮ್ಮ ಮುಂದಿದೆ. ಇದರ ನಂತರವೇ ಮಂಡ್ಯದಲ್ಲಿ ಆಗಿದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಇದರ ಪ್ರಯತ್ನಗಳು ಮುಂದುವರಿದಿವೆ.

ಒಂದುಗೂಡಿಸುವ ಪ್ರಯತ್ನಕ್ಕೆ ನಾವೇ ಮುಂದಾಗಿರುವಾಗ ಸಾಧ್ಯವಾಗುವುದಾದರೆ ಎಂಬ ಪ್ರಶ್ನೆ ಎಲ್ಲಿಂದ ಬರುತ್ತದೆ. ಒಂದಾಗಲೇಬೇಕು. ಅಗತ್ಯವಿದ್ದರೆ ನಮ್ಮ ಸ್ಥಾನ ಬಿಟ್ಟುಕೊಡಲು ಸಿದ್ಧ, ಆದರೆ ಸಂಘಟನೆಯನ್ನು ವಿಸರ್ಜಿಸಲು ನಾನು ಒಬ್ಬನೇ ತೀರ್ಮಾನ ತೆಗೆದುಕೊಳ್ಳುವುದು ತಪ್ಪು. ನಮ್ಮ ಸಂಘಟನೆಗೆ ನಾನೊಬ್ಬನೇ ನಾಯಕನಲ್ಲ. ನಮಗೆ ಒಂದು ರಾಜ್ಯ ಸಮಿತಿ ಇದೆ. ಇತರೆ ಪದಾಧಿಕಾರಿಗಳು ಇದ್ದಾರೆ. ಇಲ್ಲಾ ತಾಲೂಕು ಸಮಿತಿಗಳು ಇವೆ. ಪ್ರಜಾಸತ್ತಾತ್ಮಕವಾಗಿ ನಾವೆಲ್ಲಾ ಸೇರಿ ತೀರ್ಮಾನಿಸಬೇಕಾಗುತ್ತದೆ.

4. ಪ್ರಬಲವಾಗುತ್ತಿರುವ ಹಿಂದುತ್ವದ ಪ್ರಭಾವವನ್ನು ಹಾಗು ದಲಿತ ವಿರೋಧಿ ನೀತಿ. ವರ್ಣಾಶ್ರಮ ಧರ್ಮದ ಪಿತೂರಿ. ಜಾತಿವಾದ, ಕೋಮುವಾದವನ್ನು ತಡೆಯಲಿಕ್ಕೆ ದಲಿತರಷ್ಟೇ ಸಾಲದು. ಎಲ್ಲಾ ಪ್ರಗತಿಪರ ಎಡ–ಪ್ರಜಾಸತ್ತಾತ್ಮಕ ನಿಲುವು ಹೊಂದಿರುವ ಜಾತ್ಯಾತೀತ ಶಕ್ತಿಗಳು ಒಂದಾಗಿ "ಹಿಂದುತ್ವ"ದ ಕೋಮುವಾದಿ ಶಕ್ತಿಯನ್ನ ದಮನ ಮಾಡಬೇಕಾಗುತ್ತದೆ.

5. ಅಂಬೇಡ್ಕರ್ ತತ್ವ–ಸಿದ್ಧಾಂತಗಳನ್ನು ಪುನರ್ ವ್ಯಾಖ್ಯಾನಿಸುವ ಅಗತ್ಯವಿಲ್ಲ. ಏಕೆಂದರೆ ಅವರ ಕಾಲಘಟ್ಟದ ಸನ್ನಿವೇಶ, ವಿಚಾರಗಳಲ್ಲಿ ನಿರ್ಭೀತಿಯಿಂದ ಸಮಾಜಮುಖಿಯಾಗಿ ಸಮಸಮಾಜದ ಪ್ರತಿಪಾದಕರಾಗಿ, ಸಂವಿಧಾನದಲ್ಲಿ ಸರ್ವರಿಗೂ ಸಮಪಾಲು–ಸರ್ವರಿಗೂ ಸಮಬಾಳು ಎನ್ನುವ ಉದಾತ್ತ ಆಶಯಗಳು ಇಂದಿಗೂ ಮುಖ್ಯವಾಗಿವೆ ಹಾಗು ಜಾತೀಯತೆ, ಅಸ್ಪೃಶ್ಯತೆ, ಅಸಮಾನತೆ ದಲಿತರ ಮೇಲಿನ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಲೇ ಇವೆ. ಅಂತರಜಾತೀಯ ವಿವಾಹವಾದರೆ.ಹಿಂದಿನ ದಿನಗಳಲ್ಲಿ ದಲಿತ ಯುವಕರನ್ನು ಕೊಲೆ ಮಾಡುತ್ತಿದ್ದರು. ಆದರೆ ಈಗ ತನ್ನ ಸ್ವಂತ ಹೆಣ್ಣು ಮಕ್ಕಳನ್ನೆ ಮರ್ಯಾದೆ ಹೆಸರಿನಲ್ಲಿ ಹತ್ಯೆ ಮಾಡುತ್ತಿರುವ ಜಾತಿಯ ಕ್ರೌರ್ಯ ಜೀವಂತವಿರುವಾಗ ಅಂಬೇಡ್ಕರ್ ವಿಚಾರಗಳನ್ನು ಯಾವ ರೀತಿ ಪುನರ್ ವ್ಯಾಖ್ಯಾನಿಸುತ್ತೀರಿ ನೀವೇ ಹೇಳಿ.

ದಲಿತ ಚಳುವಳಿ ಈ ಹೊತ್ತಿನ ಸವಾಲುಗಳನ್ನು ಎದುರಿಸಲು ಸಜ್ಜಾಗಬೇಕಾಗಿದೆ. ಸ್ವಾತಂತ್ರ್ಯದ ನಂತರ ಅಂಬೇಡ್ಕರ್‌ರವರು ಸಂವಿಧಾನ ರಚಿಸಿದ ನಂತರ ಕೆಲವು ಮೂಲಭೂತ ಸೌಕರ್ಯಗಳನ್ನು ಸಾಕಷ್ಟು, ಮೀಸಲಾತಿ, ಶಿಕ್ಷಣ, ಉದ್ಯೋಗ, ರಾಜಕೀಯ ಅಧಿಕಾರ ಕನಿಷ್ಟ ಮಟ್ಟದಲ್ಲಿ ದೊರೆತವು.

ಆದರೆ ಇವೆಲ್ಲವನ್ನು ನುಂಗಿ ನಾಶಮಾಡುವಂತ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಪ್ರಭಾವ ದಲಿತರ ಮೇಲೆ ಆಗಿದೆ. ದಲಿತರು ಕೂಡ ಮೀಸಲಾತಿಗೆ ಸೀಮಿತವಾಗದೆ ಜಾಗತೀಕ ಮಟ್ಟದಲ್ಲಿ ಸ್ಪರ್ಧೆ ಮಾಡುವ ಮೂಲಕ ಅಭಿವೃದ್ಧಿ ಹೊಂದಬೇಕು.

ಹಿಂದುತ್ವ, ಕೋಮುವಾದ, ಜಾಗತೀಕರಣದ ಹಲವಾರು ಸಮಸ್ಯೆಗಳನ್ನು ಎದುರಿಸಲು ಚಳುವಳಿ ಬೌದ್ಧಿಕವಾಗಿ ಮತ್ತು ವೈಜ್ಞಾನಿಕವಾಗಿ ಪರ್ಯಾಯ ಮಾರ್ಗೋಪಾಯಗಳನ್ನು ಹುಡುಕಿಕೊಂಡು ಕ್ರೀಯಾಶೀಲವಾಗಿ ತೊಡಗಿಸಿಕೊಳ್ಳುತ್ತ ಬರಬೇಕಾಗುತ್ತದೆ.

6. ದಲಿತ ಪರಿಕಲ್ಪನೆಯಲ್ಲಿ ಕೇವಲ ಅಸ್ಪೃಶ್ಯ ಸಮುದಾಯಗಳ ಕುರಿತಂತೆ ಮಾತ್ರ ಬಳಸಬೇಕೆಂಬ ವಾದ ಸರಿಯಲ್ಲ. ಏಕೆಂದರೆ "ದಲಿತ" ಅಥವಾ "ಶೋಷಿತ" ಪದಗಳಿಗೆ ವಿಶಾಲವಾದ–ಉದಾತ್ತವಾದ ಕಲ್ಪನೆಗಳಿವೆ. ಎಲ್ಲಾ ಜಾತಿಯ ಬಡವರು ಎಲ್ಲಾ ಧರ್ಮದ ಬಡವರನ್ನೊಳಗೊಂಡ ಪದವಾಗಿದ್ದು ಇದನ್ನು ಅಸ್ಪೃಶ್ಯರಿಗೆ ಮಾತ್ರ ಅನ್ವಯಿಸುವುದು ಸರಿಯಲ್ಲ, ಆ ರೀತಿ ಯಾರಾದರೂ ಆಲೋಚನೆ ಮಾಡಿದರೆ ಅವರು ಚಳುವಳಿಗಾರರಲ್ಲ. ಅವರೆಲ್ಲಾ ವರ್ಣಾಶ್ರಮ ಧರ್ಮದ ಅನುಯಾಯಿಗಳಾಗಿರುತ್ತಾರೆ.

ದಲಿತ ಚಳುವಳಿಯಲ್ಲಿ ಹೊಲೆಯ–ಮಾದಿಗರು ಮಾತ್ರ ಇಲ್ಲ ದಲಿತ ವರ್ಗದ ಎಲ್ಲಾ ಜಾತಿಯವರು ಮತ್ತು ಹಿಂದುಳಿದ ಅಲ್ಪ ಸಂಖ್ಯಾತ

ದಲಿತ ಸಂಘಟನೆಗಳ ಹೊರಗಿರುವ ಅನೇಕರು ತಮಗಿರುವ ಕ್ರೆಡಿಬಿಲಿಟಿ ಬಲದಿಂದ ಮತ್ತು ದಲಿತ ಚಳುವಳಿ ಒಳಗೆಯೇ ಬಂದ ಕೆಲವು ಹಿರಿಯ ಕುಬ್ಜ ಬುದ್ಧಿಜೀವಿಗಳು ದಲಿತ ಸಂಸ್ಕೃತಿ, ಸಾಹಿತ್ಯವನ್ನು "ಗುತ್ತಿಗೆ ಸಂಸ್ಕೃತಿ" ವಾರಸುದಾರರು ದಲಿತ ಚಳುವಳಿ ಬಗ್ಗೆ ಕಲ್ಪಿತ ತಪ್ಪುಗಳನ್ನು ಎತ್ತಿ ಹೇಳುವುದರಲ್ಲಿ, ಉಪದೇಶ ಮಾಡುವುದರಲ್ಲಿ, ದಲಿತ ಚಳುವಳಿಯ ಕಾರ್ಯಕರ್ತರ ಉತ್ಸಾಹಕ್ಕೆ ತಣ್ಣೀರೆರಚುವುದರಲ್ಲಿ ಬಹು ಆಸಕ್ತಿಯನ್ನು ತೋರುತ್ತಾರೆ. ಇದುವರೆಗೂ ನಿರಂತರವಾಗಿ ಕೆಲವರು ಮಾತನಾಡುತ್ತಲೆ ಬಂದಿದ್ದಾರೆ. ಇವರಿಗೆ ನಿಜಕ್ಕೂ ದಲಿತ ಚಳುವಳಿ ಬಗ್ಗೆ ಕಾಳಜಿ ಇದ್ದರೆ ಇಂಥ ಬೇಜವಾಬ್ದಾರಿ, ನಿಷ್ಪ್ರಯೋಜಕ ಕೆಲಸಗಳಿಂದ ದೂರವಿರಬೇಕು. ಇಂಥವರಿಂದಲೇ ಉಪಜಾತಿ ಸಂಘಗಳು ಸ್ವಾರ್ಥಕ್ಕಾಗಿ ಹುಟ್ಟಿಕೊಳ್ಳುತ್ತಿರುವುದು.

ಅಧಿಕಾರವೇ ಸರ್ವಶ್ರೇಷ್ಠವೆಂಬ ಭ್ರಮೆಯಲ್ಲಿ ಕೆಲವು ದಲಿತ ನಾಯಕರು ಅಂಬೇಡ್ಕರ್‌ರವರ ಸಿದ್ಧಾಂತ, ಜಾತ್ಯಾತೀತ ಮೌಲ್ಯಗಳನ್ನು ಗಾಳಿಗೆ ತೂರಿ, ಸ್ವಾರ್ಥಕ್ಕಾಗಿ ನೀತಿಹೀನ ರಾಜಕಾರಣ ಮಾಡಲು ಕೋಮುವಾದಿಗಳ ಜತೆ, ಗಣಿ ಲೂಟಿಕೋರರ ಜೊತೆ ಸೇರುತ್ತಿರುವ ಅಪಾಯವನ್ನು ಮೆಟ್ಟಿ ನಿಲ್ಲುವಂತೆ ರಾಜಕಾರಣ ಮಾಡಬೇಕಾಗುತ್ತದೆ.

ವರ್ಗದವರು ನಮ್ಮ ಸಂಘಟನೆಯಲ್ಲಿ ಇದ್ದಾರೆ. ಚಳುವಳಿಯ ಮೂಲ ಉದ್ದೇಶ "ಜಾತಿ ವಿನಾಶ" ಕಲ್ಪನೆಯಾಗಿರುವುದರಿಂದ ನಮಗೆ ಜಾತಿ ಮುಖ್ಯವಲ್ಲ. ವಿಚಾರ ಮುಖ್ಯವಾಗಿರುತ್ತದೆ ಹಾಗು ಚಳುವಳಿಯನ್ನು ಮುನ್ನೆಡೆಸುವ ನಾಯಕನ ಬದ್ಧತೆ, ನಡವಳಿಕೆಗಳು ಮುಖ್ಯವಾಗುತ್ತವೆ.

ಜಾತಿಯತೆಯನ್ನು ವಿರೋಧ ಮಾಡುವ ನಾವೇ ಜಾತಿವಾದಿಗಳಾಗಬಾರದು ಎಂಬ ಪ್ರಜ್ಞೆ ನಾಯಕನಲ್ಲಿರಬೇಕು. ಆ ತಿಳಿವಳಿಕೆ ಇದ್ದರೆ ಮಾತ್ರ ಎಲ್ಲಾ ಸಮುದಾಯದ ಜನರು ಇರುತ್ತಾರೆ. ನಮ್ಮ ಸಂಘಟನೆಯಲ್ಲಿ ಎಲ್ಲರೂ ಇದ್ದಾರೆ–ಎಲ್ಲರೂ ಪದಾಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

7. ದಲಿತ ಸಮುದಾಯದೊಳಗೆ ಸೇರುವ ಬಹುತೇಕ ಜಾತಿಗಳು ತಮ್ಮ ಜಾತಿ ಹೆಸರಿನಲ್ಲಿ ಸಂಘಗಳನ್ನು ಕಟ್ಟಿಕೊಳ್ಳುತ್ತಿರುವಾಗ ಚಳುವಳಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವೇ? ಎಂಬುವ ಪ್ರಶ್ನೆಯೇ ವರ್ತಮಾನದಲ್ಲಿ ಜರೂರು ಚರ್ಚೆಯಾಗಬೇಕಾಗಿರುವ ಅಂಶ ಅಂತ ನನಗನಿಸುತ್ತದೆ.

ಏಕೆಂದರೆ ಸಹಜವಾಗಿಯೇ ಸಾವಿರಾರು ವರ್ಷಗಳಿಂದ ಮೌಢ್ಯ, ಮನುಸ್ಮೃತಿ, ಹಿಂದುತ್ವದ ಸಂಕೋಲೆಯಲ್ಲಿ ಸಿಕ್ಕಿಕೊಂಡು ಜಾತೀಯತೆಯ ಕಿಳರಿಮೆಯಲ್ಲಿಯೇ ಬದುಕುತ್ತ ಬಂದಿರುವುದನ್ನು ಕಾಣಬಹುದು.

ಈ ಎಲ್ಲಾ ಅನಿಷ್ಟ ಪದ್ಧತಿಯ ವಿರುದ್ಧ ಅಂಬೇಡ್ಕರ್‌ರವರ ಹೋರಾಟದ ಫಲವಾಗಿ ಮತ್ತು ಹಲವಾರು ಸಮಾಜ ಸುಧಾರಕರ ಹೋರಾಟದ ಶ್ರಮದಿಂದ ದೇಶದಲ್ಲಿನ ತಳಸಮುದಾಯಗಳಿಗೆ ಚೈತನ್ಯಶಕ್ತಿ ಬರಲು ಕಾರಣವಾಗಿದೆ. ಇದರ ಪೂರಕವಾಗಿ ಸ್ವಾತಂತ್ರ್ಯಪೂರ್ವ ಹಾಗು ಆಧುನಿಕ ಭಾರತದಲ್ಲಿ ದಲಿತ ಚಳುವಳಿ ಅನಿಷ್ಟ ಪದ್ಧತಿಗಳ ಹಾಗು ಜಾತಿಯ ಅಸಮಾನತೆ ವಿರುದ್ಧ ಸಮರ ಸಾರಿ, ಜಾತಿವಿನಾಶವಾಗಬೇಕೆಂಬ ಹೋರಾಟ ನಡೆಸುತ್ತ ಬಂದಿದೆ. ಈ ಹಿನ್ನಲೆಯಲ್ಲಿ ಉಪಜಾತಿ ಸಂಘಗಳಿಂದ ಸಮಾಜಕ್ಕೆ ಏನೂ ಪ್ರಯೋಜನವಾಗುವುದಿಲ್ಲವೆಂಬುದನ್ನು ಅರಿತು ನಮ್ಮ ಹಿರಿಯರು ಕರ್ನಾಟಕದಲ್ಲಿ ಬುದ್ಧ, ಬಸವ, ಅಂಬೇಡ್ಕರ್‌ರವರ ಆಶಯದಂತೆ ಎಲ್ಲಾ ಜಾತಿಯ ಬಡವರು, ಎಲ್ಲ ಧರ್ಮದಲ್ಲಿರುವ ಶೋಷಿತ ಜನರನ್ನೊಳಗೊಂಡ ಚಳುವಳಿ (ದಸಂಸ) ಪ್ರಾರಂಭಿಸಿದ ಸಂದರ್ಭದಲ್ಲಿಯೂ ಈ ಉಪಜಾತಿ ಸಂಘಗಳು ಇದ್ದವು. ಇದರಿಂದ ದಸಂಸ ಹಾಗು ದಲಿತ ಚಳುವಳಿಗೆ ಏನೂ ಧಕ್ಕೆಯಾಗಿಲ್ಲ. ಮುಂದೆಯೂ ಧಕ್ಕೆಯಾಗುವುದಿಲ್ಲ. ಏಕೆಂದರೆ ಈ ಸಂಘಗಳು ಯಾವತ್ತೂ ಸಮಾನತೆಯ ಹೋರಾಟಗಳು ಹಾಗು ಸಂಘರ್ಷ, ವೈಚಾರಿಕತೆಯ ವಿಚಾರಗಳನ್ನು ಪ್ರತಿಪಾದಿಸುವುದಿಲ್ಲ. ಇವರೆಲ್ಲ ವ್ಯವಸ್ಥೆಯ ಜೊತೆ ರಾಜಿ ಮಾಡಿಕೊಂಡು ಯತಾಸ್ಥಿತಿ ವಾದಿಗಳಾಗಿರುತ್ತಾರೆ.

ಡಾ. ಅಂಬೇಡ್ಕರ್‌ರವರ ಹೋರಾಟ–ವಿಷಯ ಅವರ ಬರಹ ಭಾಷಣಗಳನ್ನು ಓದಿಯೋ ಅಥವಾ ಕೇಳಿಯೋ ತಿಳಿದುಕೊಳ್ಳುವವರು ಮತ್ತು ಸಮಸಮಾಜ ಹಾಗು ಹಸಿವು ಅಸಮಾನತೆ ಇಲ್ಲದ ಸಮಾಜ ನಿರ್ಮಾಣದ ಕನಸುಗಾರರು ಚಳುವಳಿಯನ್ನು ಮುಂದುವರಿಸಿಕೊಂಡು ಬರುತ್ತಾರೆ. ಉಪಜಾತಿ ಸಂಘಗಳಿಗೂ–ದಲಿತ ಚಳುವಳಿಗೂ ಯಾವುದೇ ಸಂಬಂಧವಿಲ್ಲ.

ದಲಿತ ಸಂಘಟನೆಗಳ ಹೊರಗಿರುವ ಅನೇಕರು ತಮಗಿರುವ ಕ್ರೆಡಿಬಿಲಿಟಿ ಬಲದಿಂದ ಮತ್ತು ದಲಿತ ಚಳುವಳಿ ಒಳಗೆಯೇ ಬಂದ ಕೆಲವು ಹಿರಿಯ ಕುಬ್ಜ ಬುದ್ಧಿಜೀವಿಗಳು ದಲಿತ ಸಂಸ್ಕೃತಿ, ಸಾಹಿತ್ಯವನ್ನು "ಗುತ್ತಿಗೆ ಸಂಸ್ಕೃತಿ" ವಾರಸುದಾರರು ದಲಿತ ಚಳುವಳಿ ಬಗ್ಗೆ ಕಲ್ಪಿತ ತಪ್ಪುಗಳನ್ನು ಎತ್ತಿ ಹೇಳುವುದರಲ್ಲಿ, ಉಪದೇಶ ಮಾಡುವುದರಲ್ಲಿ, ದಲಿತ ಚಳುವಳಿಯ ಕಾರ್ಯಕರ್ತರ ಉತ್ಸಾಹಕ್ಕೆ ತಣ್ಣೀರೆರಚುವುದರಲ್ಲಿ ಬಹು ಆಸಕ್ತಿಯನ್ನು ತೋರುತ್ತಾರೆ. ಇದುವರೆಗೂ ನಿರಂತರವಾಗಿ ಕೆಲವರು ಮಾತನಾಡುತ್ತಲೆ ಬಂದಿದ್ದಾರೆ. ಇವರಿಗೆ ನಿಜಕ್ಕೂ ದಲಿತ ಚಳುವಳಿ ಬಗ್ಗೆ ಕಾಳಜಿ ಇದ್ದರೆ ಇಂಥ ಬೇಜವಾಬ್ದಾರಿ, ನಿಷ್ಪ್ರಯೋಜಕ ಕೆಲಸಗಳಿಂದ ದೂರವಿರಬೇಕು. ಇಂಥವರಿಂದಲೇ ಉಪಜಾತಿ ಸಂಘಗಳು ಸ್ವಾರ್ಥಕ್ಕಾಗಿ ಹುಟ್ಟಿಕೊಳ್ಳುತ್ತಿರುವುದು.

8. ಒಳಮೀಸಲಾತಿಗೆ ವಿರೋಧವಿಲ್ಲ. ಮಹಿಳಾ ಮೀಸಲಾತಿಯಲ್ಲಿ ಒಳಮೀಸಲಾತಿಗೆ ಒತ್ತಾಯಿಸುವಾಗ ನಮ್ಮೊಳಗೆ ಯಾಕಾಗಬಾರದು. ಆಗಬೇಕು. ಆದರೆ ವೈಜ್ಞಾನಿಕವಾಗಿ ಸರ್ವೆ ನಡೆಯಬೇಕು. ನಮ್ಮ ಕೆಲವು ಉಪಜಾತಿ ಸಂಘಗಳು ತಮ್ಮ ಜಾತಿಗಳ ಸಂಖ್ಯೆಗಳನ್ನು ಘೋಷಣೆ ಮಾಡುತ್ತಿರುವುದು ನೋಡಿದರೆ ನಮ್ಮ ರಾಜ್ಯದ ಒಟ್ಟು 61/2 ಕೋಟಿ ಜನಸಂಖ್ಯೆಯನ್ನು ಮೀರಿಸುವ ಹೇಳಿಕೆ ನೀಡುತ್ತಿದ್ದಾರೆ. ಆದ್ದರಿಂದ ವೈಜ್ಞಾನಿಕವಾಗಿ ಆಯಾ ಜಾತಿಯ ಸಂಖ್ಯೆ ನಿಖರವಾಗಿ ಬಂದ ಬಳಿಕ ವರ್ಗೀಕರಣ ಮಾಡಲಿ.

ಒಂದು ಕುಟುಂಬದಲ್ಲಿ ಅಣ್ಣ–ತಮ್ಮಂದಿರು ದೊಡ್ಡವರಾದ ಮೇಲೆ ಆಸ್ತಿ ಹಂಚಿಕೊಳ್ಳುವುದು ಸಹಜ. ಆದರೆ ಕುಟುಂಬದಲ್ಲಿ ಎಷ್ಟೇ ತೊಂದರೆಯಾದರೂ ಎಲ್ಲರೂ ಒಟ್ಟುಗೂಡಿ ಎದುರಿಸುವುದು ಹೇಗೆ ಸಹಜವೋ ಅದೇ ರೀತಿ ದಲಿತ ಸಮುದಾಯವು ಆಲೋಚಿಸಬೇಕೆಂದು ಚಳುವಳಿ ಬಯಸುತ್ತದೆ.

ದ್ವೇಷ–ಅಸೂಯೆ ಇಟ್ಟುಕೊಂಡು ವೈರಿಗಳ ರೀತಿಯಲ್ಲಿ ವರ್ತಿಸುವುದು ಯಾರಿಗೂ ಘನತೆ ತರುವುದಿಲ್ಲ.

9. ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಅಸ್ಪೃಶ್ಯರಲ್ಲದ ಜಾತಿಗಳನ್ನು ಈ ಹಿಂದೆ ಸೇರಿಸಿರುವ ಬಗ್ಗೆ ನಮ್ಮ ವಿರೋಧವಿಲ್ಲ. ಅಸ್ಪೃಶ್ಯರಲ್ಲದವರನ್ನು ಕೈ ಬಿಡುವ ಬಗ್ಗೆ ನಮ್ಮ ಒಲವಿಲ್ಲ. ಆದರೂ ಈ ಪಟ್ಟಿಗಳಲ್ಲಿರುವ ಎಲ್ಲಾ ಜಾತಿಯವರಲ್ಲಿ ಸೋದರ ಮನೋಭಾವ ಮೂಡುವುದು ಅವಶ್ಯ. ಸರ್ಕಾರ ಈ ವರ್ಗಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡುತ್ತಿಲ್ಲ. ಮೊದಲು ಶೇ 23% ರಷ್ಟು ಎಲ್ಲಾ ರಂಗಗಳಲ್ಲಿಯೂ ನೀಡಬೇಕು. ಪರಿಶಿಷ್ಟರ ಪಟ್ಟಿಗೆ ಸೇರಿಸುವ–ತೆಗೆಯುವ ವಿಚಾರಗಳು ಬಂದಾಗ ಸರ್ಕಾರಗಳು ತನ್ನ ಸ್ವಾರ್ಥಕ್ಕೆ ಬಳಸದೆ, ವಿವೇಕದಿಂದ ಸಾಮಾಜಿಕ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

10. ಈ ಪ್ರಶ್ನೆ ನಮ್ಮ ಸಂಘಟನೆಗೆ ಅನ್ವಯಿಸುವುದಿಲ್ಲ. ನಮ್ಮಲ್ಲಿ ದಲಿತ ಮಹಿಳೆಯರ ಸಂಖ್ಯೆ ಗಣನೀಯವಾಗಿದೆ. ಹಾಗಾಗಿಯೇ ನಮ್ಮಲ್ಲಿ ಪ್ರತ್ಯೇಕವಾದ ದಲಿತ ಮಹಿಳಾ ಒಕ್ಕೂಟದ ರಾಜ್ಯ ಸಮಿತಿ ಪದಾಧಿಕಾರಿಗಳು ಇದ್ದಾರೆ. ಇವರೇ ಸ್ವತಂತ್ರವಾಗಿ ಅಧ್ಯಯನ ಶಿಬಿರ ಹಾಗು ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತ ಬರುತ್ತಿದ್ದಾರೆ.

ದಲಿತ ಚಳುವಳಿ ಮಹಿಳೆಯ ಸಮಸ್ಯೆಗಳನ್ನು ಪರಿಗಣಿಸುತ್ತ ಇರುವ ಗುಂಪುಗಳಲ್ಲಿ ಮಹಿಳೆಯರು ಹೆಚ್ಚು ಸಕ್ರಿಯವಾಗಿರುತ್ತಾರೆ. ಹಾಗೇಯೇ ನಮ್ಮ ಸಂಘಟನೆ ದಲಿತ ಮಹಿಳೆಯರ ಸಮಸ್ಯೆಯನ್ನು ಎಂದೂ ಕಡೆಗಣಿಸಿಲ್ಲ.

11. ದಲಿತ ರಾಜಕಾರಣ ದಲಿತ ನಾಯಕತ್ವದಲ್ಲಿ ಅಧಿಕಾರಕ್ಕೆ ಬರುವ ರಾಜಕೀಯ ಇಚ್ಛಾಶಕ್ತಿ ರೂಪುಗೊಳ್ಳಬೇಕಾಗುತ್ತದೆ. ದಲಿತ ರಾಜಕಾರಣವೆಂಬುವುದು ಸಾಮಾಜಿಕ ನ್ಯಾಯ ಕಲ್ಪನೆಯ ಸಿದ್ಧಾಂತವಾಗಿ ಚರ್ಚಿಸಬೇಕಾಗುತ್ತದೆ. ಸಮಾಜವಾದಿ ಚಿಂತನೆಯ ಮೂಲ ಆಶಯ ಕಟ್ಟಕಡೆಯ ಸಮುದಾಯಗಳ ವ್ಯಕ್ತಿಗಳಿಗೆ ಅಧಿಕಾರ ದೊರೆಯಬೇಕೆಂಬ ಉದಾತ್ತ ಚಿಂತನೆ ದಲಿತ ರಾಜಕಾರಣದಲ್ಲಿ ಮೇಳೈಸಬೇಕಾಗಿದೆ.

ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಚುನಾವಣೆ ಪದ್ಧತಿಯಲ್ಲಿ ಬರೇ ದಲಿತರು ಮಾತ್ರ ಮತ ಹಾಕಿಕೊಂಡು ಆಯ್ಕೆಯಾಗಲು ಸಾಧ್ಯವಿಲ್ಲ, ಮೀಸಲು ಕ್ಷೇತ್ರಗಳಲ್ಲೂ ಆಯ್ಕೆಯಾಗಲು ಎಲ್ಲಾ ಸಮುದಾಯಗಳು ಮತ ಹಾಕಬೇಕಾಗುತ್ತದೆ.

ದಲಿತ ರಾಜಕಾರಣವನ್ನು ವ್ಯಾಖ್ಯಾನಿಸುವಾಗ ಅದರ ಹಿಂದಿರುವ ವಾಸ್ತವ ಸಂಗತಿಗಳನ್ನು ಅರ್ಥಮಾಡಿಕೊಂಡು ದಲಿತರು ವಿಶಾಲ ತಳಹದಿಯಲ್ಲಿ ಯೋಚಿಸಬೇಕು. ಉದಾಹರಣೆಗೆ ಉತ್ತರ ಪ್ರದೇಶದಲ್ಲಿ ಶ್ರೀ ಕಾನ್ಷಿರಾಂ ರವರು ದಲಿತ ರಾಜಕಾರಣದಲ್ಲಿ ಯಶಸ್ಸು ಸಾಧಿಸಿದ್ದು "ದಲಿತೇತರ" ಸಮುದಾಯಗಳಾದ ಹಿಂದುಳಿದ, ಅಲ್ಪಸಂಖ್ಯಾತ ವರ್ಗಗಳ ಮತಗಳನ್ನು ಕ್ರೋಢೀಕರಿಸುತ್ತಾ ಕೊನೆಯಲ್ಲಿ ಭಾಗಶಃ ಬ್ರಾಹ್ಮಣ ಮತಗಳನ್ನು ಸೆಳೆಯುವ ಮೂಲಕ ದೇಶದ ಅತಿ ದೊಡ್ಡ ರಾಜ್ಯದಲ್ಲಿ ದಲಿತ ನಾಯಕತ್ವದ ರಾಜಕಾರಣ ಅಧಿಕಾರ ಹಿಡಿಯಲು ಸಾಧ್ಯವಾಗಿರುವುದನ್ನು ಮನಗಾಣಬೇಕಾಗಿದೆ. ಈ ರೀತಿಯ ದಲಿತ ರಾಜಕಾರಣದಲ್ಲಿ ಎಲ್ಲಾ ವರ್ಗದವರ ಪ್ರೀತಿ–ವಿಶ್ವಾಸಗಳನ್ನು ಮತಗಳಾಗಿ ಪರಿವರ್ತಿಸುವ ಶಕ್ತಿ ನಮಗೆ ಬೇಕಾಗುತ್ತದೆ.

ಕರ್ನಾಟಕದಲ್ಲಿ ದಲಿತ ಚಳುವಳಿ ಬೆಳೆದು ಬಂದ ಮೂರೂವರೆ ದಶಕದಲ್ಲಿ 1989ರಲ್ಲಿ ಬಿಆರ್‌ಪಿ(ಭಾರತೀಯ ರಿಪಬ್ಲಿಕನ್ ಪಾರ್ಟಿ)ಯಿಂದ ಕೆಲವು ಕಡೆ ನಮ್ಮ ಹಿರಿಯ ನಾಯಕರು ಸ್ಪರ್ಧಿಸಿದ್ದರು. ನಂತರ 1991ರಲ್ಲಿ ಬಿ. ಕೃಷ್ಣಪ್ಪ ಜನತಾದಳದಿಂದ

(40ನೇ ಪುಟಕ್ಕೆ)

ವಾಸ್ತವಿಕ ನೆಲೆಯಲ್ಲಿ ಚಿಂತಿಸಬೇಕು



ಮಾವಳ್ಳಿ ಶಂಕರ್
ರಾಜ್ಯ ಪ್ರಧಾನ ಸಂಚಾಲಕರು
ದಸಂಸ (ಅಂಬೇಡ್ಕರ್ ವಾದ)

1. (ಎ) ದಲಿತ ಚಳವಳಿ ಒಳಗೊಂಡಂತೆ ಜಗತ್ತಿನ ಎಲ್ಲಾ ಚಳವಳಿಗಳಲ್ಲಿ ಏಳುಬೀಳು ಸಹಜ ಕ್ರಿಯೆಗಳಾಗಿರುತ್ತವೆ. ಯಾವುದೇ ಚಳವಳಿ ಏಕಮುಖವಾಗಿ ಚಲಿಸುತ್ತಿರುವುದಿಲ್ಲ. ಅದೊಂದು ಬಯೋಲಾಜಿಕಲ್ ಪ್ರಕ್ರಿಯೆಯಾಗಿರುತ್ತದೆ. ಹುಟ್ಟು, ಯೌವ್ವನ, ಮುಪ್ಪು ಹೇಗೋ ಹಾಗೆಯೇ ಚಳವಳಿ ಇದಕ್ಕೆ ಹೊರತಾಗಿರುವುದಿಲ್ಲ. ಇನ್ನೂ ಚಳವಳಿಗಳಿಗೆ ತಗುಲುತ್ತಿರುವ "ದುರ್ಬಲ" ಎಂಬ ರೋಗಾಣು ಬಾರದಂತೆ ಚಿಕಿತ್ಸೆ ನೀಡುತ್ತಿರಬೇಕು.
(ಬಿ) ಸಾಧ್ಯವಿದೆ, ಚಳವಳಿಗಾರ ಆಶಾವಾದದೊಂದಿಗೆ ಮುನ್ನಡೆಯಬೇಕು, ಎದೆಗುಂದಬಾರದು. ದಸಂಸ ಪ್ರಾರಂಭದ ಹಿರಿಯರ ಪ್ರಾಮಾಣಿಕತೆ, ತ್ಯಾಗ, ಸರಳ ಬದುಕು, ಬದ್ಧತೆ ಅನುಸರಿಸಿದರೆ ಶಕ್ತಿಯುತ ಚಳವಳಿ ಕಟ್ಟಲು ಇಂದಿಗೂ ಸಾಧ್ಯವಿದೆ.
2. ಚಳವಳಿಯ ಈ ವಿಘಟನೆಗಳ ಹಿಂದೆ ಸ್ಥಾಪಿತ ಹಿತಾಸಕ್ತಿಗಳ ವ್ಯವಸ್ಥಿತವಾದ ಪಿತೂರಿ ಅಡಗಿದೆ. ಜಾತಿ ವ್ಯವಸ್ಥೆ ಉಂಟುಮಾಡಿರುವ ಕೃತಕವಾದ ಜಾತಿ ಶ್ರೇಣೀಕರಣ ಮನಸ್ಥಿತಿ ಮೀರಲಾಗದೆ. "ಒಡಕಿಗೆ" ಕಾರಣವಾದರೇ, ವ್ಯವಸ್ಥೆಯೊಂದಿಗೆ ರಾಜಿ, ಸ್ವಾರ್ಥ ಮನೋಭಾವ ಹಾಗೂ ಸೈದ್ಧಾಂತಿಕ ಬದ್ಧತೆ ಇಲ್ಲದೇ ಇರುವುದು ಕೂಡ ಕಾರಣವಾಗಿದೆ. ಬಣಗಳು ಭಗ್ನತೆ ತೊರೆದು ಬಹುತ್ವ ಪ್ರಜ್ಞೆಯನ್ನು ಉಳಿಸಿಕೊಳ್ಳಬೇಕು. ಆ ಮೂಲಕ ಐಕ್ಯ ಹೋರಾಟಕ್ಕೆ ಸಿದ್ಧರಾಗಬೇಕು.
3. (ಎ) ಚಳವಳಿಯ ವಿವಿಧ ಗುಂಪು/ಬಣಗಳನ್ನು ಒಂದುಗೂಡಿಸುತ್ತೇವೆ ಎನ್ನುವ ಪ್ರಶ್ನೆಯನ್ನು ವಾಸ್ತವಿಕ ನೆಲೆಯಲ್ಲಿ ಚಿಂತಿಸಬೇಕು. ಉಳಿಗಮಾನ್ಯ ಮನಸ್ಥಿತಿ, ಬಂಡವಾಳಶಾಹಿ ವ್ಯವಸ್ಥೆ ಸಮಾಜವನ್ನು ನಿಯಂತ್ರಿಸುತ್ತಿವೆ. ಇದರ ನೇರ ಪರಿಣಾಮ ಚಳವಳಿ ಮೇಲಾಗುತ್ತಿದೆ. ಇದರ ಅರಿವೂ ಚಳವಳಿಕಾರನಿಗೆ ಇರಬೇಕು. ಚಳವಳಿ ತಾತ್ಕಾಲಿಕ ಉಪಶಮನ ಎಂಬಂತೆ ಆಗಬಾರದು, ದೀರ್ಘಕಾಲಿಕ ದೃಷ್ಟಿಯೊಂದಿಗೆ ಮುನ್ನಡೆಯಬೇಕು.
(ಬಿ) ಈಗಾಗಲೇ ಆ ದಿಸೆಯಲ್ಲಿ ಪ್ರಯತ್ನಗಳು ನಡೆಯುತ್ತಲೇ ಇವೆ. ವಿಚಾರದ ಆಧಾರದ ಮೇಲೆ ಐಕ್ಯತೆಯ ಘೋಷಣೆ ಮುಂದುವರಿಯಬೇಕಿದೆ.
4. ಸಾಮಾಜಿಕ ಅಸಮಾನತೆಯ ವಿಷವೃಕ್ಷವನ್ನು ಹಿಂದೂತ್ವ ಅರ್ಥಾತ್ ಬ್ರಾಹ್ಮಣ್ಯ ಪೋಷಿಸುತ್ತಲೇ ಬರುತ್ತಿದೆ. ಈ ಜೀವ ವಿರೋಧಿ ವಿಷವೃಕ್ಷವನ್ನು ಬೇರು ಸಹಿತ ಕಿತ್ತೊಗೆಯಬೇಕು. ಹಿಂದೂತ್ವ ಎಂಬ ವಿಷಕ್ರಿಮಿಗೆ (ವೈರಸ್) ಬಲವಾದ ಟ್ರೀಟ್‌ಮೆಂಟ್ ನೀಡಲು ಬಾಬಾ ಸಾಹೇಬ್ ಅಂಬೇಡ್ಕರ್‌ರವರು ತೋರಿದ "ಬುದ್ಧನೆಲೆ"ಯತ್ತ ಸಾಗಲು ಕಾರ್ಯಪ್ರವೃತ್ತರಾಗಬೇಕು.
5. (ಎ) ಬಹುಜನರ ವಿಮೋಚನಕಾರರಾದ ಅಂಬೇಡ್ಕರ್‌ರವರ ತತ್ವ ಸಿದ್ಧಾಂತಗಳಲ್ಲಿ ಪುನರ್ ವ್ಯಾಖ್ಯಾನಿಸುವ ಮೊದಲೇ ಅಂಬೇಡ್ಕರ್‌ರವರ ಸಮಗ್ರ ವಿಚಾರಧಾರೆಯನ್ನು ಗ್ರಹಿಸಿಕೊಳ್ಳಬೇಕಿದೆ. ಅದೊಂದು Dogmatic ಆದ ಸ್ಥಿತಿಯ ಚಿಂತನೆಯಲ್ಲಿ, ಅಂಬೇಡ್ಕರ್ ವಾದ ಬೌದ್ಧಿಕವಾದ ಚಲನಶೀಲವಾದದು, ಪ್ರಶ್ನಿಸಲ್ಪಡುವಂತಹದು. ಸಾಮಾಜಿಕ/ಆರ್ಥಿಕ/ರಾಜಕೀಯ ಧಾರ್ಮಿಕ ಬಿಡುಗಡೆ ಈ ಎಲ್ಲಾ ಅಂಶಗಳು ಅಡಗಿರುವಂತಹದು, ಕೊರತೆಗಳಿದ್ದಲ್ಲಿ ಸಂವಾದಿಸಬಹುದಾಗಿದೆ.
(ಬಿ) ಚಳವಳಿಗೆ ಸವಾಲಾಗಿರುವ ಯಥಾಸ್ಥಿತಿವಾದ, ಅದು ಉಂಟು ಮಾಡುತ್ತಿರುವ ಪರಿಣಾಮಗಳಿಗೆ ಕಾಲ-ಕಾಲಕ್ಕೂ ಮುಖಾಮುಖಿಯಾಗಿ ಎದುರಿಸುತ್ತಲೇ ಮುಂದುವರೆದಿದೆ.
6.(ಎ) ದಲಿತ ಪರಿಕಲ್ಪನೆ ಎಂಬುದು ಅತ್ಯಂತ ವಿಶಾಲವಾದ ಅರ್ಥವನ್ನು ಹೊಂದಿದೆ. ದಲಿತ ಸಂಘರ್ಷ ಸಮಿತಿ ಸಂವಿಧಾನದಲ್ಲಿ ದಲಿತ ಎಂಬ ಪದದ ವ್ಯಾಖ್ಯಾನವಿದೆ. ಕೇವಲ ಸಾಮಾಜಿಕ ಅವಮಾನಕ್ಕೆ ಒಳಗಾದ ಹೊಲೆ-ಮಾದಿಗರಷ್ಟೇ ಅಲ್ಲದೇ, ಬ್ರಾಹ್ಮಣವಾದದ ಸಾಮಾಜಿಕ ವ್ಯವಸ್ಥೆಗೆ (Bramnical Social Order) ಬಲಿಯಾಗಿರುವ ಹಸಿವು/ಅವಮಾನಗಳಿಂದ ಬೇಯುತ್ತಿರುವ ಮಹಿಳೆಯರು ಸೇರಿದಂತೆ ಎಲ್ಲಾ ತಳ ಸಮುದಾಯಗಳನ್ನು ದಲಿತ ಚಳವಳಿ ತನ್ನ ಒಡಲಿನಲ್ಲಿ ಗರ್ಭೀಕರಿಸಿಕೊಂಡಿದೆ.
(ಬಿ) ಮನುವಾದ ನೀತಿ ಇದಕ್ಕೆ ಕಾರಣವಾಗಿದೆ. ಭಾರತಕ್ಕೆ ಒಡೆದಾಳುವ ನೀತಿಯನ್ನು ಬ್ರಿಟಿಷರ ಬಳವಳಿ ಎಂದು ನಮ್ಮ ಚರಿತ್ರಕಾರರು ವ್ಯಾಖ್ಯಾನಿಸಿದ್ದಾರೆ. ಆದರೆ ಇದರ ಕೊಡಗೆ ವೈದಿಕರಿಗೆ ಸೇರಬೇಕು. ಬ್ರಾಹ್ಮಣವಾದದಲ್ಲಿ ಜಾತಿ ಶ್ರೇಣೀಕರಣ ಕೆನೆಗಟ್ಟಿದೆ. ಎಲ್ಲಾ ಶೋಷಿತ ಜನಾಂಗಗಳು ಶ್ರೇಣೀಕರಣದ ಮಾನಸಿಕ ರೋಗಕ್ಕೆ ತುತ್ತಾಗಿವೆ. ದಲಿತ ಸಂಘರ್ಷ ಸಮಿತಿ ಶೋಷಿತರ ಸಂಘಟನೆ ಎಂಬುದಕ್ಕೆ 'ಹುಣಸಿಕೋಟೆ ಕುಂಬಾರ ಶೇಷಗಿರಿಯ ಕೊಲೆ' ಪ್ರಕರಣದಲ್ಲಿ ಕಾಲ್ನಡಿಗೆ ಜಾಥ ಸಂಘಟಿಸಿ ಪೊಲೀಸರ ಲಾಠಿ-ಬೂಟು ಏಟು ತಿಂದು ಜೈಲು ಸೇರಿದ್ದೆ ಸಾಕ್ಷಿ. ಇದು ಒಂದು ಉದಾಹರಣೆ ಅಷ್ಟೇ, ದಲಿತ ಚಳವಳಿ ಹೋರಾಟಗಳ ಬಗ್ಗೆ ಸರಿಯಾದ ಅಧ್ಯಯನ ಆಗದೇ ಅಂಶಿಕವಾಗಿ ಯೋಚಿಸುವುದು ಇಂತಹ ಪ್ರಶ್ನೆಗಳಿಗೆ ಕಾರಣವಾಗುತ್ತಿದೆ.
7. ಭಾರತದ ಸಂದರ್ಭದಲ್ಲಿ ಜಾತಿಗಳೇ ವರ್ಗಗಳಾಗಿವೆ. ಆದ್ದರಿಂದ ಕೆಳಜಾತಿ ಕೆಳವರ್ಗಗಳು ಸಂಘ ಕಟ್ಟಿಕೊಳ್ಳುವದು. ಚಾರಿತ್ರಿಕ ಪ್ರಮಾದವಾಗದು. ಆದರೆ ಎಲ್ಲಾ ಜಾತಿ/ವರ್ಗಗಳು ವರ್ಗಾಧಾರಿತವಾಗಿ ಹೋರಾಟಗಳನ್ನು ರೂಪಿಸಬೇಕಿದೆ. ಈ ರೀತಿಯ ಸಂಘಗಳಿಗೆ ಸ್ವಲ್ಪ ಸೈದ್ಧಾಂತಿಕ ನಿಲುವು ಅಗತ್ಯ. ಆದರೆ ಪ್ರಸ್ತುತ ಸಂದರ್ಭದಲ್ಲಿ ಜಾತಿ ಸಂಘಗಳನ್ನು ಪ್ರಭುತ್ವ/ವ್ಯವಸ್ಥೆ, ಬೇಡುವ ಅಸಹಾಯಕ ಸ್ಥಿತಿಗೆ ತಳ್ಳುತ್ತಿದೆ. ಈ ಅಮಾನುಷ ಸ್ಥಿತಿಯಿಂದ ಹೊರಬಂದು ಜಾಗೃತರಾಗಿ ಬಲವಾದ ಹೋರಾಟ ಕಟ್ಟಬೇಕಿದೆ. ದಲಿತ ಚಳವಳಿ ಸಮುದ್ರವಿದ್ದಂತೆ ಅಂತಿಮವಾಗಿ ಎಲ್ಲಾ ಜಾತಿ/ಉಪಜಾತಿ ಎಂಬ ನದಿಗಳು ಸಮುದ್ರ ಸೇರಲೇಬೇಕು. ಇದು ನಿಸರ್ಗ ನಿಯಮ.
8. ಚಳವಳಿ ಪ್ರಾರಂಭದ ದಿನಗಳಲ್ಲಿ ಪ್ರೊ|| ಬಿ. ಕೃಷ್ಣಪ್ಪನವರು 'ಪಂಚಮ' ಪತ್ರಿಕೆಯಲ್ಲಿ ಎಡಗೈ-ಬಲಗೈ ಕುರಿತು 'ಹೊಲೆ-ಮಾದಿಗರ ನೆತ್ತಿಯ ಮೇಲೆ ತೂಗುವ ಕತ್ತಿ' ಎಂಬ ಲೇಖನ ಬರೆದಿದ್ದರು. ದೇವನೂರು ಮಹಾದೇವರವರು ವಿಷದ ಹಣ್ಣನ್ನು ಸಂಕೇತವಾಗಿ ಬಳಿಸಿ 'ಗಂಡಭೇರುಂಡ' ಕಥೆಯನ್ನು ಬರೆದಿದ್ದರು. ಇಂದೂಧರ ಹೊನ್ನಾಪುರರವರ ಬಂಡಾಯ ಕವನದ 'ಕಪ್ಪು ಮನುಜರು', ಸಿದ್ದಲಿಂಗಯ್ಯರವರ 'ಹೊಲೆಮಾದಿಗರ ಹಾಡು' ಬರೆಯುವಾಗ ಅಲ್ಲಿ ತಲತಲಾಂತರದ ನೋವು ಮಡುಗಟ್ಟಿತ್ತು. ಆಗ ಒಳ ಮೀಸಲಾತಿಗಿಂತ ಜಾತಿ ಕ್ರೌರ್ಯದ ವಿರುದ್ಧ ಕೆಂಡ ಉಗುಳುವ ಮನಸ್ಥಿತಿಯಲ್ಲಿ ದಲಿತ ಜನಾಂಗ ಏಕೀಭವಿಸಿತ್ತು. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಹೋರಾಟದ ಫಲವಾಗಿ ದಕ್ಕಿದ್ದು ಮೀಸಲಾತಿ, ಜಾತಿ ಇರುವವರೆಗೂ ಅಸ್ಪೃಶ್ಯತೆ ಜೀವಂತವಿರುತ್ತದೆ. ಈ ತಾರತಮ್ಯ ಇರುವವರೆಗೂ ಮೀಸಲಾತಿ ಮುಂದುವರೆಯಬೇಕು. ಮೀಸಲಾತಿ ಹಂಚಿಕೆಯ ವಿಷಯ ಒಡಕಿಗೆ ಕಾರಣವಾಗಬಾರದು. ಜಾತಿ ಕೂದಲು ಸೀಳುತ್ತದೆ. ದಕ್ಕಲಿಗರು ಮಾದಿಗರನ್ನು ದೂಷಿಸುತ್ತಾರೆ. ಮಾದಿಗರು ಇತರರನ್ನು ದೂಷಿಸುತ್ತಾರೆ. ಆದ್ದರಿಂದ ಈ ವಿಚಾರವನ್ನು

ವಾಸ್ತವಾಗಿ ಕೆಲವು ವೈದಿಕ ಜಾತಿಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಜಾತಿಗಳು ಪರಿಶಿಷ್ಟ ಪಟ್ಟಿಯಲ್ಲಿ ಬರುವಂತವೇ, ಸವಲತ್ತುಗಳ ಹಂಚಿಕೆಯಲ್ಲಿನ ಅಸಮತೋಲನ ನಮ್ಮ ನಡುವೆ ಈ ರೀತಿ ವೈರುಧ್ಯಗಳನ್ನು ಹುಟ್ಟು ಹಾಕಿ ಬಿರುಕು ಮೂಡಿಸಿದೆ. ದಲಿತ ಚಳವಳಿ ಆರಂಭದಿಂದಲೂ ಈ ಅವಮಾನಿತ ಜಾತಿಗಳ ನಡುವೆ ಕೊಂಡಿಯಾಗಿ ಕೆಲಸ ಮಾಡಿದೆ. ಈ ಸೂಕ್ಷ್ಮ ಹಾಗೂ ಜಟಿಲವಾದ ವಿಷಯವನ್ನು ಮೀಸಲಾತಿಯ ಫಲಾನುಭವಿಗಳಾದ ವಿದ್ಯಾವಂತರು ಕನಿಷ್ಠ ಮಟ್ಟದ ತಮ್ಮ ಜನಾಂಗಗಳ ಮಧ್ಯೆ ಸಾಮಾಜಿಕ ಪರಿವರ್ತನೆಯ ಆಶಯಗಳ ಬಗ್ಗೆ ಅರಿವು ಮೂಡಿಸಬೇಕು.

ತೋಳಿನ ವಶಕ್ಕೆ ಸಿಲುಕಲಾರದು. ಜಾತಿ ಅಪಮಾನಗಳು ನಮ್ಮನ್ನು ನುಂಗಿ ನೊಣೆಯುತ್ತಿವೆ. ಅದ್ದರಿಂದ ಸಮಾಜದ ಒಟ್ಟು ಬದಲಾವಣೆಗೆ ನಾವು ಚಿಂತಿಸಬೇಕಾಗಿದೆ.

9.(ಎ) ವಾಸವಾಗಿ ಕೆಲವು ವೈದಿಕ ಜಾತಿಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ಜಾತಿಗಳು ಪರಿಶಿಷ್ಟ ಪಟ್ಟಿಯಲ್ಲಿ ಬರುವಂತವೇ. ಸವಲತ್ತುಗಳ ಹಂಚಿಕೆಯಲ್ಲಿನ ಅಸಮತೋಲನ ನಮ್ಮ ನಡುವೆ ಈ ರೀತಿ ವೈರುಧ್ಯಗಳನ್ನು ಹುಟ್ಟು ಹಾಕಿ ಬಿರುಕು ಮೂಡಿಸಿದೆ. ದಲಿತ ಚಳವಳಿ ಆರಂಭದಿಂದಲೂ ಈ ಅವಮಾನಿತ ಜಾತಿಗಳ ನಡುವೆ ಕೊಂಡಿಯಾಗಿ ಕೆಲಸ ಮಾಡಿದೆ. ಈ ಸೂಕ್ಷ್ಮ ಹಾಗೂ ಜಟಿಲವಾದ ವಿಷಯವನ್ನು ಮೀಸಲಾತಿಯ ಫಲಾನುಭವಿಗಳಾದ ವಿದ್ಯಾವಂತರು ಕನಿಷ್ಠ ಮಟ್ಟದ ತಮ್ಮ ಜನಾಂಗಗಳ ಮಧ್ಯೆ ಸಾಮಾಜಿಕ ಪರಿವರ್ತನೆಯ ಆಶಯಗಳ ಬಗ್ಗೆ ಅರಿವು ಮೂಡಿಸಬೇಕು. ಅನುಕೂಲಸಿಂಧು ಪರಿಸ್ಥಿತಿಯಿಂದ ಹೊರಬರಬೇಕು. ಮೀಸಲು ಕ್ಷೇತ್ರಗಳಿಂದ ಗೆದ್ದುಬರುತ್ತಿರುವ ಜನಪ್ರತಿನಿಧಿಗಳು ಶೋಷಿತರ ಸಣ್ಣ ಪ್ರಮಾಣದ ನೌಕರ ವರ್ಗವು "ಅಸ್ಪೃಶ್ಯ-ಸ್ಪೃಶ್ಯ" ಎಂಬ ಅಡ್ಡಗೋಡೆಯನ್ನು ಕೆಡವಬೇಕು. ಮೇಲ್ವರ್ಗದ ಜಾತಿವಾದಿ ವಂಚಕರು ಪರಂಪರಾಗತವಾಗಿ ಶ್ರಮಿಕ ಸಂಸ್ಕೃತಿಯ ವಾರಸುದಾರರನ್ನು ವಂಚಿಸುತ್ತಿರುವ ಬಗ್ಗೆ ಎಚ್ಚರವಿರಬೇಕು.

10. ದಲಿತ ಚಳವಳಿಯ ಬಹು ದೊಡ್ಡ ಶಕ್ತಿ ಮಹಿಳಾ ವರ್ಗ. ಚಳವಳಿಗಳು ಹಮ್ಮಿಕೊಳ್ಳುವ ಪ್ರತಿಭಟನೆ ಧರಣಿ ಹೋರಾಟಗಳಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸುವುದನ್ನು ಕಾಣಬಹುದು. ಲಿಂಗಭೇದ ಭ್ರೂಣಹತ್ಯೆ, ವರದಕ್ಷಿಣೆ ಪಿಡುಗು. ಮರ್ಯಾದ ಹತ್ಯೆ(ಡೊಮೆಸ್ಟಿಕ್ ವೈಲೆನ್ಸ್)ಗಳ ವಿರುದ್ಧ ನಿರಂತರವಾಗಿ ಪ್ರತಿಭಟನೆ ನಡೆಯುತ್ತಲೇ ಇದೆ. ದಲಿತ ಮಹಿಳೆಯರಲ್ಲಿ ನಾಯಕತ್ವದ ಕೊರತೆಯನ್ನು ಚಳವಳಿ ಎದುರಿಸುತ್ತಿರುವುದು ಸ್ವಲ್ಪಮಟ್ಟಿಗೆ ನಿಜವಾದರೂ ಆ ದಿಸೆಯಲ್ಲಿ ಪ್ರಯತ್ನಗಳು ನಡೆಯುತ್ತಿವೆ. 2008ರಲ್ಲಿ ಧಾರವಾಡದಲ್ಲಿ ಶ್ರೀಮತಿ ಇಂದಿರಾ ಕೃಷ್ಣಪ್ಪನವರ ನೇತೃತ್ವದಲ್ಲಿ ಆಯೋಜನಗೊಂಡಿದ್ದ ಬೃಹತ್ ಮಹಿಳಾ ಸಮಾವೇಶದಲ್ಲಿ 20 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ಕೆನೆಪದರದ ಅಡಿಯಲ್ಲಿ ಬರುವ ದಲಿತ ಮಹಿಳೆಯರು ಸಾಮಾಜಿಕ ಕೀಳರಿಮೆಯಿಂದ ನರಳುತ್ತಿದ್ದು, ಬಹುತೇಕ ಚಳವಳಿಗಳು, ನಾಯಕರು, ಪದಾಧಿಕಾರಿಗಳು ಕಾರ್ಯಕರ್ತರು ತಮ್ಮ ಕುಟುಂಬದ ಮಹಿಳೆಯರನ್ನು ತೊಡಗಿಸಿಕೊಳ್ಳದಿರುವುದು ಸಹ ಬಹುಮಟ್ಟಿಗೆ ನಾಯಕತ್ವ ರೂಪುಗೊಳ್ಳದಿರುವುದು ಕಾರಣವಾಗಿದೆ. ಮುಂದಿನ ದಿನಮಾನಗಳಲ್ಲಿ ದಲಿತ ಚಳವಳಿಯ ನಾಯಕತ್ವವನ್ನು ದಲಿತ ಮಹಿಳೆಯರೇ ನಿರ್ವಹಿಸುವಂತಾಗಬೇಕು.

11. (ಎ) ದಲಿತ ರಾಜಕಾರಣ ಎಂಬುದು ಮನೆಯ ಯಜಮಾನನ ಕೊಟ್ಟಿಗೆಯಲ್ಲಿ ದುಡಿಯುವ ಗಾಣದ ಎತ್ತಿನಂತೆ ಆಗಿದೆ. ಚಾರಿತ್ರಿಕವಾಗಿ ಗಮನಿಸುವುದಾದರೆ 1932ರಲ್ಲಿ ಗಾಂಧಿ ಮತ್ತು ಅಂಬೇಡ್ಕರ್‌ರವರ ನಡುವಿನ ಪೂನಾ ಒಪ್ಪಂದದ ಕರಾಳ ಅಧ್ಯಾಯ ದಲಿತ ವರ್ಗಗಳ ರಾಜಕೀಯ ಹಕ್ಕಿಗೆ ಗೋರಿ ಕಟ್ಟಲಾಯಿತು. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಭವಿಷ್ಯದಲ್ಲಿ ದಲಿತ ರಾಜಕಾರಣ ಮೇಲ್ವವರ್ಗಗಳ ಹಾಗೂ ಜಾತಿವಾದಿಗಳ ಕಪಿಮುಷ್ಟಿಯಲ್ಲಿ ಸಿಲುಕುವುದನ್ನು ಅಂದೇ ಗ್ರಹಿಸಿದ್ದರು. ಅದರ ಫಲಿತಾಂಶವನ್ನು ಇಂದು ಕಾಣುತ್ತಿದ್ದೇವೆ.

(ಬಿ) ದಲಿತ ಚಳವಳಿ ಅಭ್ಯರ್ಥಿಗಳು ವೃತ್ತಿ ರಾಜಕಾರಣಿಗಳಂತೆ ರಾಜಕೀಯ ಪಟ್ಟು ವರಸೆಗಳಲ್ಲಿ ಪಳಗಿಲ್ಲದಿರುವುದು. ಇವತ್ತಿನ ಚುನಾವಣೆ ಎಷ್ಟರಮಟ್ಟಿಗೆ ಕಲುಷಿತವಾಗಿರುವುದು ಸಾಮಾನ್ಯರಿಗೂ ತಿಳಿದ ವಿಷಯ. ಹೋರಾಟಗಾರರಿಗೆ ಚುನಾವಣೆಯು ಕೂಡಾ ಒಂದು ಹೋರಾಟದ ಮಾರ್ಗವೇ ಎಂಬುದು ನಮ್ಮ ಧೃಢನಂಬಿಕೆಯಾಗಿದೆ.

12. ದಲಿತರು ಜನಸಂಖ್ಯಾ ದೃಷ್ಟಿಯಲ್ಲಿ ದೊಡ್ಡ ಶಕ್ತಿಯಾಗಿದ್ದಾರೆ. ಕಳೆದ ಮೂರುವರೆ ದಶಕಗಳ ಹೋರಾಟದ ಅನುಭವದಲ್ಲಿ ಸಾಕಷ್ಟು ಏಳುಬೀಳುಗಳಿದ್ದರೂ ದಲಿತ ಚಳವಳಿ ತನ್ನ ನಿರಂತರತೆಯನ್ನು ಕಾಯ್ದುಕೊಂಡು ಬರುತ್ತಿದೆ. ಬಾಬಾ ಸಾಹೇಬ್ ಅಂಬೇಡ್ಕರ್‌ರವರು ತೋರಿದ ಮಾರ್ಗದಲ್ಲಿ ನಾವು ಮುನ್ನಡೆಯಬೇಕು. ದಲಿತರು ತಮ್ಮ ವಿಮೋಚನೆಗಾಗಿ ಧಾರ್ಮಿಕ ಶಕ್ತಿಯಾಗಿ ಸಂಘಟಿತರಾಗಬೇಕು. ಧಮ್ಮಕ್ರಾಂತಿ ಅರ್ಥಾತ್ ಬುದ್ಧ ನಡೆಗೆ ಮರಳಿ ಮನೆಗೆ ಎಂಬ ಘೋಷಣೆ ನಮ್ಮ ಬಿಡುಗಡೆಯ ದಾರಿಯೆಂದು ಗೋಚರಿಸುತ್ತದೆ. ಒಟ್ಟು ಭಾರತದ ವಿಮೋಚನೆ ಬುದ್ಧನ ವೈಚಾರಿಕ ಚಿಂತನೆಯಲ್ಲಿ ಅಡಗಿದೆ. ಪ್ರೀತಿ ಕರುಣೆ ಸಮಾನತೆ ತತ್ವಗಳು ತಂತ್ರಗಾರಿಕೆ ಆಗದೇ ತಾತ್ವಿಕ ದರ್ಶನವಾಗಬೇಕು. ■

ಎಂ. ವೆಂಕಟಸ್ವಾಮಿ
ರಾಜ್ಯಾಧ್ಯಕ್ಷರು
ಸಮಿತಾ ಸೈನಿಕದಳ ಮತ್ತು ಭಾ.ರಿ.ಪಿ.(ಅ)

ಉಪ ಜಾತಿ, ಉಪ ಭಾಷೆ ಒಡಕಿಗೆ ಕಾರಣ

ಪ್ರಶ್ನೆ 1: (ಅ) ಚಳವಳಿಗೆ ತಾತ್ವಕತೆಯ ಕೊರತೆ. ಅಂಬೇಡ್ಕರ್‌ರ ತಾತ್ವಿಕತೆಯನ್ನು ಚಳವಳಿಯಲ್ಲಿ ಮೂಡಿಸುವಲ್ಲಿ ನಾಯಕತ್ವದ ವೈಫಲ್ಯತೆ. ಗಾಂಧಿ, ಮಾರ್ಕ್ಸ್ ಮತ್ತು ನಕ್ಸಲ್‌ವಾದಿಗಳ ಪ್ರಭಾವವು ದಲಿತ ಚಳವಳಿ ಮೇಲೆ ಗಾಢವಾಗಿ ಬೀರಿರುವುದು.

(ಆ) ಆದಿಯಿಂದಲೂ ನಾಯಕತ್ವಕ್ಕೆ ಇತಿಹಾಸದ ಅರಿವು ಇಲ್ಲದೇ ಹೋದುದು ಸಾಮೂಹಿಕ ನಾಯಕತ್ವವನ್ನು ನೀಡದೇ ಹೋದುದು.

(ಇ) ಪ್ರಾರಂಭದಿಂದಲೂ ದಲಿತ ಚಳವಳಿಯು ಒಂದು ಪ್ರತಿಕ್ರಿಯಾತ್ಮಕ ಕಾರ್ಯಕ್ರಮವಾಗಿ ಮೂಡಿಬಂದುದು. ತನ್ನದೇ ಆದ ಅಜೆಂಡಾ, ಗೊತ್ತು-ಗುರಿಗಳನ್ನು ನಿಗದಿಪಡಿಸಿಕೊಳ್ಳದೇ ಹೋದುದು.

(ಈ) ಚಳವಳಿಯು ರಾಜಕೀಯೇತರ ಸಂಘಟನೆಯೆಂದು ಘೋಷಿಸಿ ತನ್ನ ಆತ್ಮಹತ್ಯೆಗೆ ತಾನೇ ಪ್ರಯತ್ನಿಸಿದುದು. ಚಳವಳಿಯೂ ಸಹ ಒಂದು ರಾಜಕೀಯ ಪ್ರಕ್ರಿಯೆಯೆಂದು ಪರಿಭಾವಿಸದೇ ಹೋದುದು.

(ಉ) ದಲಿತ ಚಳವಳಿಯನ್ನು ಕಟ್ಟಿ ಬೆಳೆಸಿದ ನನ್ನಂತಹ ಅನೇಕರನ್ನು ನಿಂದಿಸಿ ಅಂತಹವರಿಂದ ಛೀಮಾರಿ ಹಾಕಿಸಿಕೊಂಡಿದ್ದು. ಕುಟಿಲ ಕುತಂತ್ರಗಳ ಗುಂಪುಗಾರಿಕೆಗೆ ನಾಯಕತ್ವವು ಮಣಿದು ನಿರ್ಣಯಗಳನ್ನು ಕೈಗೊಂಡಿದ್ದು.

(ಊ) ಒಡೆದು ಆಳುವ ಬ್ರಾಹ್ಮಣ್ಯವನ್ನು ನಾಯಕತ್ವ ರೂಪಿಸುವಾಗ ಚಳವಳಿಗೆ ಅಳವಡಿಸಿದ್ದು.

(ಋ) ಪ್ರಥಮ ಬೃಹತ್ ಬಿರುಕು ಕಾಡಿದ್ದು-'ಹೊಲೆ-ಮಾದಿಗ' ತಾರತಮ್ಯತೆಯನ್ನು ಚಳವಳಿಯಲ್ಲಿ ತೂರಿಸಿದ್ದು.

ಪ್ರಶ್ನೆಯ 2ನೇ ಭಾಗ: ಇಂದಿನ ಸ್ವರೂಪದಲ್ಲಿ ಚಳವಳಿಯನ್ನು ಪ್ರಬಲಗೊಳಿಸಲಾಗುವುದಿಲ್ಲ

ಪ್ರಶ್ನೆ 2: ವಿವಿಧ ಬಣಗಳ ನಾಯಕರೆನಿಸಿಕೊಂಡವರಲ್ಲಿನ ಒಣ ಪ್ರತಿಷ್ಠೆಗೆ ಉಪಜಾತಿ, ಉಪಭಾಷೆಗಳ ಸಂಘರ್ಷದಿಂದಾಗಿ ಒಡಕು. ಒಂದೆರಡು ಬಣಗಳ ಮುಖಂಡರಿಗೆ ಅವರ ಸಂಘಟನೆಯೇ ಜೀವನ. ಅಂತಹವರನ್ನು ಹೊರತುಪಡಿಸಿಯೇ ಸಮಗ್ರತೆಗೆ ಪ್ರಯತ್ನಿಸಬೇಕು.

ಪುನರ್‌ವ್ಯಾಖ್ಯಾನ ಬೇಕಿಲ್ಲ...

(38ನೇ ಪುಟದಿಂದ)

ಕೋಲಾರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧೆ ಹಾಗು 1994ರಲ್ಲಿ ಬಿಎಸ್‌ಪಿ ಪಕ್ಷವನ್ನು ಬೆಂಬಲಿಸಿ ಹಲವಾರು ಕ್ಷೇತ್ರಗಳಲ್ಲಿ ನಮ್ಮ ನಾಯಕರುಗಳು ಸ್ಪರ್ಧೆಮಾಡಿ ಗಣನೀಯವಾಗಿ ಹೆಚ್ಚು ಮತಗಳನ್ನು ಪಡೆದು ಆಯ್ಕೆಯಾಗದೇ ಇರಬಹುದು. ಆದರೆ ಆ ಸಂದರ್ಭಗಳಲ್ಲಿ ಸಾಕಷ್ಟು ದಲಿತರ ಹಾಗು ಇನ್ನಿತರ ಸಮುದಾಯಗಳ ಮತಗಳನ್ನು ಪಡೆದಿರುವ ದಾಖಲೆಯೇ ಇದೆ.

ಆದರೆ ಬಹು ಮುಖ್ಯವಾಗಿ ಚರ್ಚಿಸಬೇಕಾಗಿರುವುದು ದಲಿತ ಚಳುವಳಿ ಮೂಲತಃ ಒಂದು ರಾಜಕೀಯ ಪಕ್ಷವನ್ನು ಸ್ಥಾಪಿಸದೆ ಇದ್ದದ್ದು ನಿಜವಾಗಿಯೂ ನಮ್ಮ ವಿಫಲತೆಗೆ ಕಾರಣವಿರಬಹುದು. ದಲಿತ ಚಳುವಳಿಗಾರರಿಗೆ ರಾಜಕೀಯ ಪಕ್ಷವೇ ಇಲ್ಲದಿರುವಾಗ ಚಳುವಳಿಗಾರರು ಸ್ಪರ್ಧಿಸಿ ದಲಿತರ ಮತಗಳನ್ನು ಪಡೆದುಕೊಳ್ಳದೇ ಇರುವುದು ಎಲ್ಲಿಂದ ಬರುತ್ತದೆ? ನೀವೇ ಹೇಳಿ.

ಆದರೆ ಚಳುವಳಿಗಾರರು ರಾಜಕೀಯ ಪಕ್ಷ ಸ್ಥಾಪಿಸಿ ರಾಜಕಾರಣ ಮಾಡಿದರೆ ನಿಜವಾದ

ಪ್ರಶ್ನೆ 3: ಐಕ್ಯ ರಾಜಕೀಯ ವೇದಿಕೆ ಮೂಲಕ ದಲಿತ ಚಳವಳಿಯನ್ನು ಒಂದುಗೂಡಿಸಲು ಸಾಧ್ಯ. ಅವರವರ ಸಂಘಟನೆಗಳನ್ನು ಅನನ್ಯತೆಯನ್ನು ಉಳಿಸಿಕೊಂಡೇ ರಾಜಕೀಯ ಐಕ್ಯತೆಯ ಸಾಧ್ಯತೆಯನ್ನು ಮನಗಾಣಬೇಕು. ಅದರಲ್ಲೂ ಅಂಬೇಡ್ಕರ್‌ರ ರಾಜಕೀಯ ಚಿಂತನೆಗಳ ಅಡಿಯಲ್ಲಿ ಸಂಘಟನೆಗಳನ್ನು ವಿಸರ್ಜಿಸುವ ಅವಶ್ಯಕತೆಯಿಲ್ಲ.

ಪ್ರಶ್ನೆ 4: ದಲಿತರ ಮೇಲಿನ ಹಿಂದುತ್ವದ ಪ್ರಭಾವವು ಇಂದಿನದಲ್ಲ. ಶತಮಾನಗಳಷ್ಟು ಹಳೆಯದು. ದಲಿತತ್ವವನ್ನು ಗಟ್ಟಿಗೊಳಿಸಿಯೇ ಬ್ರಾಹ್ಮಣ್ಯಕ್ಕೆ ದಿಟ್ಟ ಉತ್ತರ ನೀಡುವುದು.

ಪ್ರಶ್ನೆ 5: ಬಾಬಾ ಸಾಹೇಬ ಅಂಬೇಡ್ಕರ್‌ರ ತತ್ವ ಸಿದ್ಧಾಂತಗಳನ್ನು ಪರಾಮರ್ಶಿಸುವ, ಪುನರ್‌ವ್ಯಾಖ್ಯಾನಿಸುವ ಯೋಗ್ಯತೆ ಇಂದಿನ ಯಾವ ಬುದ್ಧಿಜೀವಿಗೂ ಇಲ್ಲ. ಬದಲಿಗೆ ಅಂಬೇಡ್ಕರ್‌ರ ಚಿಂತನೆಗಳ ಬಗ್ಗೆ ಮರು ಚಿಂತಿಸುವ ಅವಶ್ಯಕತೆ ಇದೆ. (Rethinking with the though of Ambedkar)

ಪ್ರಶ್ನೆ 6: ಎಸ್‌ಸಿ/ಎಸ್‌ಟಿ ಪಟ್ಟಿಯಲ್ಲಿರುವವರೆಲ್ಲಾ 'ದಲಿತ' ಪರಿಕಲ್ಪನೆಗೆ ಒಳಪಡಿಸುವ ತಂತ್ರಗಾರಿಕೆ ಬಳಸುವುದು ಸೂಕ್ತ. 'ದಲಿತ' ಪರಧಿಯಲ್ಲಿ ಬರುವವರೆಲ್ಲಾ 'ದಲಿತ ಶಕ್ತಿ'ಯಾಗಬಲ್ಲರು. ಇಂತಹ ಒಳಗೊಳ್ಳುವಿಕೆಯ(Inclusion) ವ್ಯಾಖ್ಯಾನವು ಅಸ್ಪೃಶ್ಯರಲ್ಲದವರನ್ನು ಒಳಗೊಳ್ಳುತ್ತದೆ. Inclusionಗೆ Exclusion ಸರಿಸಾಟಿ ತಂತ್ರವಾಗುತ್ತದೆ.

ಪ್ರಶ್ನೆ 7: ಮೇಲಿನ ಉತ್ತರವೇ ಈ ಪ್ರಶ್ನೆಗೂ ಉತ್ತರ. ಜಾತಿ ಹೆಸರಿನ ಸಂಘಟನೆಗಳಾಗುವುದು ತಪ್ಪೇನಲ್ಲ. ಅವು ತಮ್ಮ ತಮ್ಮ ಜಾತಿ ಜನ ಸಂಖ್ಯೆಗನುಗುಣವಾಗಿ 'ಪಾಲು' ಕೇಳುವಂತಾದಾಗ ಎಲ್ಲವನ್ನೂ ನುಂಗುತ್ತಿರುವ ಜಾತಿಗಳಿಗೆ ಆಘಾತವಾಗುವು) ಟಟ. 'ಸರ್ವರಿಗೂ ಸಮಪಾಲು' ಎಂಬ ಸಂವಿಧಾನದ ಘೋಷವು ದಲಿತ ಚಳವಳಿಯ ಆಶಯವಾಗಬೇಕು.

ಪ್ರಶ್ನೆ 8: ಹಿಂದುಳಿದ ವರ್ಗಗಳಿಗೆ ನೀಡಲಾಗಿರುವ ಒಳಮೀಸಲಾತಿಯ ವರ್ಗೀಕರಣ ರೀತಿಯಲ್ಲೇ ಪರಿಶಿಷ್ಟ ಜಾತಿ/ಪಂಗಡಗಳಿಗೂ ವಿಸ್ತರಿಸುವುದು ಸೂಕ್ತ. ದಲಿತ ಚಳವಳಿಗಾರರೇ ಈ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು ಲೇಸು.

ಪ್ರಶ್ನೆ 9: 'ಪರಿಶಿಷ್ಟ'ರ ಪಟ್ಟಿಯನ್ನು ಸ್ಪೃಶ್ಯ, ಅಸ್ಪೃಶ್ಯ, ಪಂಗಡ, ಬುಡಕಟ್ಟು, ಅಲೆಮಾರಿ ಸಮುದಾಯಗಳೆಂದು ಹೆಸರಿಸುವುದು ತಪ್ಪೇನಿಲ್ಲ. ಇದೇ ರೀತಿಯ ವರ್ಗೀಕರಣ ಸೂಕ್ತ.

ಪ್ರಶ್ನೆ 10: ಕೆಲವು ದಲಿತ ನಾಯಕರಲ್ಲಿನ ವೈದಿಕ ಮನಸ್ಸಿನಿಂದಾಗಿ ಮಹಿಳೆಯರನ್ನು ದೂರ ಸರಿಸಲಾಗಿದೆ. ಬೌದ್ಧ ಮನಸ್ಸು ಮೂಡಿದರೆ ದಲಿತ ಚಳವಳಿಯಲ್ಲಿ ಮಹಿಳೆಯರ ಪ್ರಾತಿನಿಧ್ಯ ತಾನಾಗಿಯೇ ವೃದ್ಧಿಸುತ್ತದೆ.

ಪ್ರಶ್ನೆ 11: ಬಾಬಾಸಾಹೇಬರ ಚಿಂತನೆಗಳಿಲ್ಲದ ರಾಜಕಾರಣವು 'ದಲಿತ ರಾಜಕಾರಣ'ವಾಗಲು ಸಾಧ್ಯವಿಲ್ಲ. ಅಂಬೇಡ್ಕರ್‌ರ ರಾಜಕೀಯ ತಾತ್ವಿಕತೆಯನ್ನು ಮೈಗೂಡಿಸಿಕೊಳ್ಳದ ದಲಿತ ನಾಯಕರು ನಕಾರಾತ್ಮಕವಾಗಿ ಗುರುತಿಸಲ್ಪಟ್ಟಿದ್ದಾರೆ. ಅದಕ್ಕೆ ಹೀಗೆ ವಿಫಲರಾಗಿದ್ದಾರೆ.

ಪ್ರಶ್ನೆ 12: ಅಂಬೇಡ್ಕರ್ ಸೂಚಿಸಿದ ಕಾರ್ಯಕ್ರಮಗಳೇ ದಲಿತ ಐಕ್ಯತೆಗೆ ಕಾರಣವಾಗಬೇಕು. ಈ ಪೂರಕ ತಂತ್ರಗಾರಿಕೆ ಮೂಡಿಬರುವುದು ಐಕ್ಯತೆಯು ಯಶಸ್ವಿಯಾದ ಮೇಲೆ. ■

ನಮ್ಮ ಶಕ್ತಿ ಪ್ರತಿ ಕ್ಷೇತ್ರಗಳಲ್ಲಿ ಬೇರೆ ರಾಜಕೀಯ ಪಕ್ಷಗಳಿಗಿಂತ ಹೆಚ್ಚು ಮತಗಳನ್ನು ದಲಿತ ಚಳುವಳಿಗಾರರು ಪಡೆಯಲಿಕ್ಕೆ ಸಾಧ್ಯವಿದೆ. ಅದು ಆಗಬೇಕು.

ಅಧಿಕಾರವೇ ಸರ್ವಶ್ರೇಷ್ಠವೆಂಬ ಭ್ರಮೆಯಲ್ಲಿ ಕೆಲವು ದಲಿತ ನಾಯಕರು ಅಂಬೇಡ್ಕರ್‌ರವರ ಸಿದ್ಧಾಂತ, ಜಾತ್ಯಾತೀತ ಮೌಲ್ಯಗಳನ್ನು ಗಾಳಿಗೆ ತೂರಿ, ಸ್ವಾರ್ಥಕ್ಕಾಗಿ ನೀತಿಹೀನ ರಾಜಕಾರಣ ಮಾಡಲು ಕೋಮುವಾದಿಗಳ ಜತೆ, ಗಣಿ ಲೂಟಿಕೋರರ ಜೊತೆ ಸೇರುತ್ತಿರುವ ಅಪಾಯವನ್ನು ಮೆಟ್ಟಿ ರಾಜಕಾರಣ ಮಾಡಬೇಕಾಗುತ್ತದೆ.

12. ದಲಿತರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಎಲ್ಲರನ್ನೂ ಒಳಗೊಳ್ಳುವ ದಿಕ್ಕಿನಲ್ಲಿ ಮೊದಲು ಹೆಜ್ಜೆ ಇಡಬೇಕು. ರಾಜಕಾರಣವನ್ನು ಕೇವಲ ದಲಿತರು ಮಾಡಿದರೆ ಆಗುವುದಿಲ್ಲ. ಅಹಿಂದ ವರ್ಗ, ರೈತ, ಪ್ರಗತಿಪರ, ಅಸಂಘಟಿತ ಹಾಗೂ ಎಲ್ಲ ಶೋಷಿತ ವರ್ಗಗಳನ್ನು ತನ್ನ ರಾಜಕೀಯ ತೆಕ್ಕೆಗೆ ತೆಗೆದುಕೊಳ್ಳಬೇಕು. ನಂಬಿಕೆ, ಪ್ರೀತಿ ಮತ್ತು ತಾಳ್ಮೆಗಳನ್ನು ಹೊಂದಿ ಈ ದಿಕ್ಕಿನಲ್ಲಿ ಅಗತ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ದಲಿತ ಚಳವಳಿ ಮುಂದಾಗಬೇಕು. ಇದೇ ನಮ್ಮ ಕಾರ್ಯಕ್ರಮವಾಗಬೇಕು. ತಂತ್ರಗಾರಿಕೆಯನ್ನು ನೀವು 'ಸ್ಟ್ರಾಟಜಿ' ಎಂಬ ಅರ್ಥದಲ್ಲಿ ಬಳಸಿದ್ದರೂ ಅದರ ಅವಶ್ಯಕತೆ ಇಲ್ಲ ನಮಗೆ. ■

ಒಂದಾಗದಿದ್ದರೆ...

(35ನೇ ಪುಟದಿಂದ)

ಪುಢಾರಿಗಿರಿ ನಡೆಸಲಿಕ್ಕೆ, ಒಂದಿಷ್ಟು ವ್ಯಕ್ತಿಗತ ಸವಲತ್ತು ಪಡೆಯಲಿಕ್ಕೆ ಹಾಗೂ ಚುನಾವಣೆಯ ಸಂದರ್ಭದಲ್ಲಿ ಒಂದಷ್ಟು ಕಾಸು ಮಾಡಿಕೊಳ್ಳಲಿಕ್ಕೆ ಮಾತ್ರ ಸೀಮಿತವಾಗಿವೆ. ಹಾಗಾಗಿ ದಲಿತ ಚಳುವಳಿಗೆ ಈ ಯಾವ ಅಂಶಗಳೂ ತೊಡಕಾಗುವುದಿಲ್ಲ.

8. ಒಳ ಮೀಸಲಾತಿ ಎಂಬುದು ರಾಜಕಾರಣಿಗಳ ಟ್ರಂಪ್ ಕಾರ್ಡ್ ಆಗಿದೆ. ಈ ಒಳ ಮೀಸಲಾತಿ ಬಗ್ಗೆ ನಮ್ಮ ರಾಜ್ಯದಲ್ಲಿ ಮೊದಲು ಮಾತನಾಡಿದ್ದು ಐ.ಎ.ಎಸ್.-ಐ.ಪಿ.ಎಸ್. ಅಧಿಕಾರಿಗಳು ಹಾಗೂ ರಾಜಕಾರಣಿಗಳು. ತಮ್ಮ ವ್ಯಯಕ್ತಿಕ ಅನುಕೂಲಕ್ಕಾಗಿ ಈ ವಿಚಾರ ತೇಲಿಬಿಟ್ಟು ಒಂದಿಷ್ಟು ವ್ಯಯಕ್ತಿಕ ಲಾಭ ಪಡೆದುಕೊಂಡರು. ಇದಕ್ಕೂ ಮೊದಲು ನೆರೆಯ ಆಂಧ್ರ ಪ್ರದೇಶದಲ್ಲಿ ಇದು ಚಳುವಳಿಯ ರೂಪ ಪಡೆದು ಸುಪ್ರೀಂ ಕೋರ್ಟ್ ಮೆಟ್ಟಿಲನ್ನು ಏರಿದ್ದೂ ಆಗಿದೆ. ಆದರೆ ಆಂಧ್ರ ಸರ್ಕಾರದ ಪ್ರಸ್ತಾಪನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿಲ್ಲ. ಈಗಿನ ಮೀಸಲು ನೀತಿ ಪ್ರಕಾರ ಇದು ಸಾಧ್ಯವಾಗುತ್ತಿಲ್ಲ. ಮುಂದೆ ಬದಲಾದ ಪರಿಸ್ಥಿತಿ ಮತ್ತು ಬದಲಾದ ಮೀಸಲಾತಿ ನಿಯಮಾವಳಿ ಪ್ರಕಾರ ಇದು ಸಾಧ್ಯವಾಗಬಹುದು. ಆದರೆ ಈ ಸಂಬಂಧ ಸಾಕಷ್ಟು ಕಾನೂನಿನ ತೊಡಕುಗಳು ಇವೆ.

ಸರ್ಕಾರ ಅಥವಾ ಕೋರ್ಟಿನ ಅಭಿಪ್ರಾಯ ಏನೇ ಇರಲಿ, ಮೀಸಲಾತಿ ಪಡೆಯುವ ಯಾವುದೇ ಸಮುದಾಯಗಳ ಕಟ್ಟಕಡೆಯ ವ್ಯಕ್ತಿಯಿಂದ ಈ ಮೀಸಲಾತಿ ಪ್ರಾರಂಭಗೊಂಡು ಹಂತ ಹಂತವಾಗಿ ಹಂಚಿಕೆಯಾಗಬೇಕು. ಮೀಸಲಾತಿ ಎಲ್ಲಾ ಉಪಜಾತಿಗಳ ಬಡವರಿಗೆ ಆದ್ಯತೆ ಮೇಲೆ ದಕ್ಕುವಂತಾಗಬೇಕು.

9. ಪರಿಶಿಷ್ಟ ಜಾತಿಯಲ್ಲಿ ಅಸ್ಪೃಶ್ಯರಲ್ಲದ ಸಮುದಾಯಗಳ ಸೇರ್ಪಡೆಯಾಗಿರುವುದು ಅವೈಜ್ಞಾನಿಕವಾದುದು. ಇಂತಹ ತಪ್ಪು ನಿರ್ಧಾರಗಳಿಂದ ನಿಜವಾದ ಅಸ್ಪೃಶ್ಯರು ಮೀಸಲಾತಿಯ ಫಲ ಪಡೆದುಕೊಳ್ಳುವುದು ಸಾಧ್ಯವಾಗದೆ ವಂಚನೆಗೊಳಗಾಗುತ್ತಾರೆ. ಈಗಾಗಲೇ ಅಸ್ಪೃಶ್ಯರಲ್ಲಿ ಈ ಬೇಗುದಿ, ತಳಮಳ ಕಾಣಿಸಿಕೊಳ್ಳುತ್ತಿದೆ. ಅಸ್ಪೃಶ್ಯರಲ್ಲದವರನ್ನು ಈ ಪಟ್ಟಿಯಿಂದ ಕೈಬಿಟ್ಟು ಅವರಿಗೆ ಅವರವರ ಜನಸಂಖ್ಯಾಬಲಕ್ಕನುಗುಣವಾಗಿ ಮೀಸಲಾತಿ ಕಲ್ಪಿಸುವ ವ್ಯವಸ್ಥೆ ಜರೂರಾಗಿ ಆಗಬೇಕು.

10. ಹಾಗೇನಿಲ್ಲ, ಈಗಲೂ ದಲಿತ ಚಳುವಳಿಯ ಎಲ್ಲ ಸಂದರ್ಭಗಳಲ್ಲಿ ಮಹಿಳೆಯರು ಕೆಲವೊಮ್ಮೆ ಅತಿಹೆಚ್ಚು ಮಂದಿ ಭಾಗವಹಿಸುವುದುಂಟು. ಹಾಗೆ ನೋಡಿದರೆ ದಲಿತ ಮಹಿಳೆಯರ ಮೇಲಿನ ದೌರ್ಜನ್ಯದ ವಿರುದ್ಧವೇ ಹೆಚ್ಚು ಹೆಚ್ಚಾಗಿ ಚಳುವಳಿ ನಡೆಯುತ್ತಿದೆ. ಆದರೆ ದಲಿತ ಮಹಿಳೆಯೇ ನಾಯಕತ್ವ ತೆಗೆದುಕೊಂಡ ಉದಾಹರಣೆ ನಮ್ಮಲ್ಲಿಲ್ಲ. ಇದಕ್ಕೆ ಸಾಮಾಜಿಕ ಕಟ್ಟುಪಾಡು ಕಾರಣವಿದ್ದೀತು. ಅದನ್ನು ನಾವು ಪ್ರಜ್ಞಾಪೂರ್ವಕವಾಗಿ ಮೀರಬೇಕಾಗಿದೆ.

11. ದಲಿತ ರಾಜಕಾರಣ ಎಂಬ ಪ್ರತ್ಯೇಕ ರಾಜಕಾರಣ ಬಹುಷಃ ಕಾರ್ಯಸಾಧುವಲ್ಲದ ವಿಚಾರ ಅನಿಸುತ್ತದೆ. ಯಾರೇ ರಾಜಕಾರಣ ಮಾಡಲಿ ಅದು ಒಟ್ಟು ಸಮಾಜವನ್ನು ಪ್ರತಿನಿಧಿಸುವ ರಾಜಕಾರಣ ಆಗಬೇಕು. ಅದರಲ್ಲೂ ಶೋಷಿತ ಸಮುದಾಯ, ಗ್ರಾಮೀಣ ಸಮುದಾಯಗಳ ಹಿತಾಸಕ್ತಿಗೆ ಪೂರಕವಾದ ರಾಜಕಾರಣವನ್ನು ಜನಪರ ರಾಜಕಾರಣ ಅನ್ನಬಹುದು. ದಲಿತ-ರೈತ, ಪ್ರಗತಿಪರರನ್ನೊಳಗೊಂಡಂತೆ ರಾಜಕಾರಣ ಮಾಡವ ಪ್ರಯತ್ನವನ್ನು ಚಳುವಳಿ ನಡೆಸಿತಾದರೂ ಅದು ಸಾಧ್ಯವಾಗದೇ ಹೋದದ್ದು ವಿಷಾದಕರ ಸಂಗತಿ.

ಚಳುವಳಿಯಿಂದ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಅಂದುಕೊಂಡವರು ಮೊದಲು ಜನರ ಪ್ರೀತಿ, ವಿಶ್ವಾಸವನ್ನು ಸಂಪಾದಿಸಬೇಕು. ಪ್ರಾಮಾಣಿಕರಾಗಿ, ವಿಶ್ವಾಸ ಪಾತ್ರರಾಗಿ, ಜನಾನುರಾಗಿಯಾಗಿರಬೇಕು. ಎಲ್ಲದಕ್ಕೂ ಮೊದಲು ನಂಬಿಕಸ್ಥರಾಗಿರಬೇಕು. ಎಲ್ಲರನ್ನೂ ತಲುಪಲು ಅಗತ್ಯವಾದ ಸಂಪನ್ಮೂಲವೂ ಇರಬೇಕು. ಇದ್ಯಾವುದೂ ಇಲ್ಲದೆ ಹೋದರೆ ಚಳುವಳಿಗಾರರಾಗಿರಲಿ ಅಥವಾ ಬೇರೆ ಯಾರೇ ಆಗಿರಲಿ ಮತ ಗಳಿಸುವುದು ಕಷ್ಟದ ಮಾತು. ಜನ ತಮ್ಮ ಮತವನ್ನು ವ್ಯರ್ಥ ಮಾಡಲು ಇಷ್ಟ ಪಡುವುದಿಲ್ಲ. ಗೆಲ್ಲುವ ಸಾಧ್ಯತೆ ಇಲ್ಲ ಎಂದು ಅವರಿಗನ್ನಿಸಿದರೆ ಯಾವ ಕಾರಣಕ್ಕೂ ಅಂತವರಿಗೆ ಮತ ನೀಡುವುದಿಲ್ಲ.

12. ಮೊದಲು ದಲಿತ ಚಳುವಳಿ ದಲಿತ ಸಮುದಾಯಗಳನ್ನೆಲ್ಲಾ ಒಟ್ಟಿಗೆ ತರುವ ಕೆಲಸ ಮಾಡಬೇಕು. ಪ್ರಜ್ಞಾವಂತಿಕೆ, ಜಾಗೃತಿ ಮೂಡಿಸಿ, ಬಿಡಿಬಿಡಿಯಾಗಿದ್ದರೆ ಯಾವ ಪ್ರಯೋಜನವೂ ಆಗಲಾರದೆಂಬ ತಿಳುವಳಿಕೆ ಮೂಡಿಸಬೇಕು. ಹೀಗೆ ಸರ್ವರೀತಿಯಲ್ಲೂ ಅಣಿಯಾದ ಸಮುದಾಯಗಳನ್ನು ಪ್ರಜಾಸತ್ತಾತ್ಮಕ, ಜಾತ್ಯಾತೀತವಾದ ವಿಶಾಲ ಹಾಗೂ ವಿಸ್ತಾರವಾದ ವೇದಿಕೆಯಡಿ ತಂದಲ್ಲಿ ಆಗ ನಿಜಕ್ಕೂ ದಲಿತ ಸಮುದಾಯವನ್ನು ಒಂದು ದೊಡ್ಡ ಶಕ್ತಿಯಾಗಿ ಬೆಳೆಸಬಹುದು ಎಂದು ಅಂದುಕೊಳ್ಳುತ್ತೇನೆ. ಇದು ನಿಜಕ್ಕೂ ದೊಡ್ಡ ಸವಾಲಿನ ಕೆಲಸ. ■

ಬುದ್ಧ, ಮಾರ್ಕ್ಸ್ ಮತ್ತು ಅಂಬೇಡ್ಕರ್

(31ನೇ ಪುಟದಿಂದ)

1) ತತ್ವಶಾಸ್ತ್ರದ ಮೂಲೋದ್ದೇಶ ಈ ವಿಶ್ವವನ್ನು ಪುನರ್ ರಚಿಸುವುದೇ ಹೊರತು ವಿಶ್ವದ ಹುಟ್ಟನ್ನು ಕುರಿತ ಸಿದ್ಧಾಂತಗಳ ವಿವರಣೆಯಲ್ಲಿ ಕಾಲ ಕಳೆಯುವುದಲ್ಲ.
2) ವರ್ಗ ವರ್ಗಗಳ ನಡುವಿನ ಹಿತಾಸಕ್ತಿಗಳ ಸಂಘರ್ಷ ನಡೆದಿದೆ.
3) ಖಾಸಗಿ ಆಸ್ತಿಯ ಮಾಲಿಕತ್ವ ಒಂದು ವರ್ಗಕ್ಕೆ ಅಧಿಕಾರವನ್ನೂ, ಇನ್ನೊಂದು ವರ್ಗಕ್ಕೆ ಶೋಷಣೆಯ ಮೂಲಕ ದುಃಖವನ್ನೂ ತರುವುದಾಗಿದೆ.
4) ಆದ್ದರಿಂದ ಈ ದುಃಖವನ್ನು ನಿವಾರಿಸುವ ಸಲುವಾಗಿ ಖಾಸಗಿ ಆಸ್ತಿಯನ್ನು ತೆಗೆದು ಹಾಕುವ ಮೂಲಕ ಲೋಕದ ದುಃಖವನ್ನು ಶಮನ ಮಾಡುವುದು ಇಂದು ಅವಶ್ಯವಿದೆ.

ಹೀಗೆ ಮಾರ್ಕ್ಸನ ಚಿಂತನೆಯಲ್ಲಿನ ತಮಗೆ ಮಹತ್ವವೆನಿಸಿದ ವಿಚಾರಗಳನ್ನು ಪ್ರಸ್ತಾಪಿಸಿ ಅಂಬೇಡ್ಕರ್ ಅವರು 'ಇವು ಮಹತ್ವವಾದವು ಎನ್ನುವುದನ್ನು ಮರೆಯಬಾರದು' ಎಂದು ಹೇಳುತ್ತಾರೆ. ಇವೇ ಅಂಶಗಳನ್ನು ಬುದ್ಧ ತತ್ವಗಳಲ್ಲಿ ಹೇಗೆ ಮೊದಲೇ ಪ್ರತಿಪಾದಿಸಲಾಗಿತ್ತು ಎನ್ನುವುದನ್ನು ವಿವರಿಸುತ್ತಾರೆ. ಬುದ್ಧ ಮತ್ತು ಮಾರ್ಕ್ಸ್ ಚಿಂತನೆಗಳ ಸಮಾನ ಅಂಶಗಳನ್ನು ಗುರ್ತಿಸುವ ಅಂಬೇಡ್ಕರ್ ಅವರು ಖಾಸಗಿ ಆಸ್ತಿಯ ನಿರ್ಮೂಲನೆಗೆ ಮಾರ್ಕ್ಸ್‌ವಾದದ ಮಾರ್ಗವನ್ನು ವಿರೋಧಿಸುತ್ತ 'ಹಿಂಸೆ'ಯಿಂದಲ್ಲದೆ ಮಾನಸಿಕ ಪರಿವರ್ತನೆಯ ಮೂಲಕ ಅಂಥ ಕಾರ್ಯ ನಿರ್ವಹಿಸಬೇಕೆಂಬುದು ಅವರ ವಾದ. ಇಲ್ಲಿ ಹಿಂಸೆ-ಅಹಿಂಸೆಯ ಚರ್ಚೆಗಿಂತ ಖಾಸಗಿ ಆಸ್ತಿ ನಿರ್ಮೂಲನೆಯ ವಿಷಯದಲ್ಲಿ ಬುದ್ಧ-ಮಾರ್ಕ್ಸ್-ಅಂಬೇಡ್ಕರ್ ಏಕರೂಪದ ಅಭಿಪ್ರಾಯ ಹೊಂದಿದ್ದರೆನ್ನುವುದನ್ನು ಗಮನಿಸಬೇಕು. ಹಿಂಸೆ ಅಥವಾ ಬಲಪ್ರಯೋಗದ ವಿಷಯ ಬಂದಾಗ ಬುದ್ಧ ಸೇನಾಪತಿ ಸಿನ್ಹಾಗೆ ಕೊಡುವ ಉತ್ತರದಲ್ಲಿ 'ಅಪರಾಧಿಗೆ ಶಿಕ್ಷೆಯಾಗಲೇಬೇಕು, ನಿರಪರಾಧಿಗೆ ರಕ್ಷಣೆ ದೊರೆಯಲೇಬೇಕು' ಎಂದು ಹೇಳಿದ್ದನ್ನೂ ಅಂಬೇಡ್ಕರ್ ಅವರೇ ದಾಖಲಿಸಿದ್ದಾರೆ. ಅವರ 'ಭಾರತದ ಕಾರ್ಮಿಕ ಮತ್ತು ಯುದ್ಧ' ಎಂಬ ಚಿಕ್ಕ ಲೇಖನದಲ್ಲಿ ಎರಡನೇ ಜಾಗತಿಕ ಮಹಾ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತ "ನಾಝಿವಾದದ ಹುಟ್ಟಡಗಿಸುವ ಸಲುವಾಗಿ ಕಾರ್ಮಿಕ ಸಮುದಾಯ ಸಜ್ಜಾಗಬೇಕಾಗಿದೆ. ಹಾಗಲ್ಲದೆ ನಾಝಿವಾದವೇನಾದರೂ ಗೆದ್ದಲ್ಲಿ ನಾಝಿ ವ್ಯವಸ್ಥೆ ಸ್ಥಾಪನೆಯಾಗುವುದು ನಿಶ್ಚಯ. ಹಾಗೆ ನಾಝಿ ವ್ಯವಸ್ಥೆ ನಿರ್ಮಾಣವಾದಲ್ಲಿ ಸ್ವಾತಂತ್ರ್ಯವೆಂಬುದು ಧೂಳಿಪಟವಾದೀತು. ಸಮಾನತೆ ಎಂಬುದು ನಾಮಾವಶೇಷವಾದೀತು... ಈ ಹೋರಾಟದ ವಿಜಯವೆಂದರೆ ಸ್ವಾತಂತ್ರ್ಯ ಹಾಗೂ ನವಸಮಾಜ ನಿರ್ಮಾಣವೆಂದು ಅರ್ಥ... ಆದ್ದರಿಂದ ಕಾರ್ಮಿಕ ಸಮುದಾಯಕ್ಕೆ "ನ್ಯೂ ಇಂಡಿಯಾ" ಮಹತ್ವದ್ದೇ ಹೊರತು 'ಕ್ವಿಟ್ ಇಂಡಿಯಾ' ಅಲ್ಲ" ಎಂದು ಕಾರ್ಮಿಕ ವರ್ಗಕ್ಕೆ ಕರೆ ಕೊಡುತ್ತಾರೆ. ಈ ವಿಷಯದಲ್ಲಿ ಅಂದು ಭಾರತ ಕಮ್ಯುನಿಸ್ಟ್ ಪಕ್ಷದ ಯುದ್ಧ ವಿರೋಧಿ, ನಾಝಿ ವಿರೋಧಿ ನೀತಿಗೆ ಅಂಬೇಡ್ಕರ್ ಅವರದ್ದು ಸಹ ಮತವಿತ್ತು ಎಂದೇ ಅರ್ಥ. ಇಲ್ಲಿ ಪರೋಕ್ಷವಾಗಿ ಹಿಂಸೆ-ಅಹಿಂಸೆಯ ಚರ್ಚೆಯನ್ನು ಅಂಬೇಡ್ಕರ್ ಅವರು ತಳ್ಳಿ ಹಾಕುತ್ತಾರೆ. ಮಾರ್ಕ್ಸ್‌ವಾದ ಎಲ್ಲಿಯೂ ಹಿಂಸೆಯ ಮೂಲಕವೇ ಸಮಾಜವಾದ ಸ್ಥಾಪನೆಯಾಗಬೇಕು ಎಂದು ಹೇಳಿಲ್ಲ. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ತಮ್ಮ ಕಮ್ಯುನಿಸ್ಟ್ ಪಾರ್ಟಿಯ ಪ್ರಣಾಳಿಕೆಯಲ್ಲಿ "ಕಮ್ಯುನಿಸ್ಟರ ಸಧ್ಯದ ಗುರಿಯು ಇತರೆಲ್ಲ ಶ್ರಮಜೀವಿ ಪಕ್ಷಗಳ ಗುರಿಯೇ ಆಗಿದೆ; ಶ್ರಮಜೀವಿಗಳನ್ನು ಒಂದು ವರ್ಗವಾಗಿ ರೂಪಿಸುವುದು, ಬೂರ್ಜ್ವಾ ವರ್ಗದ ಪರಮಾಧಿಕಾರವನ್ನು ಉರುಳಿಸುವುದು, ಶ್ರಮಜೀವಿಗಳು ರಾಜಕೀಯ ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳುವಂತೆ ಮಾಡುವುದು" ಎಂದು ಹೇಳುತ್ತಾರೆ. ಸಂಪತ್ತಿನ ಸಮಾಜೀಕರಣ ಅಥವಾ ಖಾಸಗಿ ಆಸ್ತಿಯ ನಿರ್ಮೂಲನೆಯನ್ನು 'ರಾಜ್ಯ' ವ್ಯವಸ್ಥೆಯನ್ನು ಬದಲಾವಣೆ ಮಾಡದೇ ಸಾಧ್ಯವಿಲ್ಲ. ಅದು ಶೋಷಕ ವರ್ಗದ ಮನಪರಿವರ್ತನೆಯಿಂದಲೂ ಸಾಧ್ಯವಿಲ್ಲ. ಹಾಗೆ ಮನ ಪರಿವರ್ತನೆಯಿಂದ ಸಾಧ್ಯವಿದ್ದರೆ ಗಾಂಧೀಜಿ ಅವರ ವಿರುದ್ಧ ಅಸ್ಪೃಶ್ಯರಿಗೆ ಪ್ರತ್ಯೇಕ ಮತ ಕ್ಷೇತ್ರಗಳಿಗಾಗಿ ಅಂಬೇಡ್ಕರ್ ಅವರು ನಡೆಸಿದ ಹೋರಾಟವೂ ಯಶಸ್ವಿಯಾಗಬೇಕಿತ್ತು. ಅದು ಸಾಧ್ಯವಾಗದೇ ಅಂಬೇಡ್ಕರ ಅವರು ತಮ್ಮ ಜೀವಿತ ಕಾಲದ ಕೊನೆಯವರೆಗೂ ಆ ಕೊರಗಿನಲ್ಲಿ ಬಾಳಬೇಕಾಯಿತು. ಇಂಥ ಒಂದು ವಿಷಯದಲ್ಲಿಯೇ ಹೀಗಾದರೆ ಬಂಡವಾಳಶಾಹಿ ರಾಜ್ಯ ವ್ಯವಸ್ಥೆಯ ಮೂಲಕವೇ ಅಂಬೇಡ್ಕರ್ ಅವರ 'ಪ್ರಭುತ್ವ ಸಮಾಜವಾದ' ಮಾರ್ಕ್ಸ್ ಅವರ 'ವೈಜ್ಞಾನಿಕ ಸಮಾಜವಾದ' ಮನಪರಿವರ್ತನೆಯಿಂದ ಜಾರಿ ಮಾಡಲು ಸಾಧ್ಯ ಎಂಬುದನ್ನು ಹೇಗೆ ಒಪ್ಪುವುದು.

ಅಂಬೇಡ್ಕರ್ ಅವರಿಗೆ ಮಾರ್ಕ್ಸ್‌ವಾದದ ಕುರಿತು ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ 'ಗಾಂಧಿವಾದ' ಎಂದು ಪ್ರಸ್ತಾಪವಾದಾಗ ಅಂಬೇಡ್ಕರ್ ಅವರು ಪ್ರತಿಭಟಿಸುವ ವಿಧಾನ ಒಬ್ಬ ಮಾರ್ಕ್ಸ್‌ವಾದಿಯದೇ ಆಗಿತ್ತು. ಅಸ್ಪೃಶ್ಯತೆ ಬೇಡ ಹಿಂದೂ ಧರ್ಮ ಬೇಕು ಎಂಬುದು ಹೇಗೆ ಅಂಬೇಡ್ಕರ್ ಅವರು ಪ್ರತಿಭಟಿಸುವ ಗಾಂಧೀ ತತ್ವವಾಗಿತ್ತೋ ಹಾಗೆ 'ವರ್ಗಗಳಿರಲಿ ಶೋಷಣೆ ಬೇಡ' ಎಂಬ ಗಾಂಧೀಜಿಯವರ 'ವಿಶ್ವಸ್ಥ ವ್ಯವಸ್ಥೆ'ಯ ನೀತಿಗೂ ಅಂಬೇಡ್ಕರ್ ಅವರ ವಿರೋಧವಿತ್ತು. ಆ ವಿಷಯದಲ್ಲಿ ಅಂಬೇಡ್ಕರ್ ಮಾರ್ಕ್ಸ್‌ವಾದದ ಜೊತೆ ನಿಲ್ಲುತ್ತಾರೆ. ಮಾರ್ಕ್ಸ್‌ವಾದದ 'ರಾಜ್ಯಗಳ ಪತನ'ದ ವಿಷಯದಲ್ಲಿಯೂ ಅಂಬೇಡ್ಕರ್ ಅವರಿಗೆ ಪ್ರಶ್ನೆಗಳಿದ್ದವು. ಆದರೆ ಆಶಯದ ದೃಷ್ಟಿಯಿಂದ ಮಾರ್ಕ್ಸ್‌ವಾದಿಗಳು ಅಂಬೇಡ್ಕರ್‌ವಾದಿಗಳ ಜೊತೆ ಒಂದಾಗಿ ಹೋರಾಟ ನಡೆಸಲು ಯಾವುದೇ ಅಡ್ಡಿ ಇರಲಿಲ್ಲ.

ಒಂದು ಅಂಶವನ್ನು ನಾವೆಲ್ಲ ಇಂದು ಗಂಭೀರವಾಗಿ ಪರಿಗಣಿಸಬೇಕಾಗಿದೆ. ದಲಿತರು, ರೈತರು, ಕಾರ್ಮಿಕರು ಎಲ್ಲ ಶ್ರಮಜೀವಿ ವರ್ಗ ಒಂದಾಗಿ, ಒಂದೇ ಪಕ್ಷವಾಗದಿದ್ದರೂ ಐಕ್ಯ ಹೋರಾಟದ ಮೂಲಕ ಭಾರತದ ಬಂಡವಾಳಶಾಹಿ ಪ್ರಜಾಪ್ರಭುತ್ವವನ್ನು ಈ ದೇಶದ ಜನಪ್ರಭುತ್ವವನ್ನಾಗಿ ಮಾಡಲು ಹಲವಾರು ಅವಕಾಶಗಳಿದ್ದವು. ಇದಾಗಬಾರದೆಂದೇ, ದಲಿತರಿಗೂ ಕಮ್ಯುನಿಸ್ಟರಿಗೂ ಮಧ್ಯೆ ಒಂದು ದೊಡ್ಡ ಗೋಡೆಯನ್ನು ಕಟ್ಟಲಾಗಿದೆ. ಇದು ಚಳುವಳಿಗಳ ಮೂಲಕ ಉಂಟಾದ ಭಿನ್ನತೆಯಲ್ಲ, ಹೊಣೆಗೇಡಿ ಬುದ್ಧಿಜೀವಿಗಳ ಮೂಲಕ ಎದ್ದು ನಿಂತ ಗೋಡೆ. ಮಾರ್ಕ್ಸ್ ಮತ್ತು ಅಂಬೇಡ್ಕರ್ ನಡುವಿನ ಹೆಚ್ಚಿನ ಸಹಮತಗಳನ್ನು ಉದ್ದೇಶ ಪೂರ್ವಕವಾಗಿ ಮರೆಮಾಚಿ ಅಂದಿನ ಸಂದರ್ಭದಲ್ಲಿ ಉಂಟಾದ ಕೆಲವೇ ಕೆಲವು ಭಿನ್ನಮತಗಳನ್ನು ದೊಡ್ಡದು ಮಾಡಿ, ಕಮ್ಯುನಿಸ್ಟ್ ಹಾಗು ದಲಿತ ಚಳುವಳಿಗಳ ನಡುವೆ ಕಂದಕ ನಿರ್ಮಿಸಿದ್ದು, ಶ್ರಮಜೀವಿ ವರ್ಗದ ಶತ್ರುಗಳಾದ ಜಾತಿವಾದಿ, ಕೋಮುವಾದಿ, ಬಂಡವಾಳಶಾಹಿ, ಭೂಮಾಲಿಕ ಶಕ್ತಿಗಳ ಹಿತಾಸಕ್ತಿಗೆ ಅನುಕೂಲವಾಗುವಂತೆ ಮಾಡಿದ್ದು ಒಂದು ಪೂರ್ವಯೋಜಿತ ಬೌದ್ಧಿಕ ಪಿತೂರಿ ಎಂಬುದೇ ನನ್ನ ಭಾವನೆ. ಭಿನ್ನಮತಗಳು ಅಧ್ಯಯನಕ್ಕೆ, ಸಹಮತಗಳು ಆಂದೋಲನಕ್ಕೆ ಪೂರಕವಾಗಬೇಕು. ಆದರೆ ಆಂದೋಲನ, ಜನಪರ ಚಳುವಳಿಗಳ ಆಚೆ ನಿಂತು ಬೌದ್ಧಿಕ ದೊಂಬರಾಟ ಮಾಡುವವರಿಗೆ ಯಾವುದೇ ಸಿದ್ಧಾಂತದ ಆಶಯಗಳಿಗಿಂತ ಕೂದಲು ಸೀಳುವ ಕ್ರಿಯೆಯೇ ಹೆಚ್ಚು ತೃಪ್ತಿಕೊಡುತ್ತದೆ ಮತ್ತು ಅವರ ಉದ್ದೇಶವೂ ಅದೇ ಆಗಿರುತ್ತದೆ.

ಅಂತಿಮವಾಗಿ ಪ್ರಸ್ತುತ ಎಲ್ಲ ಜನಪರ ಸಿದ್ಧಾಂತಗಳೂ, ಸಂಘಟನೆಗಳೂ ಗಂಭೀರವಾಗಿ ಪರಿಗಣಿಸಬೇಕಾಗಿರುವ ಅಂಶವೆಂದರೆ; ಸಾಮ್ರಾಜ್ಯಶಾಹಿ ಜಾಗತೀಕರಣದ ಈ ಸಂದರ್ಭದಲ್ಲಿ, ಎಲ್ಲ ಜಾತಿ, ಧರ್ಮಗಳ ಪ್ರತಿಯೊಬ್ಬ ಪ್ರಜೆಯನ್ನು ಗ್ರಾಹಕನನ್ನಾಗಿ ಪರಿವರ್ತಿಸುತ್ತಿರುವ ಈ ಸಂದರ್ಭದಲ್ಲಿ, ಕಲ್ಯಾಣರಾಜ್ಯ ಕಂಪನಿ ರಾಜ್ಯವಾಗಿ ಪರಿವರ್ತನೆಯಾಗಿರುವ ಈ ಸಂದರ್ಭದಲ್ಲಿ, ಎಲ್ಲ ಜನಪರ ಸಿದ್ಧಾಂತ, ಪಕ್ಷ ಸಂಘಟನೆಗಳ ಮೇಲೆ ತೀವ್ರವಾದ ದಾಳಿ ನಡೆಯುತ್ತಿರುವ ಈ ಸಂದರ್ಭದಲ್ಲಿ ನಮ್ಮ ಕರ್ತವ್ಯವೇನು ಎಂಬುದು. ಯಾವ ಸಿದ್ಧಾಂತ ಕ್ರಾಂತಿಕಾರಿ, ಯಾವ ಸಿದ್ಧಾಂತ ಶ್ರೇಷ್ಠ ಎಂಬುದನ್ನು ಆಮೇಲೆ ಚರ್ಚಿಸಬಹುದು. ಮೊಟ್ಟ ಮೊದಲು ಒಂದು ಜನಪರ ಪ್ರಭುತ್ವವನ್ನು ಮರುಸ್ಥಾಪಿಸುವುದು ಹೇಗೆ. ಭ್ರಷ್ಟ, ಜನವಿರೋಧಿ, ಜೀವವಿರೋಧಿ, ಸಾಮ್ರಾಜ್ಯಶಾಹಿ ಪರ ರಾಜಕಾರಣಕ್ಕೆ, ಜನಪರವಾದ, ಪ್ರಜಾಸತ್ತಾತ್ಮಕ ಮನೋಭಾವದ, ಜಾತ್ಯಾತೀತವಾದ ಒಂದು ಪರ್ಯಾಯವನ್ನು ರೂಪಿಸುವುದು ಹೇಗೆ ಎಂಬುದನ್ನು ಗಂಭೀರವಾಗಿ ಚಿಂತಿಸಬೇಕಿದೆ. ಇದೇ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗೆ ಪೂರಕವಾಗಿ ನಮ್ಮ ದೇಶದ ಕೋಮುವಾದಿ ಶಕ್ತಿಗಳು ಬೆಳೆಯುತ್ತಿವೆ. ಕೋಮುವಾದ ಹಲವಾರು ಸಂದರ್ಭದಲ್ಲಿ ತನ್ನ ಫ್ಯಾಸಿಸ್ಟ್ ಲಕ್ಷಣಗಳನ್ನು ತೋರ್ಪಡಿಸಿದೆ. ನಿಜ, ಎಲ್ಲ ಕಡೆ ಸಮಯಸಾಧಕರೂ, ಅವಕಾಶವಾದಿಗಳೂ ಇದ್ದಾರೆ. ಅವರೆಲ್ಲ ಸಂಘಟಿತರಾಗಿದ್ದಾರೆ. ನಿಜವಾಗಿ ಜನಪರ ಹೋರಾಟದಲ್ಲಿ ತೊಡಗಿಸಿಕೊಂಡವರು ಅಸಂಘಟಿತರಾಗಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸ್ಮರಣೆಯ ಈ ಸಂದರ್ಭದಲ್ಲಿ ನಾನು ಒಬ್ಬ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗಿ ಅಂಬೇಡ್ಕರ್ ಅವರ 'ಬುದ್ಧ ಅಥವಾ ಕಾರ್ಲ್ ಮಾರ್ಕ್ಸ್' ಎಂಬ ಲೇಖನದ ತಲೆಬರಹವನ್ನು 'ಬುದ್ಧ, ಕಾರ್ಲ್ ಮಾರ್ಕ್ಸ್ ಮತ್ತು ಅಂಬೇಡ್ಕರ್' ಎಂದು ಬಳಸುತ್ತೇನೆ. ಇದು ನನ್ನ ಆಶಯ ಕೂಡ. ■

ದಲಿತ ಮಹಿಳೆ ಸಮಸ್ಯೆಗಳು-ಸವಾಲುಗಳು

(33ನೇ ಪುಟದಿಂದ)

ಮಹಿಳೆಯೊಬ್ಬರು ಥಾಣೆ ಜಿಲ್ಲೆಯ ಶಹಾಪೂರ ತಾಲ್ಲೂಕಿನ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದಳು. ಆ ಮಹಿಳೆಯನ್ನು ಹಳ್ಳಿಯಲ್ಲಿ ಬೆತ್ತಲೆ ಮೆರವಣಿಗೆ ಮಾಡಲಾಯಿತು. (ಡಿ.ಡೇಲಿ. ಸೆಪ್ಟಂಬರ್-15, 1994)

2. ಕರ್ನಾಟಕದಲ್ಲಿ ಕಂಬಾಲಪಲ್ಲಿಯಲ್ಲಿ ದಲಿತ ಕೇರಿಗೆ ಬೆಂಕಿ ಹಚ್ಚಲಾಯಿತು. ಈ ಪ್ರಕರಣದಲ್ಲಿ ದಲಿತ ಮಹಿಳೆಯರ ಮೇಲೆ ಭೌತಿಕ ಮತ್ತು ಮಾನಸಿಕ ದೌರ್ಜನ್ಯವೆಸಗಲಾಯಿತು. ದಲಿತರನ್ನು ಜೀವಂತ ಸುಟ್ಟ ನಿದರ್ಶನವಿದ್ದರೂ ಸರಿಯಾದ ಸಾಕ್ಷ್ಯಾಧಾರಗಳಿಲ್ಲವೆಂದು ಅಪರಾಧಿಗಳಿಗೆ ಶಿಕ್ಷೆ ಆಗಲಿಲ್ಲ.
3. ಉತ್ತರ ಪ್ರದೇಶದ ದೌನಾಹಳ್ಳಿಯಲ್ಲಿ ಪಟೇಲ ಸಮುದಾಯದ ಜನರು ದಲಿತ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿ ಅವಮಾನಿಸಿದರು. (ಟಿಓಐ, ಜನವರಿ 24, 1994)
4. ಪುಣೆ ನಗರದ ಹೊರವಲಯದಲ್ಲಿ ಸಮವಸ್ತ್ರದಲ್ಲಿದ್ದ ಇಬ್ಬರು ಪೊಲೀಸ್ ಪೇದೆಗಳು ದಲಿತ ಮಹಿಳೆಯರನ್ನು ಅಪಹರಿಸಿ, ಅತ್ಯಾಚಾರವೆಸಗಿದರು (ಟಿಓಐ, ಜನವರಿ 29, 1993)
5. ಮಹಾರಾಷ್ಟ್ರದ ಖೈರ್ಲಾಂಜಿ ಗ್ರಾಮದಲ್ಲಿ ದಲಿತ ಮಹಿಳೆಯರಾದ ಸುರೇಖಾ ಮತ್ತು ಪ್ರಿಯಾಂಕಾ (ತಾಯಿ-ಮಗಳು)ರ ಮೇಲೆ ಅಮಾನುಷ ರೀತಿಯಲ್ಲಿ ಅತ್ಯಾಚಾರವೆಸಗಿ ಇಡೀ ಕುಟುಂಬವನ್ನು ಧ್ವಂಸ ಮಾಡಲಾಯಿತು.
6. ಬಳ್ಳಾರಿ ಜಿಲ್ಲೆಯ ವಣೇನೂರಿನಲ್ಲಿ ದಾಸರ ಜಾತಿಗೆ ಸೇರಿದ ಕೇಶವ ಎಂಬ ಹುಡುಗ ಮತ್ತು ಬೇಡರ ಜಾತಿಗೆ ಸೇರಿದ ಮರಿಯಮ್ಮ ಎಂಬ ಹುಡುಗಿಯ ಪ್ರೇಮಪ್ರಕರಣ ಕಾರಣವಾಗಿ ದಲಿತ ಮಹಿಳೆ ಎರೆಮ್ಮಳನ್ನು ಬೆತ್ತಲೆ ಮೆರವಣಿಗೆ ಮಾಡಲಾಯಿತು. ದಿನಾಂಕ:17-09-2011
7. ರಾಜಸ್ಥಾನದ ಬನ್ವಾಡಿದೇವಿ ಅತ್ಯಾಚಾರ ಪ್ರಕರಣದಲ್ಲಿ ಹೈಕೋರ್ಟ್ 'ಅತ್ಯಾಚಾರದ ಆರೋಪ ಹೊತ್ತಿರುವವರು ಮೇಲ್ಜಾತಿಯವರಾಗಿದ್ದು, ಸುಶಿಕ್ಷಿತರೂ-ಸುಸಂಸ್ಕೃತರೂ ಆಗಿರುವುದರಿಂದ ಅತ್ಯಾಚಾರ ಮಾಡಲು ಸಾಧ್ಯವಿಲ್ಲ' ಎಂದು ಹಾಸ್ಯಾಸ್ಪದ ತೀರ್ಪು ನೀಡಿರುವುದು ಒಂದು ಐತಿಹಾಸಿಕ ವ್ಯಂಗ್ಯವಾಗಿದೆ. ಇದು ನ್ಯಾಯಾಂಗ ವ್ಯವಸ್ಥೆಯಲ್ಲೂ ಜಾತಿಯ ಬೇರುಗಳು ಜೀವಂತವಾಗಿರುವುದನ್ನು ಸಾಬೀತುಪಡಿಸಿದೆ.

ಇದು ಬಯಲಿಗೆ ಬಂದ ಪ್ರಕರಣಗಳು. ಇಂಥ ಪ್ರಕರಣಗಳು ಅವ್ಯಾಹತವಾಗಿ ನಡೆಯುತ್ತಿದ್ದರೂ, ತಮ್ಮ ಮೇಲೆ ನಡೆಯುವ ಅತ್ಯಾಚಾರ/ದೌರ್ಜನ್ಯ ಪ್ರಕರಣಗಳನ್ನು ಅಧಿಕೃತವಾಗಿ ದಾಖಲಿಸಲು ಬೇಕಾಗುವ ಮಾನಸಿಕ ಬೆಂಬಲ ಹಾಗೂ ಮಾಹಿತಿಯ ಕೊರತೆಯಿಂದಾಗಿ ಅವು ಬೆಳಕಿಗೆ ಬರುತ್ತಿಲ್ಲ. ಅವಳ ಮೌನರೋಧನದಲ್ಲಿ ಅವಸಾನ ಹೊಂದುತ್ತಿವೆ. ಇದರಿಂದಾಗಿ ಅತ್ಯಾಚಾರ/ದೌರ್ಜನ್ಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ.

ಇಂಥ ಅಸಮಾನ ವ್ಯವಸ್ಥೆಯ ಬಗ್ಗೆ ಕ್ರೋಧಗೊಂಡ ಸಾವಿತ್ರಿಬಾಯಿ ಫುಲೆ ಅವರ ವಿದ್ಯಾರ್ಥಿನಿ ಮುಕ್ತಾಬಾಯಿ-"ಒಬ್ಬನಿಗೆ ಮಾತ್ರ ಸೌಲಭ್ಯಗಳು ದೊರೆಯುವ ಇತರರಿಗೆ ದೊರೆಯದಂತೆ ಮಾಡುವ ಆ ಧರ್ಮ. ಈ ಭೂಮಿಯಿಂದಲೇ ಕಣ್ಮರೆಯಾಗಲಿ ಹಾಗೂ ಅಂತಹ ಧರ್ಮದ ಕುರಿತು ಕೊಚ್ಚಿಕೊಳ್ಳುವ ಮನಸ್ಸು ಮತ್ತೆಂದು ನಮ್ಮ ಮನಸ್ಸಿನೊಳಗೆ ಬಾರದಿರಲಿ" ಎಂದು ಘೋಷಿಸುತ್ತಾಳೆ(ಮರೆತ ವಿಮೋಚಕಿ: ಸಾವಿತ್ರಿಬಾಯಿ ಫುಲೆಯ ಜೀವನ ಮತ್ತು ಹೋರಾಟ- ಕನ್ನಡಕ್ಕೆ :ಅಲೆಮಾರಿ ಪುಟ-64)

ಮೀನಾಕಂದಸಾಮಿ ಎಂಬ ಇಂಗ್ಲೀಷ್ ಬರಹಗಾರ್ತಿ. ಕವಯಿತ್ರಿ "...ಇಂದು ಬೀಫ್ ತಿನ್ನುವುದು, ಬಿಯರ್ ಕುಡಿಯುವುದು ಯಾವ ಬ್ರಾಹ್ಮಣನ ಬ್ರಾಹ್ಮಣತ್ವವನ್ನು ಕಡಿಮೆ ಮಾಡುವುದಿಲ್ಲ. ಇದು ದಲಿತ ಯುವತಿಯೊಬ್ಬಳು ತಾನು ಸಂಪೂರ್ಣ ಸಸ್ಯಾಹಾರಿ ಎಂದು ಘೋಷಿಸಿಕೊಂಡ ನಂತರವೂ ಅವಳ ಸಾಮಾಜಿಕ ಸ್ಥಾನಮಾನ ಮೊದಲಿನಂತೆಯೇ ಕೀಳಾಗಿ ಉಳಿದಿರುವಂಥದ್ದೇ ವಿಚಾರ.. ಎಂದು ಹೇಳುತ್ತಾ ಬದಲಾವಣೆ ಸಾಧ್ಯವಾಗುವ ತನಕ ಜಾತಿ ವಿನಾಶ ಎಂಬುದು ಕೇವಲ ಕಾಲಹರಣಕ್ಕಾಗಿ ಮಾಡುವ ಚರ್ಚೆಯಷ್ಟೇ ಆಗಿ ಉಳಿಯುತ್ತದೆ" ಎಂಬ ಸವಾಲನ್ನು ನಮ್ಮ ಮುಂದಿಡುತ್ತಾಳೆ. (ಲೇಖನ-ಜಾತಿಯ ಭವಿಷ್ಯ: ಮಯೂರ. ಮಾರ್ಚ್ 2011, ಪುಟ-149-150)

ದಲಿತ ಮಹಿಳೆಯರ ಸಬಲೀಕರಣದ ಬಗ್ಗೆ ಯೋಚಿಸುವುದಾದರೆ ಈ ಕೆಳಕಾಣಿಸಿದ ಅಂಶಗಳನ್ನು ಗಮನಿಸಬಹುದಾಗಿದೆ.

1. ಸಾಮಾಜಿಕ ಶೋಷಣೆ ಮತ್ತು ಅವಮಾನಕ್ಕೀಡಾದ ದಲಿತ ಮಹಿಳೆಯರಿಗೆ ಸಾಮಾಜಿಕವಾಗಿ ರಕ್ಷಣಾತ್ಮಕ ಕ್ರಮಗಳನ್ನು ಒದಗಿಸಬೇಕು.
2. ಶೋಷಿತ ವರ್ಗದ ಮಹಿಳೆಯರಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡಲು ಸಾಮುದಾಯಿಕ ಪ್ರಯತ್ನ ಮಾಡಬೇಕಾದ ಇಂದಿನ ಅವಶ್ಯಕತೆಯಾಗಿದೆ.
3. ಉಚಿತ ಉನ್ನತ ಶಿಕ್ಷಣ ಒದಗಿಸಲು ಪ್ರಯತ್ನಿಸುವುದು.
4. ಅನ್ನ, ನೀರು, ವಸತಿಯಂತಹ ಮೂಲಭೂತ ಸೌಲಭ್ಯಗಳು ದೊರೆಯುವಂತೆ ಸಂಘಟಿತ ಹೋರಾಟವನ್ನು ರೂಪಿಸುವುದು.
5. ಶೈಕ್ಷಣಿಕ, ರಾಜಕೀಯ ಹಾಗೂ ಸರ್ಕಾರಿ ಹುದ್ದೆಗಳಲ್ಲಿ ದಲಿತ ಮಹಿಳೆಯರಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿಕೊಡುವುದು.
6. ಆರೋಗ್ಯ, ಪೌಷ್ಠಿಕ ಆಹಾರ, ವಸತಿ ಸೌಲಭ್ಯ, ಆರೋಗ್ಯಕರ ಪರಿಸರ ಮುಂತಾದ ಸೌಲಭ್ಯಗಳನ್ನು ದೊರಕಿಸಿಕೊಡುವುದು.
7. ದಲಿತ ಮಹಿಳೆಯರ ಅಭಿವೃದ್ಧಿಗಾಗಿ ವಿವಿಧ ಅಭಿವೃದ್ಧಿಪರ ಯೋಜನೆಗಳನ್ನು ರೂಪಿಸುವುದು.
8. ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತರಾಗಿ ಕಾರ್ಯನಿರ್ವಹಿಸುತ್ತಿರುವ ದಲಿತ ಮಹಿಳೆಯರನ್ನು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬಿಡದೆ ಸಭೆ ನಡೆಯುವಾಗ ಬಹಳಷ್ಟು ಕಡೆ ಅವರನ್ನು ಕೋಣೆಯ ಮೂಲೆಯಲ್ಲೋ, ಬಾಗಿಲ ಹೊರಗೋ ಕೂಡಿಸಿ ಅವಮಾನಿಸಲಾಗುತ್ತಿದೆ. ಇದನ್ನು ತಡೆಗಟ್ಟಲು ಸಂಘಟಿತ ಹೋರಾಟ ರೂಪಿಸುವುದು. ಇದರಿಂದ ಅವಳಲ್ಲಿ ರಾಜಕೀಯ ಜಾಗೃತಿಯನ್ನು ಮೂಡಿಸಬಹುದಾಗಿದೆ.
9. ಶೇ.33% ಪ್ರತಿಶತದಷ್ಟು ಮಹಿಳಾ ಮೀಸಲಾತಿ ಕೊಡಬೇಕೆಂದು ಚರ್ಚಿತವಾಗುತ್ತಿರುವ ಈ ಸಂದರ್ಭದಲ್ಲಿ ಜಾತಿ-ಜನಸಂಖ್ಯಾವಾರು ಮಹಿಳಾ ಮೀಸಲಾತಿ ನೀಡಬೇಕೆಂದು ಒತ್ತಾಯಿಸುವುದು.
10. ಮಹಿಳೆಯರ ಹಾಗೂ ಶೋಷಿತ ವರ್ಗಗಳು ತಮ್ಮ ಅಧೀನದಲ್ಲಿ/ಹಿಡಿತದಲ್ಲೇ ಇರಬೇಕೆಂದು ಧರ್ಮ-ದೇವರು-ದೆವ್ವ ಹಾಗೂ ಪುನರ್ಜನ್ಮದ ಹೆಸರಿನಲ್ಲಿ ಸೃಷ್ಟಿಸಿರುವ ಸುಳ್ಳು ಸೃಷ್ಟಿಗಳನ್ನು /ಮಿಥ್ಯೆಗಳನ್ನು ವೈಚಾರಿಕ ಶಿಕ್ಷಣದ ಮೂಲಕ ಒಡೆಯುವುದು.

ಅಂದರೆ, ದಲಿತ ಮಹಿಳೆಗೆ ವೈಚಾರಿಕ ಶಿಕ್ಷಣ ನೀಡುವುದು.

ಇನ್ನು ಕೊನೆಯದಾಗಿ ಹೇಳಬೇಕೆಂದರೆ-ಇಂದಿನ ಮಹಿಳಾ ಚಳುವಳಿಗಳಲ್ಲಿ ಬಹುಸಂಖ್ಯಾತ ತಳ ಸಮುದಾಯದ ಮಹಿಳೆಯರ ಸಮಸ್ಯೆಗಳೇ ಇಲ್ಲ. ಅದಕ್ಕಾಗಿ "ಮಹಿಳಾ ಚಳುವಳಿಗಳನ್ನು ಬೂರ್ಜ್ವಾ ಮಹಿಳಾ ಚಳುವಳಿಗಳೆಂದು ಕರೆಯುವುದುಂಟು. ಏಕೆಂದರೆ, ಅವು ಮಧ್ಯಮವರ್ಗದ ಮಹಿಳಾ ಚಳುವಳಿಗಳು. ಇವು ಮಹಿಳೆಯರ ಶಿಕ್ಷಣ ಮತ್ತು ಉದ್ಯೋಗ ಅವಕಾಶಗಳಿಗಾಗಿ, ಮತದಾನದ ಹಕ್ಕುಗಳಿಗಾಗಿ, ಆಸ್ತಿ ಹಕ್ಕುಗಳಿಗಾಗಿ ಅಥವಾ ಇಂಥವೇ ಮಾದರಿಯ ಮಹಿಳಾ ವರ್ಗಗಳನ್ನು ತಲುಪಲು ಸೋತಿವೆ. ಉದಾ'ಗೆ ಇಂತಹ ಚಳುವಳಿಗಳಲ್ಲಿ ಗ್ರಾಮಾಂತರ ಪ್ರದೇಶದ ಕೆಳಜಾತಿ, ವರ್ಗಗಳ ಮಹಿಳೆಯರು ಭಾಗವಹಿಸಲು ಅಸಮರ್ಥರು. ಅದಕ್ಕಿಂತ ಹೆಚ್ಚಾಗಿ ಇವು ಕೆಳಜಾತಿ, ರೈತಾಪಿ ಮಹಿಳೆಯರ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ತೀರ ಕಡಿಮೆ ಪಾತ್ರ ವಹಿಸಿವೆ" (ದೇವದಾಸಿ ಸಂಪ್ರದಾಯ: ಡಾ.ಜೋಗನ್ ಶಂಕರ್, ಪುಟ-174)

ಕಿಶನ್ ಪಾಟ್ನಾಯಕ್ ಅವರು ಮಹಿಳಾ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಾ "ಮಹಿಳೆಗೆ ಏನು ಬೇಕು? ಸಮಾನತೆಯೋ? ಸ್ವಾತಂತ್ರ್ಯವೋ?" ಎಂದು ಕೇಳುತ್ತಾ ಇಂದಿನ ಮಹಿಳೆಗೆ ಬೇಕಾಗುವುದು ಸ್ವಾತಂತ್ರ್ಯ ಅಂದರೆ, ಲೈಂಗಿಕ ಸ್ವಾತಂತ್ರ್ಯ ಅದಕ್ಕಾಗಿ ಧ್ವನಿ ಎತ್ತಬೇಕು ಎಂದು ಹೇಳುತ್ತಾರೆ. ಆದರೆ ದಲಿತ ಮಹಿಳಾ ಸಮಸ್ಯೆಗಳು ಇತರ ಮಹಿಳಾ ಸಮಸ್ಯೆಗಳಿಗಿಂತ ತೀರಾ ಭಿನ್ನವಾಗಿದ್ದು, ಅವಳು ನಿತ್ಯ ಅತ್ಯಾಚಾರ-ದೌರ್ಜನ್ಯಕ್ಕೆ ಒಳಗಾಗುತ್ತಿರುವುದರಿಂದ, ಅವಳಿಗೆ ರಕ್ಷಣಾತ್ಮಕ ಸ್ವಾತಂತ್ರ್ಯದ ಅವಶ್ಯಕತೆ ಇದೆ. ಸದ್ಯ ಸಂದರ್ಭದಲ್ಲಿ ಅವಳಿಗೆ ವಿವಾಹ ವ್ಯವಸ್ಥೆಯೇ ಸೂಕ್ತವಾದುದು. ಹಾಗೂ ಅವಳು ಹೋರಾಡಬೇಕಿರುವುದು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ. ಆದ್ದರಿಂದ ಸದ್ಯದ ಸಂದರ್ಭದಲ್ಲಿ ಅವಳ ಆದ್ಯತೆ ಲೈಂಗಿಕ ಸ್ವಾತಂತ್ರ್ಯವಲ್ಲ; ಸಾಮಾಜಿಕ ಸಮಾನತೆ.

(ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ 'ದಲಿತ ಗೋಷ್ಠಿ'ಯಲ್ಲಿ ಮಂಡಿಸಿದ ಪ್ರಬಂಧ)

ಭ್ರಷ್ಟಾಚಾರದ ವಿರುದ್ಧ ಅಂಬೇಡ್ಕರ್

ರಘೋತ್ತಮ ಹೊ.ಬ

ಅದು 1951ರ ಪ್ರಥಮ ಸಾರ್ವತ್ರಿಕ ಚುನಾವಣೆಯ ಸಮಯ ಲೋಕಸಭೆಗೆ ನಡೆಯುತ್ತಿದ್ದ ಆ ಪ್ರಥಮ ಚುನಾವಣೆಯಲ್ಲಿ ಅಂಬೇಡ್ಕರರು ದೇಶಾದ್ಯಂತ ತಮ್ಮದೇ ರಾಜಕೀಯ ಪಕ್ಷವಾದ ಪರಿಶಿಷ್ಟ ಜಾತಿಗಳ ಒಕ್ಕೂಟದ ವತಿಯಿಂದ ದೇಶಾದ್ಯಂತ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರು. ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದಷ್ಟೆ ಅಲ್ಲ ಅವರ ಪರವಾಗಿ ಅಂಬೇಡ್ಕರರು ದೇಶಾದ್ಯಂತ ಪ್ರಚಾರವನ್ನೂ ಸಹ ಕೈಗೊಂಡಿದ್ದರು. ಅಂತಹದ್ದೆ ಒಂದು ಚುನಾವಣಾ ಪ್ರಚಾರ ಸಭೆ. 1951 ಅಕ್ಟೋಬರ್ 29ರಂದು ಪಂಜಾಬ್‌ನ ಪಟಿಯಾಲದಲ್ಲಿ ಏರ್ಪಡಿಸಿದ್ದು. ಅಂಬೇಡ್ಕರ್‌ರವರು ಅಕ್ಷರಶಃ ಅಂದು ಗುಡುಗಿದ್ದರು. ಅಂಬೇಡ್ಕರ್ ಗುಡುಗಿದ್ದರು ಎಂದಾಕ್ಷಣ ಅದು ಅಸ್ಪೃಶ್ಯತೆ ಮತ್ತು ಜಾತೀಯತೆಯ ವಿರುದ್ಧವೇ ಎಂದರ್ಥವಲ್ಲ. ಬದಲಿಗೆ ಆ ದಿನ ಅಂಬೇಡ್ಕರ್‌ರವರು ಗರಂ ಆಗಿದ್ದದ್ದು ಭ್ರಷ್ಟಾಚಾರದ ವಿರುದ್ಧ. ವಿಶೇಷವಾಗಿ ತಮ್ಮ ರಾಜಕೀಯ ಶತೃಗಳಾದ ಕಾಂಗ್ರೆಸ್ಸಿಗರು ನಡೆಸುತ್ತಿದ್ದ ಸ್ವಜನ ಪಕ್ಷಪಾತ ಮತ್ತು ಕಪ್ಪು ಹಣದ ದಂಧೆಯ ವಿರುದ್ಧ!

ಚುನಾವಣಾ ಪ್ರಚಾರದ ಆ ಸಭೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಆ ದಿನ ಇಡಿಯಾಗಿ ಮಾತನಾಡಿರುವ ಅಂಬೇಡ್ಕರ್‌ರವರು ಅದರ ಮೂಲ, ಅದರ ಆಳ, ವಿವಿಧ ಜಾತಿಗಳ, ವಿವಿಧ ವರ್ಗಗಳ ಅದರಲ್ಲಿನ ಪಾತ್ರ, ಪೋಷಣೆ ಇತ್ಯಾದಿಗಳನ್ನು ಇಂಚಿಂಚು ಬಿಡಿಸಿಟ್ಟು ಹೋಗಿದ್ದಾರೆ. ಒಂದರ್ಥದಲ್ಲಿ ಈಗಿನ ಅಣ್ಣಾ ಹಜಾರೆ, ಬಾಬಾ ರಾಮ್‌ದೇವ್ ಇತ್ಯಾದಿ ಉಗಿದ ಹಾಗೆ ಕಾಣುತ್ತದೆ! ತರಾಟೆಗೆ ತೆಗೆದುಕೊಂಡ ಹಾಗೆ ಕಾಣಿಸುತ್ತದೆ. ಅಂಬೇಡ್ಕರರ ವಿಚಾರಗಳು ವಿಸ್ಮಯ, eternal ಅನ್ನುವುದು ಆ ಕಾರಣಕ್ಕೆ!

ಹಾಗಿದ್ದರೆ ಭ್ರಷ್ಟಾಚಾರದ ವಿರುದ್ಧ ಅಂಬೇಡ್ಕರ್‌ರವರು ಅಂದು ಗುಡುಗಿದ್ದು? ಸ್ವತಃ ಅವರ ಮಾತುಗಳಲ್ಲೇ ಹೇಳುವುದಾದರೆ "ಕಳೆದ ನಾಲ್ಕು ವರ್ಷಗಳಿಂದ (ಅಂದರೆ 1947ರಿಂದ 1951ರವರೆಗೆ) ಕಾಂಗ್ರೆಸ್ ಆಡಳಿತದಲ್ಲಿದೆ ಮತ್ತು ಆ ನಾಲ್ಕು ವರ್ಷಗಳಲ್ಲಿ ಅದು ಜನರಿಗೆ ಏನು ನೀಡಿದೆ ಎಂಬುದು ನಿಮಗೆ ಖಂಡಿತ ಅರ್ಥವಾಗಿದೆ. ಹೊಟ್ಟೆಗಿಲ್ಲ, ಬಟ್ಟೆಗಿಲ್ಲ, ವಾಸಿಸಲು ಸ್ಥಳವಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಅದು ಅಂದರೆ ಕಾಂಗ್ರೆಸ್ ಜನರಿಗೆ ಒಳ್ಳೆಯದನ್ನು ನಿಡುವಲ್ಲಿ ಸಂಪೂರ್ಣ ವಿಫಲವಾಗಿದೆ. ಹೀಗಿರುವಾಗ ಅಂತಹ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಜನತೆಗೆ ಒಳ್ಳೆಯದನ್ನು ಮಾಡುತ್ತದೆಂದು ನಿರೀಕ್ಷಿಸುವುದು ಎಷ್ಟು ಸರಿ? ಕಳೆದ ನಾಲ್ಕು ವರ್ಷಗಳ ಅದರ ಆಡಳಿತದ ಅವಧಿಯಲ್ಲಿ ಶರವೇಗದಲ್ಲಿ ಬೆಳೆದಿರುವುದು ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಕಳ್ಳಸಂತೆ (black marketing) ಮಾತ್ರ! ಬ್ರಿಟಿಷರ ಆಡಳಿತಕ್ಕಿಂತ ಈಗ ಭ್ರಷ್ಟಾಚಾರ ಮತ್ತು ಇತರ ಕುಕೃತ್ಯಗಳು ಬೃಹದಾಕಾರವಾಗಿ ಬೆಳೆದಿವೆ. ಹಸಿವಿನಿಂದಾಗಿ ಜನರು ಸಾಯುತ್ತಿದ್ದಾರೆ. ಬಡವರ ಮತ್ತು ಶ್ರೀಮಂತರ ನಡುವಿನ ಅಂತರ ತೀವ್ರಗತಿಯಲ್ಲಿ ಏರುತ್ತಿದೆ. ಇಂತಹದ್ದರ ತಡೆಗೆ ಕಳೆದ ಐದು ವರ್ಷಗಳಿಂದ ಏನನ್ನೂ ಮಾಡದ ಕಾಂಗ್ರೆಸ್ ಸರ್ಕಾರ ಭವಿಷ್ಯದಲ್ಲಿ ತಾನೆ ಏನು ಮಾಡಲು ಸಾಧ್ಯ? ದಿನಕಳೆದಂತೆ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದರೆ, ಬಡವರು ಮತ್ತಷ್ಟು ಬಡವರಾಗುತ್ತಿದ್ದಾರೆ .ಈ ನಿಟ್ಟಿನಲಿ ಕಾಂಗ್ರೆಸ್

ಭ್ರಷಾಚ್ಟಾರದ ವಿರುದ್ಧದ ಅಂಬೇಡ್ಕರರ ಕಳಕಳಿಯನ್ನು ಇಂದಿನ ಯುವ ಸಮೂಹ ಅರ್ಥ ಮಾಡಿಕೊಳ್ಳಬೇಕಿದೆ. ಅವರು ಹೇಳಿರುವ ಹಾಗೆ ಕಾಳಸಂತೆಕೋರರು, ಗುತ್ತಿಗೆದಾರರು, ನಕಲಿ ಪರ್ಮಿಟ್ ಲೈಸೆನ್ಸ್‌ಗಳ ಮೂಲಕ ಕೋಟಿಗಟ್ಟಲೇ ಸಂಪಾದಿಸಿರುವ ದಗಾಕೋರರರನ್ನು ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ನಿಷೇಧಿಸಬೇಕಿದೆ. ಮುಖ್ಯವಾಗಿ ಭ್ರಷ್ಟರೆಂದು ಕಂಡುಬರುವ ಯಾರನ್ನೇ ಆಗಲಿ ಚುನಾವಣಾ ನಿಷೇಧದ ವ್ಯಾಪ್ತಿಗೆ ತರಬೇಕು. ಅಂತಹ ಭ್ರಷ್ಟರಿಂದ ಹಣಪಡೆಯುವ ರಾಜಕೀಯ ಪಕ್ಷಗಳು ಮತ್ತು ವ್ಯಕ್ತಿಗಳನ್ನು ಜನಪ್ರತಿನಿಧಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತಂದು ಹದ್ದುಬಸ್ತಿನಲ್ಲಿಡಬೇಕು. ಹಾಗೆಯೇ ಭ್ರಷ್ಟರ ವಿರುದ್ಧ ಶೀಘ್ರ ವಿಚಾರಣೆ ನಡೆಸಿ ಅಂತಹವರನ್ನು ಶಿಕ್ಷೆಗೆ ಗುರಿಪಡಿಸುವ ನಿಟ್ಟಿನಲ್ಲಿ ಸರ್ಕಾರಗಳು ಮುಂದಡಿ ಇಡಬೇಕು.

ಜನರ ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಪ್ರಾಮಾಣಿಕತೆಯ ಕೊರತೆ ಎದ್ದು ಕಾಣುತ್ತದೆ. ಪ್ರಚಾರಪ್ರಿಯತೆಯ, ಆ ಪ್ರಚಾರದ ಮೂಲಕ ತಮ್ಮ ವಯಕ್ತಿಕ ಹಿತಾಸಕ್ತಿ ಸಾಧಿಸಿಕೊಳ್ಳುತ್ತಿರುವ ವಾಸನೆ ಮೂಗಿಗೆ ಬಡಿಯುತ್ತಿದೆ. ಆದರೆ? ಅಂಬೇಡ್ಕರ್‌ರವರು ಆ ದಿನಗಳಲ್ಲಿ ಭ್ರಷ್ಟಾಚಾರದ ವಿರುದ್ಧ ದನಿ ಎತ್ತಿದ್ದು? ಅದೂ ಆಗ ತಾನೆ ಸ್ವಾತಂತ್ರ್ಯ ಬಂದು ಕೆಲವೇ ವರ್ಷಗಳಾಗಿದ್ದ ಸಂದರ್ಭದಲ್ಲಿ ಅವರು ಆ ಪರಿ ಕಾಳಜಿ ವ್ಯಕ್ತಪಡಿಸಿದ್ದು? ಓರ್ವ ನಿಜವಾದ ದೇಶಭಕ್ತ ತನ್ನ ದೇಶವಾಸಿಗಳ ಮುಂದಿನ ದುಸ್ಥಿತಿ ಕಂಡು ಚಿಂತಾಕ್ರಾಂತರಾದಂತಿತ್ತು. ತಾನು ರಚಿಸಿದ ವ್ಯವಸ್ಥೆ (ಸಂವಿಧಾನ) ತನ್ನೆದುರಲ್ಲೇ ಕುಸಿಯುತ್ತಿರುವುದರ ವಿರುದ್ಧ ವ್ಯಕ್ತಪಡಿಸಿದ ಆಕ್ರೋಶದಂತಿತ್ತು. ಕಾಕತಾಳಿಯವೆಂದರೆ ಅಂಬೇಡ್ಕರ್‌ರವರು ಅಂದು ಎತ್ತಿದ ಆ ದನಿಯನ್ನು ಮತ್ತೆ ಪುನರುಚ್ಚರಿಸಿದರೆ ಅದು ಪ್ರಸ್ತುತ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಕ್ಯಾಕರಿಸಿ

ಕೈಗೊಂಡಿರುವ ಕ್ರಮವಾದರೂ ಏನು?" ಅಂಬೇಡ್ಕರ್ ಹೀಗೆ ಖಾರವಾಗಿ ಪ್ರಶ್ನಿಸುತ್ತಾ ಹೋಗುತ್ತಾರೆ.

ಎಂತಹ ಕಟುವಾಸ್ತವ? ಶ್ರೀಮಂತಿಕೆಯನ್ನು ಕುರಿತು ಅಂಬೇಡ್ಕರ್‌ರವರು ಅಂದು ಪ್ರಶ್ನಿಸಿದ್ದು ಪ್ರಸ್ತುತ ದಿನಗಳಲ್ಲು ಕೂಡ. ಯಾಕೆಂದರೆ 5000 ಕೋಟಿಯ ಅರಮನೆಯಲ್ಲಿ ವಾಸಿಸುವ ಅಂಬಾನಿ ಒಂದೆಡೆ. ವಾಸಿಸಲು ಮನೆಯಿಲ್ಲದೆ ಬೀದಿ ಬದಿಯಲ್ಲೇ ಟೆಂಟ್‌ಗಳಲ್ಲಿ, ಕೊಳೆತ ವಾಸನೆಯ ನಡುವೆಯೇ ಚಳಿಗಾಳಿ ಎನ್ನದೆ ಬದುಕುವವರು ಮತ್ತೊಂದೆಡೆ! ಒಂದು ಹೊತ್ತಿನ ಊಟಕ್ಕೆ 1 ಲಕ್ಷ ಖರ್ಚು ಮಾಡುವವರು ಒಂದೆಡೆ, ಒಪ್ಪತ್ತಿನ ಗಂಜಿಗೂ ಪರದಾಡುವವರು ಮತ್ತೊಂದೆಡೆ. ಊಟಕ್ಕೆ ಲಕ್ಷ ಖರ್ಚು ಮಾಡುವವರು ಸೆಲೆಬ್ರಿಟಿಗಳು, ಐಕಾನ್‌ಗಳು! ಅದೇ ಬಡವರ ಬದುಕು? ರಿಯಾಲಿಟಿ ಷೋಗಳು! ಇವರಿಗೋಸ್ಕರ ಅಂದರೆ ಅಂಬಾನಿ, ಟಾಟಾಗಳಿಗೋಸ್ಕರ ಮೊನ್ನೆ ಪೆಟ್ರೋಲ್‌ದರವನ್ನು 5ರೂ ಏರಿಸಲಾಗಿದೆ. ಮತ್ತೆ 1.5ರೂ ಏರಿಸುವ ಮಾತನ್ನಾಡಲಾಗುತ್ತಿದೆ! ಅಡುಗೆ ಅನಿಲ 50ರೂ. ಡೀಸೆಲ್ 3ರೂ. ಏರಿಸಲಾಗಿದೆ! ಕಾರಣ? ಅಂಬಾನಿ ಮತ್ತಿತರರ ಕಂಪನಿಗಳು ಬಡವರು, ನಷ್ಟದಲ್ಲಿವೆ ಅಂತ! ಅದೇ ಹಳ್ಳಿಯ ಜನರಿಗೆ ಶೌಚಾಲಯ ಕಟ್ಟಿಸಲು ನೀಡುವ ಹಣವನ್ನು ಕೇವಲ 2,500 ದಿಂದ 3,500ಕ್ಕೆ ಹೆಚ್ಚಿಸಲಾಗಿದೆ! ಈ 3,500 ಹಣದಲ್ಲಿ ಅದ್ಯಾವ ತರಹದ ಶೌಚಾಲಯ ಕಟ್ಟಿಸುತ್ತಾರೋ ಸಾಕ್ಷಾತ್ ನಮ್ಮ ಪ್ರಧಾನಿಗಳೇ ಉತ್ತರಿಸಬೇಕು!

ಇನ್ನು ಭ್ರಷ್ಟಾಚಾರ? ನೆಹರೂರವರ ಮಂತ್ರಿ ಮಂಡಲದಲ್ಲಿ ಭ್ರಷ್ಟಾಚಾರ ಬೃಹದಾಕಾರಕ್ಕೆ ಬೆಳೆದಿದೆ ಎಂದು ಅಂಬೇಡ್ಕರರು ಅಂದು ಗುಡುಗಿದ್ದರು. ಆದರೆ ಇಂದು ಬೇರೆ ಏನಾಗಿದೆ? ಬೃಹತ್ 1.7 ಲಕ್ಷ ಕೋಟಿಯಂತಹ 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ಮನಮೋಹನ್ ನೇತೃತ್ವದ ಸರ್ಕಾರ ಮನಮೋಹಕವಾಗಿ ಕಂಗೊಳಿಸುತ್ತಿದೆ! ವಿಶೇಷವೇನೆಂದರೆ ಕಾಂಗ್ರೆಸ್ ಇದರ ಆರೋಪವನ್ನು ಮಿತ್ರ ಪಕ್ಷಗಳ ಮೂತಿಗೆ ವರೆಸಿ ತಾನು ಸಾಚಾ ಎಂಬಂತೆ ಕಳ್ಳಬೆಕ್ಕಿನಂತೆ ಕೂತಿದೆ. ಇದು ಹೇಗೆ ಸಾಧ್ಯ? ಪ್ರಧಾನಿಗಳ ಗಮನಕ್ಕೆ ಬಾರದೆ 1.7 ಲಕ್ಷ ಕೋಟಿಯಂತಹ ಬೃಹತ್ ಹಗರಣ ನಡೆಯಲು ಸಾದ್ಯವೇ? ಹಾಗಿದ್ದರೆ ಅಷ್ಟು ಬೃಹತ್ ಹಣವನ್ನು ನುಂಗುವ ತನಕ ಪಿ.ಎಂ ಏನು ಮಾಡುತ್ತಿದ್ದರು? ಯು.ಪಿ.ಎ ಅಧ್ಯಕ್ಷೆ ಸೋನಿಯಾ ಏನು ಮಾಡುತ್ತಿದ್ದರು? ಇದರಲ್ಲೇನೋ ಮಸಲತ್ತು ಇದೇ ಅಲ್ಲವೇ? ವಾಸ್ತವ ಹೀಗಿದ್ದರೂ ಅಣ್ಣಾ ಹಜಾರೆ ಮತ್ತು ಮಿತ್ರರು ತುಟಿಪಿಟಿಕ್ಕೆನ್ನುತ್ತಿಲ್ಲ. ನರೇಂದ್ರ ಮೋದಿಯನ್ನು ಹೊಗಳುವ ಅವರು ಹಗರಣಗಳ ಸರದಾರ ಯಡಿಯೂರಪ್ಪ ಬಗ್ಗೆ ಮೌನವಾಗುತ್ತಾರೆ! ಹಾಗಿದ್ದರೆ ಇಂತಹವರ ಹೋರಾಟದಲ್ಲಿ ಪ್ರಾಮಾಣಿಕತೆಯಾದರೂ ಎಲ್ಲಿದೆ? "ಪಕ್ಷ"ಪಾತದ ಕಮಟು ವಾಸನೆ ಮೂಗಿಗೆ ಬಡಿಯುತ್ತದೆಯಲ್ಲವೆ?



ನೆಹರೂರವರಿಂದ ಭ್ರಷ್ಟಾಚಾರದ ಸಮರ್ಥನೆ! ಮುಂದುವರಿದು ನೆಹರೂರವರ ಅಂದಿನ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಅಂಬೇಡ್ಕರ್‌ರವರು "ಕಾಂಗ್ರೆಸ್ ಸರ್ಕಾರ ಭ್ರಷ್ಟ ಸರ್ಕಾರ. ಕಾಂಗ್ರೆಸ್ ಮಂತ್ರಿಗಳು ಲಂಚಕೋರರು. ಕಳ್ಳದಂಧೆಯಿಂದ ಅವರು ಹಣ ಪಡೆಯುತ್ತಾರೆ. ಆ ಕಾರಣದಿಂದ ಅವರು ಅಂದರೆ ಕಾಂಗ್ರೆಸ್ ಮಂತ್ರಿಗಳು ಕಡು ಭ್ರಷ್ಟರು. ಮಂತ್ರಿಗಳ ಕಥೆಯೇ ಹೀಗಿರಬೇಕಾದರೆ ಅವರ ಅಧೀನ ಅಧಿಕಾರಿಗಳಿಂದ ನಾವು ನೀವು ಏನನ್ನು ನಿರೀಕ್ಷಿಸಲು ಸಾಧ್ಯ? ಬಂಡವಾಳಶಾಹಿಗಳ ಈ ದರ್ಬಾರಿನಲ್ಲಿ ಬಡ ಕಾರ್ಮಿಕರ ಸ್ಥಿತಿ ಎಂತಹದ್ದೆಂಬುದನ್ನು ನೀವೇ ಊಹಿಸಿ. ಈ ನಿಟ್ಟಿನಲಿ ಪ್ರಧಾನ ಮಂತ್ರಿಗಳು ಏನನ್ನಾದರು ಮಾಡುತ್ತಾರೆ, ಭ್ರಷ್ಟಾಚಾರ, ಲಂಚಗುಳಿತನ, ಕಾಳಸಂತೆ ಇತ್ಯಾದಿಗಳು ಶಾಶ್ವತವಾಗಿ ನಿರ್ಮೂಲನೆಯಾಗುತ್ತದೆಂದು ನಾನು ನಿರೀಕ್ಷಿಸಿದ್ದೆ. ಆದರೆ ವಿಷಾದನೀಯವೆಂದರೆ ನವದೆಹಲಿಯಲ್ಲಿ ಆಖಿಲ ಭಾರತ ಕಾಂಗ್ರೆಸ್ಸಿನ ಸಾಮಾನ್ಯ ಸಭೆಯಲ್ಲಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಪ್ರಧಾನಿ ಪಂಡಿತ್ ನೆಹರೂರವರು ಭ್ರಷ್ಟಾಚಾರ ನಮ್ಮ ದೇಶದಲ್ಲಷ್ಟೆ ಅಲ್ಲ ಬೇರೆ ಬೇರೆ ದೇಶಗಳಲ್ಲೂ ಕೂಡ ವ್ಯಾಪಕವಾಗಿದೆ. ಅದರಲ್ಲಿ ವಿಶೇಷವಾದುದು ಏನೂ ಇಲ್ಲ. ಆದ್ದರಿಂದ ನಮ್ಮ ದೇಶದಲ್ಲಿ ಅದು ಬೆಳೆಯುತ್ತಿರುವ ಈ ಪರಿಯ ಬಗ್ಗೆ ನಾವು ಅಷ್ಟಾಗಿ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದರು! ಮುಂದುವರಿದು ಅವರು ಬೇರೆ ದೇಶಗಳಿಗೆ ಹೋಲಿಸಿದರೆ ನಮ್ಮ ದೇಶದಲ್ಲಿ ಭ್ರಷ್ಟಾಚಾರ ಮತ್ತು ಲಂಚಗುಳಿತನ ಕಡಿಮೆ ಪ್ರಮಾಣದಲ್ಲಿದೆ ಎಂದರು! ತನ್ಮೂಲಕ ಅದರ ಇರುವಿಕೆಯನ್ನು ಪ್ರಧಾನಿ ನೆಹರೂವವರು ಸಮರ್ಥಿಸಿಕೊಂಡರು! ಹೀಗಿರುವಾಗ ಅಂದರೆ ಭ್ರಷ್ಟಾಚಾರ ಸ್ವಲ್ಪ ಪ್ರಮಾಣದಲ್ಲಿದೆ ಎಂದು ಸ್ವತಃ ಪ್ರಧಾನಮಂತ್ರಿಗಳೇ ಅದರ ಇರುವಿಕೆಯನ್ನು ಸಮರ್ಥಿಸಿಕೊಂಡಿರುವಾಗ ಮತ್ತು ಹಾಗೆ ಸಾರ್ವಜನಿಕವಾಗಿ ಪ್ರೋತ್ಸಾಹಿಸುತ್ತಿರುವಾಗ ಅದನ್ನು ಅವರು ನಿರ್ಮೂಲನೆ ಮಾಡುತ್ತಾರೆಂದು ನಿರೀಕ್ಷಿಸಬಹುದೇ? ನನ್ನ ಪ್ರಕಾರ ಅದು ಸ್ವಲ್ಪ ಪ್ರಮಾಣದಲ್ಲಿದ್ದರೂ ಕೂಡ ಅದನ್ನು ಮೂಲೋತ್ಪಾಟನೆ ಮಾಡಬೇಕು. ಈ ದಿಶೆಯಲ್ಲಿ ನಮ್ಮ ಪ್ರಧಾನಮಂತ್ರಿಗಳು ಏನು ಕ್ರಮ ಕೈಗೊಂಡಿದ್ದಾರೆ? ಸರ್ಕಾರದ ಅನೇಕ ಮಂತ್ರಿಗಳು ಮತ್ತು ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಮುಳುಗೇಳುತ್ತಿರುವಾಗ ಪ್ರಧಾನಮಂತ್ರಿಗಳು ಬಾಯ್ಮುಚ್ಚಿ ಕುಳಿತಿರುವುದೇಕೆ?" ಹೀಗೆ ಖಾರವಾಗಿ ಪ್ರಶ್ನಿಸುತ್ತಾ ಹೋಗುತ್ತಾರೆ ಅಂಬೇಡ್ಕರ್‌ರವರು ಅಂದಿನ ಪ್ರಧಾನಿ ನೆಹರೂರವರನ್ನು!

ಆಶ್ಚರ್ಯವೆಂದರೆ ಅಂದು ಅವರು ನೆಹರೂರವರನ್ನು ಪ್ರಶ್ನಿಸಿದ್ದು ಇಂದಿನ ಮನಮೋಹನ್‌ಸಿಂಗ್‌ರನ್ನು ಪ್ರಶ್ನಿಸಿದ ಹಾಗೆ ಕಾಣುತ್ತಿದೆಯಲ್ಲವೇ? ಅಂಬೇಡ್ಕರರ ಆ ಮಾತುಗಳನ್ನೇ ಇಲ್ಲಿ ಮತ್ತೆ ಹೇಳುವುದಾದರೆ ಭ್ರಷ್ಟಾಚಾರದ ಇಂದಿನ ಸಂದರ್ಭದಲ್ಲಿ ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಯುಪಿಎ ಅಧ್ಯಕ್ಷೆ ಸೋನಿಯಾಗಾಂಧಿಯವರು ಕೈಗೊಂಡಿರುವ ಕ್ರಮವಾದರೂ ಏನು? ಯಡಿಯೂರಪ್ಪನವರ ಸರ್ಕಾರದ ಹಗರಣಗಳ ಬಗ್ಗೆ ಬಿಜೆಪಿ ಯಾವ ಕ್ರಮ ಕೈಗೊಂಡಿದೆ? ಯಾಕೆಂದರೆ ಅದೇ ಸಭೆಯಲ್ಲಿ ಮುಂದುವರಿದು ಮಾತನಾಡುತ್ತಾ ಅಂಬೇಡ್ಕರ್‌ರವರು ಮದ್ರಾಸ್ ಪ್ರಾಂತ್ಯದ ಅಂದಿನ ಮುಖ್ಯಮಂತ್ರಿಯಾಗಿದ್ದ ಟಿ. ಪ್ರಕಾಶಂ ಎಂಬುವವರು ತಮ್ಮ ಆಡಳಿತದ ಅವಧಿಯಲ್ಲಿ ಲಂಚ ಮತ್ತು ಬೇಕಾಬಿಟ್ಟಿ ನೀಡಿದ್ದ ನಕಲಿ ಪರ್ಮಿಟ್ ಮತ್ತು ಲೈಸೆನ್ಸ್‌ಗಳ ಮೂಲಕ ಬೃಹತ್ ಮೊತ್ತದ ಸಂಪತ್ತನ್ನು ಅಕ್ರಮವಾಗಿ ಸಂಪಾದಿಸಿರುವುದನ್ನು ಎಳೆಎಳೆಯಾಗಿ ಬಿಡಿಸಿ ಹೇಳುತ್ತಾರೆ. ಹಾಗೆಯೇ ಪಂಜಾಬ್ ಮತ್ತು ಮಧ್ಯಪ್ರದೇಶಗಳ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ವ್ಯಾಪಕ ಭ್ರಷ್ಟಾಚಾರದಲ್ಲಿ ನಿರತರಾಗಿರುವುದನ್ನು ಮತ್ತು ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದನ್ನು ಸಾದ್ಯಂತವಾಗಿ ವಿವರಿಸುತ್ತಾರೆ. ಪ್ರಶ್ನೆಯೇನೆಂದರೆ ಅಂಬೇಡ್ಕರ್‌ರವರ ಅಂದಿನ ಮಾತುಗಳು ಇಂದಿನ ಯಡಿಯೂರಪ್ಪನವರತ್ತಲೂ ಬೊಟ್ಟು ಮಾಡಿದ ಹಾಗೆ ಕಾಣಿಸುತ್ತದೆಯಲ್ಲವೆ?

ಮುಂದುವರಿದು ಅಂಬೇಡ್ಕರ್‌ರವರು ಲಂಚ ಮತ್ತು ಭ್ರಷ್ಟಾಚಾರದಲ್ಲಿ ಮುಳುಗಿರುವ ಮಂತ್ರಿಗಳು ಮತ್ತು ಅಧಿಕಾರಿಗಳ ವಿರುದ್ಧ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಹೀಗೆ ಹೇಳುತ್ತಾರೆ. "ಯಾವುದೇ ಒಬ್ಬ ಮಂತ್ರಿ ಅಥವಾ ಸರ್ಕಾರಿ ಅಧಿಕಾರಿಯ ವಿರುದ್ಧ ಲಂಚದ ಆರೋಪ ಬಂದಾಗ ಸೂಕ್ತವಾದ ತನಿಖೆ ನಡೆಸಿ ಶಿಕ್ಷಿಸುವುದು ಸರ್ಕಾರದ ಕರ್ತವ್ಯ. ತನ್ನ ಮಂತ್ರಿಗಳು ಹಾಗೂ ಅಧಿಕಾರಿಗಳನ್ನು ಈ ಪರಿಯ ಲಂಚ ತೆಗೆದುಕೊಳ್ಳುವ ದಂಧೆಗೆ ನೂಕಿ, ಎಗ್ಗಾಮುಗ್ಗ ನುಂಗಲು ಬಿಟ್ಟು ಅಂತಹವರ ವಿರುದ್ಧ ಒಂದು ಸಣ್ಣ ಕ್ರಮವನ್ನೂ ಜರುಗಿಸದಿದ್ದರೆ ಅಲ್ಲಿ ಜವಾಬ್ದಾರಿಯುತ ಸರ್ಕಾರ ಅಸ್ತಿತ್ವದಲ್ಲಿರಲು ಸಾಧ್ಯವೇ? ಖಂಡಿತ ಇಲ್ಲ.

ಸರ್ಕಾರದ ಪ್ರತಿಯೊಬ್ಬ ಮಂತ್ರಿಯೂ, ಅಧಿಕಾರಿಯೂ ಹೀಗೆ ಹಣಮಾಡುವ ಧಂದೆಗೆ ಕೈಹಾಕಿದರೆ ಅಂತಹ ಸರ್ಕಾರದ ಕತೆ ಏನಾಗಬಹುದು?" ಎಂದು ಅಂಬೇಡ್ಕರ್‌ರವರು ಆತಂಕ ವ್ಯಕ್ತಪಡಿಸುತ್ತಾರೆ!. ಸಾಲದಕ್ಕೆ ಅಂತಹ ಮಂತ್ರಿಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಬಹುದೆಂಬುದಕ್ಕೆ ಲಂಚ ತೆಗೆದುಕೊಂಡ ಮಂತ್ರಿಯೊಬ್ಬನ ವಿರುದ್ಧ ಇಂಗ್ಲೆಂಡಿನ ಅಂದಿನ ಕ್ಲೆಮೆಂಟ್ ಅಟ್ಲಿ ಸರ್ಕಾರ ತೆಗೆದುಕೊಂಡ ಉಗ್ರ ಕ್ರಮವನ್ನು ಉದಾಹರಣೆಯಾಗಿ ನೀಡುತ್ತಾರೆ. ಇಂಗ್ಲೆಂಡಿನ ಪ್ರಧಾನ ಮಂತ್ರಿಗಳಿಗೆ ಅದು ಸಾಧ್ಯವಾಗಬಹುದಾದರೆ ಭಾರತದ ಪ್ರಧಾನಿಗಳಿಗೇಕೆ ಅದು ಸಾಧ್ಯವಾಗುತ್ತಿಲ್ಲ ಎಂದು ನೆಹರೂ ಮತ್ತವರ ಸರ್ಕಾರವನ್ನು ಅಂಬೇಡ್ಕರ್‌ರವರು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುತ್ತಾರೆ.

ಇಷ್ಟೆಲ್ಲದರ ನಡುವೆ, ಅಂದರೆ ಕೇಂದ್ರದ ಅಂದಿನ ಕಾಂಗ್ರೆಸ್ ಸರ್ಕಾರದ ಈ ಪರಿಯ ಭ್ರಷಾಚ್ಟಾರದ ನಡುವೆ ಅದೇ ಸರ್ಕಾರದಲ್ಲಿ ಕಾನೂನು ಸಚಿವರಾಗಿದ್ದ ಅಂಬೇಡ್ಕರ್‌ರವರು ಏನಾದರು ಕ್ರಮ ಕೈಗೊಳ್ಳಬಹುದ್ದಿತ್ತಲ್ಲವೇ ಎಂದು ಕೆಲವರಿಗಾದರೂ ಅನ್ನಿಸಬಹುದು. ಆದರೆ ಅಂಬೇಡ್ಕರ್‌ರವರು ಈ ನಿಟ್ಟಿನಲ್ಲಿ ಪ್ರಯತ್ನಿಸಿದ್ದಾರೆ. ಮತ್ತು ಅವರ ಆ ಪ್ರಯತ್ನವನ್ನು ಅಂದಿನ ಕಾಂಗ್ರೆಸ್ ಸರ್ಕಾರ ಅಕ್ಷರಶಃ ವಿಫಲಗೊಳಿಸಿದೆ! ಯಾಕೆಂದರೆ ಸ್ವತಃ ಅಂಬೇಡ್ಕರರೇ ಹೇಳುವ ಹಾಗೆ ಚುನಾವಣಾ ಪ್ರಾತಿನಿಧ್ಯ ಕಾಯಿದೆಗೆ ಸೂಕ್ತ ತಿದ್ದುಪಡಿ ತರುವ ಮೂಲಕ ಭ್ರಷ್ಟಾಚಾರ ನಿರ್ಮೂಲನೆಯ ಆ ನಿಟ್ಟಿನಲಿ ಅವರು ಕಠಿಣ ಕ್ರಮಗಳಿಗೆ ಮುಂದಾಗಿದ್ದರು. ಕಾಳಸಂತೆಕೋರರು, ಗುತ್ತಿಗೆದಾರರು, ನಕಲಿ ಪರ್ಮಿಟ್ ಲೈಸೆನ್ಸ್ ಹೊಂದಿರುವವರು, ಇತ್ಯಾದಿ ಲೂಟಿಕೋರರು ಚುನಾವಣೆಗೆ ಸ್ಪರ್ಧಿಸದಂತೆ ನಿಷೇಧಿಸಿ ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತರಲು ಅವರು ಮುಂದಾಗಿದ್ದರು.

ಆದರೆ? ಅಂಬೇಡ್ಕರರ ಈ ಪ್ರಯತ್ನಗಳನ್ನು ಸ್ವತಃ ಕಾಂಗ್ರೆಸ್ಸಿಗರೇ ಪ್ರಬಲವಾಗಿ ವಿರೋಧಿಸಿದರು! ತನ್ಮೂಲಕ ಭ್ರಷ್ಟಾಚಾರದ ಬುಡಕ್ಕೆ ಕೊಡಲಿ ಪೆಟ್ಟು ಇಡುವ ಅವರ

ಯತ್ನಕ್ಕೆ ಕಾಂಗ್ರೆಸ್ಸಿಗರು ಅಡ್ಡಗಾಲಾದರು ಎನ್ನುತ್ತಾರೆ ಅಂಬೇಡ್ಕರ್‌ರವರು! ಪ್ರಶ್ನೆ ಏನೆಂದರೆ ಪ್ರಸ್ತುತ ಈ ದಿನಗಳಲ್ಲಿ ಇಂತಹ ಕಾಂಗ್ರೆಸ್ ಲೋಕಪಾಲದಂತಹ ಕ್ರಾಂತಿಕಾರಿ ಮಸೂದೆಗೆ ಅಂಗೀಕಾರ ನೀಡುವ ಸಾಧ್ಯತೆ ಏನಾದರು ಇದೆಯೇ? ಕಾಂಗ್ರೆಸ್ಸಿನ ಇತಿಹಾಸ ಗಮನಿಸಿದರೆ ಅಂತಹ ಸಾಧ್ಯತೆ ಖಂಡಿತ ಇಲ್ಲ ಎಂದು ಘಂಟಾಘೋಷವಾಗಿ ಹೇಳಬಹುದು.

ಅಂದಹಾಗೆ ಮತ್ತೊಂದು ಅನುಮಾನ ಅಥವಾ ಪ್ರಶ್ನೆ ಈ ಸಂಧರ್ಭದಲ್ಲಿ ಮೂಡಬಹುದು ಅದೇಂದರೆ ನೆಹರೂ ನೇತೃತ್ವದ ಅಂದಿನ ಕಾಂಗ್ರೆಸ್ ಸರ್ಕಾರದಲ್ಲಿದ್ದೂ ಅಂಬೇಡ್ಕರರು ಸರ್ಕಾರದ ಆ ಭ್ರಷ್ಟಾಚಾರದಲ್ಲಿ ಪಾಲುದಾರರಾಗಲಿಲ್ಲವೇ? ಅಥವಾ ಭಾಗಿಯಾಗಲಿಲ್ಲವೇ? ಎಂದು. ಉತ್ತರವನ್ನು ಸ್ವತಃ ಅಂಬೇಡ್ಕರ್‌ರವರೇ ಸ್ಪಷ್ಟವಾಗಿ ಹೇಳಿ ಹೋಗಿದ್ದಾರೆ. ಅವರ ಆ ಹೇಳಿಕೆ ಹೀಗಿದೆ "ಹೌದು, ನಾನು ಕಾಂಗ್ರೆಸ್ ಸರ್ಕಾರದಲ್ಲಿದ್ದೆ. ಹಾಗಿದ್ದರೂ ನಾನು ಯಾವುದೇ ರೀತಿಯ ಲಂಚಕ್ಕೆ ಕೈ ಹಾಕಲಿಲ್ಲ. ಹಣ ಸಂಗ್ರಹಿಸಲು ವಾಮ ಮಾರ್ಗ ಉಪಯೋಗಿಸಲಿಲ್ಲ. ಈ ನಿಟ್ಟಿನಲಿ ನನ್ನ ವಿರುದ್ಧ ಸಣ್ಣ ಆರೋಪ ಕೂಡ ಇಲ್ಲ. ಅಂತಹದ್ದೇನಾದರೂ ಇದ್ದರೆ ಯಾರಾದರು ಅದನ್ನು ಬಹಿರಂಗಪಡಿಸಬಹುದು" ಎಂದು ಸವಾಲು ಒಡ್ಡುತ್ತಾರೆ!

ಪ್ರಶ್ನೆ ಏನೆಂದರೆ ಈಗ ಯಾರಾದರು ಮಂತ್ರಿಗಳು ಅಂತಹ ಸವಾಲು ಒಡ್ಡಲು ಸಾಧ್ಯವೇ? ಒಡ್ಡಿ ಸತ್ವ ಪರೀಕ್ಷೆಯಿಂದ ಗೆದ್ದು ಬರಲು ಸಾಧ್ಯವೇ? ಖಂಡಿತ ಇಲ್ಲ. ಅಂದಹಾಗೆ ಅಂಬೇಡ್ಕರ್‌ರವರು ಸ್ವಲ್ಪ ಅವಧಿಗೇನು ಮಂತ್ರಿಯಾಗಿದ್ದವರಲ್ಲ. ಸ್ವತಂತ್ರ ಭಾರತದಲ್ಲಿ ನಾಲ್ಕು ವರ್ಷ, ಬ್ರಿಟಿಷ್ ಸರ್ಕಾರದಲ್ಲಿ ನಾಲ್ಕು ವರ್ಷ ಒಟ್ಟು ಎಂಟು ವರ್ಷ ಮಂತ್ರಿಯಾಗಿದ್ದವರು. ಅದೂ ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಲೋಕೋಪಯೋಗಿ, ನೀರಾವರಿ, ಗಣಿ, ಕಾರ್ಮಿಕ ಇತ್ಯಾದಿ ಸಂಪನ್ಮೂಲಭರಿತ ಇಲಾಖೆಗಳ ಮಂತ್ರಿಗಳಾಗಿದ್ದವರು. ಕೋಟಿಗಟ್ಟಲೆ ಹಣ ಮಾಡುವ ಅವಕಾಶ ಅವರ ಮುಂದಿತ್ತು! ಆದರೆ? ಭ್ರಷ್ಟಾಚಾರದ ವಿರುದ್ಧ ಸದಾ ಜಾಗೃತರಾಗಿದ್ದ ಅವರು ಅದರ ವಿರುದ್ಧ ತಮ್ಮದೇ ಕಠಿಣ ನಿಲುವನ್ನು ಹೊಂದಿದ್ದರು ಎಂಬುದು ಅವರ ಈ ಮಾತು ಮತ್ತು ಪ್ರಯತ್ನಗಳಿಂದ ತಿಳಿದುಬರುತ್ತದೆ. ಹಾಗಿಲ್ಲದಿದ್ದರೆ ಅವರು ಕಾಂಗ್ರೆಸ್ ಸರ್ಕಾರದಲ್ಲಿದ್ದೂ ಅದೇ ಸರ್ಕಾರದ ಭ್ರಷ್ಟಾಚಾರದ ವಿರುದ್ಧ, ಅದರ ಮುಖ್ಯಸ್ಥರಾದ ಸಾಕ್ಷಾತ್ ನೆಹರೂರವರ ವಿರುದ್ಧವೇ ದನಿ ಎತ್ತುವುದು ಸಾಧ್ಯವಿತ್ತೆ?

ಈ ನಿಟ್ಟಿನಲ್ಲಿ ಭ್ರಷಾಚ್ಚಾರದ ವಿರುದ್ಧದ ಅಂಬೇಡ್ಕರರ ಕಳಕಳಿಯನ್ನು ಇಂದಿನ ಯುವ ಸಮೂಹ ಅರ್ಥ ಮಾಡಿಕೊಳ್ಳಬೇಕಿದೆ. ಅವರು ಹೇಳಿರುವ ಹಾಗೆ ಕಾಳಸಂತೆಕೋರರು, ಗುತ್ತಿಗೆದಾರರು, ನಕಲಿ ಪರ್ಮಿಟ್ ಲೈಸೆನ್ಸ್‌ಗಳ ಮೂಲಕ ಕೋಟಿಗಟ್ಟಲೇ ಸಂಪಾದಿಸಿರುವ ದಗಾಕೋರರನ್ನು ಚುನಾವಣೆಗಳಲ್ಲಿ ಸ್ಪರ್ಧಿಸದಂತೆ ನಿಷೇಧಿಸಬೇಕಿದೆ. ಮುಖ್ಯವಾಗಿ ಭ್ರಷ್ಟರೆಂದು ಕಂಡುಬರುವ ಯಾರನ್ನೇ ಆಗಲಿ ಚುನಾವಣಾ ನಿಷೇಧದ ವ್ಯಾಪ್ತಿಗೆ ತರಬೇಕು. ಅಂತಹ ಭ್ರಷ್ಟರಿಂದ ಹಣಪಡೆಯುವ ರಾಜಕೀಯ ಪಕ್ಷಗಳು ಮತ್ತು ವ್ಯಕ್ತಿಗಳನ್ನು ಜನಪ್ರತಿನಿಧಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತಂದು ಹದ್ದುಬಸ್ತಿನಲ್ಲಿಡಬೇಕು. ಹಾಗೆಯೇ ಭ್ರಷ್ಟರ ವಿರುದ್ಧ ಶೀಘ್ರ ವಿಚಾರಣೆ ನಡೆಸಿ ಅಂತಹವರನ್ನು ಶಿಕ್ಷೆಗೆ ಗುರಿಪಡಿಸುವ ನಿಟ್ಟಿನಲ್ಲಿ ಸರ್ಕಾರಗಳು ಮುಂದಡಿ ಇಡಬೇಕು. ಪ್ರಧಾನ, ಮುಖ್ಯಮಂತ್ರಿ, ನ್ಯಾಯಾಧೀಶ ಇತ್ಯಾದಿ ಉನ್ನತ ಹುದ್ದೆಗಳನ್ನು ಅಂತಹ ಶಿಕ್ಷೆಯ ವ್ಯಾಪ್ತಿ ಒಳಗೊಳ್ಳಬೇಕು. ಹಾಗಾದಾಗ ಮಾತ್ರ ಭ್ರಷ್ಟಾಚಾರದ ವಿರುದ್ಧದ ಅಂಬೇಡ್ಕರರ ಕಾಳಜಿ, ಕಳಕಳಿ ಸಾಕಾರಗೊಳ್ಳಲು ಸಾಧ್ಯ. ಸುಖಾಸುಮ್ಮನೆ ಗಾಂಧಿ ಮಾರ್ಗದಲ್ಲಿ ಉಪವಾಸ ಕೈಗೊಳ್ಳುವುದರಲ್ಲಲ್ಲ. ಧರಣಿ ಕೂರುವುದರಲ್ಲಲ್ಲ! ■

ಅಸ್ಪೃಶ್ಯತೆಯ ವಿರುದ್ಧದ ಹೋರಾಟದಲ್ಲಿ ಕಮ್ಯುನಿಷ್ಟರು

(29ನೇ ಪುಟದಿಂದ)

ಉತ್ಪಾದಕತೆ ಸಾಧ್ಯವಾಗುವಂತೆ ಜನರ ಆರ್ಥಿಕ ಜೀವನವನ್ನು ಯೋಜಿಸಬೇಕೆಂಬುದು ಸರ್ಕಾರದ ಹೊಣೆಗಾರಿಕೆ. ಆದರೆ ಇದರಲ್ಲಿ ಖಾಸಗಿ ಉದ್ದಿಮೆಗಳಿಗೆ ಎಲ್ಲಾ ದಾರಿಗಳನ್ನು ಮುಚ್ಚಬಾರದು ಎನ್ನುತ್ತಾರೆ. ಇಂತಹ ಆರ್ಥಿಕ ಧೋರಣೆಯ ಮುಖ್ಯ ಅಂಶಗಳು ಕೆಳಗಿನಂತಿವೆ.

1. ಸರ್ಕಾರದ ಅಧೀನದ ಕೈಗಾರಿಕೆಯಾಗಿ ಕೃಷಿ.

2. ಪ್ರಧಾನ ಕೈಗಾರಿಕೆಗಳು ಹಾಗೂ ಮೂಲಭೂತ ಕೈಗಾರಿಕೆಗಳು ಸರ್ಕಾರದ ಸ್ವಾಧೀನದಲ್ಲಿರಬೇಕು.

3. ಜೀವ ವಿಮೆ ಪ್ರತಿ ವಯಸ್ಕ ನಾಗರಿಕನಿಗೂ ಕಡ್ಡಾಯವಾಗಿರಬೇಕು ಹಾಗೂ ಅದು ಸರ್ಕಾರದ ಏಕಸ್ವಾಮ್ಯವಾಗಿರಬೇಕು.

4. ಕೃಷಿ ಭೂಮಿಯನ್ನು ರೈತರಿಂದ, ಗೇಣಿದಾರರಿಂದ ಪಡೆದುಕೊಂಡು ನಿರ್ದಿಷ್ಟ ಗಾತ್ರದ ಫಾರಂಗಳಾಗಿ ವಿಂಗಡಿಸಬೇಕು. ಅದನ್ನು ಗ್ರಾಮ ನಿವಾಸಿಗಳಿಗೆ ಯಾವುದೇ ಜಾತಿ ಬೇಧವಿಲ್ಲದೆ ಗೇಣಿ ಭೂಮಿಯಾಗಿ ನೀಡಬೇಕು. ಅದನ್ನು ಸಾಮೂಹಿಕವಾಗಿ ಸಾಗುವಳಿ ಮಾಡಬೇಕು. ಕೃಷಿ ಮಾಡಲು ಹಣ, ನೀರು, ಎತ್ತುಗಳು, ಉಪಕರಣಗಳು, ಗೊಬ್ಬರ, ಬೀಜಗಳನ್ನು ಸರ್ಕಾರ ಭೂ ಹೀನರಿಗೆ ಒದಗಿಸಬೇಕು. ಆಗ ಕೃಷಿಕೂಲಿಕಾರರಾರೂ ಇರುವುದಿಲ್ಲ.

ಡಾ.ಅಂಬೇಡ್ಕರ್‌ರವರ ಈ ಮೇಲಿನ ಆರ್ಥಿಕ ಧೋರಣೆಗಳು ದೇಶದಲ್ಲಿ ಆರ್ಥಿಕ ಅಸಮಾನತೆಗಳನ್ನು ತೊಡೆದು ಹಾಕಲು ಸೂಚಿಸಿರುವ ಉತ್ತಮ ಮಾರ್ಗಗಳಾಗಿವೆ. ಈ ಎಲ್ಲ ಧೋರಣೆಗಳನ್ನು ಮಾರ್ಕ್ಸ್‌ವಾದಿಗಳು ಒಪ್ಪುವಂತಹವು ಮತ್ತು ಸಾಧ್ಯವಿದ್ದೆಡೆ ಜಾರಿಗೆ ತಂದಿರುವಂತಹವೇ ಆಗಿದೆ. ಈ ಕ್ರಮಗಳನ್ನು ಅಂಬೇಡ್ಕರರಲ್ಲಿ ಅಪಾರ ಗೌರವವನ್ನು ಇಟ್ಟಿರುವ ದಲಿತ ಚಳುವಳಿಗಾರರು, ಸಾಹಿತಿಗಳು ಅಧ್ಯಯನ ಮಾಡಿದ್ದಾರೆಯೇ? ಅವುಗಳನ್ನು ತಮ್ಮ ಕಾರ್ಯಕ್ರಮಗಳ, ಹೋರಾಟಗಳ ಭಾಗವಾಗಿ ಮಾಡಿಕೊಂಡಿದ್ದಾರೆಯೇ ಎಂಬುದು ಒಂದು ಮುಖ್ಯ ಪ್ರಶ್ನೆ. ಹಾಗೇ ಅಂಬೇಡ್ಕರರ ಸಾಮಾಜಿಕ ಹಾಗೂ ಆರ್ಥಿಕ ಚಿಂತನೆಗಳನ್ನು ದಲಿತ ಚಳುವಳಿ ಕೈಗೆತ್ತಿಕೊಂಡಿದ್ದೇ ಆದರೆ ಮಾರ್ಕ್ಸ್‌ವಾದಿಗಳು ಹಾಗೂ ಅಂಬೇಡ್ಕರ್‌ವಾದಿಗಳು ಜೊತೆಯಾಗಿ ಕೆಲಸ ಮಾಡುವುದಕ್ಕೆ ಅಪರಿಮಿತ ಅವಕಾಶ ಲಭ್ಯವಿದೆ.

ಅಂಬೇಡ್ಕರ್‌ರವರು ಜಾತಿ ವ್ಯವಸ್ಥೆಯ ಬಗ್ಗೆ ಕಮ್ಯೂನಿಸ್ಟರ ವಿಚಾರ ಅದನ್ನು ಕೇವಲ ಆರ್ಥಿಕ ಮೂಲದ್ದಾಗಿ ನೋಡುತ್ತದೆ, ಅದರ ಸಾಮಾಜಿಕ ಸ್ವರೂಪವನ್ನು ಗುರುತಿಸುವುದಿಲ್ಲ ಎಂದು ವಾದಿಸಿದ್ದಾರೆ.

ಭಾರತದ ಹಲವು ದಲಿತ ಚಿಂತಕರು ಹಾಗೂ ಲೋಹಿಯಾವಾದಿಗಳು ಸರಿ ಸುಮಾರು ಇದೇ ಅರ್ಥದ ಆರೋಪಗಳನ್ನು ವ್ಯಾಪಕವಾಗಿ ಮಾಡಿದ್ದಾರೆ. ಮಾರ್ಕ್ಸ್‌ವಾದಿಗಳು 'ಜಾತಿ ದಮನ, ಅಸ್ಪೃಶ್ಯತೆಯ ವಿರುದ್ಧದ ಹೋರಾಟಗಳನ್ನು ವರ್ಗ ಶೋಷಣೆಯ ವಿರುದ್ಧದ ಹೋರಾಟದೊಂದಿಗೆ ಬೆಸೆಯಬೇಕು ಎಂಬುದನ್ನು ಒಪ್ಪಿಕೊಳ್ಳುತ್ತದೆ. ವರ್ಗ ಸಂಘರ್ಷ ಮುಖ್ಯವಾಗಿ ಭೂ ಸುಧಾರಣೆ ಇವು ಜಾತಿ ಪದ್ಧತಿಯನ್ನು ತಾನೇ ತೊಲಗಿಸುತ್ತದೆ ಎಂಬ ಸರಳ ತಿಳುವಳಿಕೆ ಹಲವು ಕಾಲ ಮಾರ್ಕ್ಸ್‌ವಾದಿಗಳನ್ನು ಕಾಡುತ್ತಿದ್ದಿತು. ಅದರಿಂದಾಗಿ ಅಸ್ಪೃಶ್ಯತೆ ವಿರುದ್ಧದ, ಜಾತಿ ವಿನಾಶದ ಹೋರಾಟಗಳಿಗೆ ಕೊಡಬೇಕಾದ ಗಮನವನ್ನು ನೀಡಲಿಲ್ಲ ಎಂಬುದನ್ನು ಪ್ರಾಂಜಲವಾಗಿ ಒಪ್ಪಿಕೊಂಡಿದೆ. ಇತ್ತೀಚಿನ ಕೆಲವು ವರ್ಷಗಳಲ್ಲಿ ದಲಿತರ ಸಮಸ್ಯೆಗಳನ್ನು ಅಸ್ಪೃಶ್ಯತೆಯ ಆಚರಣೆಯನ್ನು, ಬೇಧದ ಪ್ರಶ್ನೆಗಳನ್ನು ಎತ್ತಿಕೊಂಡು ಹಲವು ಹೋರಾಟಗಳನ್ನು ಮಾಡಿದೆ.

ಇತ್ತೀಚಿನ ಹೋರಾಟಗಳು ನಿರಂತರ ಅಸ್ಪೃಶ್ಯತೆಯ ವಿರುದ್ಧ ಪ್ರಚಾರ, ಭೂ ಸುಧಾರಣೆ, ಪಂಚಾಯತಿ ರಾಜ್ಯಗಳು ಅಸ್ಪೃಶ್ಯತೆಯ ಆಚರಣೆಗಳನೇಕವನ್ನು ಅಳಿಸಿ ಹಾಕಿವೆ. ಅಸ್ಪೃಶ್ಯತೆ, ಜಾತಿ ದಮನದ ವಿರೋಧವಾಗಿ ಹೋರಾಟಗಳು ಆಂಧ್ರ ಮತ್ತು ತಮಿಳುನಾಡಿನಲ್ಲಿ ಗಮನಾರ್ಹ ಮುನ್ನಡೆಯಾಗಿವೆ. ಅಸ್ಪೃಶ್ಯತಾ ವಿರೋಧಿ, ಜಾತಿ ದಮನದ ವಿರೋಧಿ ಸಮಿತಿಯನ್ನು ರಚಿಸಲಾಗಿದ್ದು ಅವುಗಳು ನೇತೃತ್ವವಹಿಸಿವೆ. ಅದರಲ್ಲಿ ಕಮ್ಯುನಿಸ್ಟರು, ಪ್ರಗತಿಪರರು, ದಲಿತ ಸಂಘಟನೆಗಳನ್ನು ಒಳಗೊಂಡಿವೆ. ಅಸ್ಪೃಶ್ಯತೆ ವಿರುದ್ಧವಾಗಿ, ದೇವಸ್ಥಾನ ಪ್ರವೇಶ, ನೀರಿನ ಹಕ್ಕಿಗಾಗಿ ಹೋರಾಟ ವ್ಯಾಪಕವಾಗಿ ನಡೆದಿವೆ. ಇದಲ್ಲದೇ ತಮಿಳುನಾಡಿನಲ್ಲಿ ಜಾತಿ ವಿಭಜಕ ಗೋಡೆಗಳನ್ನ ಒಡೆಯುವ ಚಳುವಳಿ ಅತ್ಯಂತ ಪರಿಣಾಮಕಾರಿಯಾಗಿ ನಡೆದಿದೆ. ವಿಶೇಷವಾಗಿ ತುಳಿತಕ್ಕೊಳಗಾದ ಅರುಂಧತಿಯಾರ್ ದಲಿತರ ಸಮಸ್ಯೆಗಳ ವಿರುದ್ಧ (ಮಲ ಎತ್ತುವುದರ ವಿರುದ್ಧ ಇತ್ಯಾದಿಗಳು) ತೀಕ್ಷ್ಣ ಹೋರಾಟಗಳು ನಡೆದಿವೆ. ಈ ಸಮಿತಿ ಆಂಧ್ರ, ತಮಿಳುನಾಡು ಮತ್ತಿತರೆ ರಾಜ್ಯಗಳಲ್ಲಿಯೂ ಅಸ್ಪೃಶ್ಯತೆ ಆಚರಣೆಗಳ ಕುರಿತು ವಿಶೇಷವಾದ ಪ್ರಾಯೋಗಿಕವಾದ ಅಧ್ಯಯನವನ್ನು ಮಾಡಿ ಅವುಗಳ ವಿರುದ್ಧ ಪರಿಣಾಮಕಾರಿ ಹೋರಾಟಗಳನ್ನು ನಡೆಸಿ ಯಶಸ್ವಿಯಾಗಿದೆ. ಅಲ್ಲದೆ ಆಂಧ್ರದಲ್ಲಿನ ಚಳುವಳಿಯ ತೀವ್ರತೆಯಿಂದಾಗಿಯೇ ದಲಿತ ಒಟ್ಟು ಪ್ರಶ್ನೆಗಳ ಬಗೆಗೆ ಪ.ಜಾತಿ,ಪ.ವರ್ಗಗಳ ಪ್ರಶ್ನೆಗಳಿಗಾಗಿ ಆಯೋಗ ರಚಿಸುವಂತಾಗಿದೆ. ಅಖಿಲ ಭಾರತ ಮಟ್ಟದಲ್ಲೂ ಜಾತಿ ದಮನದ ವಿರೋಧಿ , ದಲಿತ ಹಕ್ಕುಗಳ ಸಮಿತಿ ಕಾರ್ಯ ನಿರ್ವಹಿಸುತ್ತಿದ್ದು ಅಖಿಲ ಭಾರತ ಮಟ್ಟದ ಚಳುವಳಿಗೆ ಗಮನ ನೀಡುತ್ತಿದೆ. ಕರ್ನಾಟಕದಲ್ಲಿಯೂ ಹಲವಾರು ಪ್ರಶ್ನೆಗಳಲ್ಲಿ ಮಧ್ಯ ಪ್ರವೇಶ ಸಾಧ್ಯವಾಗಿದೆ. ■

ಮಾಹೀಮ ಖಾರಿ
ಲೇ: ಮಧು ಮಂಗೇಶ ಕರ್ಣಿಕ
ಅನು: ಚಂದ್ರಕಾಂತ ಪೋಕಳೆ
ಬೆಲೆ: ರೂ. 80/–

ಮರಾಠಿಯಿಂದ ಕನ್ನಡಕ್ಕೆ ಅನುವಾದಗೊಂಡ ಈ ಕಾದಂಬರಿಯಲ್ಲಿ ದೇಶದ ಬೇರೆ–ಬೇರೆ ಭಾಗಗಳಿಂದ ಬದುಕು ಅರಸುತ್ತ ಪಟ್ಟಣಗಳಿಗೆ ವಲಸೆ ಬಂದ ಸಾಮಾನ್ಯ ಜನರು ನೆಲೆಸಿರುವ ಜೋಪಡಿಗಳಲ್ಲಿ ನಡೆಯುವ ನರಕ ಸದೃಶ್ಯ ಜೀವನವನ್ನು ಮನ ಮುಟ್ಟುವಂತೆ ಸಮರ್ಥವಾಗಿ ಚಿತ್ರಿತಗೊಂಡಿದೆ. ಅಲ್ಲಿ ತಳಕು ಹಾಕಿಕೊಂಡ ಸಾಮಾಜಿಕ, ರಾಜಕೀಯ ಸಮಸ್ಯೆಗಳ ಜಟಿಲತೆ, ಹಿಂಸೆ, ಕಾಮ, ಅನೀತಿಯ ಅಮಾನುಷತೆಯ ಭೀಭತ್ಸ ಚಿತ್ರಣ ಹಾಗೂ ಕತ್ತಲ ಬದುಕಿನ ಅವರ ಅಮಾಯಕತೆಯನ್ನು ಬಂಡವಾಳ ಮಾಡಿಕೊಳ್ಳುವ ಕುಟಿಲತೆಯ ಬಗ್ಗೆ ಹೃದಯ ಸ್ಪರ್ಶಿಯಾಗಿ ತೆರೆದಿಡಲಾಗಿದೆ.

ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು



ಕದಳಿ ಹೊಕ್ಕು ಬಂದೆ
ಲೇ: ರಹಮತ್ ತರೀಕೆರೆ
ಬೆಲೆ: ರೂ. 100/–

ಈಗಾಗಲೇ ಹಲವು ಪತ್ರಿಕೆಗಳಲ್ಲಿ ಪ್ರಕಟಗೊಂಡ ಇಪ್ಪತ್ತನಾಲ್ಕು ಲೇಖನಗಳನ್ನೊಳಗೊಂಡ ಸುತ್ತಾಟದ ಕಥನಗಳ ಈ ಕೃತಿಯಲ್ಲಿ ಅನಾವರಣಗೊಂಡ ವಿಚಾರಗಳು ವೈವಿಧ್ಯಮಯ ಹಾಗೂ ಆಸಕ್ತಿದಾಯಕವಾಗಿವೆ. ತಾವು ಪ್ರವಾಸ ಮಾಡುವ ಸ್ಥಳಗಳಲ್ಲಿನ ಮಹತ್ವದ ವಿಚಾರಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಆಳವಾದ ಅಧ್ಯಯನಕ್ಕಿಳಿದು ಸಂಶೋಧಿಸಿ ದಾಖಲಿಸುವ ಲೇಖಕರ ಪರಿಶ್ರಮ ಎದ್ದು ಕಾಣುತ್ತದೆ. ಇಲ್ಲಿನ ಸ್ವಚ್ಛಂದ ಬರಹಗಳಲ್ಲಿ ವ್ಯಕ್ತಿ ಚಿತ್ರಣ, ಪ್ರಕೃತಿ ಸೌಂದರ್ಯದ ಸೊಗಸು, ಸುತ್ತಾಟದ ರೋಚಕ ಅನುಭವಗಳು ಕಣ್ಣಿಗೆ ಕಟ್ಟುವಂತೆ ಹೇರಳವಾಗಿ ವರ್ಣಿತವಾಗಿವೆ.

ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು

ಭಗವದ್ಗೀತೆ: ಸಾಮಾಜಿಕ ಆರ್ಥಿಕ ಸಂಗತಿಗಳ ಒಳನೋಟ
ಲೇ: ದಾಮೋಧರ ಡಿ.ಕೋಸಾಂಬಿ
ಅನು: ಟಿ.ಎಸ್ ವೇಣುಗೋಪಾಲ್
ಬೆಲೆ: ರೂ. ೧೫/–

ಹಿಂದೂತ್ವ–ಹಿಂದೂರಾಷ್ಟ್ರ ಸ್ಥಾಪನೆಯನ್ನು ಉದ್ದೇಶವಿರಿಸಿಕೊಂಡ ಮತೀಯ ರಾಜಕಾರಣ ಮನುಸ್ಮೃತಿ ಮತ್ತು ಭಗವದ್ಗೀತೆಗಳನ್ನು ಶಾಲಾ ಮಕ್ಕಳಿಗೆ ಬೋಧಿಸಲು ಸರ್ಕಾರಿ ಯಂತ್ರವನ್ನು ಬಳಸಿಕೊಳ್ಳಲು ಹೊರಟ ಈ ಸಂದರ್ಭದಲ್ಲಿ ನಾವು ಮೌನವಾಗಿರುವುದೆಷ್ಟು ಸೂಕ್ತ ಎಂದು ಪ್ರಶ್ನಿಸುವ ಈ ಕೃತಿ ಯುದ್ಧವನ್ನು ಸಮರ್ಥಿಸುವ, ಚರಿತ್ರೆಯನ್ನು ಮಕ್ಕಳ ತಲೆಗೆ ತುಂಬುವುದನ್ನು ಖಂಡಿಸುತ್ತದೆ.

ಪ್ರ: ಲಡಾಯಿ ಪ್ರಕಾಶನ, ಗದಗ

ಹೊಸ ಪುಸ್ತಕ

ಗೆಳತಿ ಮತ್ತೊಮ್ಮೆ ಯೋಚಿಸು
ಲೇ: ಎಚ್. ಲಕ್ಷ್ಮೀನಾರಾಯಣಸ್ವಾಮಿ
ಬೆಲೆ: ರೂ. 20/–

ಶ್ರೇಣೀಕೃತ ಜಾತಿ ವ್ಯವಸ್ಥೆಯ ನಡುವಿನಿಂದ ಎದ್ದು ನಿಂತ ಸ್ವಾಭಿಮಾನಿ ಹುಡುಗನ ಸಾಮಾಜಿಕ ಜೀವನ ಮತ್ತು ವೈಯಕ್ತಿಕ ಬದುಕನ್ನು ಬಿಡಿಸಿ ಹೇಳುವ ಇಲ್ಲಿನ ಕವನಗಳು ಎಪ್ಪತ್ತರ ದಶಕದ ದಲಿತ ಸಂಭ್ರಮವನ್ನು ನೆನಪಿಸುತ್ತವೆ. ಅಂತರಂಗದ ಸಾಮಾಜಿಕ ಸಂಕಟ ಮತ್ತು ಸ್ವಾಭಿಮಾನವನ್ನು ಧ್ವನಿಸಿ ಸಂಘರ್ಷಕ್ಕೆ ಸನ್ನದ್ಧವಾಗಿರುವಂತೆ ಕಂಡುಬಂದರೂ, ಇತರರೊಂದಿಗಿನ ಅನುಸಂಧಾನವನ್ನು ಬಯಸುವ ಆಶಯವನ್ನು ವ್ಯಕ್ತಿಪಡಿಸುವ ಗುಣಾತ್ಮಕ ಅಂಶವನ್ನು ಈ ಚೊಚ್ಚಲ ಸಂಕಲನದಲ್ಲಿ ಕಾಣಬಹುದು.

ಪ್ರ: ಫ್ರೆಂಡ್ಸ್ ಪಬ್ಲಿಕೇಷನ್ಸ್, ಬೆಂಗಳೂರು.



ಮುಳ್ಳುಗಳ್ಳಿ
ಲೇ: ರೂಪನಾರಾಯಣ ಸೋನಕರ
ಅನು: ಆರ್.ಪಿ. ಹೆಗಡೆ
ಬೆಲೆ: ರೂ. 100/–

ಹಿಂದಿ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಲೇಖಕರ ಆತ್ಮಕಥನದ ಈ ಕೃತಿಯಲ್ಲಿ ಸಮಾಜದಲ್ಲಿ ಮೇಲು ಕೀಳು ಅಸಮಾನತೆ, ಅಸ್ಪೃಶ್ಯತೆಯ ಭಾವನೆ ಇರುವವರೆಗೂ, ಸಮಾನತೆ ಹಾಗೂ ಸೋದರತೆಯ ಚರ್ಚೆ ವ್ಯರ್ಥ ಎಂಬ ಅಂಶ ನಿರೂಪಿತವಾಗಿದೆ. ದಲಿತ ಸಮಾಜವನ್ನು ಅಂಧವಿಶ್ವಾಸ, ಧಾರ್ಮಿಕ ಡಾಂಭಿಕತೆಯಿಂದ ಹೊರಗೆ ತರಲು ಕ್ರಾಂತಿಕಾರಿ ಭೂಮಿಕೆಯನ್ನು ನಿರ್ವಹಿಸಲು ಅಣಿಗೊಳಿಸಿದಂತೆ ಮೂಡಿ ಬಂದಿವೆ. ಮೇಲು ವರ್ಗದವರ ಪಿತೂರಿ, ವಂಚನೆ, ಹಾಗೂ ಶೋಷಣೆಯ ಚಿತ್ರಣ, ಸಿನಿಕತನಕ್ಕೆ ಒಳಗಾಗದೆ ದಬ್ಬಾಳಿಕೆ ಮಾಡುವವರ ಮನ ಪರಿವರ್ತನೆಗೆ ಪ್ರೇರಣೆ ತರಬಯಸುವ ಆಶಯವಿದೆ.

ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು



ಬಸವಣ್ಣನ ಕಲ್ಯಾಣ ಹುಡುಕುತ್ತಾ
ಲೇ: ಡಾ. ಲತಾ ಮೈಸೂರು
ಬೆಲೆ: ರೂ. 150/–

ಈ ಸಂಪ್ರಬಂಧದ ಕೃತಿಯಲ್ಲಿ ವಚನ ಯುಗದ ಅಭಿವ್ಯಕ್ತಿಗಳ ವಾಚನಿಕ ಹೊಸ ಸಾಧ್ಯತೆಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ನೆಡಸಲಾಗಿದೆ. ಹನ್ನೆರಡನೇ ಶತಮಾನದ ಕನ್ನಡ ಸಂಸ್ಕೃತಿಯ ಒಗ್ಗಟ್ಟುಗಳನ್ನು ಒಂದು ಧರ್ಮೋ ಮಾನವಿಕ ಸಮುಚ್ಚಯ ಹೇಗೆ ದಾಟಿತು ಎಂಬುದನ್ನು ಬಸವಣ್ಣನವರ ಮೂಲಕ ಹಲವು ಮಜಲುಗಳಲ್ಲಿ ಸಂಶೋಧಿಸಲಾಗಿದೆ. ಗೊಂದಲಗಳನ್ನು ನಿವಾರಿಸುವ ನಿಟ್ಟಿನಲ್ಲಿ ಇಲ್ಲಿಯ ಒಟ್ಟು ಚಿಂತನೆ ಬಹಳ ಸ್ಪಷ್ಟವಾಗಿದ್ದು ವಚನ ಯುಗದ ಕ್ರಾಂತಿ ಮತ್ತು ಪರ್ಯಾಯವನ್ನು ಗ್ರಹಿಸುವ ಕ್ರಮ ಅತ್ಯಂತ ಆಳವಾಗಿದೆ. ವಿಸ್ತಾರವಾಗಿದೆ.

ಪ್ರ: ಅಭಿನವ, ಬೆಂಗಳೂರು.

ತಳಸ್ತರದ ಜನಾಂಗೀಯ ಮೂಲತೆಯ ಶೋಧ

ಡಾ॥ ಬಿ.ಯು ಸುಮಾ

ಬೆಂಗಳೂರು ನಗರದ ಸಶಸ್ತ್ರ ಮೀಸಲು ಪಡೆ ಕೇಂದ್ರ ಉಪ ಪೊಲೀಸ್ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿರುವ ಎಂ. ನಂಜುಂಡಸ್ವಾಮಿ ಐ.ಪಿ.ಎಸ್, ಈಗಾಗಲೇ ಸಣ್ಣ ಕಥೆ ಅನುವಾದಗಳನ್ನು ಪ್ರಕಟಿಸಿದ್ದಾರೆ. ಶ್ರೀಯುತರು ಕೆಲವು ವರ್ಷಗಳಿಂದ ಭಾಷಾಶಾಸ್ತ್ರ, ಸುಮೇರಿಯನ್, ಅಕ್ಕಾಡಿಯನ್ ಭಾಷೆಗಳು ಹಾಗೂ ಮಂಡ್ಯ ಜಿಲ್ಲೆಯ ಮಳವಳ್ಳಿಯ ಭಾಷೆ ಮತ್ತು ನಾಗರಿಕತೆಗಳ ಬಗ್ಗೆ ಗಂಭೀರವಾದ ಸಂಶೋಧನೆಯಲ್ಲಿ ತೊಡಗಿರುವಂಥವರು. ಅದರ ಫಲವೇ – 'ಭಾರತದ ಮೊದಲ ದೊರೆಗಳು'. ಇದೊಂದು ಫಿಲಾಲಾಜಿಕಲ್ ಆದ ಅಧ್ಯಯನ. ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್‌ಗಳಲ್ಲಿ ಪದವಿಯನ್ನು ಪಡೆದ ನಂತರ ವಯಕ್ತಿಕ ಆಸಕ್ತಿಯಿಂದ ಲೇಖಕರು ಈ ಅಧ್ಯಯನಗಳನ್ನು ಕೈಗೊಂಡಿದ್ದಾರೆ. ಆದ್ದರಿಂದ ಅಕಾಡೆಮಿಕ್ ಆದ ಅರ್ಥದಲ್ಲಿ ಇವರು ಭಾಷಾಶಾಸ್ತ್ರಜ್ಞ ಅಥವಾ ಇತಿಹಾಸಕಾರರಲ್ಲ.

ಭಾರತದ ಎಲ್ಲಾ ಭಾಗಗಳಲ್ಲಿ ವಾಸಿಸುತ್ತಿರುವ ಹೊಲೆಯ ಮತ್ತು ಮಾದಿಗರ ಜನಾಂಗೀಯ ಮೂಲತೆಯನ್ನು ಶೋಧಿಸುವುದು ಈ ಕೃತಿಯ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಸಾಂಪ್ರದಾಯಿಕ ಮೂಲಗಳಾದ ಸಂಸ್ಕೃತ ಮತ್ತು ಇಂಗ್ಲಿಷನ್ನು ಬಿಟ್ಟು, ಸುಮೇರಿಯನ್, ಅಕ್ಕಾಡಿಯನ್ ಹಾಗೂ ಅಲ್ಬೇನಿಯನ್ ಭಾಷೆಗಳತ್ತ ಲೇಖಕರು ಮುಖ ಮಾಡುತ್ತಾರೆ. ಜೊತೆಗೆ ಚರಿತ್ರೆಯ ದಾಖಲೆಗಳು, ಭಾರತಕ್ಕೆ ಬಂದ ಪ್ರವಾಸಿಗಳ ಕಥನಗಳು, ಆಧುನಿಕ ಭಾಷಾಶಾಸ್ತ್ರಜ್ಞರ ಸಿದ್ಧಾಂತಗಳು ಹಾಗೂ ಭಾರತದ ಅನೇಕ ಭಾಗಗಳಲ್ಲಿ ಮಾಡಿದ ಪ್ರವಾಸದ ಅನುಭವ– ಇವುಗಳನ್ನು ಆಧರಿಸಿ ತಳಸ್ತರಗಳಿಗೆ ಒಂದು ಘನತೆಯ Ethnicity ಯನ್ನು ಕಟ್ಟುತ್ತಾರೆ. ಹೀಗೆ, ಸುಮೇರಿಯನ್ ಮತ್ತು ಅಕ್ಕಾಡಿಯನ್ ಭಾಷೆಯಲ್ಲಿ ಭಾರತೀಯ ತಳಸ್ತರದ ಪ್ರಾಚೀನ ಚರಿತ್ರೆಯನ್ನು ಹುಡುಕುವುದಕ್ಕೆ ಪ್ರೇರಕವಾದ ಮೂರು ಮುಖ್ಯ ಕೃತಿಗಳ ಬಗ್ಗೆ ಲೇಖಕರು ಆರಂಭದಲ್ಲೇ ಪ್ರಸ್ತಾಪಿಸುತ್ತಾರೆ.

ಮೊದಲನೆಯದಾಗಿ ಕನ್ನಡದ ಘನ ವಿದ್ವಾಂಸರಾದ ಆರ್. ನರಸಿಂಹಾಚಾರ್ಯರ 'History of Kannada language, ಎಂಬ ಕೃತಿ. ಈ ಕೃತಿಯಲ್ಲಿರುವ 'A connection between kannada and sumerian' ಎಂಬ ಲೇಖನದಲ್ಲಿ ಕನ್ನಡಿಗರಿಗೂ ಸುಮೇರಿಯನ್ನರಿಗೂ ಇರುವ ಸಂಬಂಧದ ಬಗ್ಗೆ ಪ್ರಸ್ತಾಪ ಬರುತ್ತದೆ. ದ್ರಾವಿಡರು ಏಷ್ಯಾ ಮೈನರ್ ಮತ್ತು ಮೆಸೊಪಟೋಮಿಯಾ ಮೂಲಕ ಹಾದು ಬಂದ ಮೆಡಿಟೇರಿಯನ್ ಜನಾಂಗ ಎಂದೂ, ಸುಮೇರಿಯನ್ನರು ಮತ್ತು ಎಲಾಮೈಟ್ಸ್ ಜೊತೆಗೆ ಸಂಬಂಧ ಇದೆ ಎಂದೂ, ಆದ್ದರಿಂದ ಬುದ್ಧಪೂರ್ವ ಯುಗಕ್ಕಿಂತ ಬಹಳ ಹಿಂದಿನಿಂದಲೇ ಎಂದರೆ ಕ್ರಿ.ಪೂ. 3000ದಲ್ಲೇ ಇವರ ನಾಗರಿಕತೆ ವ್ಯಾಪಿಸಿತ್ತು ಎಂದು ಹೇಳುತ್ತದೆ. ಅಲ್ಲದೆ, ಸುಮೇರಿಯನ್ ಭಾಷೆಯಲ್ಲಿ ದ್ರಾವಿಡ ಭಾಷೆಗಳಿಗಿರುವಂತೆಯೇ ಸ್ವರ ವ್ಯವಸ್ಥೆ ಇರುವುದನ್ನು ಲೇಖನ ಖಚಿತಪಡಿಸುತ್ತದೆ.

ಎರಡನೆಯದು, ಜರ್ಮನಿಯ ಇತಿಹಾಸಜ್ಞನಾದ ಗುಸ್ತೋವ್ ಜಪರ್ಥ್ ಅವರ ಕೃತಿಗಳು. ಗುಸ್ತೋವ್ ಜಪರ್ಥ್ ಅವರು ಪ್ರಾಚೀನ ಭಾಷೆಗಳು, ಇತಿಹಾಸ, ಪ್ರಾಚ್ಯ ಸಂಸ್ಕೃತಿಗಳು ಮತ್ತು ಇಂಡಾಲಜಿಯ ವಿದ್ವಾಂಸರು. 1867ರಲ್ಲಿ ಭಾರತಕ್ಕೆ ಬಂದ ಜಪರ್ಥ್ ಮದ್ರಾಸಿನ ಪ್ರಸಿಡೆನ್ಸಿ ಕಾಲೇಜಿನಲ್ಲಿ ಸಂಸ್ಕೃತದ ಪ್ರಾಧ್ಯಾಪಕರಾಗಿದ್ದವರು. ಭಾರತದಲ್ಲಿ ಅವರು ವಾಸಿಸಿದ 21 ವರ್ಷಗಳ ಕಾಲವೂ ಅವರು ಈ ದೇಶದ ಇತರ ಪ್ರಾಂತೀಯ ಭಾಷೆಗಳನ್ನು ಆಳವಾಗಿ ಅಧ್ಯಯನ ಮಾಡಿದವರು. 'The original inhabitants of bharata varsha or Indians, The Dravidians, (1893) ಎಂಬ ಕೃತಿ ಎಂ. ನಂಜುಂಡಸ್ವಾಮಿ ಅವರು ಮಂಡಿಸುವವಾದಕ್ಕೆ ಮುಖ್ಯವಾದ ತಳಪಾಯವನ್ನು ಒದಗಿಸುತ್ತದೆ.

ಮೂರನೆಯದಾಗಿ, ವಿನ್ಸೆಂಟ್ ಎ ಸ್ಮಿತ್ ಸಿ.ಪಿ.ಇ. ರಚಿಸಿದ 'Oxford history of India (ಸಂ. Percival spear ನಾಲ್ಕನೆ ಮುದ್ರಣ) ಕೃತಿಯಲ್ಲಿರುವ ಉಲ್ಲೇಖಗಳು. ವಿನ್ಸೆಂಟ್ ಎ ಸ್ಮಿತ್ ದ್ರಾವಿಡರನ್ನು ಮಲ್ಲ ದೊರೆಗಳು ಎಂದು ಉಲ್ಲೇಖಿಸುತ್ತಾನೆ. ಟಾಲೆಮಿಯ ದಾಖಲೆಗಳಲ್ಲಿ, ಭಾರತದ ಮಲ್ಲ ದೊರೆಗಳು ಅಲೆಗ್ಸಾಂಡರನ ಆಕ್ರಮಣವನ್ನು ವಿರೋಧಿಸಿದರು ಎಂಬ ವಿವರ ಬರುತ್ತದೆ. ಇವರೇ ಮಾಳವ ದೊರೆಗಳು ಎಂದು ಸ್ಮಿತ್ ಹೇಳುತ್ತಾನೆ.



ಲೇ: ಎಂ. ನಂಜುಂಡಸ್ವಾಮಿ ಐಪಿಎಸ್
ಬೆಲೆ: ರೂ 250/–
ಪ್ರ: ಮಾಳವ ಫಿಲೊಲಾಜಿಕಲ್ ಅಕಾಡೆಮಿ, ಬೆಂಗಳೂರು

ಈ ಕೃತಿಗಳಲ್ಲಿ ಬಂದಿರುವ ವಿವರಗಳಿಗೆ ಪೂರಕವಾಗುವಂತೆ, ಸ್ವತಃ ಲೇಖಕರೇ ಕಂಡ, ಕೇಳಿದ ಸಂಗತಿಗಳೂ ಕೂಡ ಮೇಲಿನ ಮೂರೂ ಆಕರಗಳೂ ಅತ್ಯಂತ ಗಂಭೀರವಾದ ವಿಷಯವನ್ನು ಮುಂದಿಡುತ್ತಿವೆ ಎನ್ನುವ ಅಂಶವನ್ನು ಗಟ್ಟಿಗೊಳಿಸುತ್ತಾ ಹೋಗಿದ್ದೂ ಕೂಡ ಈ ಅಧ್ಯಯನವನ್ನು ಕೈಗೊಳ್ಳಲು ಕಾರಣವಾಗುತ್ತದೆ. ಎಂ. ನಂಜುಂಡಸ್ವಾಮಿಯವರು ಮಂಡ್ಯ ಜಿಲ್ಲೆಯ ಮಳವಳ್ಳಿಯವರು. ಮಳವಳ್ಳಿಯಲ್ಲಿರುವ ಹೊಲೆಯರು, ಮಾದಿಗರು ಆಡುವ ಕನ್ನಡ ಭಾಷೆಗೂ, ಸುಮೇರಿಯನ್ ಭಾಷೆಗೂ ಸಾಮ್ಯತೆಗಳಿರುವುದನ್ನು ಗುರುತಿಸುವ ಲೇಖಕರು, ಕುತೂಹಲ ಮತ್ತು ಆಶ್ಚರ್ಯದಿಂದ ಸುಮೇರಿಯನ್ ಭಾಷೆಯ ಜಾಡು ಹಿಡಿದು ಹೋಗುತ್ತಾರೆ. ಲೇಖಕರು ಹೇಳುವುದೇನೆಂದರೆ, ಕನ್ನಡದ ಯಾವುದೇ ಶಬ್ದಕೋಶಗಳಲ್ಲೂ ಮಳವಳ್ಳಿ ತಾಲೂಕಿನ ತಳಸ್ತರದವರು ಆಡುವ ಭಾಷೆಯ ಪದಗಳ ಉಲ್ಲೇಖವಿಲ್ಲ. ಇದು ಯಾಕೆ ಹೀಗೆ ಎಂದರೆ, ಮೂಲಭೂತವಾಗಿ ಅವು ಕನ್ನಡದ ಪದಗಳೇ ಅಲ್ಲ. ಸುಮೇರಿಯನ್ ಮತ್ತು ಅದರ ಸೋದರ ಭಾಷೆಯಾದ ಅಕ್ಕಾಡಿಯನ್ ಪದಗಳು. ಗುಸ್ತೋವ್ ಜಪರ್ಥ್ ಹೇಳಿದಂತೆ ಭಾರತದ ಮೂಲನಿವಾಸಿಗಳಾದ ದ್ರಾವಿಡರಿಗೂ ಸುಮೇರಿಯನ್ನರಿಗೂ ಸಂಬಂಧ ಇತ್ತು ಎನ್ನುವುದಕ್ಕೆ 'ಈ' ಕನ್ನಡ ಜೀವಂತ ಉದಾಹರಣೆಯಾಗಿದೆ. ಮಳವಳ್ಳಿಯ ಸುತ್ತಮುತ್ತಲಿನ ಕನ್ನಡವು ಸುಮೇರಿಯನ್ನರ ಪದಗಳನ್ನು ಯಥಾವತ್ತಾಗಿ ಉಳಿಸಿಕೊಂಡಿಲ್ಲವಾದರೂ, ವ್ಯತ್ಯಸ್ಥಗೊಂಡ ಭಾಷಿಕ ರೂಪಗಳು ಇಂದಿಗೂ ಬಳಕೆಯಾಗುತ್ತಿವೆ ಎಂದು ಹೇಳಿ, ಕೆಲವು ಉದಾಹರಣೆಗಳನ್ನು ಲೇಖಕರು ನೀಡುತ್ತಾರೆ.

1. Henzer ಎಂದರೆ Small child, a low social class, baby. ಈಗಲೂ ಮಳವಳ್ಳಿ ಕಡೆಯ ತಳಸ್ತರದವರ ಚಿಕ್ಕಮಕ್ಕಳಿಗೆ ಸಮಾಜದಲ್ಲಿ ತಮಗಿಂತ ಕೆಳಸ್ತರದಲ್ಲಿ ಇರುವವರಿಗೆ 'ಹೆಂಝು' ಎನ್ನುತ್ತಾರೆ. ಉದಾ: "ಹೆಂಝು, ಹಟ್ಟಿಗೆ ಬರ್ದೆ ಎಲ್ಲಿಗ್ಹ ಹೋಗಿದ್ದೆ?"

2. ZA ಎಂದರೆ bead, gem ಎಂದು ಅರ್ಥ. ಮಳವಳ್ಳಿ ಕನ್ನಡದಲ್ಲಿ ಹೊಳೆಯುವ ವಸ್ತುಗಳನ್ನು ಎಂದರೆ, ಮುತ್ತು, ರತ್ನಗಳನ್ನು ಸೂಚಿಸುವುದಕ್ಕೆ ಝಗ ಝಗ ಎನ್ನುತ್ತಾರೆ.
3. ZA ಎಂದರೆ man ಎಂದೂ ಅರ್ಥವಿದೆ. ಅದು ಮಳವಳ್ಳಿ ಕನ್ನಡದಲ್ಲಿ ಮನುಷ್ಯನನ್ನು ಸೂಚಿಸುವುದಕ್ಕೆ 'ಏನ್ಝ' (ಏನು ಮನುಷ್ಯನೆ) ಎಂದು ಬಳಕೆಯಾಗುತ್ತದೆ.
4. ZAE ಎಂದರೆ, ಸುಮೇರಿಯನ್ ಭಾಷೆಯಲ್ಲಿ YOU ಎಂದು ಅರ್ಥ. ಮಳವಳ್ಳಿ ಕನ್ನಡದಲ್ಲಿ ಜೆ, ಜ, ಜೊ, ಜೋ್ಯ ಎಲ್ಲವೂ 'ನೀನು' ಎಂಬ ಅರ್ಥದಲ್ಲೇ ಬಳಕೆಯಾಗುತ್ತದೆ.
5. ZI ಎಂದರೆ cut. ಮಳವಳ್ಳಿಯ ತಳಸ್ತರದವರು 'ಜೀರ್' ಎಂಬ ಪದವನ್ನು 'ಕತ್ತರಿಸು' ಅನ್ನುವುದಕ್ಕೆ ಬಳಸುತ್ತಾರೆ.
6. Marmah ಎಂದರೆ ಪೂಜಾರಿ. ಮರ್ಮಾದಯ್ಯ, ಮರ್ಮಾದ ಎಂಬ ಹೆಸರುಗಳು ಇಂದಿಗೂ ಬಳಕೆಯಲ್ಲಿವೆ. ಸಾಮಾನ್ಯವಾಗಿ ತಳಸ್ತರದವರು ಎಂದಿಗೂ ತಮ್ಮ ಆಚರಣೆಗಳಿಗೆ ಹೊರಗಿನಿಂದ ಪೂಜಾರಿಗಳನ್ನು ಕರೆಸಿಕೊಳ್ಳುವುದಿಲ್ಲ. (ಪು.XXV-XXVI)
7. 'ದಿಂಗಿರ್' ಎಂದರೆ ದೇವರು. ಮಳವಳ್ಳಿಯ ತಳಸ್ತರದವರು ಅದನ್ನು ದಿಂಡರ್ ಎಂದು ಬಳಸುತ್ತಾರೆ. "ನಿಂಗೆ ದಿಂಡರ್ ಕಂಡ್ರೆ ನಡ್ಕ ಇಲ್ವಜ?" (ಪು. 30).

ಇಲ್ಲಿ ಅವರು ನೀಡಿರುವ ಉದಾಹರಣೆಗಳೆಲ್ಲವೂ ಮಳವಳ್ಳಿಯ ಕಡೆಯಲ್ಲಿ ತಳಸ್ತರದವರು ಬಳಸುವ ಭಾಷೆಯಲ್ಲಿ ದೊರೆಯುವ ಪದಗಳು. ಈ ಸುಮೇರಿಯನ್ ಭಾಷೆಗೂ ಇಲ್ಲಿನ ಭಾಷೆಗೂ ಇರುವ ಸಾಮ್ಯತೆಯನ್ನು ಕಂಡ ಲೇಖಕರು, 'Oxford history of India' ದಲ್ಲಿ ಉಲ್ಲೇಖವಾಗಿರುವಂತೆ ತಳಸ್ತರದವರನ್ನು 'ಮಾಳವ ದೊರೆಗಳು' ಎಂದೇ ಕೃತಿಯ ಉದ್ದಕ್ಕೂ ಉಲ್ಲೇಖಿಸುತ್ತಾರೆ.

ತಳಸ್ತರದವರು ಮೂಲತಃ ಬೆಟ್ಟದ ನಿವಾಸಿಗಳಾಗಿದ್ದರು ಎನ್ನುವುದು ಲೇಖಕರ ಅಭಿಪ್ರಾಯ. ಏಕೆಂದರೆ, ಸುಮೇರಿಯನ್ ಭಾಷೆಯಲ್ಲಿ 'ಮಾ' ಎಂದರೆ 'ಶ್ರೇಷ್ಠ' ಎಂದರ್ಥ. 'ಮಾತಂಗ' ಎಂದರೆ ಶ್ರೇಷ್ಠವಾದ ಬೆಟ್ಟದವ ಎಂದು ಅರ್ಥ. ಕಾಳಿದಾಸ ರಚಿಸಿದ್ದಾನೆ ಎಂದು ಹೇಳಲ್ಪಡುವ ಶ್ಯಾಮಲಾ ದಂಡಕದಲ್ಲಿ ಬರುವ 'ಮಾತಂಗ ಕನ್ಯಾಂ ಮನಸಾಸ್ಮರಾಮಿ' ಎನ್ನುವ ವಾಕ್ಯವು ಬೆಟ್ಟದ ಮೇಲೆ ವಾಸಿಸುತ್ತಿದ್ದ ಸಮುದಾಯದವರು ಸಾಮಾಜಿಕವಾಗಿ ಪ್ರತ್ಯೇಕತರಾಗಿದ್ದಿರಲಿಲ್ಲ ಎಂಬುದನ್ನು ಈ ವಾಕ್ಯ ಸೂಚಿಸುತ್ತದೆ. ಹೀಗೆ, ತಳಸ್ತರದವರು ಆಡುವ ಭಾಷೆಯಲ್ಲಿರುವ ಪದಗಳ ವಿವರಣೆ ಈ ಸಮುದಾಯದವರನ್ನು ಸೂಚಿಸುವುದಕ್ಕೆ ಇತರೆ ಸಮುದಾಯ, ಜಾತಿಯವರು ಬಳಸುವ ಪದಗಳು – ಇವುಗಳನ್ನು ಕೇವಲ ಮಳವಳ್ಳಿಯ ಸುತ್ತಮುತ್ತಲಿನ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸದೆ, ಭಾರತದ ಇತರ ಪ್ರಾಂತ್ಯಗಳಲ್ಲಿ ಬಳಕೆಯಾಗಿರುವ ಭಾಷೆ/ಪದ ಗಳಿಗೂ ಅನ್ವಯಿಸಿ ವಿವರಿಸುತ್ತಾರೆ. ಇದರ ಮೂಲಕ ಹೊಲೆಯರ ಬಗ್ಗೆ ಎರಡು ರೀತಿಯ Ethnicity ಯನ್ನು ಕಟ್ಟುತ್ತಾರೆ. ಒಂದು ಹೊಲೆಯರು ಈ ನಾಡನ್ನು ಆಳಿದ ಪ್ರಭುಗಳು ಎಂದು, ಮತ್ತೊಂದು ಜಮೀನ್ದಾರರು ಎಂದು.

ಪುಸ್ತಕ ಅವಲೋಕನ

ಸುಮೇರಿಯನ್ ಭಾಷೆಯಲ್ಲಿ 'ಪಲಿಲ್' (palil) ಎಂದರೆ foremost, first, pre-eminent ಎಂದು ಅರ್ಥ (ಪು.198). ಪ್ರಾಚೀನ ದ್ರಾವಿಡ ಭಾಷೆಯ ಪಲ್ಲು, ಪಲ್ಲ ಎಂಬ ಪದದಿಂದ ಪಲ್ಲವ ಪದದ ನಿಷ್ಪತ್ತಿಯಾಗಿದೆ. ಪಲ್ಲು, ಪಲ್ಲ, ಹಲ್ಲು, ಹಲ ಎಂದರೆ ರೈತರ ನೇಗಿಲು ಎಂದು ಅರ್ಥ. ಈಗಲೂ ನೇಗಿಲು ಹಿಡಿದು ಹೂಲ ಉಳುವವನನ್ನು ಪಲ್ಲವ, ಹಲವ ಎಂದು ಕನ್ನಡದಲ್ಲಿ ಕರೆಯುತ್ತಾರೆ (ಪು. 68). ಹಿಂದೆ ರೈತರಾಗಿದ್ದು, ಉತ್ತು ಬಿತ್ತು ಬೆಳೆ ಬೆಳೆದು, ಸಮೃದ್ಧಿಯಿಂದ ಬಾಳುತ್ತಿದ್ದವರೇ ಪಲ್ಲವರು. Land ಇದ್ದವನು ಹೇಗೆ landlord ಆದನೋ, ಹಾಗೆ ಹೊಲ ಇದ್ದವನು ಹೊಲೆಯನಾದ (ಪು. 68). ಪಲ್ಲವರು ಮುಂದೆ ಕಳ್ಳರ್, ಪಲ್ಲಿ, ಪಿಲ್ಲಾಲ ಜಾತಿಯವರಾಗಿ ತಮಿಳು ನಾಡಿನಲ್ಲಿ ಉಳಿದರು. ಅವರ ರಕ್ತಸಂಬಂಧಿಗಳೂ, ಕರುನಾಡನ್ನು ಆಳುತ್ತಿದ್ದವರು ಹೊಲ್ಲರು, ಹೊಲೆಯರು ಎನಿಸಿಕೊಂಡರು (ಪು.193).

ಕನ್ನಡನಾಡನ್ನು ಆಳಿದ ಬಾದಾಮಿಯ ಚಾಲುಕ್ಯರು ಕೂಡ ಹೊಲೆಯರು, ಛಲವಾದಿಗಳು ಎಂಬುದು ಲೇಖಕರ ಅಭಿಪ್ರಾಯ. ಕರ್ನಾಟಕದ ರಾಜ್ಯದ ಬಾಗಲಕೋಟೆ ಪಟ್ಟಣದಲ್ಲಿ ಹೋಳಿ ಹಬ್ಬಕ್ಕೆ ಕಾಮನ ಸುಡಲು ಬೇಕಾಗುವ ಬೆಂಕಿಯನ್ನು ಅಲ್ಲಿನ ದೇಸಾಯಿ ಯವರು (ರಾಜ ಕುಟುಂಬದವರು) ಮೆರವಣಿಗೆಯಲ್ಲಿ ಹೋಗಿ ಹೊಲೆಯರ ಮನೆಯಿಂದ ತರುವ ಸಂಪ್ರದಾಯವಿದೆ. ಆ ರೀತಿ ಬೆಂಕಿ ಕೊಡುವ ಹೊಲೆಯರ ಕುಟುಂಬದ ಕೆಲವರು "ತಾವು ಹಿಂದೆ ಈ ನಾಡನ್ನು ಆಳುತ್ತಿದ್ದ ದೊರೆಗಳಾಗಿದ್ದೆವು. ಸಾಪೇಗ ಛಲವಾದಿಗಳು ಎನಿಸಿಕೊಳ್ಳುತ್ತೇವೆ. ಹಿಂದೆ ನಮ್ಮನ್ನು ಚಾಲುಕ್ಯರು ಎನ್ನುತ್ತಿದ್ದರು" ಎನ್ನುತ್ತಾರೆ (ಪು. 124).

ಈ ಮಾತನ್ನು ನಿಜ ಎಂದು ಒಪ್ಪುವ ಲೇಖಕರು, ಅದನ್ನು ಸಮರ್ಥಿಸಲು ಅಗತ್ಯವಾದ ಮಾಹಿತಿಯನ್ನು ನೀಡುತ್ತಾರೆ. ಹಂಪಿ ವಿಶ್ವವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿರುವ ಎನ್. ಲಕ್ಷ್ಮೀನಾರಾಯಣರಾವ್ ಅವರ 'ಪುಲಕೇಶಿ ಎಂಬ ಹೆಸರಿನ ಅರ್ಥವೇನು?' ಎಂಬ ಕೃತಿಯಲ್ಲಿನ ವಿವರಗಳನ್ನು ಇದಕ್ಕೆ ಪೂರಕವಾಗಿ ಬಳಸಿಕೊಳ್ಳುತ್ತಾರೆ. ಲಕ್ಷ್ಮೀನಾರಾಯಣರಾವ್ ಅವರ ಪ್ರಕಾರ 'ಪೊಲೆ' ಮತ್ತು 'ಕೇಶಿ' ಎಂಬುದು ಶುದ್ಧ ಕನ್ನಡ ಶಬ್ದಗಳ ಸಂಯೋಗದಿಂದ ಉಂಟಾದ ಪದ. ಇದರ ಪೂರ್ವಾರ್ಧವಾದ 'ಪೊಲೆ' ಎಂಬುದಕ್ಕೆ 'ಹೊಲೆಮನೆ' ಎಂದರ್ಥ. ಕೇಶಿ ಎಂಬುದು 'ಕೇಶವ' ಎಂಬ ಹೆಸರಿನ ಸಂಕ್ಷಿಪ್ತ ರೂಪ (ಪು.125). ಚಾಲುಕ್ಯ ವಂಶದ ಮೂಲ ಪುರುಷರು ಒಕ್ಕಲು ಮಕ್ಕಳಾಗಿದ್ದರು, ನಂತರ ರಾಜರಾಗಿ ಬೆಳೆದರು. ಚಾಲುಕ್ಯರು ಕೃಷಿಕ ಕುಟುಂಬದವರು ಎಂಬ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ 'ಪೊಲಕೇಸಿನ್' ಹೆಸರು ನೆರವಾಗುತ್ತದೆ. ಪೊಲ (ಹೊಲ) + ಕೇಸಿನ್(ಚೇಸಿನ್), ಮಾಡುವವನು (ಪು.126).

ಹೊಯ್ಸಳ ರಾಜವಂಶದ ಬಗ್ಗೆಯೂ ಇದೇ ರೀತಿಯ ವಾಸ್ತವವಿದೆ ಎಂದು ಹೇಳಿ, ಅದಕ್ಕೊಂದು ವಿವರಣೆಯನ್ನು ನೀಡುತ್ತಾರೆ: ಸುಮೇರಿಯನ್ ಭಾಷೆಯಲ್ಲಿ 'sala' ಎಂದರೆ 'plough' ನೇಗಿಲು ಎಂದರ್ಥ. ಇದನ್ನು 'ಸಲ', 'ಸಳ' ಎಂದು ಎರಡೂ ರೀತಿಯಲ್ಲಿ ಉಚ್ಚರಿಸಲಾಗುತ್ತದೆ. 'ಕರ್ನಾಟಕದ ಮಹಾನ್ ರಾಜಮನೆತನಗಳಲ್ಲಿ ಒಂದಾದ ಹೊಯ್ಸಳರು ಸಹ ಸಲ ಅಥವ ಸಳವನ್ನು ಬಳಸುತ್ತಿದ್ದ ರೈತ ಮನೆತನಕ್ಕೆ ಸೇರಿದವರು' (ಪು. 167).

ಸುಮೇರಿಯನ್ ಭಾಷೆಯನ್ನು ತಳಸ್ತರಕ್ಕೆ ಅನ್ವಯಿಸಿ ಮಾತಾಡುವಾಗ ಮಾದಿಗರ ಅಸ್ಮಿತೆಯೂ ಘನತೆಯ ಅಸ್ಮಿತೆಯಾಗಿ ನಿರ್ವಚನಗೊಳ್ಳಲಾರಂಭಿಸುತ್ತದೆ. ಸುಮೇರಿಯನ್ ಭಾಷೆಯಲ್ಲಿ MADA ಎಂದರೆ land, country, earth ಎಂದು ಹಲವು ಅರ್ಥಗಳಿವೆ. ಮದ ಎನ್ನುವುದು ಭೂಮಿಯೆಂದಾದರೆ, ಮಾದ ಎನ್ನುವುದು ಭೂಮಿಯ ಒಡೆಯ ಎಂದಾಗುತ್ತದೆ. ಕರ್ನಾಟಕದಲ್ಲೆಲ್ಲಾ ಇರುವ ಮಾದಿಗರು ಒಂದು ಕಾಲದಲ್ಲಿ ಭೂಮಿಯ ಒಡೆಯರಾಗಿದ್ದವರು(ಪು.140). ಹಾಗೆ ನೋಡಿದರೆ ಮಾದರು, ಮಾರರು, ಮಾಳರು ಹಾಗೂ ಮಾಲಗಳು ಎಲ್ಲರೂ ಒಂದೇ, ಅವರೆಲ್ಲಾ ಹೊಲೆಯರು.

1. ಮಾದ ಎಂಬ ಪದವು ಮಾರ ಎಂದಾಯಿತು.
ಮಾರ ಎಂಬ ಪದವು ಮಾಳ ಎಂದಾಯಿತು.
ಮಾಳ ಎಂಬ ಪದವು ಮಾಲ ಎಂದಾಯಿತು.
2. ಮಾದ ಎಂಬ ಪದವು 'ಮಾತಂಗ' ಎಂಬ ಪದಕ್ಕೆ ಕೂಡ ಮೂಲವಾಗುತ್ತದೆ.
3. ಮಾ ಅಥವಾ ಮಾಹ್ ಅಥವಾ ಮಹ್ ಇಂದ ಮಾಹರ್ ಪದ ಉತ್ಪತ್ತಿಯಾಗಿದೆ.

4.ಮಾದ> ಮಾಲ> ಪಲ> ಪಲಂ> ಪಲಿಲ> ಪಲ್ಲ> ಪೊಲ್ಲ> ಪೊಲ್ಲಂ> ಪೊಲಯ> ಹೊಲಯ(ಪು.116)

ಭಾರತದಲ್ಲಿ ಪ್ರಮುಖ ಅಸ್ಪೃಶ್ಯ ಸಮುದಾಯಗಳಾಗಿರುವ ಪರಯ ಮತ್ತು ಮಹಾರ್‌ರು ಕೂಡ ಗೌರವಾನ್ವಿತ ಗತವನ್ನು ಹೊಂದಿರುವವರೇ ಎಂಬುದನ್ನು ತೋರಿಸುವ ಪ್ರಯತ್ನವನ್ನು ಲೇಖಕರು ಮಾಡುತ್ತಾರೆ. "ಪರಯ್ಯರು ಸಂದೇಹವಿಲ್ಲದೆ ಮೂಲ ಅಥವಾ ಮೂಲ ನಿವಾಸಿ ದ್ರಾವಿಡ ಜನಾಂಗಕ್ಕೆ ಸೇರುತ್ತಾರೆ. ಕಾಲಘಟ್ಟದ ಯಾವುದೋ ಹಾದಿಯಲ್ಲಿ ಪಾರಂಪರಿಕ ಸಾಮಾಜಿಕ ನಿಯಮ ಅಥವಾ ಕಟ್ಟಳೆಗಳಿಂದಾಗಿ ಅವರನ್ನು ಸಮಾಜದಿಂದ ದೂರವಿಡಲಾಗಿದೆ" (ಪು. 71) ಎಂದು ಪರಯ್ಯರನ್ನು ಕುರಿತು ಗುಸ್ತೋವ್ ಓಪರ್ಥ್ ಹೇಳಿದ ಮಾತನ್ನು ಲೇಖಕರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಉಲ್ಲೇಖಿಸುತ್ತಾರೆ. ಜೊತೆಗೆ ಬಿಷಪ್ ಕಾಲ್ಡ್‌ವೆಲ್ ಅವರ ಅಭಿಪ್ರಾಯವೂ ಇದಕ್ಕೆ ಪೂರಕವಾಗಿರುವುದನ್ನು ಗಮನಿಸುತ್ತಾರೆ: 'ಪರ್ರೈಯ ಅಥವ ಪರಯ್ಯ ಪದವು ಪಹಾರಿಯರು ಪದಕ್ಕೆ ಸಮಾನಾರ್ಥ ಪದ. ಈ ಪದದ ಉತ್ಪತ್ತಿ ಪಾಹಾರ ಎಂದರೆ ಬೆಟ್ಟ ಎಂಬ ಪದದಿಂದ ಬಂದಿದೆ. ಹಾಗಾಗಿ ಇವರು ಬೆಟ್ಟವಾಸಿಗಳು... ಆದ್ದರಿಂದ ಪರ್ರೈಯರನ್ನು ಪರಯರೆಂದು ಎಂದರೆ ಆರ್ಯರಲ್ಲದ ಹಾಗೂ ದ್ರಾವಿಡರಲ್ಲದ ಜನಾಂಗಕ್ಕೆ ಸೇರಿದವರೆಂದು ಪರಿಗಣಿಸಬಹುದು" (ಪು.75). 'ಅಕ್ಕಾಡಿಯನ್ ಭಾಷೆಯಲ್ಲಿ ಮಹ್ರು, ಮಾಹ್ರು ಎಂದರೆ ಮೊದಲು, ಮೊದಲಿದ್ದದ್ದು ಅಥವಾ ಮೊದಲಿಗ ಎಂದು ಅರ್ಥ... ಸುಮೇರಿಯನ್ ಭಾಷೆಯಲ್ಲಿ ಮಹ್ರ (Mohra) ಎಂದರೆ Forencost ಎಂದು ಅರ್ಥ.' (ಪು.114). ಆದ್ದರಿಂದ ಮಹಾರರು ಈ ದೇಶದ ಮೂಲನಿವಾಸಿಗಳು ಎಂದು ಲೇಖಕರು ಹೇಳುತ್ತಾರೆ.

ಭಾರತದ ಅಸ್ಪೃಶ್ಯರೆಂದು ಕರೆಯಲ್ಪಟ್ಟ ಈ ಸಮುದಾಯದವರು ಒಂದು ಕಾಲದಲ್ಲಿ ಅತ್ಯಂತ ಘನತೆಯ ಸಾಮಾಜಿಕ ಅಸ್ಮಿತೆಯನ್ನು ಹೊಂದಿದ್ದರು ಎಂದು ಹೇಳುವುದೇ ಈ

ಕೃತಿಯ ಮುಖ್ಯವಾದ ಉದ್ದೇಶವಾಗಿದೆ. ಈ ಗ್ರಹಿತವನ್ನು ದೃಢೀಕರಿಸುವುದಕ್ಕೆ ಪಾರಂಪರಿಕವಾದ ಆಚರಣೆಗಳು ಮತ್ತು ಪುರಾಣಗಳನ್ನು ವಿಶ್ಲೇಷಿಸುವ ಕೆಲಸಕ್ಕೆ ಲೇಖಕರು ಕೈ ಹಾಕುತ್ತಾರೆ.

ಭಾರತದ ಅನೇಕ ಕಡೆಗಳಲ್ಲಿ, ಮುಖ್ಯವಾದ ಆಚರಣೆಯ ಸಂದರ್ಭದಲ್ಲಿ, ಭಾರತದ ಮೇಲುಜಾತಿಗಳು ತಳಸ್ತರದವರಿಗೆ ವಿಶೇಷ ರೀತಿಯ ಮನ್ನಣೆಯನ್ನು ನೀಡುತ್ತಾರೆ. 'ಮೈಸೂರು ಪ್ರಾಂತ್ಯದಲ್ಲಿ ಊರದೇವತೆಗೆ ಸಾಮಾನ್ಯವಾಗಿ ಹೊಲೆಯರೇ ಪೂಜಾರಿಗಳು. ಕುಲವಾಡಿ ಅಥವಾ ಹಳ್ಳಿಯಲ್ಲಿರುವ ಪರಯ್ಯರ ಸಮುದಾಯದ ಮುಖ್ಯಸ್ಥನನ್ನು ನಿಜವಾದ ಒಡೆಯನಂತೆ ಗೌರವಿಸಲಾಗುತ್ತದೆ.

ಮೇಲುಕೋಟೆಯಲ್ಲಿ ಹೊಲೆಯನೊಬ್ಬ ಚೆಲುವಪಿಲ್ಲೈ ಎಂದು ಕರೆಸಿಕೊಳ್ಳುವ ಉತ್ಸವ ಮೂರ್ತಿಗೆ ಚಾಮಿ ಅಥವಾ ವಹ್ನಿ ಮರದ ಕೊಂಬೆಯನ್ನು ಕೊಡುತ್ತಾರೆ. ಈ ಕೊಂಬೆಯನ್ನು ಬೇಟೆಯಾಡಲಾಗುತ್ತದೆ. ಬೇಟೆ ಮುಗಿದ ನಂತರ ಪರಯ್ಯನಿಗೆ ಗೌರವಸೂಚಕವಾಗಿ ಒಂದು ಹೂ ಮಾಲೆ ಯನ್ನು ನೀಡಲಾಗುತ್ತದೆ. ಇದಕ್ಕೆ ಮಲಯಾಳಂ ಪ್ರಾಂತ್ಯದಲ್ಲಿ ರಾಜಬೇಟೆ ಎನ್ನಲಾಗುತ್ತದೆ. ಮೇಲುಕೋಟೆಯಲ್ಲಿ ಚೆಲುವನಾರಾಯಣಸ್ವಾಮಿಯ ರಥವನ್ನು ಹೊಲೆಯರು ಎಳೆಯುತ್ತಾರೆ. ಕಾಂಚಿಪುರಂ, ಕುಂಭಕೋಣಂ, ಶ್ರೀವಳ್ಳಿ, ಪುತ್ತೂರು... ಹೀಗೆ ಹಲವಾರು ಕಡೆ ರಥವನ್ನು ಎಳೆಯುವವರು ತಳಸ್ತರದವರೇ. ಇಲ್ಲಿ ರಥದ ಹಗ್ಗವನ್ನು ಮುಟ್ಟಬಾರದೆಂದು ಯಾರೂ ಅವರನ್ನು ನಿರ್ಬಂಧಿಸುವುದಿಲ್ಲ'(ಪು.121).

ಇದೇ ರೀತಿಯಲ್ಲಿ ಪುರಿಯ ಜಗನ್ನಾಥ ದೇವಾಲಯ, ಕೇರಳದ ಅನಂತಪದ್ಮನಾಭಸ್ವಾಮಿ ದೇವಾಲಯಕ್ಕೆ ತಳಸ್ತರಗಳ ಸಂಬಂಧವನ್ನು ಸೂಚಿಸುವಂಥ ಆಚರಣೆಗಳನ್ನು ಲೇಖಕರು ಉಲ್ಲೇಖಿಸುತ್ತಾರೆ. ಈ ಎಲ್ಲಾ ಆಚರಣೆಗಳನ್ನು ನೋಡಿದರೆ, ತಳಸ್ತರದವರಿಗೆ ಆರೋಪಿತವಾಗಿರುವ ಹೀನಾಯವಾದ ಸಾಮಾಜಿಕ ಚಹರೆಗಳು ಹಿಂದೆ ಇತ್ತು ಎಂದು ಹೇಳಲಾಗುವುದಿಲ್ಲ ಎಂದು ಲೇಖಕರು ಹೇಳುತ್ತಾರೆ. ನಾಡನ್ನು ಆಳುವ ಅರಸನಿಗೆ ದಕ್ಕುವ ಗೌರವದ ಆಚರಣೆಗಳು ಇಂದಿನ ಕಾಲದಲ್ಲೂ ಸಾಂಕೇತಿಕವಾಗಿ ನಡೆದುಕೊಂಡು ಬರುತ್ತಿರುವುದನ್ನು ನೋಡಿದರೆ, ತಳಸ್ತರದವರು ರಾಜಮನೆತನಕ್ಕೆ ಸೇರಿದವರೆ ಆಗಿರಬೇಕು ಎಂದು ಒತ್ತಿ ಹೇಳುತ್ತಾರೆ.

ಆಚರಣೆಗಳಲ್ಲಿ ಉಳಿದುಕೊಂಡು ಬಂದಿರುವ ತಳಸ್ತರದ ಶ್ರೇಷ್ಠತೆಯ ಸೂಚಕಗಳು ಕೇವಲ ಆಕಸ್ಮಿಕವಾಗಿರಲಾರದು ಎಂದು ಹೇಳುವುದಕ್ಕೆ ನಂಜುಂಡಸ್ವಾಮಿಯವರು ಪ್ರಾಚ್ಯ ದಾಖಲೆಗಳನ್ನು ಪರಿಶೀಲಿಸಲಾರಂಭಿಸುತ್ತಾರೆ. ಹೀಗೆ ಪರಿಶೀಲನೆಗೆ ಒಳಪಡಿಸಿದಾಗಲೂ, ಅವರ ವಾದಕ್ಕೆ ಪೂರಕವಾಗಿರುವಂಥ ದಾಖಲೆಗಳು ದೊರಕುವುದನ್ನು ತೋರಿಸುತ್ತಾರೆ.

ಸಮಾಜಶಾಸ್ತ್ರಜ್ಞ ಎಡ್ಗರ್ ಥರ್‍ಸ್ಟನ್ ಅವರು ತಮ್ಮ, 'CASTES AND TRIBES OF SOUTH INDIA' ದಲ್ಲಿ ಹೊಲೆಯರು ಹೊಲದಲ್ಲಿ ಕೆಲಸಮಾಡುವವರು ಮತ್ತು ದಕ್ಷಿಣ ಕನ್ನಡದಲ್ಲಿ ಊಳಿಗದವರಾಗಿದ್ದವರು. ಪುಲಯನ್ ಎಂಬ ಪದ ಮಲೆಯಾಳಂನಲ್ಲಿ ಹಾಗು ಪರ್‍ಯೆಯನ್ ಎಂಬ ಪದ ತಮಿಳಿನಲ್ಲಿ ಇದೇ ಅರ್ಥ ನೀಡುತ್ತದೆ. ಬ್ರಾಹ್ಮಣರು ಈ ಪದ ಹೊಲೆ ಅಂದರೆ ಹೊಲಸು ಎಂಬ ಪದದಿಂದ ಬಂದಿದೆ ಎನ್ನುತ್ತಾರೆ. ಬೇರೆಯವರು ಈ ಪದ ಹೊಲ ಅಂದರೆ ನೆಲ ಅಥವ ಭೂಮಿ ಎಂಬ ಪದದಿಂದ ಬಂದಿದೆ ಎನ್ನುತ್ತಾರೆ. ಪರ್‍ಯೆಯನ್ ವಿಷಯದಲ್ಲಿ ಇರುವಂತೆ ಕೆಲವು ಆಚರಣೆಗಳಿವೆ. ಅವು ಹೊಲೆಯನು ಒಂದು ಕಾಲದಲ್ಲಿ ಈ ಭೂಮಿಯ (ನಾಡಿನ) ದೊರೆಯಾಗಿದ್ದ... ಹೊಲೆಯ ಪದದ ಅರ್ಥ ಹಾಗೂ ಪರ್‍ಯೆಯನ್ ಮತ್ತು ಮಲಯನ್ ಎಂಬ ಪದಗಳಿಗೆ ಸಮಾನಾರ್ಥಕವಾಗಿದೆ. {(ಪು.143–144) ಅನುವಾದ ಲೇಖಕರದು}.

1891 ಮತ್ತು 1901ರ ಮೈಸೂರು ಜನಗಣತಿ ವರದಿಯಲ್ಲಿ – 'ಹೊಲೆಯರ ಸಂಖ್ಯೆ 502493 ಜನರು. ಅದು ಒಟ್ಟು ಜನಸಂಖ್ಯೆಯ ಶೇಕಡಾ 1053 ರಷ್ಟು ಇದ್ದಾರೆ. ಅವರು ತಮ್ಮ ಹೆಸರಿಗೆ ತಕ್ಕಂತೆ ಈ ದೇಶದ ವ್ಯವಸಾಯದ ಬೆನ್ನೆಲುಬಾಗಿದ್ದಾರೆ. ಕನ್ನಡದಲ್ಲಿ ಹೊಲ ಎಂದರೆ ಒಣಭೂಮಿ ಎಂದು ಅರ್ಥ. ಹೊಲೆಯ ಎಂದರೆ ಈ ಭೂಮಿಯ ಒಡೆಯ ಎಂದು ಅರ್ಥ' (ಪು 144, ಅನುವಾದ ಲೇಖಕರದು) ಎಂಬ ವಿವರವಿದೆ.

ಮೈಸೂರಿನ ಸರ್ವೆ ಇಲಾಖೆಯ ವರದಿ ಕೂಡ ತಳಸ್ತರದ ಸಮಾಜಿಕ ಸ್ಥಿತಿಯು ಉತ್ತಮವಾಗಿತ್ತು ಎಂದು ಸೂಚಿಸುವಂಥ ವರದಿಯನ್ನು ಮಾಡಿದೆ– 'ಸರ್ವೆ ಇಲಾಖೆಯು ಆರಂಭವಾಗುವುದಕ್ಕಿಂತ ಮೊದಲು ಹೊಲೆಯ ಅಥವ ಮಾದಿಗ ಕುಲವಾದಿಗಳು ಮೈದಾನ ಪ್ರದೇಶಗಳಲ್ಲಿ ಹಾಗೂ ಪೂರ್ವ ಭಾಗಗಳಲ್ಲಿ ಜಮೀನುಗಳೊಂದಿಗೆ ಗುರುತಿಸಲ್ಪಡುತ್ತಿದ್ದರು. ಅವರು ಕೆಲವು ಸಾಂಕೇತಿಕ ಆಚರಣೆಗಳನ್ನು ಮಾಡಿ ಪ್ರತಿಜ್ಞೆ ಮಾಡಿ ಹೇಳಿದರೆ ಬಹುಕಾಲದ ಜಮೀನುಗಳ ನಡುವಿನ ಜಗಳಗಳು ಕೊನೆಗೊಳ್ಳುತ್ತಿದ್ದವು. ಹಳ್ಳಿಗಳ ಆರ್ಥಿಕ ವಿಷಯಗಳಲ್ಲಿ ಆತನ ಮಾತು ನಡೆಯುತ್ತಿತ್ತು. ಅವರು ಬಹಳಷ್ಟು ಸಾರಿ ಹಳ್ಳಿಗಳ ಪಟೇಲರಂತೆ ಕಾರ್ಯನಿರ್ವಹಿಸುತ್ತಿದ್ದರು (ಪು.147, ಅನುವಾದ ಲೇಖಕರದು).

ಹಲವಾರು ಆಕರಗಳನ್ನು ಪರಿಶೀಲಿಸಿದ ನಂತರ, ಗಾದೆಗಳು, ಹೇಳಿಕೆಗಳು ಮತ್ತು ಸಾಂಸ್ಕೃತಿಕ ಗ್ರಹಿಕೆಗಳಲ್ಲಿ ಹೊಲೆಯ ಮಾದಿಗರ ಬಗ್ಗೆ ಇರುವ ನೇತ್ಯಾತ್ಮಕ ಅರ್ಥ ಬರುವಂಥ ವಿವರಗಳಲ್ಲಿ ವಾಸ್ತವವಾಗಿ ಗುಣಾತ್ಮಕತೆಯೇ ವ್ಯಕ್ತವಾಗುತ್ತದೆ ಎನ್ನುವುದನ್ನು ಮತ್ತೊಮ್ಮೆ ಸುಮೇರಿಯನ್ ಮೂಲದಿಂದ ವಿಶ್ಲೇಷಿಸುತ್ತಾರೆ.

'ಅರ್‍ಸದ ಕೂಳಿಗೆ ವರ್‍ಸದ ಕೂಳ ಕಳಕಂಡ' ಎಂಬುದು ಮಂಡ್ಯದ ಸುತ್ತಮುತ್ತಲಿನ ಪ್ರದೇಶದಲ್ಲಿ ಬಳಕೆಯಲ್ಲಿರುವ ಒಂದು ಗಾದೆ ಮಾತು. ಇದನ್ನು 'ಹರುಷದ ಕೂಳಿಗೆ ವರುಷದ ಕೂಳನ್ನು ಕಳೆದುಕೊಂಡ' ಎಂದು ಎಲ್ಲರೂ ಅರ್ಥ ಮಾಡಿಕೊಂಡಿದ್ದಾರೆ. ಆದರೆ ವಾಸ್ತವವಾಗಿ 'ಅರ್‍ಸಿ' ಎಂದರೆ Rice ಎಂದು ಅರ್ಥ. ತೆಲುಗಿನಲ್ಲಿ 'ಅರಿಸೇಲು' ಎಂದರೆ Rice Cakes ಎಂದು. ಆದ್ದರಿಂದ 'ಅರ್‍ಸಿ' ಎಂದರೆ ಅಕ್ಕಿ. ಹಿಂದೆ ಭತ್ತ ಬೆಳೆಯದವರು, ತಾವು ಬೆಳೆದ ರಾಗಿ ಅಥವ ಬೇರೆ ಧಾನ್ಯ ಕೊಟ್ಟು ಭತ್ತ ಪಡೆಯುತ್ತಿದ್ದರು. ಆಗ ಸ್ವಲ್ಪ ಅಕ್ಕಿಗೆ ಬಹಳಷ್ಟು ರಾಗಿ ಕೊಡುವ ಪದ್ಧತಿ ಇತ್ತು. ಹಾಗಾಗಿ ಇದನ್ನು ಸ್ವಲ್ಪ ಅಕ್ಕಿಯ ಆಸೆಗೆ ಹೆಚ್ಚು ರಾಗಿಯನ್ನು ಕಳೆದುಕೊಂಡ ಎಂದು ಈ ಮಾತನ್ನು ಅರ್ಥೈಸಬೇಕಾಗುತ್ತದೆ.

ಹೊಲೆಯ ಎಂದರೆ 'ಕೀಳು' ಎಂದು ಯಾರಾದರೂ ಹೇಳಿದರೆ, ಅದು ನಿಜ. 'ಹೊಲೆಯರು ನಾಗರಿಕತೆಯ ಆರಂಭದ ದಿನದಿಂದಲೂ ಕೀಳು!' (ಆಶ್ಚರ್ಯ ಸೂಚಕ ಚಿಹ್ನೆ ಲೇಖಕರದು). ಸುಮೇರಿಯನ್ ಭಾಷೆಯಲ್ಲಿ 'ಕಿ' ಎಂದರೆ ಭೂಮಿ. 'ಳು' ಎಂದರೆ ವ್ಯಕ್ತಿ. ಕೀಳು ಎಂದರೆ ಭೂಮಿ (ಹೊಲ)ಯಲ್ಲಿ ಕೆಲಸ ಮಾಡುವವ. ಆದ್ದರಿಂದ ಹೊಲೆಯರೆಂದರೆ ಕೀಳೇ...

'ಹೊಲಸು ತಿಂಬುವವನೆ ಹೊಲೆಯ' ಎಂಬ ಮಾತು ಕೂಡ ಅಕ್ಷರಶಃ ನಿಜ. ಹೊಲದಿಂದ ಬರುವುದೆಲ್ಲಾ ಹೊಲಸು ಅಥವ ಹುಲುಸು. ಹೊಲದಲ್ಲಿ ಬೆಳೆದ ಬೆಳೆಯನ್ನು ತಿಂದು, ಸುಖ ಸಂತೋಷ ಸಮೃದ್ಧಿಯಿಂದ ಬದುಕುತ್ತಿದ್ದವ ಹೊಲೆಯ (ಪು.159).

ತಳಸ್ತರದ ಘನತೆಯ ಗತವನ್ನು ಅನೇಕ ರೀತಿಯಲ್ಲಿ ಪುನರ್ ಪರಿಶೀಲಿಸುವ ಈ

ಭಾರತದ ಎಲ್ಲಾ ಭಾಗಗಳಲ್ಲಿ ವಾಸಿಸುತ್ತಿರುವ ಹೊಲೆಯ ಮತ್ತು ಮಾದಿಗರ ಜನಾಂಗೀಯ ಮೂಲತೆಯನ್ನು ಶೋಧಿಸುವುದು ಈ ಕೃತಿಯ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಸಾಂಪ್ರದಾಯಿಕ ಮೂಲಗಳಾದ ಸಂಸ್ಕೃತ ಮತ್ತು ಇಂಗ್ಲಿಷನ್ನು ಬಿಟ್ಟು, ಸುಮೇರಿಯನ್, ಅಕ್ಕಾಡಿಯನ್ ಹಾಗೂ ಅಲ್ಬೇನಿಯನ್ ಭಾಷೆಗಳತ್ತ ಲೇಖಕರು ಮುಖ ಮಾಡುತ್ತಾರೆ. ಜೊತೆಗೆ ಚರಿತ್ರೆಯ ದಾಖಲೆಗಳು, ಭಾರತಕ್ಕೆ ಬಂದ ಪ್ರವಾಸಿಗಳ ಕಥನಗಳು, ಆಧುನಿಕ ಭಾಷಾಶಾಸ್ತ್ರಜ್ಞರ ಸಿದ್ಧಾಂತಗಳು ಹಾಗೂ ಭಾರತದ ಅನೇಕ ಭಾಗಗಳಲ್ಲಿ ಮಾಡಿದ ಪ್ರವಾಸದ ಅನುಭವ– ಇವುಗಳನ್ನು ಆಧರಿಸಿ ತಳಸ್ತರಗಳಿಗೆ ಒಂದು ಘನತೆಯ Ethnicity ಯನ್ನು ಕಟ್ಟುತ್ತಾರೆ.

ಕೃತಿ ಮತ್ತೊಂದು ಕಾರಣಕ್ಕೂ ಮುಖ್ಯವಾಗುತ್ತದೆ. ತಾವು ಮಾಡುವ ವೃತ್ತಿಯ ಆಧಾರದ ಮೇಲೆ ಎಡಗೈ/ಬಲಗೈ ಎಂದು ವಿಭಜಿತವಾಗಿರುವ ಈ ಎರಡೂ ಸಮುದಾಯಗಳು, ಇಂದು ಅದೇ ಕಾರಣದಿಂದ ಎಂದೆಂದಿಗೂ ಒಗ್ಗೂಡಿಸಲಾರದಂತೆ ಎರಡು ವಿರುದ್ಧ ಧ್ರುವಗಳಲ್ಲಿ ನಿಂತುಬಿಟ್ಟಿವೆ. 70ರ ದಶಕದ ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿ ಪ್ರಾರಂಭವಾದಾಗ ಬಹಳ ದೊಡ್ಡ, ಪ್ರಬಲವಾದ ಸಮಾಜೋ-ರಾಜಕೀಯ ಶಕ್ತಿಯಾಗಿ ಬೆಳೆಯುತ್ತಿದ್ದ ಈ ಸಂಘಟನೆ ತಮ್ಮ ಅಸ್ಮಿತೆಗಳು ಭಿನ್ನ ನೆಲೆಯವು ಎಂಬ ಕಾರಣಕ್ಕೆ ಬೇರೆಯಾಗಿಬಿಟ್ಟವು. ಈ ಅಂತರವನ್ನು ಕಂದರವನ್ನಾಗಿಸುವ ಪ್ರಬಲ ಜಾತಿಗಳ ರಾಜಕೀಯ ಹುನ್ನಾರುಗಳು ಕೂಡ ಈ ಎರಡೂ ಸಮುದಾಯಗಳನ್ನು ಶಾಶ್ವತವಾಗಿ ದೂರವಾಗಿರುವಂತೆ ನೋಡಿಕೊಳ್ಳುತ್ತಾ ಬಂದಿವೆ. ಆದರೆ ತಳಸ್ತರದ ಈ ಅಸ್ಮಿತೆ ರಾಜಕಾರಣದ ಬುನಾದಿಯೇ ತಪ್ಪಾಗಿ ಕಟ್ಟಲ್ಪಟ್ಟಿರುವುದು ಎಂಬ ಮುಖ್ಯವಾದ ವಿಚಾರವನ್ನು ಲೇಖಕರು ಕೃತಿಯ ಉದ್ದಕ್ಕೂ ಹೇಳುತ್ತಾ ಹೋಗುತ್ತಾರೆ. ಎಂದರೆ, ಹೊಲೆಯ-ಮಾದಿಗ ಇಬ್ಬರೂ ಮೂಲತಃ ಒಂದೇ ವೃತ್ತಿಯವರು ಎಂಬ ವಿಷಯವನ್ನು ಕೃತಿ ವಿಶದೀಕರಿಸುತ್ತದೆ.

ಈ ಸಂಶೋಧನೆಯು ಹೊಲೆಯ, ಮಾದಿಗ ಮತ್ತು ರಾಜ ಈ ಮೂವರ ವೃತ್ತಿ ಒಂದೇ ಎಂದು ಹೇಳುತ್ತದೆ. 'ಸುಮೇರಿಯನ್ ಭಾಷೆಯಲ್ಲಿ 'ಕಿಂಗಳ್' ಎಂದು ನಾಸಿಕದಿಂದ ಉಚ್ಚರಿಸುವ ಒಂದು ಪದವಿದೆ. ವಿಶ್ವದ ಅತ್ಯಂತ ಪ್ರಾಚೀನವಾದ ಈ ಭಾಷೆಯಲ್ಲಿ 'ಕಿಂಗಳ್' ಎಂದರೆ ಭೂಮಿಯ ಒಡೆಯ. 'ಕಿ' ಎಂದರೆ ಭೂಮಿ, 'ಗಳ್' ಎಂದರೆ ಮಹಾನ್ ವ್ಯಕ್ತಿ ಎಂದು ಅರ್ಥ. ಅಂದರೆ ಭೂಮಿಯ ಮಹಾನ್ ವ್ಯಕ್ತಿ ಎಂದು. ಇಂಗ್ಲಿಷಿನ 'ಕಿಂಗ್' ಎಂಬ ಪದದ ಮೂಲ ಪದ 'ಕಿಂಗಳ್'. ಪ್ರಪಂಚದಲ್ಲಿರುವ ಎಲ್ಲಾ ಭಾಷೆಗಳಲ್ಲಿ ರಾಜ ಎಂಬ ಪದಕ್ಕೆ ಸಮಾನಾರ್ಥಕವಾಗಿರುವ ಪದಗಳೆಲ್ಲಾ 'ಭೂಮಿ' ಎಂಬ ಪದದ ಅರ್ಥ ಹಚ್ಚಿಕೊಂಡು ಬಂದಿವೆ' (ಪು.152-153).



ಈಗಾಗಲೇ ಈ ಲೇಖನದಲ್ಲಿ ಸುಮೇರಿಯನ್ ಭಾಷೆಯಲ್ಲಿ 'ಮಾದ' ಎಂದರೆ Land ಎಂದೂ, ಇದನ್ನು ಆಳುವವನು ಅಥವ ಹೊಂದಿರುವವನು ಮಾದಿಗನೆಂದು ಉಲ್ಲೇಖಿಸಲಾಗಿದೆ. ಇದನ್ನು ಇನ್ನೊಂದು ರೀತಿಯಲ್ಲಿ ಕೂಡ ವಿವರಿಸಲು ಸಾಧ್ಯವಿದೆ. 'ಹಳೆ ಮೈಸೂರಿನ ಇಂದಿನ ಹೊಲೆಯರ ಭಾಷೆಯಲ್ಲಿ ಮಾಳ ಎಂದರೆ ಹೊಲ ಎಂದು ಅರ್ಥ. ಮಾಳ ಪದ ಬಳಕೆಗೆ ಬರುವ ಮೊದಲು ಅದು ಮಾರ ಎಂದಾಗಿತು. ಅದಕ್ಕಿಂತಲೂ ಮೊದಲು ಅದು ಮಾದ ಎಂದಾಗಿತ್ತು. ಮಳವಳ್ಳಿಯ ಹೊಲೆಯರಿಗೆ ಮತ್ತು ಮಾದಿಗರಿಗೆ ಈಗಲೂ ಜಮೀನುಗಳಿವೆ. ಮತ್ತು ಅವೆಲ್ಲಾ ಮಾರಳ್ಳಿ ಗ್ರಾಮದ ಸರ್ವೆಯಲ್ಲಿವೆ ಎಂದು ಕಂದಾಯ ಇಲಾಖೆಯ ದಾಖಲೆಗಳು ಹೇಳುತ್ತವೆ.' (ಪು.154). 'ಭಾರತದ ಎಲ್ಲಾ ಕಡೆ ಈಗಲೂ ಮಾಳವನಾಡು, ಮಾಳವರಾಜ್ಯ, ಮಾಳವರಹಳ್ಳಿ, ಮಾರನಹಳ್ಳಿ, ಮಾಲಪಲ್ಲಿ ಮಲಗಾಂವ್... ಈ ಅರ್ಥ ಬರುವ ಸಾವಿರಾರು ಊರುಗಳಿವೆ' (ಪು.155).

ಸುಮೇರಿಯನ್ ಭಾಷೆಯಲ್ಲಿ Madam ಎಂದರೆ Bounteous ಎಂದು ಅರ್ಥ. Bounteous ಎಂದರೆ ಸಮೃದ್ಧಿ. ಮದ (ಹೊಲ, ಭೂಮಿ)ವನ್ನು ಹೊಂದಿ, ಸಮೃದ್ಧವಾದ ಜೀವನ ನಡೆಸುತ್ತಿದ್ದವರು ಮಾದಿಗರು. ಆದ್ದರಿಂದ ಹೊಲೆಯರು, ಮಾದಿಗರು ಅಣ್ಣ ತಮ್ಮಂದಿರೇ ಆಗಿದ್ದರು (ಪು.160). 'ಹೊಲೆಯರು ಮಾದಿಗರು ನಮ್ಮ ನಾಡಿನ ಭೂಮಿಯ ಒಡೆಯರು. ಒಂದು ಕಾಲದಲ್ಲಿ ಈ ದೇಶದ ಇಂಚಿಂಚು ನೆಲವೂ ಅವರ ಒಡೆತನದಲ್ಲಿತ್ತು. ಅವರು ನಮ್ಮ ದೇಶದ ಪೂರ್ವಜರು' (ಪು.162).

ಈಗ ಹೊಲೆಯ ಮತ್ತು ಮಾದಿಗರ ನಡುವೆ ಇರುವ ಭೇದಭಾವ ಹಿಂದೆ ಇದ್ದಂತೆ ಕಾಣುವುದಿಲ್ಲ ಎಂದು ಲೇಖಕರು ಹೇಳುತ್ತಾರೆ. 'ಮಹಾಭಾರತದ ಕಾಲದಲ್ಲಿ ಮಾದ್ರ (ಎಂದರೆ, ನಾವು ಈಗ ಎಡಗೈ ಎಂದು ಅರ್ಥ ಮಾಡಿಕೊಳ್ಳುವ) ರಾಜ ಅಶ್ವಪತಿ, ಮಾಳವದ ರಾಜಕುಮಾರಿ (ಎಂದರೆ ನಾವು ಈಗ ಬಲಗೈ ಎನ್ನುವ) ಮಾಳವಿಯನ್ನು ಮದುವೆಯಾಗಿದ್ದ' (ಪು.185). ಇದು ಮಾದಿಗರು ಮತ್ತು ಹೊಲೆಯರ ನಡುವೆ ವೈವಾಹಿತ ಸಂಬಂಧ ಇತ್ತು ಎನ್ನುವುದನ್ನು ಸೂಚಿಸುತ್ತದೆ. ಅಶ್ವಪತಿಯ ಮಗಳು ಸಾವಿತ್ರಿ (ಎಡಗೈ) ಸಾಲ್ವ ವಂಶದ ಸತ್ಯವಾದ (ಬಲಗೈ) ನನ್ನು ಮದುವೆಯಾದಳು. (ಅಲ್ಲೇ) ತಮಿಳುನಾಡಿನ ಪರಯ್ಯ ಮತ್ತು ಪಳ್ಳರ ಪುರೋಹಿತ ಒಬ್ಬನೇ. ಅವರಿಗೆ ವಳ್ಳುವರರು ಎಂದು ಹೆಸರು. ತಮಿಳಿನ 'ತಿರುಕುರಳ್' ಅನ್ನು ರಚಿಸಿದ ತಿರುವಳ್ಳುವರ್ ಈ ಪರಂಪರೆಯವರು (ಪು.192). ಈ ಎಲ್ಲಾ ಕಾರಣಗಳಿಂದ ಎಡಗೈ ಮತ್ತು ಬಲಗೈ ನಡುವಿನ ಬೇಧಗಳು ಇವರ ಪ್ರಾಬಲ್ಯ ಮತ್ತು ಸಾಮರ್ಥ್ಯವನ್ನು ಕುಗ್ಗಿಸುವುದಕ್ಕೆ ಮಾಡಿದ ಪ್ರಯತ್ನಗಳಂತೆ ಕಾಣುತ್ತವೆ. ಇಲ್ಲವೇ ಯಾವುದೋ ಕಾಲದಲ್ಲಿ ಜಮೀನ್ದಾರರಾಗಿದ್ದ ಅಥವ ರಾಜರಾಗಿದ್ದ ಅಣ್ಣ ತಮ್ಮಂದಿರು ಹೊಲಕ್ಕಾಗಿಯೊ, ರಾಜ್ಯಕ್ಕಾಗಿಯೊ ಬಡಿದಾಡಿಕೊಂಡಿರಬಹುದು (ಪು.186). ಇದೇ ನಂತರ ದೊಡ್ಡ ಸ್ವತಂತ್ರ ಸಮುದಾಯಗಳಾಗಿರಬಹುದು ಎಂದು ನಂಜುಂಡಸ್ವಾಮಿ ಈಗ ಸೃಷ್ಟಿಯಾಗಿರುವ ವಿಭಜನೆಗೆ ಕಾರಣಗಳನ್ನು ಊಹಿಸುತ್ತಾರೆ.

ಲೇಖಕರ ಹುಡುಕಾಟ ಮುಂದುವರೆದಂತೆ ಹೊಲೆಯರು ಮಾದಿಗರು ಇಬ್ಬರೂ ಮೂಲಭೂತವಾಗಿ ನಾಗ ಜನಾಂಗದವರು ಎಂಬ ಕಡೆಗೆ ತಲುಪುತ್ತಾರೆ. ಇದು ಅಂಬೇಡ್ಕರ್ ತಳಸ್ತರಗಳಿಗೆ ಕಟ್ಟಿಕೊಟ್ಟ ನಾಗ (ಬೌದ್ಧ ಅಲ್ಲ) ಐಡೆಂಟಿಟಿಗೆ ಪೂರಕವಾಗಿದೆ.

ಸುಮೇರಿಯನ್ ಭಾಷೆಯಲ್ಲಿ 'ನಾಂಗ' ಎಂದು ನಾಸಿಕದಿಂದ ಉಚ್ಚರಿಸಲ್ಪಡುವ ಒಂದು ಪದವಿದೆ. ನಾ (Na) ಎಂದರೆ ಮನುಷ್ಯ ಮಾ (Ma) ಎಂದರೆ ಮಾನಉಳ್ಳ, ಬೆಲೆಯುಳ್ಳ ಮನುಷ್ಯ ಎಂದು. ಸುಮೇರಿಯನ್ 'ನಾ' ಧಾತುವಿನಿಂದಲೇ 'ನಾಗ' 'ನಾಗರಿಕ, ಪದಗಳು ಜನ್ಯವಾಗಿವೆ (ಪು.163). ಆದ್ದರಿಂದ ನಾಗ ಜನಾಂಗವು ಭಾರತದಲ್ಲಿ ಇದ್ದಂಥ ಪುರಾತನ ಜನಾಂಗ. ನಾಗರಭಾವಿ, ನಾಗನಹಳ್ಳಿ, ನಾಗನೂರು, ನಾಗಪುರ... ಹೀಗೆ ನಾಗ ಎಂಬ ಪದಗಳು ಇರುವ ಊರುಗಳಲ್ಲಿ ಇಂದಿಗೂ ತಳಸ್ತರದದರೇ ಹೆಚ್ಚಾಗಿ ವಾಸಿಸುತ್ತಾರೆ (ಪು.164). ಹಿಂದೆ ಉಲ್ಲೇಖಿಸಿದ ವಿನ್ಸೆಂಟ್ ಎ.ಸ್ಮಿತ್ ಅವರು 'oxford history of india'ದಲ್ಲಿ "According to Srinivas Aiyangar, who writes with awple local knowledge, the pallavas belonged to the ancient nago people who included a prinvitive negrito element of australation origin and a later mixed race their early habital was the tondai mandalam, the group of districts round madras, tanjore and trichinopoly being later conqueets, the pallava army was recruited from the martial tribe of pallis or kurumbas... while a section of the pallava subjects who selected in the chola and pandya became known as kallar or thieves. all these people doubtless belonged to the naga race. (ಪು.66-67)

ದಲಿತರು ತಮ್ಮ ಐಡೆಂಟಿಟಿ ರಾಜಕಾರಣ, ಸಂಘಟನೆ ಮತ್ತು ಹೋರಾಟದ ತಾತ್ವಿಕ ನೆಲೆಗಳ ಬಗ್ಗೆ ಪುನರ್ ಆಲೋಚಿಸುವಂತೆ ಈ ಕೃತಿ ಪ್ರೇರೇಪಿಸುತ್ತದೆ.

ಅನೇಕ ವಿವರಗಳು ಕಿಕ್ಕಿರಿದಂತೆ ತುಂಬಿಕೊಂಡಿರುವ ಈ ಅಧ್ಯಯನದಲ್ಲಿ ಹಲವು ಸಮಸ್ಯೆಗಳೂ ಇವೆ. ಈ ವಿವರಗಳೂ ದಟ್ಟವಾಗಿ ಕಿಕ್ಕಿರಿದಿರುವುದರಿಂದಲೇ ಓದುಗರಲ್ಲಿ ತುಂಬಾ ಗೊಂದಲವನ್ನೂ ಸೃಷ್ಟಿಸುತ್ತಾ ಹೋಗುತ್ತದೆ. ಈ ಗೊಂದಲವನ್ನೂ ಇನ್ನೂ ಹೆಚ್ಚಿಸುವಂತೆ ವಿವರಗಳು ಬರುತ್ತವೆ. ಉದಾಹರಣೆಗೆ, ಒಂದು ಕಡೆ 'ಬುದ್ಧನು ಆರ್ಯನಾಗಿದ್ದನೇ ಎಂಬ ಸಂಶಯವನ್ನು ಬಲಗೊಳಿಸುತ್ತದೆ' (ಪು.36) ಎಂದು ಒಂದು ವಿವರ ಬರುತ್ತದೆ; ತಕ್ಷಣವೇ 'ಬುದ್ಧನು ಮಲ್ಲರೊಂದಿಗೆ ಹೊಂದಿದ್ದ ಗೆಳೆತನವು ಆತನ ಮೂಲವು ಆರ್ಯ ಪಂಗಡದಲ್ಲಿ ಇಲ್ಲಾ ಎಂಬುದನ್ನು ಸಾಧಿಸಲು ಸಾಕಷ್ಟು ಸಹಾಯ ಮಾಡುತ್ತದೆ' (ಪು.37) ಎಂಬ ಮತ್ತೊಂದು ವಿವರವೂ ಬರುತ್ತದೆ. ಕೆಲವು ಕಡೆ ಪುರಾಣಗಳನ್ನು ಚರಿತ್ರೆಯಂತೆ ನಿರ್ವಹಿಸಲಾಗಿದೆ... 'ದಾಸರ ವೀರತ್ವವು ಅವರ ಎದುರಾಳಿಗಳ ಮೆಚ್ಚುಗೆಗೆ ಪಾತ್ರವಾಗಿತ್ತು. ಆರ್ಯರ ಇಂದ್ರನೇ ಕೆಲವು ಸಾರಿ ದಾಸರ ರಕ್ಷಣೆ ಮಾಡುತ್ತಾನೆ. ಆರ್ಯರ ಪೂಜಾರಿಯೇ ದಾಸರ ದಕ್ಷಿಣೆ ಸ್ವೀಕರಿಸಲು ಜಾರುತ್ತಾನೆ. ಅಶ್ವಿನಿ ದೇವತೆಗಳು ದಾಸರೊಂದಿಗೆ ಊಟದಲ್ಲಿ ಭಾಗವಹಿಸುತ್ತಾರೆ' (ಪು.21). ಭಾಷೆಯ ಮೂಲಕ ಚರಿತ್ರೆಯನ್ನು ಕಟ್ಟುವ ತಾದಾತ್ಮ್ಯತೆ... ಒಮ್ಮೊಮ್ಮೆ ಅತಿ ಉತ್ಸಾಹದ ಭರದಲ್ಲಿ ಎಡವುತ್ತದೆ... ಮಹಾನ್ ಎಂದರೂ ಒಂದೆ ಮಹಾರ್ ಎಂದರೂ ಒಂದೆ. 'ಬರ್ರಿ' ಎಂಬುದು ಬನ್ನಿ ಎಂದು ಆದಂತೆ 'ರ' 'ನ' ಆಗಿ ಬದಲಾಗುವುದು ಸಾಮಾನ್ಯ'(ಪು.41).

ಈ ರೀತಿ ಇನ್ನೂ ಕೆಲವು ಸಮಸ್ಯೆಗಳಿದ್ದರೂ ಕೃತಿಯ ಮಹತ್ವ ಇರುವುದು ಎಲ್ಲಿ ಎಂದರೆ, ಭಾರತದ ಒಂದು ಸಮುದಾಯದ ಗತವನ್ನು ಅರ್ಥಮಾಡಿಕೊಳ್ಳುವುದಕ್ಕೆ ಇದುವರೆಗೂ ನಾವು ಅವಲಂಬಿಸಿದ್ದ ಸಂಸ್ಕೃತ ಮತ್ತು ಇಂಗ್ಲಿಷಿನ ಯಜಮಾನಿಕೆಯನ್ನು ಮುರಿಯುವುದರಲ್ಲಿ, ಕೊನೆಯದಾಗಿ, ಒಂದು ಹೊಸ ರೀತಿಯ ಅಧ್ಯಯನಕ್ಕೆ ಈ ಕೃತಿ ಪ್ರೇರಣೆಯನ್ನು ನೀಡುವುದರಲ್ಲಿಯೂ ಸಫಲವಾಗುತ್ತದೆ. ■

ನಮ್ಮೊಡನಿದ್ದೂ ನಮ್ಮಂತಾಗದ...

ಅಲೆಮಾರಿ-ಬುಡಕಟ್ಟು ಜನರನ್ನಾಗಲೀ ಅವರ ಅಗತ್ಯಗಳನ್ನಾಗಲೀ ಅರ್ಥ ಮಾಡಿಕೊಳ್ಳುವಲ್ಲಿ ನಾಗರಿಕ ಜಗತ್ತು ಹೀನಾಯವಾಗಿ ಸೋತಿದೆ. ಒಂದೆಡೆ ಜನಪರ ಕಾಳಜಿಯ ಸಂಘಟನೆಗಳು ಅವರಲ್ಲಿ ಹಕ್ಕಿನ ಕುರಿತ ಜಾಗೃತಿ ಮೂಡಿಸುತ್ತಿದ್ದರೆ, ಮತ್ತೊಂದೆಡೆ ಶಸ್ತ್ರಸಜ್ಜಿತ ಹೋರಾಟವೊಂದೇ ಬಿಡುಗಡೆಯ ದಾರಿ ಎಂಬ ಧೋರಣೆಯನ್ನು ಬಿತ್ತಲು ನೋಡುತ್ತಿವೆ. ಇದರ ಜೊತೆಗೆ ಧಾರ್ಮಿಕ, ಸಾಮಾಜಿಕ ಸುಧಾರಣೆ ಹೆಸರಿನ ಉದಾತ್ತ ಉದ್ದೇಶವಿಟ್ಟುಕೊಂಡು ಎನ್‌ಜಿಒಗಳು ಸಹಾಯ ಧನದ ಹಣದಲ್ಲಿ ದಕ್ಕಿದಷ್ಟು ಮುಕ್ಕಲು ಕಾದು ನಿಂತಿವೆ. ಆದರೆ ಹೀಗೆ ಹೊರಗಿನಿಂದ ಬಂದು ಜೊತೆ ನಿಲ್ಲುವವರು ಒಂದಲ್ಲಾ ಒಂದು ಹಿತಾಸಕ್ತಿಯ ಭಾಗವಾಗಿದ್ದು ಅವರು ಈ ಸಮುದಾಯಗಳನ್ನು ಬಿಡುಗಡೆಯೆಂದು ತಪ್ಪು ದಾರಿಯಲ್ಲಿ ಕೊಂಡೊಯ್ಯುವ ಸಾಧ್ಯತೆಗಳಿವೆ. ಈಗ ಆಗುತ್ತಿರುವುದು ಎಲ್ಲರ ಕಣ್ಣೆದುರಿಗಿದೆ.

ಕೋಲುಮುಖದ ಹಣೆಯ ನಟ್ಟನಡುವೆ ಕಾಲ್ದಾರಿಯಂತಹ ನೇರ ಬೈತಲೆ; ಬೈತಲೆಯ ಎರಡೂ ಕಡೆ ಇಳಿದ ಎಣ್ಣೆ ಮೆತ್ತಿದ ಕೂದಲು; ಕಿರಿಯ ತ್ರಿಕೋನಾಕಾರದ ಹಣೆಯಲ್ಲಿ ಮೂರನೆಯ ಕಣ್ಣಿನಂತಹ ಕಾಡಿಗೆಬೊಟ್ಟು; ಸೊಂಟದ ಮೇಲೆ ಕಣ್ಣರಳಿಸುತ್ತ ಬಾಯಿ-ಮೂಗು ಎರಡರಿಂದಲೂ ತುಪ್ಪ ಸುರಿಸುತ್ತ ಬೋಡು ಬಿಟ್ಟು ನಗುತ್ತಿರುವ ಮಗು; ಮುಂಚಾಚಿದ ಕೈಗಳ ಫಳಫಳ ಹೊಳೆವ ಕಪ್ಪು ನಯಸು ಚರ್ಮ- ಸಪೂರ ಮೈಯಿನ ಹನುಮಂತಮ್ಮ ಅವತ್ತು ಒಂದು ವಿಶಿಷ್ಟ ಬೇಡಿಕೆಯಿಂದ ಮನಸೆಳೆದಳು.

'ಅಮಾ, ಈ ಮೊಬೈಲ್ನೊಂದು ಚ್ಯಾರ್ಜಿಗಾಕ್ಕೊಡು ಅಮ್ಮಾ..'

ಮಗುವಿನ ಥಂಡಿಗೋ, ಕಜ್ಜಿಗೋ, ಜ್ವರಕ್ಕೋ ಮದ್ದಿಗೆ ಬಂದಿರಬಹುದೆಂದುಕೊಂಡರೆ ಮೊಬೈಲು ಚಾರ್ಜ್ ಮಾಡಿಕೊಡುವಂತೆ ಕೇಳುತ್ತಿದ್ದಾಳೆ!

'ಓಹೋ, ಮೊಬೈಲು ನಿನ್ ಹತ್ರಾನೂ ಬಂದ್ಬಿಡ್ತಾ? ಪರವಾಗಿಲ್ಲ ಮಾರಾಯ್ತಿ' ಎನ್ನುತ್ತ ಸುಬ್ರಾಯ ಚಾರ್ಜ್ ಮಾಡಲು ಅದರ ಅಂದ, ಚಂದ, ಮಾಡೆಲ್ಲುಗಳ ನೋಡುತ್ತ ಒಳಹೋದ.

'ಊಂ ಕಣಣ್ಣ, ಊರ್ರಾಗಿದ್ದೋರತ್ರ ಮಾತಾಡಕೆ ಅಮ್ತ ತಂದಿದಿವಿ. ಮೂರ್ರಾಕು ಜನರತ್ರ ಇದಾವೆ. ಅದ್ನ ಚ್ಯಾರ್ಜ್ ಮಾಡದೇ ಕಸ್ಟಾಗ್ಬಿಟ್ಟದೆ. ದಿಸಾ ಒಬ್ಬೊಬ್ರನ್ನ ಕೇಳಿ, ಕೇಳಿ ಬ್ಯಾಸರ ಬಂದೋಗದೆ.'

ಅರ್ಧ ಗಂಟೆ ಕಾದು ಕೂತು ಮೊಬೈಲ್ ಚಾರ್ಜ್ ಮಾಡಿಕೊಂಡು, 'ಇರ್ಲಿ ಇಟ್ಕಳಮ್ಮ' ಎಂದು ನನಗೇ ಐದು ರೂಪಾಯಿ ಕೊಡಬಂದಳು! ತರಕಾರಿ ತಿನ್ನದೇ, ಹಣ್ಣುಹಂಪಲಿಲ್ಲದೇ, ಸ್ನಾನವಿಲ್ಲದೆ, ಚೊಕ್ಕ ಬಟ್ಟೆ ತೊಡದೇ ಕಾಯಿಲೆ ಕಸಾಲೆಗೀಡಾಗುವ ಅವರು ಕರೆನ್ಸಿಗೆ ಎಷ್ಟು ದುಡ್ಡು ಖರ್ಚು ಮಾಡಬಹುದು? ಕುತೂಹಲವಾಯಿತು. ಖಿಲ್ಲನೇ ನಗುವ ಅಲೆಮಾರಿಗಳು ನಾ ಕಂಡಂತೆ ಇಪ್ಪತ್ತು ವರ್ಷಗಳಲ್ಲಿ ಇದೇ ಮೊದಲ ಬಾರಿ ಗೊಣಗುಡುತ್ತಿದ್ದರು. ಊರಹೊರಗೆ ನೀಲಿ ಷೆಡ್ಡಿನಲ್ಲಿ ಬೀಡುಬಿಡುತ್ತಿದ್ದ ಹಾವಾಡಿಗರಿಗೆ ಮಳೆ, ಬಿಸಿಲು, ನೀರು, ಹಸಿವೆ, ಅನಾರೋಗ್ಯಕ್ಕಿಂತ ಅಲೆಮಾರಿತನದ ಕಷ್ಟವನ್ನು ಮೊಬೈಲು ಮನದಟ್ಟು ಮಾಡಿಕೊಡುತ್ತಿತ್ತು..

ಇತ್ತೀಚೆಗೆ ಅಲೆಮಾರಿಗಳ ಬದುಕು ಕಣ್ಣೆದುರು ಭಿನ್ನವಾಗಿ ತೆರೆದುಕೊಳ್ಳುತ್ತಿದೆ. ಹಳ್ಳಿಯ ಬದುಕು, ಇಪ್ಪತ್ತು ವರ್ಷಗಳ ವೈದ್ಯಕೀಯ ಪ್ರಾಕ್ಟೀಸಿನಲ್ಲಿ ಅಲೆಮಾರಿಗಳಿಗೆ ನಾನಾ ರೀತಿ ಮುಖಾಮುಖಿಯಾಗಿದ್ದಿದೆ. ಸಣ್ಣ ಪ್ರಚೋದನೆಗೂ ನಿಷ್ಕಳಂಕವಾಗಿ



ಎದೆಯಾಳದಿಂದ ಬರುವ ಅವರ ನಗುವಿಗೆ ವಿನೀತಳಾಗಿದ್ದೇನೆ. ನನ್ನ ತಿಳಿವನ್ನು ಅವರಿಗೆ ದಾಟಿಸಲಾಗದೇ ಸೋಲೊಪ್ಪಿಕೊಂಡಿದ್ದೇನೆ.

ಈ ಜನ ಹೇಗೆ ಬದುಕುತ್ತಾರೋ? ಏನು ತಿಂದುಡುತ್ತಾರೋ? ಅವರ ಒಳಜಗತ್ತಿನ ಕಷ್ಟನಷ್ಟಗಳೇನೋ? ಮನೆಯೆದುರು ಅಲೆಮಾರಿ ಗುಂಪೊಂದು ಹಾದು ಹೋದಾಗಲೂ ನಾವು ಅವರ ಬಗ್ಗೆ ಯೋಚಿಸಿರುವುದಿಲ್ಲ. ಕೊಡಮಾಡಿದ ಸವಲತ್ತುಗಳು ಅವರನ್ನು ತಲುಪಿವೆಯೋ? ಸವಲತ್ತಿರುವುದು ಅವರಿಗೆ ತಿಳಿದಿದೆಯೋ ಇಲ್ಲವೋ ಎಂದು ಹಾವಾಡಿಸುವ ನಮ್ಮೂರ ಅಲೆಮಾರಿಗಳನ್ನು ಕೇಳಿದರೆ ಹೆಂಗಸರು ಮುಖ ತುಂಬ ಪ್ರಶ್ನೆ ತುಂಬಿಕೊಂಡು ನನಗೇ ಅವನ್ನು ಹಿಂದಿರುಗಿಸಿದರು. ತೂರಾಡುತ್ತಿದ್ದ ಗಂಡಸರು ಆಸ್ಪತ್ರೆಯಲ್ಲಲ್ಲದೆ ಬಿಡಾರದ ಬಳಿ ನನ್ನ ಕಂಡದ್ದಕ್ಕೆ ಸಂದಿ, ಹಳು ಹೊಕ್ಕು ಮಾಯವಾದರು. ಅವರ ಜಗತ್ತಿನೊಳಗೆ ಸುಲಭದ ಪ್ರವೇಶ ಸಾಧ್ಯವಾಗಿಲ್ಲ. ಅವರ ಜನಾಂಗೀಯ ಕುರುಹುಗಳನ್ನು ತಿಳಿಯಲಾಗಿಲ್ಲ. ಕೇವಲ ಕುತೂಹಲದ ಬೆನ್ನತ್ತಿ ಕೆದಕಲಾಗಿಲ್ಲ.

*****

ಉತ್ತರಕನ್ನಡ ಹಲವು ಬುಡಕಟ್ಟು ಸಮುದಾಯಗಳನ್ನು ಹೊಂದಿದೆ. ಅಲೆಮಾರಿಗಳು ಇಲ್ಲಿಗೆ ಅತಿಥಿಗಳು. ನಮ್ಮೂರ ಗುಡ್ಡದ ಇಳಿಜಾರಿನಲ್ಲಿ ಅಲೆಮಾರಿಗಳು ತಿಂಗಳುಗಟ್ಟಲೆ ಬೀಡು ಬಿಡುತ್ತಾರೆ. ಬೇಸಿಗೆ ಶುರುವಾಗುವ ಹೊತ್ತಿಗೆ ಮಾಯವಾಗುವ ಅವರು ಮುಂಗಾರಿನ ಜೊತೆ ಬಂದುಬಿಡುತ್ತಾರೆ. ಗುಡ್ಡದ ಇಳಿಜಾರನ್ನೇ ಆಯ್ಕೆ ಮಾಡಿ ಕಟ್ಟಿದ ನೀಲಿ ಪ್ಲಾಸ್ಟಿಕ್ ಟೆಂಟಿನಲ್ಲಿ ಬಿಟ್ಟೂ ಬಿಡದೆ ಹುಯ್ಯುವ ನಮ್ಮೂರ ಮಳೆಯನ್ನು ನಿಭಾಯಿಸುತ್ತಾರೆ. ಹಾವಾಡಿಸುವ ಸಮುದಾಯ ಪದೇಪದೇ ಭೇಟಿ ನೀಡಿದರೆ; ನಾಟಕ ಆಡುವ, ಹಾಡು-ನರ್ತನಗಳಿಂದ ಹಣ ಗಳಿಸುವ, ಸಣ್ಣ ಪ್ರಮಾಣದ ಕಸರತ್ತುಗಳನ್ನು ಪ್ರದರ್ಶಿಸುವ, ಕಣಿ ಹೇಳುವ, ಮಂಗನನ್ನು ಹಿಡಿಯುವ-ಆಡಿಸುವ ಅಲೆಮಾರಿಗಳೂ ಕರಾವಳಿಯ ಕಡಲು-ಮಳೆ-ಸೆಕೆಗೆ ಕೇರೇ ಮಾಡದೇ ಇದ್ದು ಹೋಗುತ್ತಾರೆ. ಎಷ್ಟೋ ಸಲ ಅವರು ಬಂದಿದ್ದಾಗಲೀ, ಬಿಡಾರ ಹೂಡಿದ್ದಾಗಲೀ ಯಾರ ಗಮನಕ್ಕೂ ಬರುವುದೇ ಇಲ್ಲ.

ಬೆಳಗು ಬೈಗಿನ ವಾಕ್‌ಗೆಂದೋ, ಸೀತಾಳೆ ಹೂ ಹುಡುಕುತ್ತಲೋ, ದುರ್ಗಂಧದ ದೊಡ್ಡ ಕಾಡು ಅಣಬೆಯ ಫೋಟೊ ತೆಗೆಯಲೋ ಆ ಕಡೆ

ಹೋದರೆ ನಿರ್ಜನ ಪುಟ್ಟ ಬಿಡಾರಗಳು ಜೋಡಿಸಿಟ್ಟಂತೆ ಕಾಣುತ್ತವೆ. ನೀರು ಹರಿದುಹೋಗುವಂತೆ ಸುತ್ತ ತೆಗೆದ ಕಾಲುವೆ ನಡುವೆ ಎತ್ತರಿಸಿದ ಜಾಗದಲ್ಲಿ ಟೆಂಟು ಕುಳಿತಿರುತ್ತದೆ. ತ್ರಿಕೋನಾಕೃತಿಯ ಮನೆಯ ಮಾಡು ಗಾಳಿಗೆ ಹಾರಿ ಹೋಗದಿರಲೆಂದು ಹಸಿ ಸೊಪ್ಪು ಹರಡಿ ನಾಲ್ಕಾರು ಹಸಿ ಟೊಂಗೆಗಳನ್ನು ಬಾಗಿಲಾಗಿ ನಿಲ್ಲಿಸಿರುತ್ತಾರೆ. ಸಪಾಟು ಸಾರಿಸಿದ ನೆಲ; ಮೂರು ಕಲ್ಲಿನ ಒಲೆ, ಬೂದಿಯೊಳಗೆ ಮರೆಯಾಗಿರುವ ಕೆಂಡ; ಒಂದು ಮೂಲೆಯಲ್ಲಿ ಗಳಕ್ಕೆ ನೇತುಬಿದ್ದ ಬಟ್ಟೆ, ಗಂಟು; ಯಾವುದೋ ಗದ್ದುಗೆಯ, ಹನುಮಂತನ, ಅಮ್ಮನ ಫೋಟೋ.. ಬಾಗಿಲು–ಬೀಗ–ಚಿಲಕ–ಫ್ಯಾನ್–ಎಸಿ ಯಾವುದೂ ಬೇಡದ ಬಯಲ ಆಲಯದಲ್ಲಿ ಎಲ್ಲ ಖುಲ್ಲಂ ಖುಲ್ಲಾ! ನಮ್ಮ ಮೂರು ಬೆಡ್‌ರೂಮಿನ ಮನೆಗಿಂತ ಆ ಪುಟ್ಟ ತ್ರಿಕೋನದ ಬಿಡಾರ ವಿಶಾಲವಾಗಿ ಕಾಣುತ್ತ ರಾತ್ರಿಯ ಗುಡುಗು–ಮಿಂಚು–ಮಳೆಯ ಆರ್ಭಟಕ್ಕೆ ಅಪ್ಪ–ಅಮ್ಮ–ಮಕ್ಕಳೆಲ್ಲ ಒತ್ತೊತ್ತಿ ಒಂದೇ ಹೊದಿಕೆಯೊಳಗೆ ಮುರುಟಿ ಮಲಗುವ ಸುಖ ಕಣ್ಮುಂದೆ ಕಟ್ಟುತ್ತದೆ.

ಜನ ಅವರಿಗೆ 'ಬೇಡೋವ್ರು' ಎಂದು ಹೇಳಿದರೂ ದುಡ್ಡು–ಊಟ–ಬಟ್ಟೆಗಾಗಿ ಅವರು ಪೀಡಿಸುವುದಿಲ್ಲ. ಹಾವು ಹಿಡಿಯುವವರು ಹಾವಾಡಿಸುವುದು, ಹಾವಿನ ಬೇರು–ಗುಳಿಗೆ ಮಾರುವುದು, ಹಳೇ ಪ್ಲಾಸ್ಟಿಕ್ ಸಂಗ್ರಹಿಸಿ ವಿನಿಮಯವಾಗಿ ಟಿಕ್ಳಿ, ಬಾಚಣಿಕೆ, ಪಿನ್ನು, ರಿಬ್ಬನ್ನು ಕೊಡುವುದು–ಹೀಗೆ ಯಾರೂ ಮಾಡದ ಕೆಲಸ ಮಾಡಿಕೊಂಡಿರುತ್ತಾರೆ. ಇವರ ಮೂಲ ಆಂಧ್ರದ ಯಾವುದೋ ಊರು. ಕಚ್ಚಾ ತೆಲುಗು ಮಾತನಾಡುತ್ತಾರೆ. ಒಂದೂರಿನಲ್ಲಿ ನೆಲೆ ನಿಲ್ಲುವುದು ಬಿಟ್ಟು ಯಾಕೆ ಊರೂರು ಸುತ್ತುತ್ತೀರಿ ಅಂತ ಕೇಳಿದರೆ, 'ಎಲ್ಲಾ ಒಂದೇ ಊರಾಗೆ ಕೂತ್ರೆ ಹೊಟ್ಟೆ ನಡೀಬೇಕಲ್ಲಮ್ಮಾ' ಎನ್ನುತ್ತಾರೆ. ಹಾವು ಆಡಿಸುವುದನ್ನು ಬಿಟ್ಟು ಅವರಿಗೆ ಬೇರೆ ಕೆಲಸ ಊಹಿಸಿಕೊಳ್ಳಲೂ ಸಾಧ್ಯವಿಲ್ಲ.

ನಾಗರ ಪಂಚಮಿ ಹೊತ್ತಿಗೆ ಈ ಬಿಡಾರಗಳು ಗಿಜಿಗುಡುತ್ತವೆ. ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ಹಾವು ಹಿಡಿದು ಹೊರಡುತ್ತಾರೆ. ಚಂಯ್ಞ್‌ಗುಡುವ ಮಕ್ಕಳನ್ನು ಸೊಂಟಕ್ಕೆ ಕಟ್ಟಿಕೊಂಡು, ತಲೆಮೇಲೆ ಹಾವಿನ ಬುಟ್ಟಿ ಹೊತ್ತು ಹೆಂಗಸರೂ ಊರು ತಿರುಗಲು ಹೊರಡುತ್ತಾರೆ. ಹಬ್ಬದ ಹೊತ್ತಿಗೇ ಇಷ್ಟು ನಾಗರಹಾವನ್ನು ಅದೆಲ್ಲಿಂದ ತರುತ್ತಾರೋ? ಉಳಿದಂತೆ ಅಷ್ಟು ಹಾವನ್ನು ಎಲ್ಲಿ ಸಾಕುತ್ತಾರೋ? ಹೆಂಗಸರು, ಮಕ್ಕಳೂ ಭುಸುಗುಡುವ ಹಾವಿನ ತಲೆ ಮೊಟಕುವುದು ನೋಡಿ 'ಹಬ್ಬದ ಮರುದಿನ ಹಾವಿನ ಪಲ್ಯಮಾಡಿ ತಿಂತಾವೆ ಅವು, ಅದ್ಕೇ ಹಾವಿನ ಭಯ ಇಲ್ಲ' ಎನ್ನುತ್ತಾರೆ ನಮ್ಮೂರ ಜನ.

ಕಣ್ಣೆದುರು ಕಾಣುವ ಎಷ್ಟೋ ಹಕ್ಕಿಗಳ ಬದುಕಿನ ಹಾಗೇ ಅಲೆಮಾರಿಗಳ ಬದುಕೂ. ಅನಾಮಿಕ, ದೃಶ್ಯವಾದರೂ ಅದೃಶ್ಯ..

*****

ನಾಗಮ್ಮ ಗುಂಪಿನ ಹಿರಿಯ ಮಹಿಳೆ. ವ್ಯವಹಾರ ಬಲ್ಲವಳು. ಆರಾಮಿಲ್ಲದ ತನ್ನ ಕ್ಯಾಂಪಿನ ಹೆಣ್ಣು ಮಕ್ಕಳು, ಸಣ್ಣ ಮಕ್ಕಳನ್ನೆಲ್ಲಾ ಒಟ್ಟು ಸೇರಿಸಿ ಒಂದು ತಂಡದ ಜತೆ ಆಸ್ಪತ್ರೆಗೆ ಬರುತ್ತಾಳೆ. ಆ ಹೆಣ್ಣು ಮಕ್ಕಳಾದರೋ ವಿಶಿಷ್ಟ ಕಮಟು ವಾಸನೆ ಬೀರುತ್ತಾ ಒಂದು ಹೆಗಲಿಗೆ ಜೋಳಿಗೆ, ಮತ್ತೊಂದು ಸೊಂಟಕ್ಕೆ ಎಳೇ ಮಕ್ಕಳನ್ನು ಕಟ್ಟಿಕೊಂಡು ತಮ್ಮ ಸರದಿ ಬಂದರೂ ಒಳಗೇ ಬರಲಾರರು. ಹೊರಗೆ ತೆಲುಗಿನಲ್ಲಿ ಚಿಲಿಪಿಲಿಗುಡುತ್ತಾ, 'ಪಿಲ್ಲ'ಗಳ ಜತೆ ಬಾಯಿ ಮಾಡುತ್ತಾ ತಾಸುಗಟ್ಟಲೆ ಹೊರಗೇ ಕೂತು, ಎಲ್ಲರದ್ದೂ ಮುಗಿದ ಮೇಲೆ ಒಳಬರುತ್ತಾರೆ. ಅವರ ಬಳಿ ದುಡ್ಡು ತೆಗೆದುಕೊಳ್ಳಲು ನನ್ನ ಕೈ ಹಿಂದೆಳೆಯುತ್ತದೆ. ಎಂಟಾಣೆ, ಒಂದು ರೂಪಾಯಿ ಚಿಲ್ಲರೆಯನ್ನೆಲ್ಲಾ ಎಣಿಸಿ ಜೋಡಿಸಿ ಕೊಡುವ ಅವರ ಬಳಿ ಫೀಸು ಕೇಳುವುದು ಹೇಗೆ? 'ಒಳ್ಳಿ ಔಸ್ತಿ ಕೊಡಮ್ಮ, ದುಡ್ಡು ಎಷ್ಟಾನಾ ಆಗ್ಲಿ' ಎಂದು ಧೈರ್ಯದಿಂದ ಅವರೇ ಕೇಳುತ್ತಾರಾಗಿ ಕೆಲ ರೂಪಾಯಿ ಚಾರ್ಜ್ ಮಾಡುತ್ತೇನೆ. ನನ್ನ ಪರ್ಸಿಗೆ ಋಣಭಾರ ಜಮೆಯಾಗುತ್ತದೆ.

ಡಾ|| ಎಚ್. ಎಸ್. ಅನುಪಮಾ

5

ಕಣ್ಣು, ತುಟಿ, ಉಗುರು, ಒಸಡೆಲ್ಲ ಬಿಳಿಚಿ, ಗಾಳಿ ಬೀಸಿದರೆ ಹಾರಿ ಹೋಗುವಷ್ಟು ಕೆಳಗಿದ್ದ ಅಕ್ಕಮ್ಮಳನ್ನು ನಾಗಮ್ಮ ಒಂದು ಬಾರಿ ಆಸ್ಪತ್ರೆಗೆ ಕರೆತಂದಳು. ಮೆಡಿಕಲ್ ಪಠ್ಯಪುಸ್ತಕಗಳಲ್ಲಿ ರಕ್ತಹೀನತೆಗೆ ಕೊಟ್ಟ ಪಕ್ಕಾ ಉದಾಹರಣೆಯಂತೆ ಆಕೆ ಕಾಣುತ್ತಿದ್ದಳು. ದೊಡ್ಡದಾಗಿ ಅರಳಿದ ಆತಂಕದ ಕಣ್ಣುಗಳು, ಗುಳಿಬಿದ್ದ ಕೆನ್ನೆಗಳು, ಚಂಚಲ ದೈಹಿಕ ಚಲನೆಗಳು ಮನಸ್ಸು ಅಸ್ವಸ್ಥವಾಗಿರುವುದನ್ನು ಸೂಚಿಸುತ್ತಿದ್ದವು.

ನಾಗಮ್ಮ ಹೇಳಿದ ಪ್ರಕಾರ ಅವಳು ರಾಮಾಂಜಿನಿ ಹೆಂಡತಿ. ಮೂರು ತಿಂಗಳ ಕೆಳಗೆ ಹೆರಿಗೆಯಾಗಿದೆ. ಮೂರು ವರ್ಷಕ್ಕೆ ಇದು ಮೂರನೇ ಬಾಣಂತನ. ಮೊದಲಿನ ಎರಡು ಹೆರಿಗೆಗಳೂ ಕ್ಯಾಂಪಿನಲ್ಲೇ ಆಗಿ, ತುಂಬ ಕಷ್ಟವಾಗಿ ಮಕ್ಕಳು ತೀರಿಹೋಗಿದ್ದವು. ಮೂರನೇ ಬಸುರಿನಲ್ಲಿ ಗಂಡ ಹೆಂಡತಿ ಊರೂರು ಅಲೆಯುತ್ತಿರುವಾಗ ಇವಳಿಗೆ ರಕ್ತಸ್ರಾವ, ಹೊಟ್ಟೆ ನೋವು ಕಾಣಿಸಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದರು. ಹೆರಿಗೆ ಸುಲಭವಾಗಿ ಗಂಡುಮಗು ಹುಟ್ಟಿದರೂ, ನಂತರ ಸಿಕ್ಕಾಪಟ್ಟೆ ರಕ್ತಸ್ರಾವವಾಗಿತ್ತು. ಎಲ್ಲಿಂದಲೋ ತರಿಸಿ ಒಂದು ಬಾಟಲಿ ರಕ್ತ ಕೊಟ್ಟಿದ್ದರು. ಕೊಟ್ಟವರ ರಕ್ತದ ದೋಷದಿಂದ ಬಾಣಂತಿ ಹುಚ್ಚರ ತರಹ ಆಡುತ್ತಿದ್ದಾಳೆಂದೂ, ಸರಿಯಾಗಿ ಹೊಟ್ಟೆಗೂ ತಿನ್ನದೆ ಬರಿ ಮಣ್ಣು ಮಸಿ ಅಕ್ಕಿ ತಿನ್ನುತ್ತಾಳೆಂದೂ ಹೇಳಿದಳು. ಮಗುವಿಗೆ ಹಾಲನ್ನೂ ಕುಡಿಸುವುದಿಲ್ಲ. ಗಂಡ ಅದೆಷ್ಟು ಹೊಡದರೂ ಮಾತು ಕೇಳದೇ ಅವನಿಗೇ ತಿರುಗಿ ಹೊಡೆಯಲು ಹೋಗುತ್ತಾಳೆ. ಮಲಗಿದ ಮಗುವನ್ನು ಎಬ್ಬಿಸಿ ಹಾಲು ಕುಡಿಸುವುದು; ರಾತ್ರಿ ನಿದ್ದೆ ಮಾಡದೆ ಗಂಡನ ಕಾಯುತ್ತ ಅವ ಉಚ್ಚೆ ಹೊಯ್ಯಲು ಎದ್ದರೂ ಜಗಳ ಮಾಡುವುದು; ಯಾರೂ ತನ್ನ ಮಗುವನ್ನು ಮುಟ್ಟಬೇಡಿರೆಂದು ಜಗಳ ಮಾಡುವುದು ಹೀಗೇ ಅವಳ ವಿಚಿತ್ರ ವರ್ತನೆಯಿಂದ ರಾಮಾಂಜಿನಿ ಅದೆಷ್ಟು ರೋಸಿಹೋಗಿರುವನೆಂದರೆ ಮತ್ತೊಂದು ಮದುವೆ ಆಗುವ ವಿಚಾರದಲ್ಲಿದ್ದಾನೆ ಎಂದಳು.

'ಎಷ್ಟು ದುಡ್ಡು ಬೇಕನ್ನ ಆಗ್ಲಿ ನಿನ್ನ ಕೈಗುಣ ಒಳ್ಳೇದೈತೆ, ಇವಳಿಗೊಂದು ಒಳ್ಳಿ ಔಸ್ತಿ ಕೊಡಮ್ಮ' ಎನ್ನುತ್ತಾ ಅವಳ ರೋಗ ಚರಿತ್ರೆ ಹೇಳುತ್ತ ನನ್ನನ್ನು ಉಬ್ಬಿಸುವ ಮಾತನಾಡಿದಳು.

ಬೆದರಿದ್ದ ಚಂಚಲ ಕಣ್ಣುಗಳು ಅಪರಾಧಿ ಭಾವವನ್ನು ಅಕ್ಕಮ್ಮನ ಮುಖದ ಮೇಲೆ ಸ್ಪಷ್ಟವಾಗಿ ತೋರಿಸುತ್ತಿದ್ದವು. ಮಸಿ ತಿಂದ ಗುಟ್ಟನ್ನು ಅವಳ ಬಾಯಿ–ಹಲ್ಲುಗಳ ಬಣ್ಣ ಹೇಳುತ್ತಿದ್ದವು. ಕೆಂಚಗೆ ನೆಟ್ಟ ನಿಂತ ಕೂದಲು ಅಪೌಷ್ಟಿಕತೆಯನ್ನು ಸಾರಿ ಹೇಳುತ್ತಿತ್ತು. ಮಲಗಿದಲ್ಲೇ ಕಾಲು ಮಡಚುತ್ತಾ ಚಾಚುತ್ತಾ, ತುಂಬಿದ ಮೊಲೆಗಳ ಮೇಲಿನ ಸೆರಗು ಎಳೆದುಕೊಳ್ಳುತ್ತಾ, ಕೂದಲು ಸರಿ ಮಾಡಿಕೊಳ್ಳುತ್ತಾ, ನೆಟಿಕೆ ಮುರಿಯುತ್ತಾ ಆತಂಕದಲ್ಲಿ ಚಡಪಡಿಸುತ್ತಿದ್ದಳು. ಬಳಿ ಹೋದದ್ದೇ ಧಡಕ್ಕನೆ ಎದ್ದು ಕುಳಿತು ಚಂಗನೆ ಹಾರಿ ಹೊರಗೋಡಿದಳು. ಅವಳ ಹಿಂದೆ ದುರ್ನಾತದ ಸುಳಿಯೊಂದು ಸರಿದು ಹೋಯ್ತು.

ಇವಳಿಗೆ ಬಾಣಂತಿ ಸನ್ನಿ–ಪುರ್‌ಪೆರಿಯಲ್ ಸೈಕೋಸಿಸ್–ಎಂದು ಸ್ಪಷ್ಟವಾಯ್ತು. ಕೆಲ ಹೆಂಗಸರಿಗೆ ಹೆರಿಗೆಯಾದ ನಂತರ, ಹೆರಿಗೆ ನೋವೆಂಬ ಒತ್ತಡ ಅನುಭವಿಸಿದ್ದಕ್ಕೋ ಎಂಬಂತೆ ಉಂಟಾಗುವ ಮಾನಸಿಕ ಅಸ್ವಸ್ಥತೆ ಅದು. ಆದರೆ ಅಕ್ಕಮ್ಮನ ಸೈಕೋಸಿಸ್ ಕತೆ ಏನೇ ಇರಲಿ, ಅದಕ್ಕಿಂತ ದೊಡ್ಡ ಸಮಸ್ಯೆ ಬಿಳಿಮುಟ್ಟಿನದು. ನೀರಿನಂತಹ, ಕೆಟ್ಟ ವಾಸನೆಯ ಬಿಳಿಮುಟ್ಟು ಬಟ್ಟೆ ಒದ್ದೆಯಾಗುವಷ್ಟು ಹೋಗುತ್ತಿದ್ದು ತೊಡೆಸಂದೆಲ್ಲ ಕೊರೆದು ಹೋಗಿದೆಯೆಂದೂ; ಇಡೀ ದಿನ ಅವಳಿಗೆ ಬಟ್ಟೆ ತೊಳೆಯುವುದು, ಬೇರೆ ಉಡುವುದೇ ಕೆಲಸ ಆಗಿದೆಯೆಂದು ನಾಗಮ್ಮ ಹೇಳಿದಾಗ ಲೇಬರ್ ಟೇಬಲ್ ಹತ್ತಿಸಿದ್ದೆವು. ಬಳಿ ಹೋದರೆ... ಹೆಣ ಕೊಳೆತ ವಾಸನೆ. ಸಿಸ್ಟರುಗಳು ಕಷ್ಟಪಟ್ಟು ಉಸಿರಾಡುತ್ತ ಕೆಮ್ಮುತ್ತ ನಿಂತರು. ಸುಮ್ಮನೆ ಮಲಗೆಂದು ತೆಲುಗಲ್ಲಿ ಜೋರು ಮಾಡುತ್ತ ನಾಗಮ್ಮ ಮೂಗಿಗೆ ಸೆರಗು ಅಡ್ಡವಾಗಿ ಹಿಡಿದು ನಿಂತಳು. ಗ್ಲೌಸ್ ಹಾಕಿದ ಕೈಯನ್ನೂ, ನನ್ನನ್ನೂ ಹಿಂದೆ ದಬ್ಬುವಂತಹ ವಾಸನೆ. ಅಲ್ಲಲ್ಲಿ ಕೆಲ ಲೈಂಗಿಕ ಕಾಯಿಲೆಯ ಕುರುಹುಗಳು..

ಮುಂದಿನದು ಏನಂತ ಹೇಳುವುದು? ಎಳೆಕೂಸಿನ ತಲೆಯಷ್ಟು ದೊಡ್ಡದಿದ್ದ ಟ್ಯಾಂಪೂನ್ ಅವಳ ಜನನಾಂಗದಲ್ಲಿ ಗಿರಿದು ಕುಳಿತಿತ್ತು. ಹೆರಿಗೆ ನಂತರ ಅತಿ ರಕ್ತಸ್ರಾವವಾದಾಗ ಇಟ್ಟ ಟ್ಯಾಂಪೂನ್ ತೆಗೆಯಲು ಆಸ್ಪತ್ರೆಯವರು ಮರೆತರೋ ಅಥವಾ ಇವರೇ ಅಲ್ಲಿಂದ ಹೇಳದೆ ಬಂದರೋ ಅಂತೂ ರಕ್ತ ಹೀರಿದ ಅದು ತಿಂಗಳುಗಟ್ಟಲೆಯಿಂದ ಕೊಳೆಯತೊಡಗಿತ್ತು. ಕುಳಿತಲ್ಲೇ ಸೀರೆ ಬಟ್ಟೆ ಒದ್ದೆಯಾಗಿಸುವ, ಯಾರೂ ಹತ್ತಿರ ಸುಳಿಯದಷ್ಟು ಕೆಟ್ಟವಾಸನೆಯ ಬಿಳಿಸೆರಗು ಅವಳ ತಲೆ ಕೆಡಿಸಿರಲು ಸಾಕು. ಹತ್ತಿರ ಬಂದ ಗಂಡ ಹೇಸಿಗೆ ಪಟ್ಟುಕೊಳ್ಳದಿರಲಿ ಎಂದು

ಅವನನ್ನು ಪರಚುತ್ತ ದೂರವಿಟ್ಟಳೇ? ದೂರವಿದ್ದದ್ದಕ್ಕೇ ಅನುಮಾನಪಟ್ಟು ಮನೋವೇದನೆಗೆ ಒಳಗಾದಳೇ? ಯಾವ ನಡವಳಿಕೆಯ ಮೂಲ ಯಾವುದೆಂದು ಹೆಕ್ಕಿ ತೆಗೆಯುವುದು?

*****

ಒಂದು ದಿನ ಕಪ್ಪಾದ ಮೇಲೆ ರಕ್ತ ಸೋರುವ ಕೈಯನ್ನು ಒತ್ತಿ ಹಿಡಿದು ಆಂಜಿನಿ ಬಂದ. ಜತೆಗೇ ನಮ್ಮೂರಿನ ತುಳಸು. ತುಳಸುವಿನ ಮನೆ ಕೊಟ್ಟಿಗೆಯ ಹುಲ್ಲು ಅಟ್ಟದ ಮೇಲೆ ನಾಗರ ಹಾವು ಸೇರಿಕೊಂಡಿತ್ತು. ಅದನ್ನು ಹಿಡಿಯಲು ಆಂಜಿನಿಯನ್ನು ಕರೆಸಿದ್ದರು. ತುಂಬ ಕಷ್ಟಪಟ್ಟು ಬಲೆ ಹಾಕಿ ಹಾವು ಹಿಡಿದು ಸ್ಟೀಲ್ ಡಬ್ಬಿಯಲ್ಲಿಟ್ಟು ದೂರ ಬಿಟ್ಟು ಬರಲು ಗುಡ್ಡದತ್ತ ಹೋಗುತ್ತಿದ್ದರು. ಕುಡಿದು ತೂರಾಡುತ್ತ ಸ್ಟೀಲ್ ಡಬ್ಬಿ ತಲೆ ಮೇಲಿಟ್ಟುಕೊಂಡು ಮುನ್ನಡೆದ ಆಂಜಿನಿ. ಅರೆಗಣ್ಣು ಬಿಡುತ್ತ ಕಲ್ಲೆಡವಿ ಬಿದ್ದ. ಅವನ ತಲೆ ಮೇಲಿನ ಡಬ್ಬಿ ಹಾರಿ ಮುಚ್ಚಳ ತೆಗೆದು ಹಾವು ಕೆಳಗೆ ಬಿತ್ತು. ಬೇಡವೆಂದು ತುಳಸು ಹೇಳಿದರೂ ಕೇಳದೆ ಮತ್ತೆ ಹಾವನ್ನು ಹಿಡಿಯುವಾಗ ಗುರಿ ತಪ್ಪಿ ಅದು ಅವನ ಅಂಗೈ ಕಚ್ಚಿತು. ಕಚ್ಚಿದ ಹಾವನ್ನು ಕಿತ್ತು ದೂರ ಬಿಸಾಡುವಾಗ ಕೈಯ ಮಾಂಸವೂ ಕಿತ್ತು ಬಂತು. ಗಾಯವನ್ನು ತುಳಸುವಿನ ಸೊಪ್ಪಿನ ಕತ್ತಿಯಿಂದ ಇನ್ನಷ್ಟು ದೊಡ್ಡದು ಮಾಡಿ 'ನಂಗೇನೂ ಆಗಲ್ಲ, ಗರುಡ ರೇಖೆ ಇದೆ, ಗರುಡರೇಖೆ' ಎಂದು ಧೈರ್ಯವಾಗಿ ಆಂಜಿನಿ ಹೇಳಿದ್ದರೂ ಜೊತೆಗಿದ್ದ ತುಳಸು ಅವನನ್ನು ಆಸ್ಪತ್ರೆಗೆ ಕರೆ ತಂದಿದ್ದ.

ಅರೆನಿಮೀಲಿತ ನೇತ್ರನಾಗಿ ಮಲಗಿದ್ದ ಆಂಜಿನಿ ಒಂದು ಮಾತೂ ಆಡಲಿಲ್ಲ. ಒಂದೆರಡು ಬಾರಿ ಕರೆದ ಮೇಲೆ 'ಆಂ' ಎಂದು ಎಚ್ಚರಗೊಂಡ. ಸುದ್ದಿ ತಿಳಿದು ಬಿಡಾರದಿಂದ ಹೆಂಡತಿ, ಅಕ್ಕ ಓಡಿ ಬಂದರು. ಮುಸುಮುಸು ಅಳುತ್ತ ಏನನ್ನೋ ಅವನ ಕುತ್ತಿಗೆಗೆ ಕಟ್ಟಿದರು. ಮತ್ತೇನನ್ನೋ ತೇಯ್ದು ಗಾಯಕ್ಕೆ, ಕಣ್ಣಿಗೆ, ಎದೆಗೆ ಮೆತ್ತಿದರು. ಮಾತ್ರೆಯೊಂದನ್ನು ಹಾಲಿನಲ್ಲಿ ಮುಳುಗಿಸಿ ಕುಡಿಯಲು ಕೊಟ್ಟರು. ಗಾಯಕ್ಕೆ ಮೂರ್ನಾಲ್ಕು ಎಳೆಯ ಕೋಳಿಪಿಳ್ಳೆಗಳ ಕುಂಡೆ ಒತ್ತಿದರು. ಅವನು ಮಾತನಾಡುತ್ತಲೇ ಇರಲೆಂದು ಪ್ರಶ್ನೋತ್ತರ ನಡೆಸಿದ್ದರು.

ನಮ್ಮ ಬಳಿ ಇದ್ದ ನಾಲ್ಕು ವಯಲ್ ಎಎಸ್‌ವಿ (ಆಂಟಿ ಸ್ನೇಕ್ ವೆನಮ್ ಇಂಜೆಕ್ಷನ್) ಏನೂ ಸಾಲದು. ಕೂಡಲೇ ಪಟ್ಟಣದ ಸರಕಾರಿ ಆಸ್ಪತ್ರೆಗೆ ಹೋಗಿರೆಂದು ಎಎಸ್‌ವಿ ಕೊಡುತ್ತ ಬಾರಿಬಾರಿ ಹೇಳಿದರೂ ಅವರಿಬ್ಬರೂ ಆ ಮಾತನ್ನು ಕಿವಿಗೇ ಹಾಕಿಕೊಳ್ಳಲಿಲ್ಲ. ಒಂದು ಇಂಜೆಕ್ಷನ್‌ಗೆ ಐನೂರು ಆರುನೂರು ರೂ. ಆಗುತ್ತದೆ. ಅಷ್ಟು ಹಣವಿಲ್ಲದ್ದಕ್ಕೆ ಉಪೇಕ್ಷೆ ಮಾಡುತ್ತಿದ್ದಾರೋ? ತಮ್ಮ ಪಾರಂಪರಿಕ ಮದ್ದಿನ ಮೇಲಿನ ಅತೀವ ವಿಶ್ವಾಸವೋ? ಹಾವು ಹಿಡಿಯುವವರಿಗೆ ಗತಿ ಇಷ್ಟೇ ಎಂದು ತಮ್ಮ ಅನುಭವದಿಂದ ನಿರ್ಧರಿಸಿಬಿಟ್ಟರೋ?

ಬರಬರುತ್ತ ಆಂಜಿನಿ ಕೋಮಾವಸ್ಥೆಗೆ ಜಾರುತ್ತಿದ್ದ. ಅವನ ಕೊನೆಗಾಲ ಬಂತೆಂದು ಹೆಂಗಸರಿಗೂ ತಿಳಿದು ಕೈ ಚೆಲ್ಲಿ ಸುಮ್ಮನೆ ಕುಳಿತುಬಿಟ್ಟರು. ಕಣ್ಣೆದುರೇ ನೀಲಿಗಟ್ಟುತ್ತ, ಉಸಿರಾಟ ಏರುಪೇರಾಗಿ ಬಾಯಲ್ಲಿ ನೊರೆ ಸುರಿಸುತ್ತಾ ಪ್ರಜ್ಞಾಹೀನನಾದ ಅವನನ್ನು ತಳಮಳಿಸುತ್ತ ನೋಡುವುದು ಬಿಟ್ಟು ಏನೂ ಮಾಡಲಾಗಲಿಲ್ಲ. ತನ್ನ ಹುಂಬತನಕ್ಕೋ, ನನ್ನ ಕರ್ತವ್ಯಪ್ರಜ್ಞೆ ಅವರನ್ನು ಎಚ್ಚರಿಸುವಲ್ಲಿ ವಿಫಲವಾದದ್ದಕ್ಕೋ ಅರ್ಧ ತಾಸಿನಲ್ಲಿ ನೋಡನೋಡುತ್ತಿದ್ದಂತೆ ಆಂಜಿನಿ ಶಾಂತನಾದ. ಒಬ್ಬರಾದ ಮೇಲೊಬ್ಬರು ಗಂಡಸರು ಆಸ್ಪತ್ರೆ ತಲುಪಿದಾಗ ಆ ಹೆಣ್ಣುಮಕ್ಕಳ ಅಳು, ಗಲಾಟೆ ಮುಗಿಲು ಮುಟ್ಟಿತ್ತು..

ಹಾವಿನ ಬೇರು, ಮೂಲಿಕೆಗಳಿದ್ದ ಗಂಟೊಂದು ಅಲ್ಲೇ ಆಸ್ಪತ್ರೆಯ ಒಂದು ಮೂಲೆಯಲ್ಲಿ ಎಷ್ಟೋ ದಿನ ಕಾಡಿಸುತ್ತ ಬಿದ್ದಿದ್ದವು..

*****

ಬುಡಕಟ್ಟು ಜನರ ಸಲುವಾಗಿ ಕೆಲಸ ಮಾಡಿದ ಮಹಾಶ್ವೇತಾದೇವಿ ಒಂದು ಘಟನೆಯ ಬಗ್ಗೆ ಹೇಳಿದ್ದರು: ಅವರೊಮ್ಮೆ ಕಾರ್ಯನಿಮಿತ್ತ ಬುಡಕಟ್ಟು ಜನರ ಪ್ರದೇಶಕ್ಕೆ ಹೋದಾಗ ಅವರೊಟ್ಟಿಗೇ ಊಟಕ್ಕೆ ಕುಳಿತರು. ಎದುರು ಪತ್ರಾವಳಿ ಮೇಲೆ ಅನ್ನದ ರಾಶಿ ಹರಡಿಕೊಂಡಿತು. ಮತ್ತೊಂದು ಸಣ್ಣ ಗುಡ್ಡೆ ಉಪ್ಪೂ ಬಂತು. ಜೊತೆಗೆ ಸುಟ್ಟ ಮೆಣಸಿನಕಾಯಿ. ಬಿಸಿಲಿನಲ್ಲಿ ತಿರುಗಿ ದಣಿದು ಹಸಿದಿದ್ದ ಲೇಖಕಿ ಸಾರೋ, ಚಟ್ನಿಯೋ ಬರಬಹುದೆಂದು ಕಾಯುತ್ತ ಕುಳಿತಾಗ ಉಳಿದವರು ಉಣ್ಣಲು ಶುರುಮಾಡಿದ್ದರು. ತನ್ನ ಪಕ್ಕ ಕುಳಿತ ವೃದ್ಧ ಮಹಿಳೆಯನ್ನು 'ಅನ್ನಕ್ಕೆ ನೆಂಚಿಕೊಳ್ಳಲು ಏನೂ ಮಾಡುವುದಿಲ್ಲವೆ?' ಎಂದು ಕೇಳಿದಾಗ ಆಕೆ, 'ಅನ್ನಕ್ಕೆ ಹಸಿವೆನೇ ನೆಂಚ್ಕಂಡು ಉಣ್ಣು, ರುಚಿಯಾಗುತ್ತೆ' ಎಂದಳಂತೆ.

ಹಸಿವೆಯನ್ನೇ ನೆಂಚಿಕೊಂಡು ಉಣ್ಣುವ ಜನ! ಬುಡಕಟ್ಟು ಜನರ ಬದುಕಿನ ಅದೃಶ್ಯ ಸಂಕಟಗಳನ್ನು ವೃದ್ಧೆಯ ಉತ್ತರ ಅವರಿಗೆ ತೆರೆದು ತೋರಿಸಿತ್ತು.

ಥೈಲ್ಯಾಂಡಿಗೆ ಅಧ್ಯಯನ ಪ್ರವಾಸಕ್ಕೆ ಹೋಗಿದ್ದ ಕನ್ನಡದ ಡಿಆರ್ ಅರಣ್ಯವಾಸಿ ವೃದ್ಧ ಥೇರಿ ಸುದಮ್ಮಳನ್ನು ಭೇಟಿಯಾದರು. ಅಲ್ಲಿಯ ಪರಿಸರ ನಾಶಕ್ಕೆ ಜಾಗತೀಕರಣ, ಬಂಡವಾಳಶಾಹಿ ವ್ಯವಸ್ಥೆ, ಪಾಶ್ಚಿಮಾತ್ಯ ಸರಕು ಸಂಸ್ಕೃತಿ ಕಾರಣವೆಂದು ಆರೋಪಿಸುವಾಗ ತಡೆದ ಆಕೆ, 'ಈ ಅರಣ್ಯ ನನ್ನ ಶರೀರ. ಇಲ್ಲಿನ ಎಲ್ಲ ಬದಲಾವಣೆ ನನಗೆ ತಿಳಿಯುತ್ತದೆ. ತೊರೆಯ ನೀರು, ತೆವಳುವ ಹುಳು ದೂರು ಹೇಳುತ್ತವೆ. ಇದಕ್ಕೆಲ್ಲ ಮೂಲ ಕಾರಣ ಹಣದ ಬಗೆಗೆ ಎಲ್ಲರಿಗಿರುವ ದುರಾಸೆ. ಇಷ್ಟು ತಿಳಿದರೆ ಅದನ್ನು ದಾಟಲು ಯತ್ನಿಸಬಹುದು, ಅಷ್ಟೆ' ಎನ್ನುತ್ತಾಳೆ. ತೆವಳುವ ಹುಳು ವೃದ್ಧ ಥೇರಿಗೆ ದೂರು ಹೇಳುವುದು!

ಅಲೆಮಾರಿ-ಬುಡಕಟ್ಟು ಸಮುದಾಯಗಳು ಹೀಗೇ. ಪ್ರಕೃತಿ-ಅರಣ್ಯವೇ ತಮ್ಮ ಶರೀರವೆಂಬಂತೆ ಬದುಕಿರುವವರು.

ಹಾರುವ ಹಕ್ಕಿಯ ಈಜುವ ಶಕ್ತಿಯನ್ನು ಪರೀಕ್ಷಿಸಹೊರಟರೆ ಅದು ದಯನೀಯವಾಗಿ ಸೋಲುತ್ತದೆ. ತಮ್ಮ ಪಾರಂಪರಿಕ ಅಲೆಮಾರಿ ಬದುಕಿನ ಹೊರಗೆ ಜಗತ್ತನ್ನು ಗ್ರಹಿಸಲಾಗದ ಅಲೆಮಾರಿ-ಬುಡಕಟ್ಟುಗಳು ನಾಗರಿಕ ಜಗತ್ತಿನ ಜೊತೆ ಸ್ಪರ್ಧಿಸಹೊರಟರೂ ಹಾಗೇ. ಆದರೆ ಹಾರುವವನಿಗೆ ಓಡುವ ಸ್ಪರ್ಧೆ ಸಾಧುವೆ? ಅಗತ್ಯವೆ?

ಇದು ಅಲೆಮಾರಿ-ಬುಡಕಟ್ಟುಗಳ ಕುರಿತ ಮೊದಲ ದ್ವಂದ್ವ.

*****

ಇವೆಲ್ಲ ನಮ್ಮ ಕಣ್ಣೆದುರು ಕಾಣುವ ಅಲೆಮಾರಿ ಬದುಕಿನ ಸರಳ ಪರಿಚಯವಾಯಿತು. ಆದರೆ ಭಾರತದ 7% ಜನಸಂಖ್ಯೆ ಹೊಂದಿರುವ ಅಲೆಮಾರಿ-ಬುಡಕಟ್ಟು ಸಮುದಾಯಗಳ ಬದುಕಿನ ಸಮಸ್ಯೆಗಳು ಇಷ್ಟು ಸರಳ ವ್ಯಾಖ್ಯಾನಕ್ಕೆ ಸಿಗಲಾರವು. ಅವರ ಬದುಕು ಒಂದಲ್ಲ ಹಲವು ಕಾರಣಗಳಿಗೆ ಎಲ್ಲರಿಗೂ ಮುಖ್ಯವಾಗಿದೆ. ಅತಿ ಹೆಚ್ಚು ಒಕ್ಕಲೆಬ್ಬಿಸುವಿಕೆ-ಪುನರ್ವಸತಿಗೊಳಗಾಗುತ್ತಿರುವವರು; ಅಭಿವೃದ್ಧಿ ಯೋಜನೆಗಳಿಗೆ-ಪರಿಸರ ರಕ್ಷಣೆ ಹೆಸರಿನ ಕಾರ್ಯಕ್ರಮಗಳಿಗೆ ತಮ್ಮ ನೆಲದ ಹಕ್ಕು ಬಿಟ್ಟುಕೊಟ್ಟಿರುವವರು ಬುಡಕಟ್ಟು ಸಮುದಾಯವೇ. ಹಾಗೆಯೇ ಕಳೆದುಹೋದ ಬದುಕಿನ ಹಕ್ಕುಗಳನ್ನು ಮರುಗಳಿಸಿಕೊಳ್ಳಲು ವಿಸ್ತೃತ ನೆಲೆಯ ಹೋರಾಟ ಅವಶ್ಯವಿರುವ ಸಮುದಾಯವೂ ಇದೇ. ಹೀಗಿರುವಾಗಲೇ ಆಧುನಿಕತೆ ಹಾಗೂ ಜಾಗತೀಕರಣಗಳು ಭಾರತೀಯ ಸಮಾಜದ ಚಿತ್ರಣವನ್ನು ಅಮೂಲಾಗ್ರ ಬದಲಿಸಹೊರಟಿವೆ. ಅಂಚಿನಲ್ಲಿರುವ ಸಮುದಾಯಗಳು ತಬ್ಬಲಿಯಾಗಿ ಹಸಿವೆ,

ಇಂದು ಕೆಲ ಬುಡಕಟ್ಟು ಸಮುದಾಯಗಳು ಮುಖ್ಯವಾಹಿನಿಗೆ ಬಂದು ಮುಖ್ಯಮಂತ್ರಿ–ಮಂತ್ರಿಗಳಾದ ನಾಯಕರನ್ನು ಹೊಂದಿವೆ. ಉತ್ತರ ಭಾರತದ ಕೆಲ ಉದಾಹರಣೆಗಳು ನಮ್ಮ ಮುಂದಿವೆ. ಆದರೆ ಅವರು ಕೇವಲ ತಮ್ಮ ಬುಡಕಟ್ಟಿನ ಪ್ರತಿನಿಧಿಗಳಷ್ಟೇ ಅಲ್ಲದಿರುವುದರಿಂದ, ರಾಜಕಾರಣದ ಸಕಲ ಒತ್ತಡಗಳನ್ನೂ ನಿಭಾಯಿಸಬೇಕಾಗಿರುವುದರಿಂದ ಸಮುದಾಯಕ್ಕಾಗಿ ಗಮನಾರ್ಹ ಕೆಲಸ ಮಾಡಲಾಗಿಲ್ಲ. ಅಲ್ಲದೇ ಬುಡಕಟ್ಟು ಸಮುದಾಯಗಳು ಸಾಂವಿಧಾನಿಕ ಚೌಕಟ್ಟಿನೊಳಗೆ ಒಂದಾಗಿ ಪ್ರತ್ಯೇಕ ಮೀಸಲಾತಿಗಾಗಿ ಬೇಡಿಕೆ ಸಲ್ಲಿಸುತ್ತಿರುವ, ರಾಜಕೀಯವಾಗಿ ಒತ್ತಡ ಗುಂಪುಗಳ ಜೊತೆ ಗುರ್ತಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಆ ಸಮುದಾಯಗಳು ರಾಜಕಾರಣದ ದಾಳಗಳ ನಡುವೆ ಸಿಲುಕಿ ಒಡೆದುಹೋಗದಂತೆ ನೋಡಿಕೊಳ್ಳುವುದು ಉಳಿದವರ ಜವಾಬ್ದಾರಿಯಾಗಿದೆ.

ಬಡತನಗಳ ಜೊತೆಗೆ ಅಭದ್ರತೆ ಅನುಭವಿಸುತ್ತಿವೆ. ಅಲೆಮಾರಿಗಳ ಪಾರಂಪರಿಕ ಜೀವನವಿಧಾನ ಪಲ್ಲಟಗೊಳ್ಳತೊಡಗಿದೆ. ಅಲೆಮಾರಿ ಬದುಕಿನ ಸಮಸ್ಯೆಗಳಿಗಿಂತ ಅಲೆಮಾರಿಗಳೇ ಸಮಸ್ಯೆ ಎಂದು ನಾಗರಿಕ ಸಮಾಜ ಹಾಗೂ ಪ್ರಭುತ್ವ ಭಾವಿಸಿ ಅವರ ಎತ್ತಂಗಡಿ–ಪುನರ್ವಸತಿ ಮಾತ್ರ ತನ್ನ ಕರ್ತವ್ಯ ಎಂದು ತಿಳಿದಿದೆ. ದೀರ್ಘಕಾಲೀನ ಮುನ್ನೋಟವಿಲ್ಲದ ಯೋಜನೆಗಳು ಅವರ ಬದುಕಿಗೆ ಕಂಟಕಗಳಾಗಿ ಪರಿಣಮಿಸಿ ತಬ್ಬಲಿತನವನ್ನು ಇನ್ನಷ್ಟು ಹೆಚ್ಚು ಮಾಡಿವೆ. ಈಶಾನ್ಯ ರಾಜ್ಯಗಳ ಅಲೆಮಾರಿ ಬುಡಕಟ್ಟು ಸಮುದಾಯ ಪ್ರಜ್ಞೆ ಎಷ್ಟು ಜಾಗೃತಗೊಂಡಿದೆಯೆಂದರೆ ಭಾರತ ರಾಷ್ಟ್ರೀಯತೆಯ ಚೌಕಟ್ಟಿನೊಳಗೆ ತಮ್ಮನ್ನು ಗುರುತಿಸಿಕೊಳ್ಳುವುದನ್ನೇ ಅವು ಪ್ರಶ್ನಿಸುತ್ತಿವೆ. ಪ್ರಭುತ್ವಕ್ಕೆ ಅದು ದೇಶದ ಸಮಗ್ರತೆಗೆ ಧಕ್ಕೆಯೆಂಬಂತೆ ಕಂಡುಬಂದು ಬುಡಕಟ್ಟು ಹೋರಾಟಗಳನ್ನು ದಮನಿಸಲು ಒಂದು ನೆವ ಸಿಕ್ಕಂತಾಗಿದೆ.

ಅಲೆಮಾರಿ–ಬುಡಕಟ್ಟು ಜನರನ್ನಾಗಲೀ ಅವರ ಅಗತ್ಯಗಳನ್ನಾಗಲೀ ಅರ್ಥ ಮಾಡಿಕೊಳ್ಳುವಲ್ಲಿ ನಾಗರಿಕ ಜಗತ್ತು ಹೀನಾಯವಾಗಿ ಸೋತಿದೆ. ಒಂದೆಡೆ ಜನಪರ ಕಾಳಜಿಯ ಸಂಘಟನೆಗಳು ಅವರಲ್ಲಿ ಹಕ್ಕಿನ ಕುರಿತ ಜಾಗೃತಿ ಮೂಡಿಸುತ್ತಿದ್ದರೆ, ಮತ್ತೊಂದೆಡೆ ಶಸ್ತ್ರಸಜ್ಜಿತ ಹೋರಾಟವೊಂದೇ ಬಿಡುಗಡೆಯ ದಾರಿ ಎಂಬ ಧೋರಣೆಯನ್ನು ಬಿತ್ತಲು ನೋಡುತ್ತಿವೆ. ಇದರ ಜೊತೆಗೆ ಧಾರ್ಮಿಕ, ಸಾಮಾಜಿಕ ಸುಧಾರಣೆ ಹೆಸರಿನ ಉದಾತ್ತ ಉದ್ದೇಶವಿಟ್ಟುಕೊಂಡು ಎನ್‌ಜಿಒಗಳು ಸಹಾಯ ಧನದ ಹಣದಲ್ಲಿ ದಕ್ಕಿದಷ್ಟು ಮುಕ್ಕಲು ಕಾದು ನಿಂತಿವೆ. ಆದರೆ ಹೀಗೆ ಹೊರಗಿನಿಂದ ಬಂದು ಜೊತೆ ನಿಲ್ಲುವವರು ಒಂದಲ್ಲಾ ಒಂದು ಹಿತಾಸಕ್ತಿಯ ಭಾಗವಾಗಿದ್ದು ಅವರು ಈ ಸಮುದಾಯಗಳನ್ನು ಬಿಡುಗಡೆಯೆಂದು ತಪ್ಪು ದಾರಿಯಲ್ಲಿ ಕೊಂಡೊಯ್ಯುವ ಸಾಧ್ಯತೆಗಳಿವೆ. ಈಗ ಆಗುತ್ತಿರುವುದು ಎಲ್ಲರ ಕಣ್ಣೆದುರಿಗಿದೆ.

ಸ್ವಾತಂತ್ರ್ಯಪೂರ್ವ ಕಾಲದಿಂದಲೂ ಬುಡಕಟ್ಟು ಹೋರಾಟಗಳು ನಡೆದಿವೆ. ಆದರೆ ಅದು ಎಂದಿಗೂ ಸಾಮ್ರಾಜ್ಯಶಾಹಿ ಹೋರಾಟವಾಗಿರಲಿಲ್ಲ. ಬದಲಾಗಿ ಆತ್ಮರಕ್ಷಣೆಯ, ಬದುಕುವ ಹಕ್ಕಿನ ಹೋರಾಟವಾಗಿತ್ತು. ಈಗಿನ ಕವಲು ದಾರಿಯಲ್ಲಿ ಅಲೆಮಾರಿ–ಬುಡಕಟ್ಟುಗಳಿಗೆ ಆಯ್ಕೆಯ ಅವಕಾಶಗಳು ಹೆಚ್ಚಿಲ್ಲ. ತಮ್ಮ ಪರವಾಗಿ ನಿಲ್ಲುವವರೆಂದು ಹೊರಗಿನಿಂದ ಬಂದವರ ಮಾತು ನಂಬಬೇಕು. ಅಥವಾ ಆಳುವ ವರ್ಗ ತನ್ನ ಹಿತ ಕಾದೀತೆಂದು ನಂಬಿ ಸಲ್ವಾ ಜುದುಂ ಎಂದರೂ ಅದೇ ಸರಿ ಎಂದು ಶಸ್ತ್ರ ಹಿರಿದು ಹೊರಡಬೇಕು. ಇಲ್ಲವೇ ತಮ್ಮ ಹಕ್ಕು ಸವಲತ್ತುಗಳ ಕುರಿತ ಪ್ರಜ್ಞೆ ಎಚ್ಚೆತ್ತು ಅವರೊಳಗೇ ಧೀಮಂತ ನಾಯಕನೊಬ್ಬ ಹುಟ್ಟಿ ಬರಬೇಕು. ಈ ಮೂರರಲ್ಲಿ ಮೂರನೆಯದು ಹೆಚ್ಚು ಫಲ ನೀಡುವಂಥ ದಾರಿ. ಅದು ಅಂಬೇಡ್ಕರ್ ಹುಟ್ಟಿ ಬಂದ ದಾರಿ.

ಸಮುದಾಯದೊಳಗಿನಿಂದ ಒಬ್ಬ ಸರ್ವಸಮ್ಮತ ನಾಯಕ ಉದಿಸಿ ಬರುವುದು ಸಂಖ್ಯಾಬಲ ಲೆಕ್ಕಾಚಾರದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಷ್ಟಸಾಧ್ಯ. ಅದರಲ್ಲೂ ಭಿನ್ನ ಭಾಷಿಕ, ಪ್ರಾಂತೀಯ ನೆಲೆಗಳ; ಭಿನ್ನ ಪಂಗಡಗಳ; ಪರಸ್ಪರ ಕೊಡು–ಕೊಳು ಸಂಬಂಧಪಿರದ ನೂರಾರು ಪಂಗಡಗಳು ಒಬ್ಬ ನಾಯಕನನ್ನು ತಮ್ಮವನೆಂದು ಒಪ್ಪಿಕೊಳ್ಳುವುದು ದೂರದ ಮಾತಾಯಿತು. ಈ ದೃಷ್ಟಿಯಿಂದ ಪಂಗಡ–ಪ್ರದೇಶವ ಹಿನ್ನೆಲೆಯಿಂದಲ್ಲದೆ ಎಲ್ಲರೂ ಒಂದಾಗಬೇಕಾದ ಅನಿವಾರ್ಯತೆಯಿರುವ ತಾತ್ವಿಕ ಹಿನ್ನೆಲೆಯಿಂದ ನಾಯಕತ್ವ ದೊರೆಯಬೇಕಾದ ಅಗತ್ಯವಿದೆ. ಭಾರತದಾದ್ಯಂತ ಇದ್ದ ಭಿನ್ನ ಭಾಷೆ–ಪ್ರಾಂತ್ಯ–ಜಾತಿಗೆ ಸೇರಿದ ಶೋಷಿತ ಅಸ್ಪೃಶ್ಯ ಸಮುದಾಯಗಳು ತಮ್ಮ ಬದುಕುವ ಹಕ್ಕಿನ ಹೋರಾಟದ ನೆಪದಲ್ಲಿ ಒಂದಾಗಿ ದಲಿತ ಚಳವಳಿ ಹುಟ್ಟಿಕೊಂಡಿದ್ದಾದರೆ ಅದೇ ತಾತ್ವಿಕತೆಯನ್ನಾಧರಿಸಿ ಅಲೆಮಾರಿ–ಬುಡಕಟ್ಟು ಹೋರಾಟ ಶುರುವಾಗುವುದು ಅಸಾಧ್ಯವೆ? ಈ ನಿಟ್ಟಿನಲ್ಲಿ ಆ ಸಮುದಾಯಗಳಿಗೆ ಅಂಬೇಡ್ಕರ್ ಅವರಂತಹ ದೂರದೃಷ್ಟಿಯ, ಸ್ವಾಭಿಮಾನಿ ನಾಯಕನ ಅವಶ್ಯಕತೆಯಿದೆ.

ಅಲೆಮಾರಿ–ಬುಡಕಟ್ಟುಗಳನ್ನು ನಾಯಕತ್ವದ ಕೊರತೆ ಎಂದಿನಿಂದಲೂ ಕಾಡಿದೆ. ಹೀಗಾಗಿಯೇ ಬ್ರಿಟಿಷರ ಕಾಲದಿಂದ ಅವರಿಗೆ ಸಿಕ್ಕ ಪ್ರಾತಿನಿಧ್ಯ ನಗಣ್ಯ. ಸೈಮನ್ ಕಮಿಷನ್ ಮಾತುಕತೆ ಸಂದರ್ಭದಲ್ಲಿ ಹಾಗೂ ನಂತರ ಅಂಬೇಡ್ಕರ್ ತಾವು ಅಲೆಮಾರಿ–ಬುಡಕಟ್ಟು ಜನರ ಪ್ರತಿನಿಧಿ ಅಲ್ಲವೆಂದೂ, ತಾವು ಅಸ್ಪೃಶ್ಯ ಜನತೆಯನ್ನು ಮಾತ್ರ ಪ್ರತಿನಿಧಿಸುತ್ತಿರುವುದಾಗಿಯೂ ಸ್ಪಷ್ಟವಾಗಿ ಹೇಳಿದ್ದರು. ಡಿಪ್ರೆಸ್ಡ್ ಕ್ಲಾಸಸ್ ಎಂದರೆ ಅಸ್ಪೃಶ್ಯ ಸಮುದಾಯವೇ ಹೊರತು ಅಪರಾಧಿ ಬುಡಕಟ್ಟು ಮತ್ತು ಅಲೆಮಾರಿಗಳಲ್ಲ; ಬುಡಕಟ್ಟು ಜನರ ಸಮಸ್ಯೆಗಳು ಗಹನವಾದವೇ, ಆದರೆ ಅವು ಭಿನ್ನ ನೆಲೆಯವು. ಅವನ್ನು ಡಿಪ್ರೆಸ್ಡ್ ಕ್ಲಾಸಸ್ ಜೊತೆ ಸೇರಿಸಲಾಗದು ಎಂದು ಮತ್ತೆಮತ್ತೆ ಸ್ಪಷ್ಟಪಡಿಸಿದ್ದರು. ಇಡೀ ಹಿಂದೂ ಸಮುದಾಯದ ಪ್ರತಿನಿಧಿ ಗಾಂಧಿ ಎಂದು ಹೇಳಿಕೊಳ್ಳುವುದರಲ್ಲಿ ಅವರಿಗೆ ಯಾವ ವಿರೋಧವಿತ್ತೋ, ಬುಡಕಟ್ಟು ಜನರು ಮತ್ತವರ ಸಮಸ್ಯೆಗಳ ಪ್ರತಿನಿಧಿ ತಾವು ಎಂದು ಬಿಂಬಿಸಿಕೊಳ್ಳುವಲ್ಲಿಯೂ ಅವರ ವಿರೋಧವಿತ್ತು. ಆ ಸಮುದಾಯದಿಂದ ಬಂದ ನಾಯಕ ಮಾತ್ರ ಅವರನ್ನು ಪ್ರತಿನಿಧಿಸಬಲ್ಲ ಎನ್ನುವುದು ಅವರ ಖಚಿತ ನಿಲುವಾಗಿತ್ತು.

ಇಂದು ಕೆಲ ಬುಡಕಟ್ಟು ಸಮುದಾಯಗಳು ಮುಖ್ಯವಾಹಿನಿಗೆ ಬಂದು ಮುಖ್ಯಮಂತ್ರಿ–ಮಂತ್ರಿಗಳಾದ ನಾಯಕರನ್ನು ಹೊಂದಿವೆ. ಉತ್ತರ ಭಾರತದ ಕೆಲ ಉದಾಹರಣೆಗಳು ನಮ್ಮ ಮುಂದಿವೆ. ಆದರೆ ಅವರು ಕೇವಲ ತಮ್ಮ ಬುಡಕಟ್ಟಿನ ಪ್ರತಿನಿಧಿಗಳಷ್ಟೇ ಅಲ್ಲದಿರುವುದರಿಂದ, ರಾಜಕಾರಣದ ಸಕಲ ಒತ್ತಡಗಳನ್ನೂ ನಿಭಾಯಿಸಬೇಕಾಗಿರುವುದರಿಂದ ಸಮುದಾಯಕ್ಕಾಗಿ ಗಮನಾರ್ಹ ಕೆಲಸ ಮಾಡಲಾಗಿಲ್ಲ. ಅಲ್ಲದೇ ಬುಡಕಟ್ಟು ಸಮುದಾಯಗಳು ಸಾಂವಿಧಾನಿಕ ಚೌಕಟ್ಟಿನೊಳಗೆ ಒಂದಾಗಿ ಪ್ರತ್ಯೇಕ ಮೀಸಲಾತಿಗಾಗಿ ಬೇಡಿಕೆ ಸಲ್ಲಿಸುತ್ತಿರುವ, ರಾಜಕೀಯವಾಗಿ ಒತ್ತಡ ಗುಂಪುಗಳ ಜೊತೆ ಗುರ್ತಿಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಆ ಸಮುದಾಯಗಳು ರಾಜಕಾರಣದ ದಾಳಗಳ ನಡುವೆ ಸಿಲುಕಿ ಒಡೆದುಹೋಗದಂತೆ ನೋಡಿಕೊಳ್ಳುವುದು ಉಳಿದವರ ಜವಾಬ್ದಾರಿಯಾಗಿದೆ.

ಹೀಗೊಂದು ಪಾಸಿಂಗ್ ಥಾಟ್:

ಈಗ ಎಚ್ಚರಗೊಳ್ಳುತ್ತಿರುವ ಅಂಚಿನ ಸಮುದಾಯಗಳಿಗೆ ಅಂಬೇಡ್ಕರ್ ಪ್ರತಿಪಾದಿಸಿದ 'ದ್ವಿಮತದಾನ ಪದ್ಧತಿ' ಸಮರ್ಥ ನಾಯಕನನ್ನು ಸೃಷ್ಟಿಸಿ ಕೊಟ್ಟೀತೇ?

ದಲಿತ ರಾಜಕಾರಣ ಎಂದರೆ ಅದರಲ್ಲಿ ದಲಿತ ಹಿತಾಸಕ್ತಿ ಇರಬೇಕು. ಅದರಲ್ಲಿ ದಲಿತ ಧೋರಣೆ ಇರಬೇಕು. ದಲಿತರ ಹಸಿವು, ಅಪಮಾನ, ಶೋಷಣೆ, ಅಸಮಾನತೆಗಳ ಕ್ರೂರತೆಗಳನ್ನು ಸಮಗ್ರವಾಗಿ ಅರಿತಿರಬೇಕು. ದಲಿತರ ಸುಧಾರಣೆಯು ಉಳ್ಳವರ ಲಾಭಕ್ಕೆ ವಿರುದ್ಧವಾಗಿರುತ್ತದೆ. ದಲಿತರ ಬದಲಾವಣೆಯು ಅಸಮಾನತೆ ಹಾಗೂ ಶೋಷಕ ವ್ಯವಸ್ಥೆಯ ಬದಲಾವಣೆಯನ್ನು ಬೇಡುತ್ತದೆ. ದಲಿತರ ರಾಜಕಾರಣ ಎಂಬುದು ಎಲ್ಲಾ ಬಗೆಯ ಅಸಮಾನತೆ ಹಾಗೂ ಶೋಷಣೆಗಳನ್ನು ವಿರೋಧಿಸುತ್ತದೆ.

ದಲಿತ ರಾಜಕಾರಣದ ಸುತ್ತ ಮುತ್ತ...

ಇವತ್ತು ರಾಜಕಾರಣದ ಬಗ್ಗೆ ಮಾತಾಡುವುದು ಬಹಳ ಅಗ್ಗದ ವಿಷಯವಾಗಿದೆ. ಇದರ ಬಗ್ಗೆ ಮಾತಾಡದ ಯಾವ ದಿನಗಳೂ ಇಲ್ಲ. ಎಲ್ಲರೂ ಈ ಬಗ್ಗೆ ಮಾತಾಡುತ್ತಾರೆ. ಮಾಧ್ಯಮಗಳು ಇದರ ಚರ್ಚೆಯನ್ನು ಇನ್ನೊಂದಷ್ಟು ಸರಳಗೊಳಿಸಿವೆ; ಸಡಿಲಗೊಳಿಸಿವೆ. ಇನ್ನೂ ಕೆಲವು ಸಲ ಆ ಚರ್ಚೆಯ ಚೌಕಟ್ಟನ್ನು ಭ್ರಷ್ಟಗೊಳಿಸಿವೆ. ಒಂದು ಕಾಲದಲ್ಲಿ ಆ ಬಗ್ಗೆ ತಿಳುವಳಿಕೆಯುಳ್ಳವರು ಹಾಗೂ ವಿಶೇಷ ಪರಿಣತಿಯುಳ್ಳವರು ಮಾತ್ರ ಮಾತಾಡಬೇಕು ಎಂಬ ನಿರೀಕ್ಷೆ ಇತ್ತು. ಜೊತೆಗೆ ಮಾತಾಡಿದ್ದನ್ನು ಹಾಗೆಂದು ನಂಬಲಾಗಿತ್ತು. ರಾಜಕಾರಣದ ಬಗ್ಗೆ ಮಾತಾಡುವುದು ಬೇರೆ; ಅದನ್ನು ಕುರಿತು ಆಲೋಚಿಸಿ ಚರ್ಚೆ ಮಾಡುವುದು ಬೇರೆ. ಮಾತಿಗೆ ನಿರ್ದಿಷ್ಟವಾದ ಯಾವುದಾದರೊಂದು ಆಲೋಚನೆಯ ಚೌಕಟ್ಟು ಇರಲೇಬೇಕೆಂದಿಲ್ಲ. ಅಲ್ಲಿ ಜನಪ್ರಿಯವಾದ ಮಾಹಿತಿಗಳು, ಕೆಲವು ಅಂಕಿಅಂಶಗಳು, ಆರೋಪಗಳು, ಪ್ರತ್ಯಾರೋಪಗಳು ಇರಬಹುದು. ಇವು ಅನೇಕ ಸಲ ಕೇವಲ ಅಭಿಪ್ರಾಯದ ಮಟ್ಟದಲ್ಲೇ ಇರುತ್ತವೆ. ಈ ಅಭಿಪ್ರಾಯಗಳನ್ನೇ ಆಲೋಚನೆ ಎನ್ನಲು ಬರುವುದಿಲ್ಲ. ಹಾಗಾಗಿ ರಾಜಕಾರಣದ ಬಗ್ಗೆ ಸಾರ್ವಜನಿಕ ಜೀವನದಲ್ಲಿ ಕೇವಲ ಅಭಿಪ್ರಾಯಗಳು ಶೇರ್ ಆಗುತ್ತಿವೆಯೊ ಅಥವಾ ಗಂಭೀರವಾದ ಆಲೋಚನೆ ಹಾಗೂ ಚಿಂತನೆ ನಡೆಯುತ್ತಿದೆಯೊ ಎಂಬುದನ್ನು ವಿಂಗಡಿಸಿ ನೋಡಬೇಕಾಗಿದೆ. ಗಂಭೀರವಾದ ಆಲೋಚನೆಯ ಹಂತದಿಂದ ಸಾಮಾನ್ಯ ಮಟ್ಟದ ಅಭಿಪ್ರಾಯಗಳನ್ನೂ; ಸಾಮಾನ್ಯ ಮಟ್ಟದ ಅಭಿಪ್ರಾಯಗಳಿಂದ ಗಂಭೀರವಾದ ಆಲೋಚನೆಯನ್ನೂ ಪ್ರತ್ಯೇಕ ಮಾಡಬೇಕಾಗಿದೆ.

ರಾಜಕಾರಣದ ಬಗ್ಗೆ ಚರ್ಚೆ ಮಾಡುವುದು ಬೇರೆ; ರಾಜಕಾರಣಿಗಳ ಬಗ್ಗೆ ಚರ್ಚೆ ಮಾಡುವುದು ಬೇರೆ. ರಾಜಕಾರಣಿಗಳ ಮೋಸ, ಕಪಟ, ವಂಚನೆ, ಭ್ರಷ್ಟಾಚಾರ, ಅಕ್ರಮ ಆಸ್ತಿ, ಅಕ್ರಮ ಸಂಬಂಧ ಮುಂತಾದ ಮಾಹಿತಿ ಹಾಗೂ ಟೀಕೆಗಳನ್ನೇ ರಾಜಕಾರಣದ ಚರ್ಚೆ ಎಂದು ತಪ್ಪಾಗಿ ಭಾವಿಸಲಾಗಿದೆ ಮತ್ತು ತಪ್ಪಾಗಿ ತಿಳಿಯಲಾಗಿದೆ. ಇಂತಹ ವಿವರಣೆಗಳು ಮಾತಿಗೆ ಬಂದಾಗಲೆಲ್ಲ 'ನೈತಿಕತೆಯ' ಪ್ರಶ್ನೆಯನ್ನು, 'ಮೌಲ್ಯ'ದ ಪ್ರಶ್ನೆಯನ್ನು, 'ಸಾಮಾಜಿಕ ನ್ಯಾಯ'ದ ಪ್ರಶ್ನೆಯನ್ನು ಮುಂದಕ್ಕೆ ತರಲಾಗುತ್ತದೆ. ರಾಜಕಾರಣದ ಅಧಿಕಾರದ ಹಂತದಲ್ಲಿ ಕೆಲಸ ಮಾಡುವವರು 'ನೈತಿಕವಾಗಿ ಸರಿಯಾಗಿ ಬಿಟ್ಟರೆ ಎಲ್ಲವೂ ಸರಿ ಹೋಗುತ್ತದೆ' ಎಂಬ ಅಭಿಪ್ರಾಯವನ್ನು ಮತ್ತೆ ಮತ್ತೆ ಹೇಳಲಾಗುತ್ತಿದೆ. ಹಾಗಾಗಿ 'ರಾಜಕಾರಣಿಗಳು ಶುದ್ಧಹಸ್ತರಾಗಿರಬೇಕು' ಎಂತಲೊ, ಅವರು 'ನುಡಿದಂತೆ ನಡೆಯಬೇಕು' ಎಂತಲೊ ಅಪೇಕ್ಷೆಯನ್ನು ಮುಂದಿಡಲಾಗುತ್ತಿದೆ. ಇಂತಹ ಹುಸಿ ಹಾಗೂ ದುರ್ಬಲ ಭ್ರಮೆಗಳನ್ನೇ ರಾಜಕಾರಣವನ್ನು ಶುದ್ಧಿ ಮಾಡುವ ಪ್ರಬಲ ಅಸ್ತ್ರಗಳು ಎಂದೂ, ರಾಜಕಾರಣವನ್ನು ಶುದ್ಧಿ ಮಾಡಲು ಇರುವ ಏಕೈಕ ಪರಿಹಾರದ ಮಾರ್ಗ ಎಂದೂ ಹೇಳಲಾಗುತ್ತಿದೆ. 'ಸಂವಿಧಾನದ ಆಶಯಗಳನ್ನು ಸರಿಯಾಗಿ ಜಾರಿಗೊಳಿಸಬೇಕು, ಕಾನೂನುಗಳನ್ನು ಸರಿಯಾಗಿ ಜಾರಿಗೊಳಿಸಬೇಕು, ಲೋಕಾಯುಕ್ತವನ್ನು ಬಲಗೊಳಿಸಬೇಕು' ಹೀಗೆ ಏನೇನೊ ಭ್ರಮೆಗಳನ್ನು ರಾಜಕಾರಣದ ಶುದ್ಧಿಗೆ ಸೂಕ್ತವಾದ ಮದ್ದು ಎಂಬಂತೆ ನಂಬಿಸಲಾಗುತ್ತಿದೆ.

ಒಂದು ಕಾಲದಲ್ಲಿ ಸಾಮಾಜಿಕ ರಾಜಕೀಯ ಚಿಂತಕರು, ಹೋರಾಟಗಾರರು, ಬುದ್ಧಿಜೀವಿಗಳು ಹಾಗೂ ಮಾಧ್ಯಮದವರು ರಾಜಕಾರಣದ ಬಗ್ಗೆ ಮಾತಾಡುತ್ತಿದ್ದರು; ಚರ್ಚೆ ಮಾಡುತ್ತಿದ್ದರು. ಈಗ ಕಾಲ ಬದಲಾಗಿದೆ. ಕರ್ನಾಟಕದಲ್ಲಿ ಮಠಾಧೀಶರು 'ಈ ವಿಷಯದಲ್ಲಿ ನಾವೇನು ಕಡಿಮೆ?' ಎಂಬಂತೆ ಈ ಕಣಕ್ಕೆ ತಾವೂ ಜಿಗಿದಿದ್ದಾರೆ. ಬಾಬು ರಾಮದೇವ್ ತಮ್ಮ ಅಭಿಮಾನಿಗಳೆಂಬ ಗ್ರಾಹಕರೊಂದಿಗೆ ಇದಕ್ಕೆ ಧುಮುಕಿದ್ದಾರೆ. ಮಾಧ್ಯಮಗಳು ಯಾವುದನ್ನು ಹೇಳಬೇಕೊ ಅದನ್ನು ಮುಚ್ಚಿಡುತ್ತಾ; ಯಾವುದು ಮುಖ್ಯವಲ್ಲವೊ ಅದನ್ನು ಬಹಳ ಗಂಭೀರ ಎಂಬಂತೆ ವಿಕೃತಗೊಳಿಸಿ ಪ್ರಚಾರ ಮಾಡುತ್ತಿವೆ. ಅವು ತಮ್ಮ ಸ್ಪರ್ಧಾತ್ಮಕ ಪೈಪೋಟಿಗಾಗಿ ರಾಜಕಾರಣದ ಚರ್ಚೆಯನ್ನು ದುರ್ಬಲ ಹಂತಕ್ಕೆ ಇಳಿಸಿಬಿಟ್ಟಿವೆ. ಜನಸಾಮಾನ್ಯರು ತಮಗೆ ಸಿಕ್ಕಿದ ಮಾಧ್ಯಮಗಳ ಅಭಿಪ್ರಾಯಗಳನ್ನೇ ತಮ್ಮ ಅಭಿಪ್ರಾಯಗಳೆಂದು ಭಾವಿಸಿ ಮಾತಾಡಿದ್ದನ್ನೇ ಮಾತಾಡುತ್ತಿದ್ದಾರೆ. ಎಷ್ಟೋ ಕಡೆ ಸ್ಥಳೀಯ ಚುನಾವಣೆಗಳಿಂದ ಹಿಡಿದು, ವಿಧಾನ ಸಭೆ ಮತ್ತು ಲೋಕ ಸಭೆಯ ಚುನಾವಣೆಯವರೆಗೆ ದೇವರು ದಿಂಡರು, ಮಂತ್ರವಾದಿಗಳು

ಹಾಗೂ ಜ್ಯೋತಿಷ್ಯರು ತಮ್ಮ ಶಕ್ತಿ ಮೀರಿ ಕೆಲಸ ಮಾಡುತ್ತಿವೆ. ಎಷ್ಟೋ ಕಡೆಗಳಲ್ಲಿ ಚುನಾವಣೆಗಳಲ್ಲಿ ಗೆದ್ದ ಅಭ್ಯರ್ಥಿಗಳು ಗುಡಿಗೋಪುರ ಕಟ್ಟಿಸಿರುವ, ಹಂದಿ ಕುರಿಗಳನ್ನು ಹರಕೆ ಕೊಟ್ಟಿರುವ ಹಾಗೂ ಕೊಡುತ್ತಿರುವ ಸಾವಿರಾರು ಉದಾಹರಣೆಗಳು ನಮ್ಮ ಮುಂದಿವೆ. ಇದೆಲ್ಲ ಅತ್ಯಂತ ದೌರ್ಬಲ ಸಂಗತಿ ಎನಿಸಬಹುದು. ಆದರೆ ರಾಜಕಾರಣವನ್ನು ಕುರಿತು ಚರ್ಚೆ ಮಾಡುವಾಗ ಅದರ ಚರ್ಚೆಯು ಇಸಿಬಿನಂತೆ (ಇಸುಬು: ಒಂದು ಬಗೆಯ ವಿಶಿಷ್ಟ ಚರ್ಮ ರೋಗ) ಅಗಲವಾಗುತ್ತಿರುವುದನ್ನು ಗಮನಿಸಲೇಬೇಕಾಗುತ್ತದೆ.

ರಾಜಕಾರಣಕ್ಕೆ ಹಿಂದುಳಿದ ವರ್ಗದವರು ಬರಬೇಕು, ಮಹಿಳೆಯರು ಬರಬೇಕು, ಅಲ್ಪ ಸಂಖ್ಯಾತರು ಬರಬೇಕು, ದಲಿತರು ಬರಬೇಕು. ಹಾಗೆ ಅವರೆಲ್ಲ ರಾಜಕೀಯವನ್ನು ಪ್ರವೇಶ ಮಾಡುವ ಮೂಲಕ ತಮ್ಮ ತಮ್ಮ ಸಮುದಾಯಗಳ ಪಾಲನ್ನು ಪಡೆಯಲು ಮುಂದಾಗಬೇಕು. ಇಲ್ಲದಿದ್ದರೆ ರಾಜಕಾರಣದಲ್ಲಿ ಇದೇ ಪರಿಸ್ಥಿತಿ ಮುಂದುವರಿಯುತ್ತದೆ ಎಂಬಂತಹ ನಂಬಿಕೆಗಳನ್ನು ಬಹಳ ಗಟ್ಟಿಯಾಗಿ ಹರಿಯಬಿಡಲಾಗಿದೆ. ಇದನ್ನೂ ಒಳಗೊಂಡಂತೆ ಶಕ್ತಿರಾಜಕಾರಣದಲ್ಲಿ ಯಾವ ಸಮುದಾಯಗಳು ಇರಬೇಕು ಎಂಬ ಚರ್ಚೆಯು ಶುರುವಾಗಿದೆ. ಫಲವಾಗಿ ಹಿಂದುಳಿದ ವರ್ಗಗಳ ರಾಜಕಾರಣ, ಮಹಿಳಾ ರಾಜಕಾರಣ, ದಲಿತ ರಾಜಕಾರಣ, ಸಾಂಸ್ಕೃತಿಕ ರಾಜಕಾರಣ ಮುಂತಾದ ನಿರ್ದಿಷ್ಟ ವ್ಯಾಪ್ತಿಯ ವಿಷಯಗಳು ಪ್ರಸ್ತುತ ರಾಜಕಾರಣದ ಚರ್ಚೆಯಲ್ಲಿ ಜಾಗ ಪಡೆದಿವೆ. ಪ್ರಾದೇಶಿಕ ಪಕ್ಷಗಳು, ಭಾಷೆ ಆಧಾರಿತ ಪಕ್ಷಗಳು, ವ್ಯಕ್ತಿ ಪ್ರತಿಷ್ಠೆಯ ಪಕ್ಷಗಳು, ವ್ಯಕ್ತಿ ಅಸ್ತಿತ್ವದ ಪಕ್ಷಗಳು ಮುಂತಾದುವುಗಳ ದೊಡ್ಡ ಚರಿತ್ರೆಯೇ ನಮ್ಮಲ್ಲಿದೆ. ಇವುಗಳನ್ನು ಕುರಿತ ಚರ್ಚೆಯ ಚೌಕಟ್ಟುಗಳೂ ಕೂಡ ಪ್ರಸ್ತುತ ರಾಜಕಾರಣವನ್ನು ಕುರಿತ ಚರ್ಚೆಯನ್ನು ಪ್ರಭಾವಿಸುತ್ತಿವೆ. ಹಾಗಾಗಿ ರಾಜಕಾರಣವನ್ನು ಕುರಿತ ಚರ್ಚೆಯ ಚೌಕಟ್ಟು ಯಾವುದಾಗಿರಬೇಕು ಎಂಬುದನ್ನು ಸ್ಪಷ್ಟ ಮಾಡಿಕೊಳ್ಳಬೇಕಾದ ವೈಚಾರಿಕ ಅನಿವಾರ್ಯತೆ ಹಾಗೂ ಅಗತ್ಯತೆ ಇಂದು ಹೆಚ್ಚಾಗಿದೆ.

ಸಂಸದೀಯ ರಾಜಕಾರಣದ ವ್ಯಾಪ್ತಿಯಲ್ಲಿ ನಿಂತು ಹೇಳುವುದಾದರೆ ಡಾ. ಅಂಬೇಡ್ಕರ್ ಅವರೇ ದಲಿತ ರಾಜಕಾರಣ ಎಂಬುದನ್ನು ವಿದ್ಯುಕ್ತವಾಗಿ ಉದ್ಘಾಟಿಸಿದವರು. ಅದನ್ನು ನಾವು ಮೂರು ನೆಲೆಗಳಲ್ಲಿ ಗ್ರಹಿಸಬಹುದು. ಸೈದ್ಧಾಂತಿಕ ರಾಜಕಾರಣದ ನೆಲೆ, ಹೋರಾಟ ಹಾಗೂ ಚಳವಳಿಯ ರಾಜಕಾರಣದ ನೆಲೆ ಮತ್ತು ಸಾಂವಿಧಾನಿಕ ರಾಜಕಾರಣದ ನೆಲೆ. ಅಂಬೇಡ್ಕರರ ಆಲೋಚನೆಗಳ ಪ್ರಶ್ನಾತೀತ ನೆಲೆಯಲ್ಲಿ ಈ ಮೂರನ್ನೂ ಪ್ರಶ್ನಾತೀತವಾಗಿಯೇ ವಿವರಿಸಿಕೊಳ್ಳಬಹುದು. ಇಲ್ಲವೆ ಅಂಬೇಡ್ಕರರ ಆಲೋಚನೆಗಳ ವಿಮರ್ಶಾತ್ಮಕ ನೆಲೆಯಲ್ಲಿ ಈ ಮೂರನ್ನೂ ವಿಮರ್ಶಿಸಿ ಮೌಲ್ಯಮಾಪನ ಮಾಡಬಹುದು. ಮೊದಲ ಕೆಲಸವನ್ನು ಬಹುತೇಕ ಉದಾರವಾದಿ ರಾಜಕೀಯ ಚಿಂತಕರು ಮಾಡಿದ್ದಾರೆ. ಎರಡನೇ ಕೆಲಸವನ್ನು ಕೆಲವು ಮಾರ್ಕ್ಸ್‌ವಾದಿಗಳು ಹಾಗೂ ನಿರ್ದಿಷ್ಟವಾಗಿ ಕೆಲವರು ಎಂ.ಎಲ್. ಚಿಂತಕರು ಮಾಡಿದ್ದಾರೆ. ಇದನ್ನು ಕುರಿತ ವಿವರಣೆ ಹಾಗೂ ಮೌಲ್ಯಮಾಪನದ ಸ್ವರೂಪ ಏನೇ ಇರಲಿ. ಅಥವಾ ಭಿನ್ನಾಭಿಪ್ರಾಯಗಳ ಅತಿರೇಕದ ತುದಿ ಏನೇ ಇರಲಿ. ಆದರೆ ಇದನ್ನು ಅಂಬೇಡ್ಕರ್ ಆರಂಭಿಸಿದರು ಎಂಬುದರಲ್ಲಿ ಬಹುಶಃ ಎರಡೂ ಬಣದವರಿಗೆ ಅಷ್ಟಾಗಿ ಭಿನ್ನಾಭಿಪ್ರಾಯವಿರಲಾರದು. ಹಾಗಾಗಿ ಈ ವಿಷಯದಲ್ಲಿ ಡಾ. ಅಂಬೇಡ್ಕರರನ್ನು ಮುಟ್ಟಿಯೇ ಮುಂದಕ್ಕೆ ಹೋಗಬೇಕಾಗುತ್ತದೆ.



ದಲಿತ ರಾಜಕಾರಣ ಎಂಬುದನ್ನು ಕುರಿತು ಬೇರೆಬೇರೆ ಹಂತಗಳಲ್ಲಿ ಹಾಗೂ ಬೇರೆಬೇರೆ ನೆಲೆಗಳಲ್ಲಿ ಈಗಾಗಲೆ ಚರ್ಚೆಗಳು ಶುರುವಾಗಿವೆ. ಈ ಹಿನ್ನೆಲೆಯಲ್ಲಿ ದಲಿತ ರಾಜಕಾರಣ ಎಂದರೆ ಏನು? ಅದರ ಸ್ವರೂಪ ಹಾಗೂ ಅದರ ಹಿತಾಸಕ್ತಿಯ ಸಮಸ್ಯೆಗಳು ಯಾವುವು ಎಂಬುದನ್ನು ಕುರಿತು ಆಲೋಚಿಸಬೇಕಾಗಿದೆ. ಈ ನಿಟ್ಟಿನಲ್ಲಿ ಮುಂದಿನ ಕೆಲವು ಅಂಶಗಳನ್ನು ಚರ್ಚೆಗೆ ಒಳಪಡಿಸಬಹುದು.

೧. ದಲಿತ ರಾಜಕಾರಣವೆಂದರೆ ಈಗ ಜಾರಿಯಲ್ಲಿರುವ ರಾಜಕಾರಣದಲ್ಲಿ ದಲಿತರು ಪ್ರತಿನಿಧಿಗಳಾಗಿ ಭಾಗವಹಿಸುವುದು.
೨. ದಲಿತ ರಾಜಕಾರಣವೆಂದರೆ ಈಗ ಜಾರಿಯಲ್ಲಿರುವ ರಾಜಕಾರಣದಲ್ಲಿ ದಲಿತರು ತಮ್ಮ ಪಾಲನ್ನು ಪಡೆಯುವುದು.
೩. ದಲಿತ ರಾಜಕಾರಣಕ್ಕೆ ಅದರದ್ದೇ ಆದ ಚರಿತ್ರೆ ಇದೆ.
೪. ದಲಿತ ರಾಜಕಾರಣವೆಂದರೆ ಎಲ್ಲಾ ಹಿಂದುಳಿದ ಜಾತಿಗಳನ್ನು ಒಗ್ಗೂಡಿಸಿಕೊಂಡು ರಾಜಕಾರಣ ಮಾಡುವುದು. ಆದರೆ ದಲಿತ ಪ್ರತಿನಿಧಿಗಳು ಅದಕ್ಕೆ ನಾಯಕತ್ವ ಕೊಡುವುದು.
೫. ದಲಿತ ರಾಜಕಾರಣವೆಂದರೆ ದಲಿತರು ಮಾತ್ರ ಅದರಲ್ಲೂ ಅಸ್ಪೃಶ್ಯರು ಮಾತ್ರ ಶಕ್ತಿರಾಜಕಾರಣವನ್ನು ನಡೆಸುವುದು.
೬. ದಲಿತ ರಾಜಕಾರಣವೆಂದರೆ ದಲಿತರು ಆಳುವ ವರ್ಗವಾಗುವುದು.
೭. ದಲಿತ ರಾಜಕಾರಣ ಎಂದರೆ ದಲಿತ ಹಿತಾಸಕ್ತಿ, ದಲಿತ ಧೋರಣೆಯ ರಾಜಕಾರಣ.

೧. ದಲಿತ ರಾಜಕಾರಣವೆಂದರೆ ಈಗ ಜಾರಿಯಲ್ಲಿರುವ ರಾಜಕಾರಣದಲ್ಲಿ ದಲಿತರು ಪ್ರತಿನಿಧಿಗಳಾಗಿ ಭಾಗವಹಿಸುವುದು.

ಇದು ಅತ್ಯಂತ ಜನಪ್ರಿಯವಾದ ಹಾಗೂ 'ಎಲ್ಲರ ನಂಬಿಕೆ'ಗೂ ಒಳಗಾಗಿರುವ ಸಂಗತಿ. ಹಾಗಾಗಿ ದಲಿತರ ಮೇಲೆ ನಡೆಯಬಾರದ ಅನ್ಯಾಯಗಳು ನಡೆದಾಗ 'ದಲಿತ ರಾಜಕಾರಣಿಗಳು ಏನು ಮಾಡುತ್ತಿದ್ದಾರೆ?' ಎಂಬ ಪ್ರಶ್ನೆಯ ಕೂಗು ಕೇಳಿಸುತ್ತದೆ. ಮೀಸಲು ಕ್ಷೇತ್ರದ ಮೂಲಕ ಆಯ್ಕೆಯಾಗಿ ಹೋಗಿರುವ ದಲಿತ ಪ್ರತಿನಿಧಿಗಳು ದಲಿತ ಸಮೂಹದ ಹಿತಾಸಕ್ತಿಗಳನ್ನು ಕಾಪಾಡುತ್ತಾರೆ ಎಂಬ ನಂಬಿಕೆಯು ತನ್ನ ಪರಿಣಾಮದಲ್ಲಿ ದೊಡ್ಡ ಭ್ರಮೆಯಾಗಿ ಮಾರ್ಪಟ್ಟಿದೆ. ಕಳೆದ ಸುಮಾರು ೬೦ ವರುಷಗಳ ಸಂಸದೀಯ ರಾಜಕಾರಣದಲ್ಲಿ ದಲಿತ ಸಮೂಹದ ಹಿತಾಸಕ್ತಿಯನ್ನು ಕಾಪಾಡಲು, ಇಲ್ಲವೆ ದಲಿತರಿಗೆ ನ್ಯಾಯ ಒದಗಿಸಲು ಇವರು ಏನೂ ಮಾಡಿಲ್ಲ ಎಂಬುದು ಸಂಪೂರ್ಣ ಸಾಬೀತಾಗಿದೆ. ಆದರ ಜೊತೆಗೇ ತಾವೇನೇನು ಮಾಡಿಕೊಂಡರು ಎಂಬುದೂ ಕೂಡ ಈಗ ಗುಟ್ಟಾಗಿ ಉಳಿದಿಲ್ಲ. ಆದರೂ ಕೂಡ ಆಳುವ ವರ್ಗದ ರಾಜಕಾರಣವು ಈ ಮೀಸಲು ಕ್ಷೇತ್ರಗಳನ್ನು ತನ್ನ ಕುತಂತ್ರಕ್ಕೆ ನೇರವಾಗಿ ಒಂದು ಯಶಸ್ವಿ ದಾಳವನ್ನಾಗಿ ಬಳಸುತ್ತಲೇ ಬರುತ್ತಿದೆ. ಈ ಕ್ಷೇತ್ರಗಳಿಂದ ಆರಿಸಿ ಹೋಗುವ ಪ್ರತಿನಿಧಿಗಳು ಆಯಾ ಪಕ್ಷಗಳ ಅಧಿಕಾರಕ್ಕೆ ಎಷ್ಟರಮಟ್ಟಿಗೆ ಗುಲಾಮರಾಗಿ ಇರುತ್ತಾರೆ ಅಥವಾ ಇರುವುದಿಲ್ಲ ಎಂಬುದನ್ನು ಅವಲಂಬಿಸಿ ಅಲ್ಲಿ ಅವರಿಗೆ ಅವಕಾಶಗಳನ್ನು ದಯಪಾಲಿಸಲಾಗುತ್ತದೆ. ಅವರ ಹಿತಾಸಕ್ತಿಗಳಿಗೆ ಪೂರಕವಾಗಿಯೇ ಇರಬೇಕಾಗುತ್ತದೆ. ಅಂದರೆ ಉಳ್ಳವರ ಹಿತಾಸಕ್ತಿಯ ರಾಜಕಾರಣವನ್ನೇ 'ದಲಿತ ರಾಜಕಾರಣ' ಎಂದು ತಪ್ಪಾಗಿ ಹೆಸರಿಸಿ ಮುಂದುವರಿಸಲಾಗಿದೆ.

೨. ದಲಿತ ರಾಜಕಾರಣವೆಂದರೆ ಈಗ ಜಾರಿಯಲ್ಲಿರುವ ರಾಜಕಾರಣದಲ್ಲಿ ದಲಿತರು ತಮ್ಮ ಪಾಲನ್ನು ಪಡೆಯುವುದು.

ಆಳುವ ವರ್ಗದ ರಾಜಕಾರಣದಲ್ಲಿ ಮೇಲ್ಜಾತಿಗಳದ್ದೇ ಮೇಲುಗೈಯಾಗಿದೆ. ಹಾಗಾಗಿ ದಲಿತ ಸಮೂಹಕ್ಕೆ ಸಿಗಬೇಕಾದ ಪಾಲನ್ನು (ಇಲ್ಲಿ ಪಾಲು ಎಂಬುದು ಆರ್ಥಿಕ, ಸಾಮಾಜಿಕ, ರಾಜಕೀಯ ಹೀಗೆ ಬಹು ಆಯಾಮಗಳಿಗೆ ಸಂಬಂಧಿಸಿದ್ದು) ಅವರು ಕೊಟ್ಟಿಲ್ಲ ಮತ್ತು ಕೊಡುತ್ತಿಲ್ಲ. ಹಾಗಾಗಿ ದಲಿತರು ಯಾವುದೇ ಮಾರ್ಗದಲ್ಲಾದರೂ ಸರಿಯೇ. ತಮ್ಮ ಪಾಲಿನ ಸೌಲತ್ತುಗಳನ್ನು ಹಾಗೂ ಸೌಲಭ್ಯಗಳನ್ನು ಪಡೆದುಕೊಳ್ಳಲೇಬೇಕು. ಹಾಗೆ ಪಡೆಯುವುದು ದಲಿತರ ಹಕ್ಕು. ಆದ್ದರಿಂದ ದಲಿತರು ತಮ್ಮ ಹಕ್ಕುಗಳಿಗಾಗಿ ತಾವು ಹೋರಾಟ ಮಾಡಬೇಕು.

ದಲಿತ ಸಮೂಹವು ತನ್ನ ಪಾಲನ್ನು ತನ್ನೊಳಗಿನ ಒಳಪಂಗಡಗಳ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಪಡೆಯಬೇಕು. ದಲಿತ ಸಮೂಹದಲ್ಲೇ ಅನೇಕ ಒಳಪಂಗಡಗಳಿವೆ. ಆ ಒಳಪಂಗಡಗಳ ಜನಸಂಖ್ಯೆಯ ಪ್ರಮಾಣ ಒಂದೇ ರೀತಿಯಲ್ಲಿ ಇಲ್ಲ. ಕಡಿಮೆ ಸಂಖ್ಯೆ ಇರುವ ಒಳಪಂಗಡವೊಂದು ಹೆಚ್ಚು ಅವಕಾಶಗಳನ್ನು ಮತ್ತು ಹೆಚ್ಚು ಸೌಲಭ್ಯಗಳನ್ನು ಪಡೆದಿದೆ ಎಂಬ ಅಭಿಪ್ರಾಯಗಳು ಬರುತ್ತಿವೆ. ಅಂದರೆ ದಲಿತ ಸಮೂಹದ ಒಂದು ಒಳಪಂಗಡವು ಮತ್ತೊಂದು ಒಳಪಂಗಡಕ್ಕೆ ಅನ್ಯಾಯ ಮಾಡಿದೆ. ಇದು ಯಾವುದೇ ಕಾರಣಕ್ಕೂ ಕೂಡದು. ಯಾವುದೇ ಕಾರಣಕ್ಕೂ ಈ ಅನ್ಯಾಯ ನಡೆಯಲು ಅವಕಾಶ ಕೊಡಬಾರದು. ಹಾಗಾಗಿ ದಲಿತರ ಒಂದು ಒಳಪಂಗಡದಿಂದ ವಂಚನೆಗೆ ಒಳಗಾಗಿರುವ



ಮತ್ತೊಂದು ಪಂಗಡವು ತನ್ನೊಳಗೇ ಸಂಘಟಿತಗೊಳ್ಳಬೇಕು. ತನ್ನ ಪಾಲನ್ನು ಪಡೆಯಲು ಮತ್ತೊಂದು ಪಂಗಡದ ವಿರುದ್ಧ ಹೋರಾಡಬೇಕು.

ಈ ಬೆಳವಣಿಗೆಯನ್ನು ಕಳೆದ ೨ ದಶಕಗಳಿಂದ ಕಾಣುತ್ತಿದ್ದೇವೆ. ಇದರ ನ್ಯಾಯೋಚಿತ ಆಯಾಮವನ್ನು ತಪ್ಪು ಎಂದು ಹೇಳಿ ತಳ್ಳಿ ಹಾಕಲು ಬರುವುದಿಲ್ಲ. ಆದರೆ ಈ ಬೆಳವಣಿಗೆಯ ಪರಿಣಾಮವನ್ನು ಆಳುವ ವರ್ಗವು ದುರುಪಯೋಗ ಮಾಡಿಕೊಳ್ಳುತ್ತಿರುವ ಪರಿಸ್ಥಿತಿಯನ್ನು ಮಾತ್ರ ಗಂಭೀರವಾಗಿ ಆಲೋಚಿಸುವ ಅಗತ್ಯವಿದೆ.

೩. ದಲಿತ ರಾಜಕಾರಣಕ್ಕೆ ಆಳ್ವಿಕೆ ಮಾಡಿರುವ ಚರಿತ್ರೆ ಇದೆ.

ಕಳೆದ ಕೆಲವು ವರ್ಷಗಳಿಂದ ಈ ವಿಷಯಕ್ಕೆ ಸಂಬಂಧಿಸಿದ ವಿವರಗಳಿಗೆ ಬಹಳ ಬೇಡಿಕೆಯನ್ನು ನಿರ್ಮಾಣ ಮಾಡಲಾಗಿದೆ. ಚರಿತ್ರೆಯ ವಿವರಗಳನ್ನು ಸತ್ಯ ಸಂಗತಿಗಳೆಂದು ನಂಬುವಂತೆ ಮಾಡಲಾಗಿದೆ. ದಲಿತರು ಚರಿತ್ರೆಯಲ್ಲಿ ಆಳುವ ವರ್ಗವಾಗಿದ್ದರು ಎಂಬ ಹೇಳಿಕೆಯನ್ನು ನಂಬಿಸುವ ಹಾಗೂ ಒಪ್ಪಿಸುವ ಕೆಲಸ ನಡೆಯುತ್ತಿದೆ. ಭವಿಷ್ಯದಲ್ಲಿ ದಲಿತರು ಆಳುವ ವರ್ಗ ಆಗಬೇಕು ಎಂಬ ಆಶಯವನ್ನು ಇಟ್ಟುಕೊಂಡು ಚರಿತ್ರೆಯನ್ನು ವಿಶ್ಲೇಷಣೆ ಮಾಡಿದರೆ ಮುಖ್ಯವಾಗಿ ಎರಡು ಆಯಾಮಗಳು ಕಾಣುತ್ತವೆ.

ಒಂದು: ಚರಿತ್ರೆಯ ಉದ್ದಕ್ಕೂ ದಲಿತರು ಕೇವಲ ಆಳಿಸಿಕೊಳ್ಳುವ ವರ್ಗವಾಗಿದ್ದರು. ಅವರು ದುಡಿಯುವ ವರ್ಗವಾಗಿದ್ದರು. ಅವರು ಅಗತ್ಯ ಜೀವನ ಅವಶ್ಯಕ ಸವಲತ್ತುಗಳಿಂದ ಹಾಗೂ ಅಧಿಕಾರ ಹಾಗೂ ಸಾಮಾಜಿಕ ಸ್ಥಾನಮಾನಗಳಿಂದ ವಂಚಿತರಾಗಿದ್ದರು. ಈ ವಂಚನೆ, ಈ ಶೋಷಣೆ ಇನ್ನೂ ಮುಂದುವರಿಯುವುದು ಬೇಡ. ಇದು ಬದಲಾಗಬೇಕು. ಈಗಿರುವ ಆಳುವ ವರ್ಗವು ಇದನ್ನು ಬದಲಾಯಿಸಲಾರದು. ಅದಕ್ಕಾಗಿ ದಲಿತರು ಆಳುವ ವರ್ಗ ಆಗಬೇಕು.

ಎರಡು: ಚರಿತ್ರೆಯ ಉದ್ದಕ್ಕೂ ದಲಿತರು ಆಳುವ ವರ್ಗವಾಗಿದ್ದರು. ಅವರು ದುಡಿಯುವ ವರ್ಗವಾಗಿರಲಿಲ್ಲ. ಅವರು ಅಗತ್ಯ ಜೀವನ ಅವಶ್ಯಕ ಸವಲತ್ತುಗಳಿಂದ ಹಾಗೂ ಅಧಿಕಾರ ಹಾಗೂ ಸಾಮಾಜಿಕ ಸ್ಥಾನಮಾನಗಳಿಂದ ವಂಚಿತರಾಗಿರಲಿಲ್ಲ. ಆ ನಡುವೆ ಕೆಲವು ಶಕ್ತಿಗಳು ದಲಿತರಿಂದ ಆಳುವ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ. ಹಾಗಾಗಿ ದಲಿತರು ಮತ್ತೆ ಆಳುವ ವರ್ಗ ಆಗಬೇಕು.

ಆರಂಭಿಕ ಹಂತದ ದಲಿತ ಸಂಘರ್ಷ ಸಮಿತಿಯ ಯಾವುದೇ ಕರಪತ್ರ ತೆಗೆದು ನೋಡಿದರೂ ಅವು 'ಶತಶತಮಾನಗಳಿಂದ ಶೋಷಣೆ ಮತ್ತು ಅಪಮಾನಗಳಿಗೆ ಒಳಗಾಗಿರುವ ದಲಿತರು...' ಎಂದು ಶುರುವಾಗುತ್ತವೆ. ೯೦ರ ದಶಕದ ನಂತರ ಬಿ.ಎಸ್.ಪಿ. ಪಕ್ಷದ ವೈಚಾರಿಕತೆಯ ಭಾಗವಾಗಿ 'ದಲಿತರು ಚರಿತ್ರೆಯಲ್ಲಿ ಆಳ್ವಿಕೆ ಮಾಡಿದ್ದರು..' ಎಂಬ ಅಭಿಪ್ರಾಯಗಳು ಬರುತ್ತಿವೆ.

ವರ್ತಮಾನದ ರಾಜಕಾರಣಕ್ಕೆ ಕಸುವು ತಂದುಕೊಳ್ಳಲು ಚರಿತ್ರೆಯನ್ನು ಭಾಷೆ ಮತ್ತು ಐಡಿಯಾಲಜಿಯ ಮೂಲಕ ರಚಿಸಿಕೊಳ್ಳಲಾಗುತ್ತದೆ. ಚರಿತ್ರೆಯ ಎಲ್ಲಾ ಬರವಣಿಗೆಯ ಮುಖ್ಯ ತಿರುಳು ಇದೇ ಆಗಿದೆ. ಚರಿತ್ರೆಯಲ್ಲಿ ಹೀಗೆ (ಹೀಗೇ) ನಡೆದಿತ್ತು, ಚರಿತ್ರೆಯಲ್ಲಿ ಹೀಗೆ (ಹೀಗೇ) ಇತ್ತು ಎಂಬ ತೀರ್ಮಾನಗಳು ನಂಬಿಕೆಗಳಾಗುತ್ತವೆ. ಇವೆಲ್ಲವೂ ಕೂಡ 'ಹೀಗೆ ಇತ್ತು, ಹೀಗೆ ನಡೆದಿತ್ತು' ಎಂಬುದನ್ನು ಕುರಿತ ಬರವಣಿಗೆಗಳಷ್ಟೆ. ಈ ಬರವಣಿಗೆಯ ಹಿಂದೆ ಭಾಷಿಕ ನಿರೂಪಣೆ ಮತ್ತು ಅದನ್ನು ರೂಪಿಸುವ ಐಡಿಯಾಲಜಿಯೇ ಮೇಲುಗೈ ಸಾಧಿಸಿರುತ್ತದೆ. ಹಾಗಾಗಿ ವಸ್ತುಸ್ಥಿತಿ ಎಂಬುದು ಭಾಷಿಕ ನಿರೂಪಣೆಯನ್ನು ಮುಖ್ಯವಾಗಿ ಅವಲಂಬಿಸಿದೆ. ಇದನ್ನು ತಾತ್ವಿಕವಾಗಿ ಇನ್ನಷ್ಟು ವಿಸ್ತೃತವಾಗಿ ಚರ್ಚಿಸುವ ಅಗತ್ಯವಿದೆಯಾದರೂ ವ್ಯಾಪ್ತಿಯ ದೃಷ್ಟಿಯಿಂದ ಸಾಧ್ಯವಾಗುತ್ತಿಲ್ಲ.

೪. ದಲಿತ ರಾಜಕಾರಣವೆಂದರೆ ಎಲ್ಲಾ ಹಿಂದುಳಿದ ಜಾತಿಗಳನ್ನು ಒಗ್ಗೂಡಿಸಿಕೊಂಡು ರಾಜಕಾರಣ ಮಾಡುವುದು. ಆದರೆ ದಲಿತ ಪ್ರತಿನಿಧಿಗಳು ಅದಕ್ಕೆ ನಾಯಕತ್ವ ಕೊಡುವುದು.

ಇದನ್ನು ಕುರಿತು ಕೂಡ ಕಳೆದ ಕೆಲವು ವರ್ಷಗಳಿಂದ ಚರ್ಚೆ ನಡೆಯುತ್ತದೆ. ಜೊತೆಗೆ ಸಂಸದೀಯ ವ್ಯಾಪ್ತಿ ಹಾಗೂ ಅದರಾಚೆಯ ಕೆಲವು ಸೀಮಿತ ವ್ಯಾಪ್ತಿಯಲ್ಲಿ ಈ ಬಗೆಗೆ ಕೆಲವು ಪ್ರಯತ್ನಗಳನ್ನು ನಡೆಸಲಾಗಿದೆ. ಅದು ರೈತ ಸಂಘ ಹಾಗೂ ದಲಿತ ಸಂಘಗಳು ಒಟ್ಟಾಗಿ ಕೆಲಸ ಮಾಡಬೇಕು ಎಂಬ ಪ್ರಯತ್ನ ಇರಬಹುದು. ಅಹಿಂದ ಸಂಘಟನೆ ಇರಬಹುದು. ಸರ್ವೋದಯ ಪಕ್ಷ ಇರಬಹುದು. ಇಲ್ಲೆಲ್ಲ ಮೇಲಿನ ಆಶಯ ಅತ್ಯಂತ ಸ್ಥೂಲವಾಗಿತ್ತು. ಆದರೆ ಆ ಆಶಯವು ಕೈಗೂಡದಂತೆ ಪರಿಸ್ಥಿತಿಯು ಅದನ್ನು ಗೇಲಿ ಮಾಡಿಬಿಟ್ಟಿತು. ಹಾಗಿದ್ದರೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಯ ಅವಲೋಕನ ಮತ್ತು ಮೌಲ್ಯಮಾಪನದಲ್ಲಿ ಏನಾದರೂ ಕೊರತೆಗಳು, ಸಮಸ್ಯೆಗಳು ಇದ್ದುವೇ ಎಂಬ ಬಲವಾದ ಪ್ರಶ್ನೆಗಳನ್ನು ಈ ಬೆಳವಣಿಗೆಗಳು ಹುಟ್ಟಿಸುತ್ತವೆ.

ಐಕ್ಯ ಸಂಘಟನೆ, ಐಕ್ಯ ಹೋರಾಟ ಎಂಬುದು ಶಾಲೆಗಳಲ್ಲಿ ಮಕ್ಕಳು ಹಾಕುವ ಯೂನಿಫಾರಮ್‌ನಂತೆ ಆದರೆ ಅದನ್ನು ಖಂಡಿತಾ ಪರಿಸ್ಥಿತಿಯೇ ಗೇಲಿ ಮಾಡುತ್ತದೆ. ಹೇಗೆಂದರೆ ಶಾಲೆಯಲ್ಲಿ ಯೂನಿಫಾರಮ್ ಹೆಸರಿನಲ್ಲಿ ಮಕ್ಕಳು ಒಂದೇ ಬಣ್ಣದ ಬಟ್ಟೆ ಹಾಕುತ್ತಾರೆ. ಅಂದ ಮಾತ್ರಕ್ಕೆ ಅವರೆಲ್ಲರ ಮನೆಗಳು, ಕುಟುಂಬಗಳು, ಅವರ ತರಾವರಿ ಪರಿಸ್ಥಿತಿಗಳು ಒಂದೇ ಆಗಿರಲು ಸಾಧ್ಯವಿಲ್ಲ. ಬಟ್ಟೆಯ ಬಣ್ಣದ ಕಾರಣಕ್ಕೆ ಶಾಲೆಯಲ್ಲಿ ಒಂದೇ ರೀತಿ ತೋರುವ ಮಕ್ಕಳ ನಿಜಪರಿಸ್ಥಿತಿಯ ತಾರತಮ್ಯ ಮತ್ತು ಅಸಮಾನತೆ ಮನೆ ಮತ್ತು ಗುಡಿಸಲುಗಳಲ್ಲಿ ಗೊತ್ತಾಗುತ್ತದೆ. ಹಾಗಿದ್ದರೆ ಶಾಲೆಯ ಯೂನಿಫಾರಮ್ ಇಂತಹ ತಾರತಮ್ಯ ಮತ್ತು ಅಸಮಾನತೆಯ ನಿಜಸ್ಥಿತಿಯನ್ನು ಮುಚ್ಚಿಡಲು ದುರುಪಯೋಗವಾಗುತ್ತಿದೆಯೊ ಅಥವಾ ಅವನ್ನು ಹೋಗಲಾಡಿಸಲು ಬಳಕೆಯಾಗುತ್ತಿದೆಯೊ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲೆ ರೈತ ಸಂಘ-ದಲಿತ ಸಂಘಗಳ ಐಕ್ಯತೆಯನ್ನು ಮತ್ತು ಅಹಿಂದ, ಸರ್ವೋದಯ ಮುಂತಾದುವನ್ನು ಮರುಪರಿಶೀಲಿಸುವ ಅಗತ್ಯವಿದೆ.

೫. ದಲಿತ ರಾಜಕಾರಣವೆಂದರೆ ದಲಿತರು ಮಾತ್ರ ಅದರಲ್ಲೂ ಅಸ್ಪೃಶ್ಯರು ಮಾತ್ರ ಶಕ್ತಿರಾಜಕಾರಣವನ್ನು ನಡೆಸುವುದು.

ದಲಿತ ಸಮೂಹಕ್ಕೆ ಸಂಬಂಧಿಸಿದ ಯಾವುದೆ ವಿಷಯವನ್ನು ಚರ್ಚೆ ಮಾಡುವಾಗಲೂ 'ದಲಿತರೆಂದರೆ ಯಾರು?' ಎಂಬ ಪ್ರಶ್ನೆಗೆ ಉತ್ತರ ಹೇಳುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ. ಆದರೆ ಇದುವರೆಗೂ ಈ ಉತ್ತರದಲ್ಲಿ ಎರಡು ಆಯಾಮಗಳು ಮಾತ್ರವೇ ಜನಪ್ರಿಯವಾಗಿ ಪರಿಚಿತವಾಗಿವೆ. 'ಎಲ್ಲಾ ಜಾತಿಯ ಬಡವರೂ ದಲಿತರೇ' ಎಂಬುದು ಒಂದು ಬಗೆಯ ವಿವರಣೆ. 'ಅಸ್ಪೃಶ್ಯರು ಮಾತ್ರ ದಲಿತರು. ಇವರು ಸಾಮಾಜಿಕ ಶ್ರೇಣೀಕರಣದಲ್ಲಿ ಅತ್ಯಂತ ಕೆಳಗಿನವರು. ಅವರಿಗಿರುವ ನೋವು, ಹಿಂಸೆ, ಹಸಿವು, ಅಪಮಾನ ಮುಂತಾದುವು ಮೇಲ್ಜಾತಿಯ ಬಡವರಿಗೆ ಇಲ್ಲ. ಆದ್ದರಿಂದ ಅಸ್ಪೃಶ್ಯರನ್ನು ಮಾತ್ರ ದಲಿತರೆಂದು ಕರೆಯಬೇಕು'. ಇದು ಎರಡನೇ ವಿವರಣೆ.

ಸಾರ್ವಜನಿಕ ಜೀವನದಲ್ಲಿ, ಆಳುವ ವರ್ಗದ ರಾಜಕೀಯದಲ್ಲಿ ಮತ್ತು ಸಾಹಿತ್ಯ ಹಾಗೂ ಸಾಂಸ್ಕೃತಿಕ ಚರ್ಚೆಗಳಲ್ಲಿ ಈ ಪ್ರಶ್ನೆಯನ್ನು ಅನೇಕ ಸಲ ಅಗತ್ಯ ಹಾಗೂ ಅನಗತ್ಯ ಎರಡೂ ಕಾರಣಕ್ಕೆ ಚರ್ಚಿಸಲಾಗುತ್ತಿದೆ. ದಲಿತರು ಅವರದ್ದೇ ಆದ ಸಂಘಟನೆಯನ್ನು, ಹೋರಾಟವನ್ನು ಹಾಗೂ ರಾಜಕೀಯ ಪಕ್ಷವನ್ನು ಕಟ್ಟಿಕೊಳ್ಳಬೇಕು ಎಂಬ ಅಪೇಕ್ಷೆ ಹಾಗೂ ಚರ್ಚೆಗಳು ನಡೆಯುತ್ತಿವೆ. ಇವನ್ನು ಕುರಿತು ವೈಚಾರಿಕವಾಗಿ ಮಾತಾಡುವುದು, ಚರ್ಚೆ ಮಾಡುವುದು ಸುಲಭ. ಆದರೆ ಕಾರ್ಯಾಚರಣೆಗೆ ಇಳಿದಾಗ ನಮ್ಮ ಊಹೆ ಹಾಗೂ ಕಲ್ಪನೆಗಳನ್ನೂ ಮೀರಿ ಗಂಭೀರವಾದ ಪ್ರಾಕ್ಟಿಕಲ್ ಸಮಸ್ಯೆಗಳು ಎದುರಾಗುತ್ತವೆ. ಭಾರತದ ಕಮ್ಯುನಿಸ್ಟ್ ಪಕ್ಷಗಳಲ್ಲಿ ಅಸ್ಪೃಶ್ಯರ ಯಾವ ಸಮಸ್ಯೆಯನ್ನು ಕುರಿತು ಚರ್ಚಿಸಿದ್ದಾರೆ ಮತ್ತು ಕಾರ್ಯಾಚರಣೆಗೆ ಇಳಿದಿದ್ದಾರೆ ಎಂಬ ಹಳೆಯ ಪ್ರಶ್ನೆ ಇಂದಿಗೂ ಕೂಡ ಹೊಸ ಪ್ರಶ್ನೆಯಾಗಿ ಮುಂದುವರಿದಿದೆ. ಕಳೆದ ೯೦ರ ದಶಕದ ಆರಂಭದಲ್ಲಿ ಕರ್ನಾಟಕಕ್ಕೆ ವಿಸ್ತರಿಸಿದ ಸಿ.ಪಿ.ಐ. (ಎಂ.ಎಲ್) ರೆಡ್‌ಫ್ಲ್ಯಾಗ್ [ಈಗ ಇದು ಸಿ.ಪಿ.ಐ. (ಎಂ.ಎಲ್) ಎಂದಾಗಿದೆ] ಪಕ್ಷದಲ್ಲಿ ಕೇವಲ ಅಸ್ಪೃಶ್ಯರೇ ಯಾಕಿದ್ದಾರೆ? ೨೦ ವರ್ಷ ಕಳೆದರೂ ಕೂಡ ಅಸ್ಪೃಶ್ಯೇತರರನ್ನು ಯಾಕೆ ಪಕ್ಷದೊಳಗೆ ತರಲಾಗಲಿಲ್ಲ? ಅಥವಾ ಅವರು ಬರಲಾಗಲಿಲ್ಲ? ಎಂಬ ಗಂಭೀರ ಪ್ರಶ್ನೆಗಳು ಹಾಗೆಯೇ ಮುಂದುವರಿದಿವೆ.

ಜಾತಿ ಹಾಗೂ ಅಸ್ಪೃಶ್ಯತೆಯ ಸಮಸ್ಯೆಗಳು ದಿನದಿಂದ ದಿನಕ್ಕೆ ಅತ್ಯಂತ ಕ್ರೂರ ರೂಪ ತಾಳುತ್ತಾ ಸಾಗಿವೆ. ಅದರ ನಿವಾರಣೆಗೆ ಸಂಬಂಧಿಸಿದ ಹೋರಾಟಗಳು ಎಂತಹ ...ು ಕೊಟ್ಟಿವೆ ಎಂಬ ಸತ್ಯ ನಮ್ಮ ಮುಂದಿದೆ. ಆರ್ಥಿಕ ದುಷ್ಪರಿಣಾಮಗಳು ಎಲ್ಲಾ

ಜಾತಿಯ ಬಡವರಿಗೂ ಒಂದೇ ರೀತಿಯ ಪರಿಣಾಮಗಳನ್ನು ಉಂಟುಮಾಡಿವೆ. ಜಾಗತೀಕರಣದ ನೀತಿಗಳು ಇದನ್ನು ಕಳೆದ ಎರಡು ದಶಕಗಳಲ್ಲಿ ನಿರಂತರವಾಗಿ ಮಾಡುತ್ತಲೇ ಸಾಗಿವೆ. ಆದರೆ ಅದನ್ನು ವಿರೋಧಿಸಲು ಎಲ್ಲಾ ಜಾತಿಯ ಬಡವರು ಒಂದಾಗುತ್ತಿಲ್ಲ ಯಾಕೆ? ಎಂಬ ಪ್ರಶ್ನೆ ಮಾತ್ರ ಹಾಗೆಯೇ ಮುಂದುವರಿದಿದೆ. ವ್ಯವಸ್ಥೆಯ ಸಾಮಾಜಿಕ ಆಯಾಮ ಮತ್ತು ಆರ್ಥಿಕ ಆಯಾಮವನ್ನು ಜೊತೆಗಿಟ್ಟು ನೋಡುವುದರಲ್ಲಿ ಯಾವ ಬಗೆಯ ಸಮಸ್ಯೆಗಳಿವೆ ಎಂಬುದನ್ನು ಕುರಿತು ಇನ್ನಷ್ಟು ಆಲೋಚಿಸಲು ಪರಿಸ್ಥಿತಿ ಒತ್ತಾಯಿಸುತ್ತಿದೆ.

೬. ದಲಿತ ರಾಜಕಾರಣವೆಂದರೆ ದಲಿತರು ಆಳುವ ವರ್ಗವಾಗುವುದು.

ಭಾರತದಲ್ಲಿ ಜಾಗತೀಕರಣ ನೀತಿಗಳನ್ನು ಜಾರಿಗೊಳಿಸುವ ಮೊದಲು ಅದಕ್ಕೊಂದು ಸಾಮಾಜಿಕ ಪೂರ್ವಭಾವಿ ತಯಾರಿಯನ್ನು ನಡೆಸಲಾಯಿತು. ಅದು ಸಾಮ್ರಾಜ್ಯಶಾಹಿ ಆರ್ಥಿಕ ಕಾರ್ಯಕ್ರಮಗಳ ಜಾರಿಯ ಒಂದು ಭಾಗವಾಗಿತ್ತು. ಭಾರತದಲ್ಲಿ ರಾಜ್ಯವಾರು ಹಾಗೂ ಪ್ರದೇಶವಾರು ದಲಿತ ಸಂಘಟನೆಗಳು, ದಲಿತ ಹೋರಾಟಗಳು ಇದ್ದವು. ಅವುಗಳ ನಡುವೆ ಇದ್ದ ಒಂದು ಸಮಾನ ಅಂಶವೇನೆಂದರೆ ಸಂಸದೀಯ ವ್ಯವಸ್ಥೆಯ ಬಗೆಗೆ ಅತ್ಯಂತ ತೀವ್ರವಾದ ಅಸಹನೆ ಹಾಗೂ ವಿರೋಧ. ಭಾರತದ ಹಲವು ಎಂ.ಎಲ್. ಪಕ್ಷಗಳಿಗೂ ಈ ನಿಲುವಿತ್ತು. ಆದರೆ ಈ ಎರಡರ ನಡುವೆ ಖಚಿತವಾದ ಸೈದ್ಧಾಂತಿಕ ವ್ಯತ್ಯಾಸವಿದೆ. ದಲಿತ ಸಂಘಟನೆಗಳು ಇಡೀ ಸಂಸದೀಯ ವ್ಯವಸ್ಥೆಯ ಬಗೆಗೇ ನಂಬಿಕೆಯನ್ನು ಕಳೆದುಕೊಳ್ಳುವುದು ಆಳುವ ವರ್ಗದ ರಾಜಕೀಯಕ್ಕೆ ನಿಜವಾಗಿಯೂ ನುಂಗಲಾರದ ತುತ್ತು. ಒಂದು ವೇಳೆ ಅದನ್ನೇ ಒಂದು ಸಾಮಾನ್ಯ ಕೇಂದ್ರ ವಿಷಯವನ್ನಾಗಿಟ್ಟುಕೊಂಡು, ದಲಿತ ಶಕ್ತಿಗಳೆಲ್ಲ ಒಂದಾಗಿ ಬಿಟ್ಟರೆ! ವಾಸ್ತವದಲ್ಲಿ ಇದು ಸಾಧ್ಯವೇ ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಅದು ಬೇರೆ. ಇರಲಿ.

ಆದರೆ ಭಾರತದ ಇಡೀ ಜನಸಂಖ್ಯೆಯಲ್ಲಿ ಬಹುದೊಡ್ಡ ಪ್ರಮಾಣ ದಲಿತರದ್ದು. ಅವರೆಲ್ಲ ಸಂಘಟಿತರಾಗಿ ಸಂಸದೀಯ ವ್ಯವಸ್ಥೆಯನ್ನು ಅನುಮಾನಿಸುವುದು, ಅದರ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುವುದು, ಅದನ್ನು ವಿರೋಧಿಸುವುದು, ಈ ಬೆಳವಣಿಗೆ ಯಾವುದೇ ಆಳುವ ವರ್ಗವನ್ನು ದಂಗುಬಡಿಸುತ್ತದೆ. ಮುಂದೆ ಇದರಿಂದ ಉಂಟಾಗಬಹುದಾಗಿದ್ದ ಪರಿಣಾಮಗಳನ್ನು ಊಹಿಸಿಯೊ ಏನೊ, 'ದಲಿತ ಸಂಘಟನೆಗಳು ಹೋರಾಟ ಮಾಡಿದರೆ ಅವಕ್ಕೆ ಏನೂ ಸಿಗುವುದಿಲ್ಲ; ಅದರ ಬದಲು ಅವು ರಾಜಕೀಯ ಪಕ್ಷಗಳಾಗಿ ಬದಲಾಗಬೇಕು. ಏನಿದ್ದರೂ ವಿಧಾನಸೌಧದ ಒಳಗೆ ತಮ್ಮ ಹಕ್ಕೊತ್ತಾಯಗಳನ್ನು ಮಂಡಿಸಬೇಕು' ಎಂಬ ರಾಜಕೀಯ ಅಭಿಪ್ರಾಯವನ್ನು ಹರಿಯಬಿಡಲಾಯಿತು. ಇದರ ಫಲವಾಗಿ ಬಹುತೇಕ ದಲಿತ ಸಂಘಟನೆಗಳು ಒಂದೋ ಆಗಲೆ ಇದ್ದ ರಾಜಕೀಯ ಪಕ್ಷಗಳ ಪಾಲಾಗಿ ಹೋದವು. ಇಲ್ಲವೆ ಸ್ವತಂತ್ರ ಪಕ್ಷಗಳನ್ನೂ ಕಟ್ಟಿಕೊಂಡವು. ಬಿ.ಎಸ್.ಪಿ. ಪಕ್ಷವನ್ನು ಈ ಚಾರಿತ್ರಿಕ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳುವ ಅಗತ್ಯವಿದೆ.




ಡಾ. ಅಂಬೇಡ್ಕರ್ ಅವರೇ ದಲಿತ ರಾಜಕಾರಣ ಎಂಬುದನ್ನು ವಿದ್ಯುಕ್ತವಾಗಿ ಉದ್ಘಾಟಿಸಿದವರು. ಅದನ್ನು ನಾವು ಮೂರು ನೆಲೆಗಳಲ್ಲಿ ಗ್ರಹಿಸಬಹುದು. ಸೈದ್ಧಾಂತಿಕ ರಾಜಕಾರಣದ ನೆಲೆ, ಹೋರಾಟ ಹಾಗೂ ಚಳವಳಿಯ ರಾಜಕಾರಣದ ನೆಲೆ ಮತ್ತು ಸಾಂವಿಧಾನಿಕ ರಾಜಕಾರಣದ ನೆಲೆ. ಅಂಬೇಡ್ಕರರ ಆಲೋಚನೆಗಳ ಪ್ರಶ್ನಾತೀತ ನೆಲೆಯಲ್ಲಿ ಈ ಮೂರನ್ನೂ ಪ್ರಶ್ನಾತೀತವಾಗಿಯೇ ವಿವರಿಸಿಕೊಳ್ಳಬಹುದು.

ಇಲ್ಲಿ ದಲಿತರು ಆಳುವ ವರ್ಗವಾಗಬೇಕು ಎಂಬುದು ಆಶಯ. ಆದರೆ ಅಸ್ತಿತ್ವದಲ್ಲಿರುವ ಆಳುವ ವರ್ಗದ ಭಾಗವಾಗುವುದು ಎಂದೇ ಅರ್ಥ. ಹಾಗಾಗಿ ಬಿ.ಎಸ್.ಪಿ.ಯಂತಹ ಪಕ್ಷಗಳು ಉಳಿದ ಪಕ್ಷಗಳಿಗಿಂತ ಭಿನ್ನವಾಗಿ ದಲಿತರಿಗೆ ಏನು ಮಾಡಿದವು? ಎಂಬ ಪ್ರಶ್ನೆ ಹಾಗೇ ಉಳಿದಿದೆ. ಈ ಕೊರತೆ ಅಥವಾ ಸಮಸ್ಯೆ ಪ್ರಭುತ್ವದ ಒಳಾಂಗದಲ್ಲಿದೆಯೊ ಅಥವಾ ದಲಿತರೇ ಕಟ್ಟಿದ ರಾಜಕೀಯ ಪಕ್ಷದಲ್ಲಿದೆಯೊ ಎಂಬ ಪ್ರಶ್ನೆ ನಮಗಿಲ್ಲಿ ಮುಖ್ಯವಾಗುತ್ತದೆ. ವ್ಯವಸ್ಥೆಯ ಅಸಮಾನತೆಯನ್ನು ಹಾಲಿ ಅಸ್ತಿತ್ವದಲ್ಲಿರುವ ಸಂಸದೀಯ ವ್ಯವಸ್ಥೆಯು ಯಶಸ್ವಿಯಾಗಿ ಮತ್ತು ಬಹಿರಂಗವಾಗಿ ಮುಂದುವರಿಸುತ್ತಿದೆ. ದಲಿತರು ಬಿಡಿ ವ್ಯಕ್ತಿಗಳಾಗಿ ಮತ್ತು ಒಂದು ರಾಜಕೀಯ ಪಕ್ಷವಾಗಿ ಇದೇ ಕೆಲಸ ಮಾಡಿದ್ದಾರೆ. ಹಾಗಿದ್ದರೆ ದಲಿತರಿಗೆಲ್ಲಿ ಮುಕ್ತಿ ಸಿಕ್ಕಿದೆ? ದಲಿತರು ಆಳುವ ವರ್ಗವಾಗುವುದು ಎಂದರೆ ಅಸಮಾನತೆ ಹಾಗೂ ಅನ್ಯಾಯಗಳನ್ನು ಮುಂದುವರಿಸಲು ನಾಯಕತ್ವ ಕೊಡುವುದು ಎಂಬುದು ಅನೇಕ ಕಡೆಗಳಲ್ಲಿ ಸಾಬೀತಾಗಿದೆ. ಈ ಕುರಿತು ವಿಮರ್ಶೆ ಮಾಡಿಕೊಳ್ಳುವ ಅಗತ್ಯವಿದೆ.

೭. ದಲಿತ ರಾಜಕಾರಣ ಎಂದರೆ ದಲಿತ ಹಿತಾಸಕ್ತಿ ಮತ್ತು ದಲಿತ ಧೋರಣೆಯ ರಾಜಕಾರಣ.

ಸಾಮಾನ್ಯವಾಗಿ ರಾಜಕಾರಣ ಎಂದ ತಕ್ಷಣ ಒಂದು ಪಕ್ಷದ ಹೆಸರು, ಅದರ ಬಾವುಟ, ಅದರ ಚುನಾವಣೆಯ ಚಿನ್ಹೆ ಇವೇ ನೆನಪಿಗೆ ಬರುತ್ತವೆ. ಜೊತೆಗೆ ಗ್ರಾಮ ಪಂಚಾಯಿತಿಯಿಂದ ಹಿಡಿದು ಎಂ.ಪಿ. ಚುನಾವಣೆಗಳಲ್ಲಿ ಗೆದ್ದು ಕೆಂಪು ಕೋಟೆಯ ಸಿಂಹಾಸನವನ್ನು ಏರುವುದು ಎಂಬ ಕಲರ್‌ಫುಲ್ ನಂಬಿಕೆಯೇ ಬಲವಾಗಿದೆ. ದಲಿತ ರಾಜಕಾರಣ ಎಂಬುದನ್ನೂ ಕೂಡ ಇದೇ ರೀತಿ ವಿವರಿಸಲಾಗಿದೆ. ದಲಿತರ ರಾಜಕಾರಣಕ್ಕೂ ದಲಿತರಲ್ಲದವರ ರಾಜಕಾರಣಕ್ಕೂ ಮೂಲಭೂತವಾಗಿ ಎಲ್ಲಿ ವ್ಯತ್ಯಾಸವಿದೆ ಎಂಬುದನ್ನು ಚರ್ಚಿಸಬೇಕು. ಚುನಾಯಿತ ಪ್ರತಿನಿಧಿಗಳು ಸಂಸತ್ತನ್ನೊ, ವಿಧಾನಸೌಧವನ್ನೊ ಪ್ರವೇಶಿಸಿ ಬಿಟ್ಟರೆ ದಲಿತ ರಾಜಕಾರಣ ಅಸ್ತಿತ್ವಕ್ಕೆ ಬಂತು ಎಂಬ ನಂಬಿಕೆ ಇದ್ದರೆ ಅದು ಒಂದು ಭ್ರಮೆ ಅಷ್ಟೆ. ಯಾಕೆಂದರೆ ಭಾರತದ ಇಂದಿನ ಪರಿಸ್ಥಿತಿಯು ಸಾಮ್ರಾಜ್ಯಶಾಹಿ ಲೂಟಿಗಳಿಗೆ, ಜಾಗತೀಕರಣದ ಸುಲಿಗೆಗೆ ಹೇಳಿ ಮಾಡಿಸಿದಂತಿದೆ. ಅಥವಾ ಇಡೀ ಭಾರತವನ್ನು ಅದರಲ್ಲೂ ಭಾರತದ ಆಳುವ ವರ್ಗವನ್ನು ಇಂತಹ ಲೂಟಿಗೆ ಎಲ್ಲಾ ಬಗೆಯಲ್ಲೂ ಮುಕ್ತ ಅವಕಾಶ ಮಾಡುವಂತೆ ಬದಲಾಯಿಸಲಾಗಿದೆ. ಫಲವಾಗಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಕೂಡ ಜಾಗತೀಕರಣ ನೀತಿಗಳನ್ನು ವಿರೋಧಿಸಿ ಆಡಳಿತ ನಡೆಸುವಂತಹ ಪರಿಸ್ಥಿತಿ ಇಲ್ಲ. ಜಾಗತೀಕರಣದ ನೀತಿಗಳು ದಲಿತರನ್ನು ಮತ್ತಷ್ಟು ಶೋಷಣೆ ಮಾಡಿವೆ, ಬೀದಿಪಾಲು ಮಾಡಿವೆ. ದಲಿತರ ಹೆಸರಿನಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ದಲಿತರನ್ನು ಸುಲಿಗೆ ಮಾಡುವ ನೀತಿಗಳನ್ನು ಜಾರಿಮಾಡಬೇಕೇ ಹೊರತು; ದಲಿತರನ್ನು ಸುಧಾರಣೆ ಮಾಡುವ ಕಾರ್ಯಕ್ರಮಗಳನ್ನು ಜಾರಿ ಮಾಡಲು ಆಗುವುದಿಲ್ಲ.

ದಲಿತ ರಾಜಕಾರಣ ಎಂದರೆ ಅದರಲ್ಲಿ ದಲಿತ ಹಿತಾಸಕ್ತಿ ಇರಬೇಕು. ಅದರಲ್ಲಿ ದಲಿತ ಧೋರಣೆ ಇರಬೇಕು. ದಲಿತರ ಹಸಿವು, ಅಪಮಾನ, ಶೋಷಣೆ, ಅಸಮಾನತೆಗಳ ಕ್ರೂರತೆಗಳನ್ನು ಸಮಗ್ರವಾಗಿ ಅರಿತಿರಬೇಕು. ದಲಿತರ ಸುಧಾರಣೆಯು ಉಳ್ಳವರ ಲಾಭಕ್ಕೆ ವಿರುದ್ಧವಾಗಿರುತ್ತದೆ. ದಲಿತರ ಬದಲಾವಣೆಯು ಅಸಮಾನತೆ ಹಾಗೂ ಶೋಷಕ ವ್ಯವಸ್ಥೆಯ ಬದಲಾವಣೆಯನ್ನು ಬೇಡುತ್ತದೆ. ದಲಿತರ ರಾಜಕಾರಣ ಎಂಬುದು ಎಲ್ಲಾ ಬಗೆಯ ಅಸಮಾನತೆ ಹಾಗೂ ಶೋಷಣೆಗಳನ್ನು ವಿರೋಧಿಸುತ್ತದೆ. ಸ್ವಾಭಿಮಾನ ಮತ್ತು ಸ್ವಾವಲಂಬನೆಗಳು ಇದರ ಮೂಲ ತಳಹದಿ. ಇವಿಲ್ಲದಿದ್ದರೆ ಅದು ದಲಿತ ರಾಜಕಾರಣವಾಗುವುದಿಲ್ಲ. ಆದರೆ ಇವತ್ತಿನ ದುರಂತ ಎಲ್ಲಿಯವರೆಗೆ ಬಂದಿದೆ ಎಂದರೆ ರಾಜಕಾರಣದ ಹಿತಾಸಕ್ತಿ ಮತ್ತು ಧೋರಣೆ ಶೋಷಕರದ್ದಾಗಿರುತ್ತದೆ. ಆ ಶೋಷಕ ರಾಜಕಾರಣದ ರಥವನ್ನು ಎಳೆಯಲು ದಲಿತರನ್ನು ಎತ್ತುಗಳಂತೆ ಕಟ್ಟಿದ್ದಾರೆ. ಅದನ್ನೇ ದಲಿತ ರಾಜಕಾರಣ ಎಂದು ಬಿಂಬಿಸುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ ವಸ್ತುಸ್ಥಿತಿ. ■

2012ರಲ್ಲಿ ದಲಿತರು: ಪೋಷಣೆಯಿಂದ ಪಾಲುದಾರಿಕೆಗೆ

ಸಮಾಜದ ಮುಖ್ಯವಾಹಿನಿಯಿಂದ ಹೊರಗಿಡಲ್ಪಟ್ಟು, ಮಲಿನ ಮತ್ತು ಕಳಂಕಿತ ಕಸುಬುಗಳಿಗೇ ಮೀಸಲಾಗಿದ್ದ ದಲಿತರು ಯಾವಾಗಲೂ ಪಾಲುದಾರರು ಎಂದು ಪರಿಗಣಿಸಲ್ಪಟ್ಟಿರಲಿಲ್ಲ. 1950ರಲ್ಲಿ ಭಾರತ ಡಾ.ಅಂಬೇಡ್ಕರರಿಂದ ಬರೆಯಲ್ಪಟ್ಟ ಆಧುನಿಕ ದೃಷ್ಟಿಕೋನದ ಕಾನೂನು ಪುಸ್ತಕವನ್ನಾಧರಿಸಿದ ಗಣರಾಜ್ಯವಾಗಿ ಉದಯಿಸಿದ ಮೇಲೆ ದಲಿತರು ತಮ್ಮ ಬಿಡುಗಡೆಗೆ ಹೊಸ ಕಿಟಕಿಯೊಂದನ್ನು ಕಂಡುಕೊಂಡರು. 1950ರ ನಂತರದ ಪಯಣ ಬಹಳ ಉದ್ದವಾದುದಾಗಿದ್ದು ಅನೇಕ ಸಂದುಗೊಂದುಗಳನ್ನು ಹಾದು ಬರುವಂತಹುದು.

ದಲಿತರನ್ನು ಸಮಾಜದ ಇತರರ ಮಟ್ಟಕ್ಕೆ ತರುವಲ್ಲಿನ ಮೊದಲ ಮೆಟ್ಟಿಲು ವಿದ್ಯಾರ್ಥಿ ವೇತನಗಳು, ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ, ಸರ್ಕಾರಿ ನೌಕರಿಗಳು ಮತ್ತು ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ಮುಂತಾದ ಸಕಾರಾತ್ಮಕ ಕಾರ್ಯಕ್ರಮಗಳು. ಭಾರತದ ಸಮಾಜವನ್ನು ಒಗ್ಗೂಡಿಸುವ ರಾಷ್ಟ್ರದ ನಿರ್ಣಯವನ್ನು ಒಪ್ಪದ ನಾಗರೀಕ ಸಮಾಜ ಅದನ್ನು ಕೆಡಿಸುವ ಸಲುವಾಗಿ ಪ್ರತಿ ಹೆಜ್ಜೆಗೂ ತೊಂದರೆಗಳನ್ನು ನೀಡುತ್ತಾ ಬಂತು. ಅದಾಗ್ಯೂ ಪ್ರಯಾಣ ಮುಂದುವರಿಯಿತು. ರಾಷ್ಟ್ರ ಒಂದು ಸಣ್ಣ ದಲಿತ ಮಧ್ಯಮವರ್ಗವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾಯಿತು ಮತ್ತು ಅದಕ್ಕಿಂತ ಸ್ವಲ್ಪ ದೊಡ್ಡದಾದ ದಲಿತ ಕೆಳ ಮಧ್ಯಮ ವರ್ಗವೂ ಸೃಷ್ಟಿಯಾಯಿತು.

1970ರಲ್ಲಿ 'ದಲಿತ ಉದ್ಯಮಿಗಳು' ಎಂಬ ಕಲ್ಪನೆಯೊಡನೆ ಅದರ ಮುಂದಿನ ಹಂತ ಪ್ರಾರಂಭವಾಯಿತು. ರಾಷ್ಟ್ರ ದಲಿತರನ್ನು ಬುಟ್ಟಿ ಎಣೆಯುವವರು, ಹಂದಿ, ಆಡು ಮತ್ತು ದನ ಸಾಕಾಣಿಕೆ ಮಾಡುವವರು ಮತ್ತು ಪಾದರಕ್ಷೆ ರಿಪೇರಿ ಮಾಡುವವರು ಎಂದು ಪರಿಗಣಿಸಿದಾಗ ಅದು ಸರಿಯಾದುದಾಗಿತ್ತು. ಸರ್ಕಾರದ ಸಾಲ ಸೌಲಭ್ಯಕ್ಕೆ ಸಂಬಂಧಪಟ್ಟ ಎಲ್ಲಾ ಯೋಜನೆಗಳೂ ಅಂತಹ ವಸ್ತುಗಳ ಸುತ್ತಲೇ ಎಣೆದುಕೊಂಡಿದ್ದುವು.

ಸಾಮಾನ್ಯ ವಾಣಿಜ್ಯೋದ್ಯಮದಲ್ಲಿ ಸ್ಪರ್ಧಿಸಲು ಬಲ ಇಲ್ಲದವರು ಎಂದು ಪರಿಗಣಿಸಲ್ಪಟ್ಟಿದ್ದ, ಈ ದಲಿತ ಉದ್ಯಮಿಗಳಿಗೆ ಸರ್ಕಾರ ಸಹಾಯಧನ, ಕಡಿಮೆ ಬಡ್ಡಿಯಲ್ಲಿ ಸಾಲ ಒದಗಿಸಿತು. ಹೀಗೆ ಸರ್ಕಾರಿ ಯೋಜನೆಗಳಿಂದ ಸಹಾಯಪಡೆದ ಯಾವುದೇ ದಲಿತ ಉದ್ಯಮಿ ಒಂದು ಕೋಟಿ ರೂ. ವ್ಯವಹಾರ ನಡೆಸಿದ್ದನ್ನು ನಾನು ಈವರೆಗೆ ಕಂಡಿಲ್ಲ. ಎಲ್ಲಾ ಸರ್ಕಾರಿ ಯೋಜನೆಗಳೂ ಪೋಷಣಾ ವ್ಯವಸ್ಥೆಗಳಾಗಿ ಕೊನೆಗೆ ಪರಿವರ್ತನೆಗೊಂಡುವು. ಸರ್ಕಾರ ಬೆಳೆಸಿದ ದಲಿತ ಉದ್ಯಮಿಗಳು ಎಂದೂ ತಮ್ಮ ತಲೆ ಎತ್ತಿ ನಡೆಯಲು ಸಾಧ್ಯವಾಗಲಿಲ್ಲ.

ಹೀಗೆ ಸರ್ಕಾರ ದಲಿತರನ್ನು ಬುಟ್ಟಿ ಎಣೆಯುವವರೂ ಮತ್ತು ಹಂದಿ ಸಾಕುವವರಾಗಿ ನೋಡುತ್ತಿರುವಾಗಲೇ ಮಿಲಿಂದ್ ಕಾಂಬ್ಲೆಯವರ ನೇತೃತ್ವದಲ್ಲಿ ಸ್ಥಾಪನೆಯಾದ ಡಿ.ಐ.ಸಿ.ಸಿ.ಐ. ಎಲ್ಲರನ್ನೂ ದಿಗ್ಭ್ರಮೆಗೊಳಿಸಿತು. ಹಿಂದಿನ ಡಿಸೆಂಬರ್ ಮಧ್ಯಭಾಗದಲ್ಲಿ ಮುಂಬೈನಲ್ಲಿ ಏರ್ಪಾಡು ಮಾಡಿದ್ದ ದಲಿತ ವಾಣಿಜ್ಯ ಪ್ರದರ್ಶನ ಬಹು ರಾಷ್ಟ್ರೀಯ ಸಂಸ್ಥೆಗಳೆಂದು ಹೇಳಿಕೊಳ್ಳಬಲ್ಲ ಐದು ದಲಿತ ಉದ್ಯಮಿಗಳನ್ನು ಹೊರಹಾಕಿತು.

ಖ್ಯಾತ ಉದ್ಯಮಿ ರತನ್ ಟಾಟಾ ಅವರೊಂದಿಗೆ ಡಿಐಸಿಸಿಐ ಅಧ್ಯಕ್ಷ ಮಿಲಿಂದ್ ಕಾಂಬ್ಳೆ

ದಲಿತ ಹಕ್ಕುಗಳ ಚಳವಳಿಯಲ್ಲಿ ಒಂದು ಹೊಸ ಬೆಳಗಿನ ಉದಯವನ್ನು 2012 ತೋರುತ್ತಿದೆ. ಅದು ಹೇಗೇ ಆಗಿರಲಿ ಸರ್ಕಾರದ ಪೋಷಣೆಯನ್ನು ತಿರಸ್ಕರಿಸುವ ದಲಿತರ ಒಂದು ವರ್ಗ ಉದಯವಾಗಿದೆ. ಪೋಷಣೆಗೆ ಬದಲಾಗಿ ದಲಿತರ ಈ ವರ್ಗ ಸರ್ಕಾರದ ಜೊತೆ ಪಾಲುದಾರಿಕೆಯನ್ನು ಬಯಸುತ್ತದೆ. ಈ ಬದಲಾವಣೆಯ ಗಾತ್ರ ವಿಸ್ತಾರವಾಗಬೇಕು. ಸಣ್ಣ ಸಣ್ಣ ದಲಿತ ಉದ್ಯಮಿಗಳೂ ಈ ಪಾಲುದಾರಿಕಾ ಮಾರ್ಗವನ್ನು ಪೋಷಣೆಯ, ರಿಯಾಯಿತಿ, ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲದ ವ್ಯವಸ್ಥೆ ಮುಂತಾದವುಗಳಿಗೆ ಬದಲಿ ಮಾರ್ಗವಾಗಿ ಯೋಚಿಸಬೇಕು.

ನವಿ ಮುಂಬೈನ ದಲಿತ ಕೈಗಾರಿಕೋದ್ಯಮಿ ಅಶೋಕ್ ಖಡೆ ಹಿಂದಿನ ವರ್ಷ 15 ಕೋಟಿ ರೂಪಾಯಿಗಳ ತೆರಿಗೆ ಕಟ್ಟಿದ್ದರು. ಲೂದಿಯಾನದ ದಲಿತ ಕೈಗಾರಿಕೋದ್ಯಮಿ ಮಾಲ್ಕಿಯಾತ್ ಚಂದ್ ಹಿಂದಿನ ವರ್ಷ 8 ಕೋಟಿ ರೂಪಾಯಿಗಳ ತೆರಿಗೆ ಕಟ್ಟಿದ್ದರು. ಈ ದಲಿತ ವಾಣಿಜ್ಯ ಪ್ರದರ್ಶನದಲ್ಲಿ ಭಾಗವಹಿಸಿದ್ದವರಲ್ಲಿ 10 ಕೋಟಿಗೂ ಹೆಚ್ಚು ತೆರಿಗೆ ಕಟ್ಟಿದ 25ಕ್ಕೂ ಹೆಚ್ಚು ದಲಿತ ಕೈಗಾರಿಕೋದ್ಯಮಿಗಳಿದ್ದರು. ಕಲ್ಪನಾ ಸರೋಜ್ ಅವರೇ ಅನೇಕ 100 ಕೋಟಿಗಳ ಖಜಾನೆಯ ಮೇಲೆ ಕುಳಿತಿದ್ದಾರೆ. ನೂರು ಕೋಟಿಗಳಿಗಿಂತಲೂ ಹೆಚ್ಚು ತೆರಿಗೆ ಕಟ್ಟುವ ದಲಿತ ಕೈಗಾರಿಕೋದ್ಯಮಿಯೊಬ್ಬರ ತಂದೆ ಸಹ ಈ ಪ್ರದರ್ಶನಕ್ಕೆ ಬಂದಿದ್ದರು. ಹರಿಯಾಣಾದ ದಲಿತ ಕೈಗಾರಿಕೋದ್ಯಮಿಯೊಬ್ಬ 100 ಟನ್‌ಗಿಂತಲೂ ಹೆಚ್ಚು ತೂಕದ ಹೆವಿಡ್ಯೂಟಿ ಕ್ರೇನುಗಳ ಉತ್ಪಾದಕನಾಗಿದ್ದಾನೆ. ಉತ್ತರ ಪ್ರದೇಶದ ಆರ್.ಕೆ.ಸಿಂಗ್ 12 ಟನ್ ತೂಕದ ಟ್ರಾನ್ಸ್ ಫಾರ್ಮರ್‌ಗಳನ್ನು ಉತ್ಪಾದಿಸುತ್ತಿದ್ದಾರೆ.

ದಲಿತರ ಅತಿ ದೊಡ್ಡ ವರ್ಗವನ್ನು ಇನ್ನೂ ಕೆಳವರ್ಗವೆಂದು ಪರಿಗಣಿಸಬೇಕಾಗುತ್ತಾದರೂ ಫೋರ್ಬ್ಸ್ ವರ್ಗದವರಾಗಿ ಅವರ ಒಂದು ಸಣ್ಣ ವರ್ಗ

ದೊಡ್ಡ ಯಂತ್ರಗಳ ತಯಾರಿಕೆ, ರಫ್ತು ಮತ್ತು ಆಮದು, ಮಾಹಿತಿ ತಂತ್ರಜ್ಞಾನ, ಆರೋಗ್ಯ, ಆತಿಥ್ಯ ಮುಂತಾದ ರಂಗಗಳಲ್ಲಿ ದೊಡ್ಡ ಮಟ್ಟದ ಕೈಗಾರಿಕೋದ್ಯಮಗಳಾಗಿ ಹೊರಹೊಮ್ಮುತ್ತಿದ್ದಾರೆ.

ಮೇರುವ್ಯಕ್ತಿತ್ವದ ಕೈಗಾರಿಕೋದ್ಯಮಿಗಳಾದ ರತನ್ ಟಾಟಾ, ಆದಿ ಗೋದ್ರೇಜ್, ಮತ್ತು ಫರದ್ ಫೋರ್ಬ್ಸ್ ಇವರುಗಳ ಭೇಟಿಯೊಂದಿಗೆ ಭಾರತ ಸರ್ಕಾರ ಕೂಡ ದಲಿತರ ಬಗೆಗಿನ ತನ್ನ ಕಲ್ಪನೆಯನ್ನು ಸ್ವಲ್ಪ ವಿಸ್ತರಿಸಿಕೊಳ್ಳಬೇಕಾಯಿತು.

ಒಂದು ವಾರದ ಹಿಂದೆ ದಲಿತರಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವುದು ಹೇಗೆ ಎಂದು ಚರ್ಚಿಸಲು ಭಾರತ ಸರ್ಕಾರ ಡಿ.ಐ.ಸಿ.ಸಿ.ಐಯನ್ನು ಆಹ್ವಾನಿಸಿತ್ತು. ಮುಕುಲ್ ವಾಸ್ನಿಕ್ ನೇತೃತ್ವದ ಈ ಸರಳ ಗುಂಪಿನಲ್ಲಿ ಜಯರಾಮ್ ರಮೇಶ್, ಡಾ.ನರೇಂದ್ರ ಜಾದವ್, ಮತ್ತು ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗದ ಪಿ.ಎಲ್.ಪೂನಿಯ ಅವರಿದ್ದರು. ಕಾಂಬ್ಲೆ ನೇತೃತ್ವದ ಡಿ.ಐ.ಸಿ.ಸಿ.ಐ ಗುಂಪಿನಲ್ಲಿ ಡಿ.ಐ.ಸಿ.ಸಿ.ಐನ ದೆಹಲಿ ಶಾಖೆಯ ಅಧ್ಯಕ್ಷ ಎನ್.ಕೆ.ಚಂದ್ರ, ಮಾರ್ಗದರ್ಶಿ ಶಿಶುಪಾಲ್ ಸಿಂಗ್, ಹರಿಯಾಣದ ಡಿ.ಐ.ಸಿ.ಸಿ.ಐ ಸದಸ್ಯ ಎಸ್.ಎಸ್.ಗ್ರೋವರ್, ಉತ್ತರ ಪ್ರದೇಶದ ಡಿ.ಐ.ಸಿ.ಸಿ.ಐ ಸಂಯೋಜಕ ಆರ್.ಕೆ.ಸಿಂಗ್, ಡಿ.ಐ.ಸಿ.ಸಿ.ಐನ ಸಂಯುಕ್ತ ಸಾಮೂಹಿಕ ಜವಾಬ್ದಾರಿ ವಿಭಾಗದ ಮುಖ್ಯಸ್ಥ ಸುನೀಲ್ ಜೋಡೆ, ಕೌಶಲ್ಯಾಭಿವೃದ್ಧಿ ವಿಭಾಗದ ಮುಖ್ಯಸ್ಥ ಕೋಬ್ರಗಡೆ, ಈಕ್ವಿಟಿ ವಿಭಾಗದ ಮುಖ್ಯಸ್ಥ ಪ್ರಸಾದ್ ದಹಾಪುತೆ ಮತ್ತು ಡಿ.ಐ.ಸಿ.ಸಿ.ಐನ ಉತ್ತರ ಭಾರತದ ಸಂಯೋಜಕ ರಾಜೇಶ್ ಪಾಸ್ವಾನ್ ಅವರಿದ್ದರು.

ಡಿ.ಐ.ಸಿ.ಸಿ.ಐನ ನಿಯೋಗ ಈ ಕೆಳಕಂಡ ವಾದಗಳನ್ನು ಸರ್ಕಾರದ ಮುಂದಿಟ್ಟಿತು

1) ನಿಮ್ಮ ಪೋಷಕ/ರಿಯಾಯಿತಿ/ಕಡಿಮೆ ಬಡ್ಡಿ ಯೋಜನೆಗಳನ್ನು ದಯಮಾಡಿ ಮುಂದುವರೆಸುವುದು. ಏಕೆಂದರೆ ಅತಿ ಹೆಚ್ಚು ಜನ ದಲಿತರಿಗೆ ಅವುಗಳ ಅವಶ್ಯಕತೆ ಇದೆ.

2) ನಮಗೆ ಮಾರುಕಟ್ಟೆಯಲ್ಲಿ ಭಾಗ ಕೊಡಿ. ಇದನ್ನು ಚಿಕ್ಕ ಮತ್ತು ಮಧ್ಯಮ ವರ್ಗದ ಕೈಗಾರಿಕಾ ಕ್ಷೇತ್ರಗಳಿಗೆ ಸೀಮಿತಗೊಳಿಸಬೇಡಿ.

3) ಸರ್ಕಾರದ ಸಂಸ್ಥೆಗಳು ದಲಿತರ ಮಾಲೀಕತ್ವದ ಕಂಪನಿಗಳಲ್ಲಿ ಬಂಡವಾಳ ತೊಡಗಿಸಿ ಅವರ ಪಾಲುದಾರರಾಗುವಂತೆ ಮಾಡಿ.

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಸುಮಾರು ಒಂದೂವರೆ ಗಂಟೆಗಳು ನಡೆದ ಚರ್ಚೆಯಲ್ಲಿ ಸರ್ಕಾರ ದಲಿತರ ಮಾಲೀಕತ್ವದ ಉದ್ಯಮಗಳಲ್ಲಿ ಪಾಲುದಾರರಾಗುವುದಕ್ಕೆ ತತ್ವಶಃ ಒಪ್ಪಿಗೆ ನೀಡಿತು. ಭರವಸೆ ನೀಡಿದ್ದಂತೆ ಸರ್ಕಾರದ ನಿಯೋಗ ಈ ಕಂಪನಿಗಳಲ್ಲಿ ಷೇರುಗಳನ್ನು ಖರೀದಿಸುವ ಹೊಸ ವ್ಯವಸ್ಥೆಯನ್ನು ಮುಂದೆ ಕೊಂಡೊಯ್ಯುವುದಾಗಿ ತೀರ್ಮಾನಿಸಿದೆ. ಅದರ ರೂಪುರೇಷೆಗಳು ನಂತರ ನಿರ್ಧಾರವಾಗುತ್ತವೆ.

ದಲಿತ ಹಕ್ಕುಗಳ ಚಳವಳಿಯಲ್ಲಿ ಒಂದು ಹೊಸ ಬೆಳಗಿನ ಉದಯವನ್ನು 2012 ತೋರುತ್ತಿದೆ. ಅದು ಹೇಗೇ ಆಗಿರಲಿ ಸರ್ಕಾರದ ಪೋಷಣೆಯನ್ನು ತಿರಸ್ಕರಿಸುವ ದಲಿತರ ಒಂದು ವರ್ಗ ಉದಯವಾಗಿದೆ. ಪೋಷಣೆಗೆ ಬದಲಾಗಿ ದಲಿತರ ಈ ವರ್ಗ ಸರ್ಕಾರದ ಜೊತೆ ಪಾಲುದಾರಿಕೆಯನ್ನು ಬಯಸುತ್ತದೆ. ಈ ಬದಲಾವಣೆಯ ಗಾತ್ರ ವಿಸ್ತಾರವಾಗಬೇಕು. ಸಣ್ಣ ಸಣ್ಣ ದಲಿತ ಉದ್ಯಮಿಗಳೂ ಈ ಪಾಲುದಾರಿಕಾ ಮಾರ್ಗವನ್ನು ಪೋಷಣೆಯ, ರಿಯಾಯಿತಿ, ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲದ ವ್ಯವಸ್ಥೆ ಮುಂತಾದವುಗಳಿಗೆ ಬದಲಿ ಮಾರ್ಗವಾಗಿ ಯೋಚಿಸಬೇಕು.

ಡಿ.ಐ.ಸಿ.ಸಿ.ಐನ ಮತ್ತೊಂದು ಘೋಷಣೆ "ನಮಗೆ ಸಂಪರ್ಕಬೇಕು, ರಿಯಾಯಿತಿಯಲ್ಲ". ಮೇಲಿನಂತಹ ಮಾರ್ಗಗಳಿಂದ ಮಾತ್ರ ದಲಿತ ಬಂಡವಾಳಶಾಹಿ ಎಲ್ಲ ದಲಿತರಲ್ಲಿ ಹೆಮ್ಮೆ ಮತ್ತು ಗೌರವಗಳನ್ನು ತುಂಬಬಲ್ಲುದು. 2012 ಭರವಸೆಗಳಿಂದ ತುಂಬಿದೆ.

* * *

ಹೊಸ ವರ್ಷದಲ್ಲಿ ಚಿಂತನೆಗಳು ಸುರಿಯುತ್ತಿವೆ. ನನ್ನ ಯೋಚನಾ ಲಹರಿಗೆ ಅತಿ ಮುಖ್ಯವಾದಂತಹ ಚಿಂತನೆಗಳಲ್ಲಿ ಹೆಚ್ಚಿನವು ನನ್ನ ಸ್ನೇಹಿತರಿಂದ ಬಂದಿವೆ.

ಹಿಂದಿನ ದಿನ ಉತ್ತರ ಪ್ರದೇಶದ ರಾಜಕೀಯದಲ್ಲಿ ಏನಾಗುತ್ತಿದೆ ಎಂದು ತಿಳಿದುಕೊಳ್ಳಲು ನಾನು ಆಗ್ರಾದ ಡಾ॥ ಆರ್.ಕೆ ಭಾರ್ತಿ ಅವರ ಜೊತೆ ಮಾತನಾಡಿದೆ. ಕೆಲವು ತಿಂಗಳು ನಾನು ಡಿ.ಐ.ಸಿ.ಸಿ.ಐನ ಚಟುವಟಿಕೆಗಳಲ್ಲಿ ಮುಳುಗಿ ಹೋಗಿದ್ದೆ. ಆದುದರಿಂದ ಉತ್ತರ ಪ್ರದೇಶಕ್ಕೆ ಹೋಗಲಾಗಿರಲಿಲ್ಲ. ಮುಂಬಯಿಯ ದಲಿತ ವಾಣಿಜ್ಯ ಮೇಳ ನನ್ನ ಮನಸ್ಸಿನಲ್ಲಿ ಅತಿ ಮುಖ್ಯವಾಗಿ ಕೂತಿತ್ತು.

ಡಾ॥ ಭಾರ್ತಿ ಆಗ್ರಾದ ಡಾ॥ ಬಿ.ಆರ್ ವಿಶ್ವವಿದ್ಯಾನಿಲಯದ ಜೊತೆ ಸಂಪರ್ಕ ಹೊಂದಿರುವ ಶಿಕ್ಷಣ ತಜ್ಞರು. 'ನೀವೇಕೆ ರಾಜಕೀಯದ ಬಗ್ಗೆ ಇಷ್ಟು ತಲೆಕೆಡಿಸಿಕೊಂಡಿದ್ದೀರಿ', ಅವರು ಮರು ಪ್ರಶ್ನೆ ಮಾಡಿದರು. 'ರಾಜಕೀಯ ಪ್ರಜೆಗಳ ಜೀವನದ ಮೇಲೆ ಕೇವಲ ಶೇ.12ರಷ್ಟು ಮಾತ್ರ ಹಿಡಿತ ಹೊಂದಿದೆ', ಅವರು ನನಗೆ ಫೋನಿನಲ್ಲೆ ಹೇಳಿದರು.

ಈ ಹೊಚ್ಚ ಹೊಸ ಚಿಂತನೆ ಕೇಳಿ ನಾನು ತುಂಬಾ ಖುಷಿಪಟ್ಟೆ. ನಮ್ಮ ಸಂಭಾಷಣೆ ಮುಂದುವರೆಯಿತು. ಡಾ॥ ಭಾರ್ತಿಯವರು ಇದಕ್ಕೆ ಅನೇಕ ಉದಾಹರಣೆಗಳನ್ನೂ ನೀಡಿದರು. 'ಭಾರತದಲ್ಲಿ ಯಾವ ಸಾಮಾಜಿಕ ಪಂಗಡ ಹೆಚ್ಚು ಶ್ರೀಮಂತವಾಗಿದೆ?' ಅವರು ನನ್ನನ್ನು ಕೇಳಿದರು. ಆ ಪಂಗಡ ಜೈನರದು ಎಂದು ಅವರೇ ವಿವರಿಸಿದರು. ದೇಶದ ರಾಜಕೀಯದಲ್ಲಿ ಜೈನರು ಎಷ್ಟು ಕಡಿಮೆ ಪ್ರತಿನಿಧ್ಯ ಪಡೆದಿದ್ದಾರೆ ಎಂದು ವಿವರಿಸುತ್ತಾ ಹೋದರು. 'ಸದ್ಯದ ಭವಿಷ್ಯದಲ್ಲಿ ಜೈನ್ ಸಮುದಾಯದ ಯಾವುದೇ ಸದಸ್ಯ ಭಾರತದ ಪ್ರಧಾನ ಮಂತ್ರಿಯಾಗಬಹುದೆ?' ಅವರು ನನ್ನನ್ನು ಕೇಳಿದರು. ಅವರು ಮತ್ತೂ ಅನೇಕ ಉದಾಹರಣೆಗಳನ್ನು ನೀಡಿದರು. 'ನಿಮ್ಮ ದಿನದ ಕ್ಯಾಲೆಂಡರನ್ನು ಪರಿಶೀಲಿಸಿ ಅಥವಾ ಹಿಂದಿನ ತಿಂಗಳ ಮೊದಲ ದಿನದಿಂದ ಕೊನೆದಿನದವರೆಗೆ ಲೆಕ್ಕ ಹಾಕಿ ನಿಮ್ಮ ಊಟ, ಬಟ್ಟೆ ಮತ್ತು ಪ್ರಯಾಣದ ಆಯ್ಕೆಯನ್ನು ಯಾವುದು ನಿರ್ಧರಿಸಿತು ಎಂದು ನೋಡಿ', ಅವರು ಮುಂದುವರೆಸಿದರು. 'ನನ್ನ ಆದಾಯ' ಎಂಬ ಉತ್ತರ ನಿಚ್ಚಳವಾಗಿತ್ತು. ನನ್ನಲ್ಲಿ ಹಣವಿದ್ದಲ್ಲಿ, ನಾನು ವಿಮಾನಯಾನ ಮಾಡಲು ಆರಿಸಿಕೊಳ್ಳುತ್ತೇನೆ.

'ನಿಮ್ಮ ನೆರೆಯವನು ನಿಮಗಿಂತಲೂ ಹೆಚ್ಚು ಶ್ರೀಮಂತನಿರುತ್ತಾನೆ. ಆದರೆ ಅವನು ಕೇವಲ ಹೈಸ್ಕೂಲ್ ಮಾತ್ರ ಓದಿರುತ್ತಾನೆ. ಅವನು ನಿಮ್ಮಷ್ಟೆ ಸಾಮಾಜಿಕ ಅಂತಸ್ತನ್ನು ಹೊಂದಿರುತ್ತಾನೆಯೆ?' ಅವರು ನನ್ನನ್ನು ಕೇಳಿದರು.

'ನಿಮ್ಮ ನೆರೆಯವನು ಶ್ರೀಮಂತ ಮತ್ತು ಉಚ್ಚ ಶಿಕ್ಷಣ ಪಡೆದವನೂ ಆಗಿರುತ್ತಾನೆ. ಆದರೆ ಅವನಿಗೆ ಇಂಗ್ಲೀಷ್ ಬರುವುದಿಲ್ಲ. ಆಗ ಪರಿಸ್ಥಿತಿ ಏನು', ಡಾ॥ ಭಾರ್ತಿಯವರು ನನಗೆ ಉದಾಹರಣೆಗಳನ್ನು ಕೊಡುತ್ತಾ ಹೋದರು.

ನಿಮ್ಮ ನೆರೆಯವನು ನಿಮಗಿಂತ ಕಡಿಮೆ ಶ್ರೀಮಂತನಾಗಿರುತ್ತಾನೆ. ಅವನ ಶಿಕ್ಷಣ ಮತ್ತು ಇಂಗ್ಲೀಷ್ ಜ್ಞಾನವೂ ಸಹ ನಿಮಗಿಂತ ಕಡಿಮೆ. ಆದರೆ ಅವನು ಮೇಲ್ಜಾತಿಯವನಾಗಿರುತ್ತಾನೆ', ಡಾ॥ ಭಾರ್ತಿಯವರನ್ನು ನಿಲ್ಲಿಸುವ ಹಾಗೇ ಇರಲಿಲ್ಲ.

ಆರ್ಥಿಕ ಸ್ಥಿತಿ, ಕಸುಬು, ಶಿಕ್ಷಣ, ಜಾತಿ, ಸಂಸ್ಕೃತಿ, ಧರ್ಮ ಮುಂತಾದವು ನಮ್ಮ ಜೀವನದ ಹೆಚ್ಚು ಭಾಗಗಳನ್ನು ನಿಯಂತ್ರಿಸುತ್ತವೆ', ಅವರು ಕೊನೆಗೊಳಿಸಿದರು.

ನಮ್ಮ ಸಾಮೂಹಿಕ ಪ್ರಜ್ಞೆಯಲ್ಲಿ ಕ್ಷತ್ರಿಯರು ನಮ್ಮ ಇತಿಹಾಸದ ಹೆಚ್ಚು ಕಾಲ ಭಾರತವನ್ನಾಳಿದ್ದಾರೆ. ಹಾಗಾದರೂ ಆ ಕ್ಷತ್ರಿಯರು ಇಂದು ಹೆಚ್ಚು ಸಂಖ್ಯೆಯಲ್ಲಿ ದೆಹಲಿಯಲ್ಲಿ ಸೆಕ್ಯುರಿಟಿ ಗಾರ್ಡ್‌ಗಳಾಗಿರಲು ಕಾರಣವೇನು? ಉತ್ತರ ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಯಾಣ ಮಾಡಿ ಮತ್ತು ಅಲ್ಲಿಯ ಬ್ರಾಹ್ಮಣ ಹಳ್ಳಿಗಳನ್ನೊಮ್ಮೆ ಇಣುಕಿ ನೋಡಿ. ಬ್ರಾಹ್ಮಣ ಕುಟುಂಬಗಳ ಸುಮಾರು ಕಾಲುಭಾಗ ಬಹಳ ದುಸ್ಥಿತಿಯಲ್ಲಿರುತ್ತವೆ. ಆದರೆ ನಮ್ಮ ಸಾಮೂಹಿಕ ಪ್ರಜ್ಞೆಯಲ್ಲಿ ಬ್ರಾಹ್ಮಣರು ಭಾರತದ ಸಾಮಾಜಿಕ ದೊರೆಗಳು.

ನಮ್ಮ ಜೀವನದ ಎಷ್ಟು ಭಾಗವನ್ನು ರಾಜಕೀಯ ನಿಯಂತ್ರಿಸುತ್ತದೆ ಎಂಬುದರ ಬಗ್ಗೆ ಸಾಹಿತ್ಯವೇನಾದರೂ ಇದೆಯೆ ಎಂಬುದು ನನಗೆ ನಿಜವಾಗಿಯೂ ಗೊತ್ತಿಲ್ಲ. ಡಾ॥ ಭಾರ್ತಿಯವರು ಅದು ಹೇಗೆ ಶೇ.12ರ ಲೆಕ್ಕ ಹಾಕಿದರು? ಆದರೆ ನಾನು ಗ್ರಾಮಾಂತರ ಮತ್ತು ನಗರ ಪ್ರದೇಶದ ಜನಸಂಖ್ಯೆ, ಜಾತಿ ಮತ್ತು ಸಮುದಾಯಗಳು ಇವುಗಳ ಸುತ್ತ ಚಿಂತಿಸಿದಂತೆ ಡಾ॥ ಭಾರ್ತಿ ಅಕ್ಷರ ಸಹ ಸರಿಯೆನಿಸುತ್ತದೆ. ಆಗ್ರಾದ ಪಕ್ಕದ ಒಂದು ಸಣ್ಣ ಪಟ್ಟಣದಲ್ಲಿ ಬೆಳೆದ ಭಾರ್ತಿ ನಮಗೆ ಒಂದು ಹೊಸ ಸಿದ್ಧಾಂತದ ಸೂಚನೆ ನೀಡಿದ್ದಾರೆ.

ಎಂ+ಇ+ಇ = ದಲಿತರ ಬಿಡುಗಡೆ

ದಲಿತ ಚಳವಳಿಗಳು ಎತ್ತಕಡೆ?

ಅದನ್ನು ನಾವು ಪರಿಶೀಲಿಸಬೇಕು ಮತ್ತು ಡಾ॥ ಭಾರ್ತಿಯವರೂ ಸಹ ಅದನ್ನು ಮತ್ತೂ ಚೆನ್ನಾಗಿ ಅಭಿವೃದ್ಧಿಪಡಿಸಬೇಕು.

ಠಾಕೂರರು ಎಂದು ಕುಖ್ಯಾತವಾಗಿ ಗುರುತಿಸಲ್ಪಟ್ಟಿರುವ ಹೆಚ್ಚು ಜನ ಕ್ಷತ್ರಿಯರು, ಮತ್ತು ಬ್ರಾಹ್ಮಣರು ತಮ್ಮ ಸಂಪತ್ತನ್ನು ಕಾಯುತ್ತಾ, ತಮ್ಮ ಪ್ರಜೆಗಳು ಎಂದುಕೊಂಡವರಿಂದ ನಮಸ್ಕಾರಗಳನ್ನು ಎದುರು ನೋಡುತ್ತಾ ಗ್ರಾಮಾಂತರ ಪ್ರದೇಶದಲ್ಲಿಯೇ ಉಳಿದುಕೊಂಡು ಹಿಂದುಳಿದುಬಿಟ್ಟಿದ್ದಾರೆ. ಮತ್ತೊಂದೆಡೆ ಯು.ಎಸ್ ಮತ್ತು ಯೂರೋಪ್‌ಗಳಿಗೆ ವಲಸೆ ಹೋದ ಭಾರತೀಯರು ತುಂಬಾ ಅಭಿವೃದ್ಧಿ ಹೊಂದಿದ್ದಾರೆ.

ಪ್ರಪಂಚದ ಎಲ್ಲಾ ಚಿಂತಕರೂ ವಲಸೆ ಅಭಿವೃದ್ಧಿಯನ್ನು ಮುಂದೆ ಕೊಂಡೊಯ್ಯುವ ಅತಿಮುಖ್ಯ ಚಾಲಕ ಎಂದು ಗುರುತಿಸಿದ್ದಾರೆ. ಅನೇಕ ಪೀಳಿಗೆ ಒಂದೇ ಕಡೆ ವಾಸಿಸುವ ಜನ ಅದೃಷ್ಟಹೀನರು.

ಸ್ವಾತಂತ್ರ್ಯವನ್ನು ಚುಂಬಿಸಲು ದಲಿತರು ವಲಸೆಯ ಉಪಕರಣವನ್ನು ಉಪಯೋಗಿಸಲೇಬೇಕು. ಅಭಿವೃದ್ಧಿ ತನಗೆ ತಾನಾಗಿಯೇ ಬರುತ್ತದೆ. ಹೊಲ ಗದ್ದೆಗಳಲ್ಲಿ ಕೆಲಸ ಮಾಡಿಕೊಂಡಿರುವ ದಲಿತ ಕೆಳವರ್ಗ ತಮ್ಮನ್ನು ಸ್ವಾತಂತ್ರ್ಯದೆಡೆ ಚಿಮ್ಮಿಸುವ ಆಯುಧವಾಗಿ ನಗರಗಳನ್ನೂ ಮತ್ತು ಕೊಳಚೆ ಪ್ರದೇಶಗಳನ್ನೂ ಆರಿಸಿಕೊಳ್ಳಬೇಕು. ಹೆಚ್ಚು ಜಮೀನನ್ನು ಹೊಂದಿರುವ ದಲಿತರೂ ಸಹ ಪಟ್ಟಣಗಳಿಗೆ ಹೊರಡಬೇಕು. ಸಣ್ಣ ಸಣ್ಣ ಪಟ್ಟಣಗಳಲ್ಲಿ ಇರುವ ದಲಿತರು ದೊಡ್ಡ ನಗರಗಳಿಗೆ ವಲಸೆ ಹೋಗಬೇಕು. ದೊಡ್ಡ ನಗರಗಳಲ್ಲಿರುವ ದಲಿತರ ಮಕ್ಕಳು ಯು.ಎಸ್ ಮತ್ತು ಯೂರೋಪ್‌ಗೆ ವಿದ್ಯಾರ್ಥಿಗಳಾಗಿ ಅಥವಾ ತಜ್ಞರಾಗಿ ವಲಸೆ ಹೋಗಬೇಕು. ಇದು ದಲಿತ ಬಿಡುಗಡೆಯ ಎಂ. ಭಾರತದ ಬೌದ್ಧಿಕ ಪಿತ ಡಾ॥ ಬಿ.ಆರ್.ಅಂಬೇಡ್ಕರ್‌ರವರು ನಗರಗಳಿಗೆ ವಲಸೆ ಹೋಗುವುದನ್ನು 'ಹೊಸ ಜೀವನ ಚಳುವಳಿ' ಎಂದು ವಿಶ್ಲೇಷಿಸಿದರು.

ಸ್ವಾತಂತ್ರ್ಯವನ್ನು ಚುಂಬಿಸಲು ದಲಿತರು ವಲಸೆಯ ಉಪಕರಣವನ್ನು ಉಪಯೋಗಿಸಲೇಬೇಕು. ಅಭಿವೃದ್ಧಿ ತನಗೆ ತಾನಾಗಿಯೇ ಬರುತ್ತದೆ. ಹೊಲ ಗದ್ದೆಗಳಲ್ಲಿ ಕೆಲಸ ಮಾಡಿಕೊಂಡಿರುವ ದಲಿತ ಕೆಳವರ್ಗ ತಮ್ಮನ್ನು ಸ್ವಾತಂತ್ರ್ಯದೆಡೆ ಚಿಮ್ಮಿಸುವ ಆಯುಧವಾಗಿ ನಗರಗಳನ್ನೂ ಮತ್ತು ಕೊಳಚೆ ಪ್ರದೇಶಗಳನ್ನೂ ಆರಿಸಿಕೊಳ್ಳಬೇಕು. ಹೆಚ್ಚು ಜಮೀನನ್ನು ಹೊಂದಿರುವ ದಲಿತರೂ ಸಹ ಪಟ್ಟಣಗಳಿಗೆ ಹೊರಡಬೇಕು.

DICCI

Developing Business Leadership

ಪ್ರಪಂಚದುದ್ದಕ್ಕೂ ಮಾನವರ ಅಭಿವೃದ್ಧಿಯಲ್ಲಿ ಯಹೂದಿಗಳು ಹೇಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೊ ಹಾಗೆಯೇ ಭಾರತದ ಅಭಿವೃದ್ಧಿಯಲ್ಲಿ ಕಾಯಸ್ತರು ತಮ್ಮ ಕೊಡುಗೆ ನೀಡಿದ್ದಾರೆ. ಎಲ್ಲ ನಿಯಮಗಳಿಗೂ ಅಪವಾದ ಇರುತ್ತದೆ. ಕಾಯಸ್ತರಲ್ಲಿ ಓದು ಬರಹ ಇಲ್ಲದವರು ಈ ಅಪವಾದದಂತೆ. ಹೆಚ್ಚು ಕಾಯಸ್ತರು, ಅಷ್ಟೇ ಏಕೆ ಎಲ್ಲ ಕಾಯಸ್ತರೂ ಇಂಗ್ಲೀಷ್ ಬಲ್ಲವರು. ಪಾರಂಪರಿಕವಾಗಿ ಯಾರು ತಮ್ಮನ್ನು ಜ್ಞಾನದ ಭಂಡಾರಗಳು ಎಂದು ಪರಿಗಣಿಸಿಕೊಳ್ಳುತ್ತಿದ್ದರೊ ಅಂತಹ ಬ್ರಾಹ್ಮಣರೂ ಸಹ ಇಂಗ್ಲೀಷ್‌ನ ಜ್ಞಾನದಲ್ಲಿ ಕಾಯಸ್ತರಿಗಿಂತ ಹಿಂದಿದ್ದಾರೆ. ಇಂಗ್ಲೀಷ್ ಬಿಡುಗಡೆಗೊಳಿಸುತ್ತದೆ. ಇಂಗ್ಲೀಷ್ ಮೇಲೆ ನೈಪುಣ್ಯ ಸಾಧಿಸದಿದ್ದಲ್ಲಿ ಭಾರತದ ಬೌದ್ಧಿಕ ಪಿತ ಸಹ ನರಳುತ್ತಿರುವ ಮಾನವತೆಯ ತತ್ವಜ್ಞಾನಿಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತಿರಲಿಲ್ಲ. ಆದುದರಿಂದಲೇ ಎಲ್ಲ ದಲಿತರೂ ಇಂಗ್ಲೀಷನ್ನು ಸ್ವಾತಂತ್ರ್ಯದ ಕ್ಷಿಪಣಿಯಾಗಿ ಪ್ರದರ್ಶಿಸುತ್ತಾರೆ.

ಹೀಗೆ ದಲಿತರ ಬಿಡುಗಡೆಯಲ್ಲಿ 'ಎಂ' ಜೊತೆ 'ಇ' ಸಹ ಸೇರಿಕೊಳ್ಳುತ್ತದೆ.

'ಕೆಲಸ ನೀಡುವವರಾಗಿ, ಕೆಲಸ ಹುಡುಕುವವರಾಗಬೇಡಿ' ಎನ್ನುತ್ತದೆ ಡಿ.ಐ.ಸಿ.ಸಿ.ಐ.ನ ಘೋಷಣೆ.

ಸಾವಿರಾರು ವರ್ಷಗಳ ಕಾಲ ದಲಿತರು ಇತರರಿಗೆ ಕೆಲಸ ಮಾಡುವಂತೆ ಒತ್ತಾಯದಲ್ಲಿ ಹಾಕಲಾಗಿತ್ತು. ಈಗ ದಲಿತ ಉದ್ದಿಮೆದಾರರು ಮತ್ತು ಕೆಲಸ ನೀಡುವವರಾಗಿ ಬದಲಾಗಲು ಒಂದು ದೊಡ್ಡ ಅವಕಾಶವಿದೆ. ಮನು ಧರ್ಮಕ್ಕೆ ಅತ್ಯಂತ ಬಲವಾದ ಹೊಡೆತ ಇದು. ದಲಿತ ಬಿಡುಗಡೆಯನ್ನು ಎಂ–ವಲಸೆ + ಇ–ಇಂಗ್ಲೀಷ್ + ಇ–ಉದ್ಯಮಶೀಲತೆ ಪೂರ್ಣಗೊಳಿಸುತ್ತವೆ.

ದಲಿತರು ಹೋಗುವುದು ಎಂ+ಇ+ಇ. ಇದು ದಲಿತರ ಬಿಡುಗಡೆಯ ಸಿದ್ಧಾಂತ. ಇದು ಜಾತಿ ಪದ್ಧತಿಯಿಂದ ಬಿಡುಗಡೆ ಹೊಂದುವ ಮಾರ್ಗ.

* * *

ಕಳೆದ ವಾರ ನಾನು ಪಂಜಾಬಿನಲ್ಲಿದ್ದೆ. ಖ್ಯಾತ ದಲಿತ ಕೈಗಾರಿಕೋದ್ಯಮಿ ಮಾಲ್ಕಿಯಾತ್ ಚಂದ್ ಅವರ ಬಗ್ಗೆ ಚಿತ್ರ ತಯಾರಿಸಲು ಪಂಜಾಬಿನ ಕೈಗಾರಿಕಾ ಜಿಲ್ಲೆ ಲೂದಿಯಾನದಲ್ಲಿ ನಾನಿದ್ದೆ. ಒಂದು ಕಾಲದಲ್ಲಿ ಹೊಸ್ಯೆರಿ ಘಟಕ ಒಂದರಲ್ಲಿ ಕೆಲಸಗಾರರಾಗಿದ್ದ ಮಾಲ್ಕಿಯಾತ್ ಅವರ ವಾರ್ಷಿಕ ವಹಿವಾಟು 1000 ಮಿಲಿಯನ್ ರೂಪಾಯಿ ಮುಟ್ಟುವ ಭರವಸೆಯಿದೆ.

ನಾನು ಅವರ ಹುಟ್ಟು ಊರಿಗೆ ಭೇಟಿ ನೀಡಲು ಬಯಸಿದೆ. ಲೂದಿಯಾನದಿಂದ ಸುಮಾರು 25 ಮೈಲಿ ಉತ್ತರಕ್ಕಿರುವ ಅವರ ಊರನ್ನು ಮತ್ತೊಬ್ಬ ದಲಿತ ಕೈಗಾರಿಕೋದ್ಯಮಿ ಶಮ್ಮಿ ಕಪೂರ್ ಮತ್ತು ಕ್ಯಾಮೆರಾಮನ್‌ಗಳ ಜೊತೆಯಲ್ಲಿ ನಾನು ತಲುಪಿದೆ. ಮಾಲ್ಕಿಯಾತ್‌ನ ಕುಟುಂಬದವರು ಆ ಹಳ್ಳಿಯಲ್ಲಿ ವಾಸಿಸದಿದ್ದರೂ ಅವರು ಅಲ್ಲಿ ಒಂದು ದೊಡ್ಡ ಮನೆ ಕಟ್ಟಿಸಿ ತಮ್ಮ ಸಂಬಂದಿಗಳ ಉಪಯೋಗಕ್ಕಾಗಿ ನೀಡಿದ್ದಾರೆ.

ಮಾಲ್ಕಿಯಾತ್ ತಮ್ಮ ಹಳ್ಳಿಗೆ ಬಂದಿದ್ದಾರೆ ಎಂಬ ವಿಷಯ ತಿಳಿದು ಬಹಳ ಜನರು ಅಲ್ಲಿ ಸೇರಿದರು. ಅವರೆಲ್ಲರೂ ಮಾಲ್ಕಿಯಾತ್‌ರ ಪರೋಪಕಾರಿ ಕೆಲಸದ ಬಗ್ಗೆ ತುಂಬಾ ಹೊಗಳುತ್ತಿದ್ದರು. ನಾನು ಹಳ್ಳಿಯವರೊಬ್ಬರನ್ನು ಮಾಲ್ಕಿಯಾತ್ ಚಾಂದ್ ಹುಟ್ಟಿದ ಮನೆಯನ್ನು ನನಗೆ ತೋರಿಸುವಂತೆ ಕೇಳಿದೆ. ಅವರು ನನ್ನನ್ನು ಹಳ್ಳಿಯ ಪಶ್ಚಿಮ ಭಾಗಕ್ಕೆ ಐದಾರು ದಲಿತ ಕುಟುಂಬಗಳು ವಾಸಮಾಡುವ ಮಣ್ಣಿನ ಮನೆಗಳ ಕಡೆಗೆ ಕೊಂಡೊಯ್ದರು. ನಾವು ಅವರ ಜೊತೆ ಬಹಳಷ್ಟು ಕಾಲ ಮಾತುಕತೆಯಾಡುತ್ತಾ ಕಳೆದೆವು.

ಅದೇ ಸಮಯದಲ್ಲಿ ದಲಿತ ಯುವಕನೊಬ್ಬನನ್ನು ನಾನು ಆ ಮನೆಗಳ ಒಳಗೆ ಬರಬಹುದೆ ಎಂದು ಕೇಳಿದೆ. ಶ್ರೀಮಂತಿಕೆ ತುಂಬಿರುವ ಪಂಜಾಬಿನಲ್ಲಿ ಬಡತನ ಕೂಡ ಹೇಗೆ ವಿಜೃಂಭಿಸುತ್ತಿದೆ ಎಂಬುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಬಹಳ ಹಿಂದುಳಿದ ಪೂರ್ವ ಉತ್ತರ ಪ್ರದೇಶದ ಕಡು ಬಡವರೂ ಸಹ ಮಾಲ್ಕಿಯತ್‌ನ ಹಳ್ಳಿಯಲ್ಲಿ ನಾನು ನೋಡಿದ ಮನೆಗಳಿಗಿಂತ ಉತ್ತಮವಾದ ಮನೆಗಳಲ್ಲಿ ವಾಸಿಸುತ್ತಾರೆ. 'ಅವರು ತಮ್ಮ ಗೂಡುಗಳಿಗೆ ಎಷ್ಟು ಹೊಂದಿಕೊಂಡಿದ್ದಾರೆಂದರೆ ಪಟ್ಟಣಗಳಿಗೆ ವಲಸೆ ಹೋಗಲು ಅವರು ನಿರಾಕರಿಸುತ್ತಾರೆ', ಶಾಲಾ ಶಿಕ್ಷಕರೊಬ್ಬರು ಹೇಳಿದರು. ನನ್ನ ವಿಚಾರಣೆಯಿಂದ ಈ ಮಣ್ಣಿನ ಮನೆಗಳಲ್ಲಿ ವಾಸಿಸುವ ಕುಟುಂಬಗಳು ಕೇವಲ 25 ಮೈಲಿ ದೂರದಲ್ಲಿರುವ ಕೈಗಾರಿಕಾ ಪಟ್ಟಣವಾದ ಲೂದಿಯಾನಕ್ಕೆ ತಮ್ಮ ಕುಟುಂಬದವರಾರನ್ನೂ ವಲಸೆ ಕಳುಹಿಸಿಲ್ಲ. ಲೂದಿಯಾನದಿಂದ ಕೇವಲ 100 ಮೈಲಿ ಪಶ್ಚಿಮಕ್ಕಿರುವ ದೋಬ್ ಪ್ರದೇಶದಿಂದ ಪ್ರತಿ ಮೂರು ದಲಿತ ಕುಟುಂಬಗಳಿಗೆ ಒಬ್ಬರಂತೆ ಇಂಗ್ಲೆಂಡ್, ಕೆನಡಾ, ಮತ್ತು ಯು.ಎಸ್‌ಗಳಿಗೆ ವಲಸೆ ಹೋಗಿರುತ್ತಾರೆ.

ಪಂಜಾಬ್‌ಗೆ ದಲಿತ ಚಳುವಳಿಗಳ ಶ್ರೀಮಂತ ಚರಿತ್ರೆ ಇದೆ. ಆದರೆ ಪಂಜಾಬಿನ ದಲಿತ ಚಳುವಳಿಗಳು ತಮ್ಮ ಗಮನವನ್ನು ಸಂಪೂರ್ಣವಾಗಿ ಧರ್ಮದ ಮೇಲೆ

ಕೇಂದ್ರೀಕರಿಸಿವೆ. ರವಿದಾಸರನ್ನು ಸಿಖ್ ಧರ್ಮದ ಗುರುಗಳಲ್ಲಿ ಒಬ್ಬರಾಗಿ ಪರಿಗಣಿಸಬೇಕೆಂದು ಒತ್ತಾಯಿಸುತ್ತಾ ಪಂಜಾಬಿನ ದಲಿತರು ರವಿದಾಸ್ ಗುರುದ್ವಾರಗಳನ್ನು ಏಕೇಚ್ಛವಾಗಿ ಕಟ್ಟುತ್ತಿದ್ದಾರೆ.

ದಲಿತ ಚಳುವಳಿಗಳು ಧರ್ಮವನ್ನೊಳಗೊಂಡಂತೆ ಅನೇಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾಗುತ್ತದೆ. ಅವರು ಧರ್ಮ ಒಂದನ್ನೇ ಕೇಂದ್ರವಾಗಿಟ್ಟು ಚಳುವಳಿ ನಡೆಸಿದಲ್ಲಿ ಅದು ಪಂಜಾಬ್ ದಲಿತರನ್ನು ಮುಂದೆ ಕೊಂಡೊಯ್ಯುವುದಿಲ್ಲ. 'ನೀವು ಸ್ಕೂಲುಗಳನ್ನೂ ಸಹ ಏಕೆ ಕಟ್ಟುತ್ತಿಲ್ಲ', ನಾನು ಕೇಳಿದೆ. ನನಗೆ ತೃಪ್ತಿಕರವಾದ ಉತ್ತರ ದೊರೆಯಲಿಲ್ಲ.

ಪಂಜಾಬಿನ ದಲಿತ ಚಳುವಳಿಗಳು ಆ ರಾಜ್ಯದ ದಲಿತರನ್ನು ಪಟ್ಟಣಗಳಿಗೆ ವಲಸೆ ಹೋಗಲು ಏಕೆ ಹೇಳುತ್ತಿಲ್ಲ? ಯಾವುದೊ ಕಾರಣದಿಂದ ಪಂಜಾಬ್ ಮತ್ತು ಕೇರಳದಲ್ಲಿ ಇತರ ರಾಜ್ಯಗಳಿಗಿಂತ ದಲಿತರಲ್ಲಿನ ಭೂ ಮಾಲೀಕತ್ವ ಅತೀ ಕಡಿಮೆ. ಉದಾಹರಣೆಗೆ ಉತ್ತರ ಪ್ರದೇಶದಲ್ಲಿ ದಲಿತರ ಶೇಕಡ 42.63 ಜನರು ವ್ಯವಸಾಯಗಾರರಾಗಿದ್ದಾರೆ. ಪಂಜಾಬಿನಲ್ಲಿ ಈ ಸಂಖ್ಯೆ ಶೇಕಡ 4.8 ಮತ್ತು ಕೇರಳದಲ್ಲಿ ಶೇಕಡ 3.1. ಜಮೀನಿನ ಮಾಲೀಕತ್ವದಲ್ಲಿ ಇಂತಹ ದುಃಸ್ಥಿತಿ ಇರುವಾಗ ಕೇರಳದ ದಲಿತರೇಕೆ ಒಂದು ದಿನವಾದರೂ ಹಳ್ಳಿಗಳಲ್ಲಿರಬೇಕು? ದಲಿತರನ್ನು ಗ್ರಾಮ ಜೀವನದ ನರಕದಿಂದ ಬಿಡುಗಡೆಗೊಳಿಸಲಾಗದಿದ್ದರೆ, ಪಂಜಾಬಿನ ದಲಿತ ಚಳವಳಿ ಮಾಡುತ್ತಿರುವುದಾದರೂ ಏನು?

ನಾನು ಮನಸ್ಸಿನಲ್ಲೇ ಈ ಪ್ರಶ್ನೆಯನ್ನು ತಿರುವಿ ಹಾಕುತ್ತಿರುವಾಗ ಕೈಗಾರಿಕೋದ್ಯಮಿ ಶಮ್ಮಿ ಕಪೂರ್, ಅವರಲ್ಲಿ ಕೆಲಸ ಮಾಡುತ್ತಿರುವ ಬಿಹಾರದ ನೌಕರನೊಬ್ಬನ ಕಥೆಯನ್ನು ನನಗೆ ಹೇಳಿದರು. ಒಂದು ವರ್ಷದ ಹಿಂದೆ ಅವರ ಈ ನೌಕರ ಬಿಹಾರದಿಂದ ಹಿಂದಿರುಗಿದ ಮತ್ತು ತನ್ನ ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದ ಹಳ್ಳಿಯ ಅವನ ಒಂಭತ್ತು ಕೊಠಡಿಗಳುಳ್ಳ ಮನೆಯ ವೀಡಿಯೊವನ್ನು ನನಗೆ ತೋರಿಸಿದ ಎಂದರು ಅವರು.

ನಾವು ನಗರಕ್ಕೆ ಹಿಂತಿರುಗಿದಾದ ನಾನು ಆ ಬಡಾವಣೆಯಲ್ಲಿ ಏಕೆ ಟರ್ಬನ್ ಧರಿಸಿದವರು ಅತೀ ಕಡಿಮೆ ಜನರಿದ್ದಾರೆ ಎಂದು ಮಾಲ್ಕಿಯಾತ್‌ನನ್ನು ಕೇಳಿದೆ? "ಲೂದಿಯಾನದೊಳಗೆ ಇದೊಂದು ಪುಟ್ಟ ಬಿಹಾರ", ಅವರು ನನಗೆ ಉತ್ತರಿಸಿದರು.

ಎರಡು ವಾರಗಳ ಹಿಂದೆ ನಾನು ಪೂರ್ವ ಉತ್ತರ ಪದೇಶದ ಗ್ರಾಮಾಂತರ ಪ್ರದೇಶದಲ್ಲಿದ್ದೆ. ನಾನು ಅಲ್ಲಿ ಆ ರಾಜ್ಯದ ದಲಿತ ಮಕ್ಕಳ ಸ್ಥಿತಿಯನ್ನು ನೋಡಿದೆ. ಜಿಲ್ಲಾ ಕೇಂದ್ರ ಅಜಮ್‌ಘಡ್‌ನಿಂದ ದಕ್ಷಿಣಕ್ಕೆ ಕೇವಲ ಹತ್ತು ಮೈಲಿ ದೂರದಲ್ಲಿರುವ ಒಂದು ಹಳ್ಳಿಯಲ್ಲಿ ನಾನು ಮೂರನೇ ಒಂದು ಭಾಗದಷ್ಟು ದಲಿತ ಮಕ್ಕಳು ಇನ್ನೂ ಸರ್ಕಾರಿ ಶಾಲೆಗಳಿಗೆ ಹೋಗುವುದನ್ನು ನೋಡಿದೆ.

ಇದಕ್ಕೆ ಕಾರಣವನ್ನು ನಾನು ಹುಡುಕಿದೆ. "ಹೀಗೆ ಸರ್ಕಾರಿ ಶಾಲೆಗಳಿಗೆ ಹೋಗುವ ದಲಿತ ಮಕ್ಕಳು ಅತೀ ಬಡ ಮಕ್ಕಳೆ?' ಆ ಹಳ್ಳಿಯ ಪಂಚಾಯತ್ ಮುಖ್ಯಸ್ಥನನ್ನು ನಾನು ಕೇಳಿದೆ. "ಹಾಗೇನಿಲ್ಲ" ಎಂದು ಅವನು ಉತ್ತರಿಸಿದ. ಹೇಗೆ ಕಡು ಬಡವರಾದ ಅನೇಕ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ ಮತ್ತು ಕೆಲವು ಉತ್ತಮ ಆದಾಯದ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸುತ್ತಿದ್ದಾರೆ ಎಂಬುದನ್ನು ಅವನು ಉದಾಹರಣೆ ಸಹಿತ ವಿವರಿಸಿದ.

"5ನೇ ತರಗತಿ ಓದಿದ ವಿದ್ಯಾರ್ಥಿ ತನ್ನ ಹೆಸರನ್ನು ಸರಿಯಾಗಿ ಬರೆಯಲು ಸಾಧ್ಯವಾಗದೆ ಇರುವಾಗ ಕೆಲ ದಲಿತ ಕುಟುಂಬಗಳು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸಲು ಕಾರಣಗಳೇನು?' ನಾನು ಪಂಚಾಯತ್ ಮುಖ್ಯಸ್ಥನನ್ನು ಕೇಳಿದೆ? ಅವನು ಮೂರು ಕಾರಣಗಳನ್ನು ನೀಡಿದ. ಅನೇಕ ತಂದೆ ತಾಯಿಗಳು ಬೇಜವಾಬ್ದಾರಿಯಿಂದ ಸರ್ಕಾರಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುತ್ತಾರೆ. ಖಾಸಗಿ ಶಾಲೆಗಳಿಗೆ ಕಳುಹಿಸಬೇಕಾದಲ್ಲಿ ತಿಂಗಳಿಗೆ 50ರಿಂದ 100 ರೂಪಾಯಿ ನೀಡಬೇಕಾಗುತ್ತದೆ. ಖಾಸಗಿ ಶಾಲೆಗಳಿಗೆ ಹೋಗಬೇಕಾದರೆ ಮಕ್ಕಳು ಅಚ್ಚುಕಟ್ಟಾಗಿ ಬಟ್ಟೆ ಧರಿಸಬೇಕು ಮತ್ತು ಬೆಳಿಗ್ಗೆ ಅವರ ಊಟವನ್ನು ತಯಾರು ಮಾಡಬೇಕಾಗುತ್ತದೆ. ಇಂತಹ ನಿರ್ಲಕ್ಷ ತಂದೆ ತಾಯಿಗಳು ಇಷ್ಟು ತೊಂದರೆ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಎರಡನೆಯದು ದುರಾಸೆ. ಏಕೆಂದರೆ ಸರ್ಕಾರಿ ಶಾಲೆಗಳಲ್ಲಿ ಸ್ಕಾಲರ್ ಶಿಪ್ ಸಿಗುತ್ತದೆ, ಉಚಿತ ಯೂನಿಫಾರಂ ಮತ್ತು ಪುಸ್ತಕ ಸಿಗುತ್ತವೆ. ಮೂರನೆಯದು ಬಡತನ.

ಉತ್ತರ ಪ್ರದೇಶದಲ್ಲಿ ದಲಿತ ಚಳುವಳಿ ಏನು ಮಾಡುತ್ತಿದೆ? ಇಲ್ಲಿ ಎಲ್ಲರ ಗಮನ ರಾಜಕೀಯದ ಕಡೆ ರಾಜಕೀಯದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂಬ ನಂಬಿಕೆ ಅವರದು. ಶಿಕ್ಷಣವಿಲ್ಲದಿದ್ದರೆ ಪ್ರಪಂಚದ ಯಾವ ಮೂಲೆಯಲ್ಲಿಯೆ ಆಗಲಿ ಯಾರಿಗೆ ಬಿಡುಗಡೆ ದೊರೆಯಲು ಸಾಧ್ಯ?

ದಲಿತ ಚಳುವಳಿಗಳು ತಮ್ಮನ್ನು ತಾವೇ ಹೊಸದಾಗಿ ರೂಪಿಸಿಕೊಳ್ಳಬೇಕು. ಮತ್ತು ದಲಿತ ಹಿರಿಯರು ಈ ದಿಸೆಯಲ್ಲಿ ಬಿಟ್ಟು ಹೋಗಿರುವ ಶ್ರೀಮಂತ ಹಿನ್ನೆಲೆಯನ್ನು ಮತ್ತೆ ಪುನರುಜ್ಜೀವನಗೊಳಿಸಬೇಕು. ನಾನು ನನ್ನ ಬಾಲ್ಯದಲ್ಲಿ ನನ್ನ ಹಳ್ಳಿಯಲ್ಲಿ ಎರಡು ದೊಡ್ಡ ಚಳುವಳಿಗಳನ್ನು ನೋಡಿದ್ದೇನೆ. ಜನರ ಗುಂಪುಗಳು ಬಂದು ಸತ್ತ ಪ್ರಾಣಿಗಳ ಚರ್ಮ ಹಳಿಯುವವರನ್ನು ಓಡಿಸುತ್ತಿದ್ದರು. ಯಾವುದೇ ಹಳ್ಳಿಯಲ್ಲಿ ಒಂದು ಅಥವಾ ಎರಡು ಕುಟುಂಬಗಳು ಸತ್ತ ಪ್ರಾಣಿಗಳ ಚರ್ಮ ಹಳಿಯುವುದರಲ್ಲಿ ನಿರುತರಾಗಿರುತ್ತಿದ್ದರು. ಅವರ ಈ ಕೆಲಸದಿಂದ ಇಡೀ ಚಮ್ಮಾರ ಸಮುದಾಯ ಚರ್ಮಕರ್ಮಿಗಳು ಎಂದು ಕೀಳಾಗಿ ಪರಿಗಣಿಸಲ್ಪಡುತ್ತಿತ್ತು.

ಅದೇ ರೀತಿ ಫಾಸಿ ಎಂಬ ದಲಿತ ಪಂಗಡ ಹಂದಿ ಸಾಗಣಿಕೆಗೆ ಹೆಸರಾಗಿದೆ. ಒಂದು ಅಥವಾ ಎರಡು ಕುಟುಂಬಗಳು ಹಂದಿ ಸಾಕಾಣಿಕೆಗೆ ತೊಡಗಿಸಿಕೊಂಡಿರುತ್ತಿದ್ದುವಾದರೂ, ಇಡೀ ಫಾಸಿ ಸಮುದಾಯವನ್ನು ಹಂದಿ ಸಾಕುವವರು ಎಂದು ಕಳಂಕಿತವಾಗಿ ಮಾಡಲಾಗುತ್ತದೆ. ಫಾಸಿ ಸುಧಾರಕ ಗುಂಪುಗಳು ಫಾಸಿ ಕಾಲೋನಿಗಳಲ್ಲಿ ಸುತ್ತಾಡಿ, ಹಂದಿ ಸಾಕಾಣಿಕೆ ನಿಲ್ಲಿಸುವಂತೆ ಅವರಿಗೆ ಹೇಳುತ್ತಿದ್ದರು.

ದಲಿತ ಚಳುವಳಿಗಳು ತಮ್ಮೊಳಗೇ ಏಕೆ ಸುಧಾರಣಾ ಚಳುವಳಿಗಳನ್ನು ಪ್ರಾರಂಭಿಸಬಾರದು.

* * *

ಹಿಂದಿನ ವಾರ ನಾನು ಲಕ್ನೊದಲ್ಲಿದ್ದೆ ಅಲ್ಲಿ ದಲಿತ ಅಧಿಕಾರಿಗಳ ಒಂದು ಗುಂಪನ್ನು ನಾನು ಭೇಟಿಯಾದೆ. ಡಿ.ಐ.ಸಿ.ಸಿ.ಐ ಮತ್ತು ದಲಿತ ಉದ್ಯಮಶೀಲತೆ, ದಲಿತ ಪ್ರಜ್ಞೆಯ ಮೇಲೆ ತನ್ನ ಮುದ್ರೆಯನ್ನೊತ್ತಿರುವುದರಿಂದ ದಲಿತ ಮಧ್ಯಮವರ್ಗ ಈ ವಿಷಯವಾಗಿ ಬಹಳವಾಗಿ ಚರ್ಚಿಸುತ್ತಿದೆ. ದಲಿತರ ಹೊಸ ಕಾರ್ಯಸೂಚಿಯಾಗಿ ಮತ್ತು ಮಾಧ್ಯಮಗಳು ಬಹಳಷ್ಟು ಪ್ರಚಾರ ನೀಡಿರುವುದರಿಂದ, 'ದಲಿತ ಬಂಡವಾಳ ಶಾಹಿಗಳು' ಎಂಬ ವಿಷಯ ಉತ್ತರ ಪ್ರದೇಶದಲ್ಲಿ ನಾನು ಭಾಗವಹಿಸಿದ್ದ ಸಭೆಯ ಮುಖ್ಯ ಚರ್ಚಾ ವಸ್ತುವಾಗಿ ಪರಿಣಮಿಸಿತು.

ಕೆಲ ಸಾವಿರ ದಲಿತರು ಕೆಲಸ ನೀಡುವವರಾಗಿ, ಮಾರ್ಗದರ್ಶಿಗಳಾಗಿರುವುದನ್ನು ಕೇಳಿ ಬಹಳಷ್ಟು ದಲಿತ ಅಧಿಕಾರಿಗಳು ರೋಮಾಂಚನಗೊಂಡಿದ್ದರು. ಹೆಚ್ಚು ಕಡಿಮೆ ಎಲ್ಲರೂ ದಲಿತ ಬಂಡವಾಳದಾರರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ ಕೆಲಸ ಹುಡುಕುವವರಾಗಿ ಅವರು ಸ್ವಲ್ಪ ಚಿಂತೆಗೂ ಒಳಗಾಗಿದ್ದರು. ಇಲ್ಲಿ ನಾನು ಒಂದು ಹೊಸ ಪದವನ್ನು ಪರಿಚಯಿಸುತ್ತಿದ್ದೇನೆ. ಕೆಲಸ ಹುಡುಕುವವರು ಎಂದರೆ, ಸರ್ಕಾರಿ ಸೇವೆಯಲ್ಲಿರುವ, ಖಾಸಗಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಮತ್ತು ನೌಕರರು. ನೌಕರರಾಗಿ ನಿವೃತ್ತಿ ಹೊಂದಿದ ದಲಿತರೂ ಮತ್ತು ಮೇಲಿನ ಕ್ಷೇತ್ರಗಳಲ್ಲಿ ನೌಕರಿ ಹುಡುಕುವವರೂ ಈ ಗುಂಪಿನಲ್ಲಿ ಸೇರುತ್ತಾರೆ.

ದಲಿತ ನೌಕರಿ ಹುಡುಕುವವರು ದಲಿತ ಪ್ರಜ್ಞೆಯ ಬೆನ್ನೆಲುಬು ಮತ್ತು ಪಾತ್ರ ಮಾದರಿಗಳು ಎಂಬುದನ್ನು ಹೇಳಲು ಮೊದಲು ನಾನು ಇಚ್ಛಿಸುತ್ತೇನೆ. ಸಮುದಾಯದ ಸ್ವಪ್ರತಿಷ್ಠೆಯನ್ನು ಹೆಚ್ಚಿಸುವುದರಲ್ಲಿ ಅವರು ಬಹುವಾಗಿ ಪಾತ್ರ ವಹಿಸಿದ್ದಾರೆ. ಆದರೆ, ಭಾರತದ ಬೌದ್ಧಿಕ ಪಿತ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದಲಿತ ನೌಕರಿ ಬೇಡುವವರ ಬಗ್ಗೆ ಸ್ವಲ್ಪ ಅಸಂತೋಷಗೊಂಡಿದ್ದರು. ಅವರಿಗೆ ದಲಿತ ನೌಕರಿ ಬೇಡುವವರು ಎಂದರೆ, ವಿದ್ಯಾವಂತ ದಲಿತರಾಗಿದ್ದರು.

ಲಕ್ನೋ ಸಭೆಯಲ್ಲಿದ್ದ ಕೆಲವು ದಲಿತ ಅಧಿಕಾರಿಗಳು ಮಾಧ್ಯಮದಲ್ಲಿ ಈ ರೀತಿಯ ಪ್ರಚಾರ ಸಿಗುತ್ತಿರುವುದರಿಂದ ದಲಿತ ಉದ್ಯಮಿಗಳಿಗೆ ಕುಂದಾಗುವುದಿಲ್ಲವೇ? ನಮ್ಮ ಜಾತಿ ಕೇಂದ್ರಿತ ಸಮಾಜ ಅವರನ್ನು ದೂರವಿಡುವುದಿಲ್ಲವೇ? ಎಂದು ಕೇಳಿದರು. ಇತರರು ಹೌದು ಹೌದು ಎನ್ನುವಂತೆ ತಲೆ ಆಡಿಸಿದರು. ಲಕ್ನೋ ಅಪವಾದವಲ್ಲ. ದಲಿತ ನೌಕರಿ ಬೇಡುವವರು ಬೇರೆ ಕಡೆಯೂ ಇಂತಹ ಚಿಂತೆಗೆ ಒಳಗಾಗಿದ್ದಾರೆ.

ದಲಿತ ನೌಕರಿ ಬೇಡುವವರ ಕಳವಳ ನಮ್ಮ ಜಾತಿ ಕೇಂದ್ರಿತ ಸಮಾಜ ದಲಿತರು ಉದ್ಯಮಗಳಲ್ಲಿ ಯಶಸ್ವಿಯಾಗದಂತೆ ನೋಡಿಕೊಳ್ಳುತ್ತದೆ ಎಂಬ ನಂಬಿಕೆಯಿಂದ ಉಂಟಾದುದಾಗಿದೆ. ಜಾತಿ, ಎಂದೆಂದಿಗೂ ಬದಲಾಗುವುದಿಲ್ಲ ಎಂಬುದು ಅವರ ನಂಬಿಕೆ.

(65ನೇ ಪುಟಕ್ಕೆ)

ಕೆಲಸ ನೀಡುವವರು ಮತ್ತು ಕೆಲಸ ಹುಡುಕುವವರ ಮಧ್ಯೆ

ಪ್ರಗತಿ ಸಾಧನೆಯಲ್ಲಿ ದೇಶದಲ್ಲೇ ಕರ್ನಾಟಕಕ್ಕೆ ಹಲವು ಪ್ರಥಮಗಳ ಗರಿ

ಜನಪರ ಕಾಳಜಿಯ ಕರ್ನಾಟಕ ಸರ್ಕಾರವು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ರೂಪಿಸಿದ ಯೋಜನೆಗಳ ಯಶಸ್ವೀ ಅನುಷ್ಠಾನದಿಂದಾಗಿ ರಾಜ್ಯವು ಇಂದು ದೇಶದಲ್ಲೇ ಪ್ರಗತಿಯ ಮುಂಚೂಣಿಯಲ್ಲಿದೆ.

ಸಾಧನೆಯ ಕೈಗನ್ನಡಿ–ಪ್ರಗತಿಯ ಪಕ್ಷಿನೋಟ

* ರಾಜ್ಯ ಮಟ್ಟದಲ್ಲಿ ಜ್ಞಾನ ಆಯೋಗ ರಚನೆ.
* ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಅನುಷ್ಠಾನದಲ್ಲಿ ರಾಷ್ಟ್ರದಲ್ಲಿಯೇ ಅಗ್ರಗಣ್ಯ.
* ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನಕ್ಕಾಗಿ ಧಾರವಾಡ, ಬೆಳಗಾವಿ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ರಾಷ್ಟ್ರೀಯ ಪುರಸ್ಕಾರ.
* ಗ್ರಾಮ ಪಂಚಾಯ್ತಿಗಳಿಗೆ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರದಿಂದ ಪ್ರಥಮ ಪ್ರಶಸ್ತಿ.
* ಸುಜಲಾ ಯೋಜನೆ ಜಾರಿಗಾಗಿ ರಾಷ್ಟ್ರೀಯ ಜಲ ಪ್ರಶಸ್ತಿ.
* ಬೆಂಗಳೂರು ಒನ್ ಸೇವಾ ಕೇಂದ್ರಗಳು ಸೇವೆಗಳ ವ್ಯಾಪ್ತಿ ಹಾಗೂ ಜನಮನ್ನಣೆಯಲ್ಲಿ ದೇಶಕ್ಕೆ ಪ್ರಥಮ.
* ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಏಷ್ಯಾಪ್ರಶಸ್ತಿ ಗೌರವ.
* 2009ರ ಬಳಿಕ ಇ–ಪಾವತಿ ಅಳವಡಿಸಿಕೊಂಡ ಮೊದಲ ರಾಜ್ಯ ಎಂಬ ಹೆಗ್ಗಳಿಕೆ.
* ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ವಿತರಣಾ ವ್ಯವಸ್ಥೆ ಆರಂಭ. ಇದಕ್ಕೆ ನಗರಾಭಿವೃದ್ಧಿ ಸಚಿವಾಲಯದಿಂದ "ಎಕ್ಸಲೆನ್ಸಿ" ಪ್ರಶಸ್ತಿ.
* ಕೆಯುಐಡಿಎಫ್‌ಸಿ ಐದು ಜಿಲ್ಲೆಗಳಲ್ಲಿ ಜಾರಿಗೊಳಿಸಿದ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದ ಯೋಜನೆಗಳಿಗಾಗಿ ರಾಷ್ಟ್ರೀಯ ನಗರ ಜಲ ಪ್ರಶಸ್ತಿ–2009.

ಅಭಿವೃದ್ಧಿಯೇ ಆಡಳಿತ ಮಂತ್ರ

ಕರ್ನಾಟಕ ವಾರ್ತೆ
Karnataka Information

ಕೆಲಸ ನೀಡುವವರು ಮತ್ತು ಕೆಲಸ ಹುಡುಕುವವರ ಮಧ್ಯೆ

(63ನೇ ಪುಟದಿಂದ)

ನಾನು ಅವರಿಗೆ ವಿವರಿಸಬೇಕಾಯಿತು. ಕೆಲವು ಗಂಭೀರ ಉದಾಹರಣೆಯನ್ನು ನೀಡುವುದರ ಹೊರತು ವಿವರಣೆ ನೀಡಲು ಬೇರೆ ದಾರಿಯಿರಲಿಲ್ಲ. "ಜನವರಿ 10ರಂದು ನಾವು ಆಂದ್ರ ಪ್ರದೇಶದ ಡಿ.ಐ.ಸಿ.ಸಿ.ಐ ಶಾಖಾ ಉದ್ಘಾಟನೆ ಮಾಡಿದೆವು. ಆಂಧ್ರ ಪ್ರದೇಶದ ಡಿ.ಐ.ಸಿ.ಸಿ.ಐ ಶಾಖೆಯ ಅಧ್ಯಕ್ಷರಾದ ದಲಿತ ಉದ್ಯಮಿ ರವಿಕುಮಾರ ನರಾ ನೇತೃತ್ವದ ಡಿ.ಐ.ಸಿ.ಸಿ.ಐ ಶಾಖಾ ಉದ್ಘಾಟನೆ ಹೈದರಾಬಾದ್‌ನಲ್ಲಿ ವೈಭವದಿಂದ ನೆರವೇರಿತು.

ಜನವರಿ 10ರ ಹೈದರಾಬಾದ್‌ನ ಈ ಸಮಾರಂಭ ಅನೇಕ ಕಾರಣಗಳಿಗಾಗಿ ಗಮನ ಸೆಳೆಯಿತು. ಅರಮನೆಯಾಗಿದ್ದು, ಒಂದು ಕಾಲದಲ್ಲಿ ಅಧಿಕಾರದ ಕೇಂದ್ರವಾಗಿದ್ದ ಹೈದರಾಬಾದ್‌ನ ಜುಬಿಲಿ ಹಾಲ್‌ನಲ್ಲಿ ಅದು ನಡೆದುದು ಮೊದಲನೆಯದು. ಎರಡನೆಯದಾಗಿ ಅದರಲ್ಲಿ ಎಪ್ಪತ್ತು ಜನ ದಲಿತ ಉದ್ಯಮಿಗಳು, ಅಂದರೆ ನೌಕರಿ ನೀಡುವವರು ಭಾಗವಹಿಸಿದ್ದರು. ಮೂರನೆಯದಾಗಿ ಸಮಾರಂಭದಲ್ಲಿ ಆಂಧ್ರ ಸರ್ಕಾರದ ಖ್ಯಾತ ಮಹಿಳಾ ನಾಯಕಿ ಡಾ.ಗೀತಾ ರೆಡ್ಡಿ, ದಲಿತರೇ ಆದ ವರ್ಚಸ್ವಿ ರಾಜಕಾರಣಿ ಮತ್ತು ಆಂಧ್ರ ಪ್ರದೇಶ ಉಪ ಮುಖ್ಯಮಂತ್ರಿ ದಾಮೋದರ ರಾಜನರಸಿಂಹ, ಸಂಸತ್ ಸದಸ್ಯರೂ, ವಿನಯಶೀಲರೂ ಮತ್ತು ಆಂಧ್ರ ಪ್ರದೇಶ್ ಡಿ.ಐ.ಸಿ.ಸಿ.ಐ ಶಾಖೆಯ ಮಾರ್ಗದರ್ಶಿಗಳೂ ಡಾ. ಗದ್ದಾಮ್ ವಿವೇಕಾನಂದ ಭಾಗವಹಿಸಿದ್ದರು.

ಹೈದರಾಬಾದ್‌ನ ಈ ಸಮಾರಂಭ ಒಂದು ವಿಶೇಷ ಸಮಾರಂಭವಾಗಿ ಮಾರ್ಪಾಡಾಯಿತು. ಮೂವರು ದಲಿತ ರಾಜಕಾರಣಿಗಳು ಇಂಗ್ಲೀಷ್‌ನಲ್ಲಿ ಮಾತನಾಡುವುದನ್ನು ನೋಡುವುದೇ ಜೀವನದ ಒಂದು ವಿಶೇಷ ಅನುಭವವಾಗಿತ್ತು. ಜೊತೆಗೆ ಡಿ.ಐ.ಸಿ.ಸಿ.ಐ.ನ ಆಂಧ್ರ ಪ್ರದೇಶದ ಶಾಖೆಯ ಅಧ್ಯಕ್ಷರೂ ಸಹ ಇಂಗ್ಲೀಷ್‌ನಲ್ಲಿ ಮಾತನಾಡಿದರು. ಇಡೀ ಉತ್ತರ ಭಾರತದಲ್ಲಿ ಇಂಗ್ಲೀಷನ್ನು ಸುಲಲಿತವಾಗಿ ಮಾತನಾಡಬಲ್ಲ ಮೂರು ದಲಿತ ರಾಜಕಾರಣಿಗಳನ್ನು ಒಂದು ಕಡೆ ಸೇರಿಸುವುದು ಬಹಳ ಕಷ್ಟದ ಕೆಲಸ.

ಅದಕ್ಕಿಂತ ಮುಖ್ಯವಾಗಿ ಅನೇಕ ದಲಿತ ನೌಕರಿ ನೀಡುವವರು ವೇದಿಕೆಗೆ ಬಂದು ತಮ್ಮ ಅನುಭವಗಳನ್ನು ಹಂಚಿಕೊಂಡರು. ದಲಿತ ಮಹಿಳಾ ನೌಕರಿ ನೀಡುವವರು ತಮ್ಮ ಯಶಸ್ಸಿನ ಗಾಥೆಯನ್ನು ವಿವರಿಸಿದರು. ಹೆಚ್ಚು ದಲಿತ ನೌಕರಿ ನೀಡುವವರು ತಾವು ಹೇಗೆ ಯಶಸ್ವಿಯಾದರು ಎಂಬುದನ್ನು ಹೇಳಿದರೆ ವಿನಃ, ಅವರನ್ನು ಹೇಗೆ ಹಿಂಸಿಸಲಾಯಿತು ಎಂಬುದನ್ನಲ್ಲ. ಇದು ನಡೆದ ಸಂದರ್ಭದಲ್ಲಿ ಕಡಿಮೆ ಎಂದರೆ ನಾಲ್ಕು ವಾಹಿನಿಗಳು ಸಮಾರಂಭವನ್ನು ಪ್ರಸಾರ ಮಾಡುತ್ತಿದ್ದುವು. ಮತ್ತು ಮುದ್ರಣ ಮಾದ್ಯಮದ ವರದಿಗಾರರು ಟಿಪ್ಪಣಿ ಮಾಡಿಕೊಳ್ಳುತ್ತಿದ್ದರು.

ಹಿಂದಿನ ಒಂದೂವರೆ ವರ್ಷಗಳಲ್ಲಿ ಸುಮಾರು ನಲವತ್ತು ನೌಕರಿ ನೀಡುವವರ ವ್ಯಕ್ತಿಚಿತ್ರಗಳು ರಾಷ್ಟ್ರೀಯ ಮಾಧ್ಯಮಗಳಲ್ಲಿ ಬಂದಿವೆ. ಒಬ್ಬರೇ ಒಬ್ಬರನ್ನು ಬಿಟ್ಟರೆ ಎಲ್ಲಾ ದಲಿತ ನೌಕರಿ ನೀಡುವವರೂ ಮಾಧ್ಯಮ ಪ್ರತಿನಿಧಿಗಳು ಅವರನ್ನು ಸಂಧಿಸಿದಾಗ ಅವರೊಡನೆ ಮಾಹಿತಿ ಹಂಚಿಕೊಳ್ಳಲು ಮುಂದೆ ಬಂದರು. ಟಿ.ವಿ. ಸಂದರ್ಶನಗಳಿಗೆ ಬಹಳ ಸುಂದರವಾಗಿ ಅಲಂಕರಿಸಿಕೊಂಡು ಬಂದರು. ತಮ್ಮ ವ್ಯಕ್ತಿಚಿತ್ರ ನೀಡಿರುವ ವಾರ್ತಾ ಪತ್ರಿಕೆಗಳು ಹಾಗೂ ನಿಯತಕಾಲಿಕೆಗಳ ಹತ್ತಾರು ಪ್ರತಿಗಳನ್ನು ಅವರು ಕೊಂಡುಕೊಂಡರು. ಅವುಗಳನ್ನು ಅವರು ತಮ್ಮ ಪಾಲುದಾರರು/ಗಿರಾಕಿಗಳು/ಹಂಚಿಕೆದಾರರಿಗೆ ಹಂಚುತ್ತಾರೆ.

ಇಲ್ಲಿ ಏಳುವ ಪ್ರಶ್ನೆ ಎಂದರೆ, ದಲಿತ ನೌಕರಿ ಹುಡುಕುವವರು ದಲಿತ ನೌಕರಿ ನೀಡುವವರಿಗಿಂತ ಜಾತಿ ಸಮಾಜದ ಬಗ್ಗೆ ಏಕೆ ಹೆಚ್ಚು ಹೆದರಿಕೊಳ್ಳುತ್ತಾರೆ?

ಈ ಬಗ್ಗೆ ನಾನು ಕೆಲ ಸ್ನೇಹಿತರಲ್ಲಿ ಚರ್ಚಿಸಿದೆ ಮತ್ತು ಬಹಳಷ್ಟು ಸಮಯ ಈ ಬಗ್ಗೆ ಚಿಂತಿಸಿದೆ. ನನಗೊಂದು ಉತ್ತರ ಸಿಕ್ಕಿತು. ಆದರೆ ಅದನ್ನು ಇನ್ನೂ ಹೆಚ್ಚು ಚರ್ಚಿಸುವ ಅವಶ್ಯಕತೆ ಇದೆ. ನಮ್ಮ ಗ್ರಹಿಕೆ ಮತ್ತು ಜಾಗೃತಿ ಮುಂತಾದವು ನಾವು ಜೀವಿಸುವ ಸುತ್ತಲ ಪರಿಸರ ಮತ್ತು ಸನ್ನಿವೇಶ ಇವುಗಳನ್ನು ಆದರಿಸುತ್ತವೆ. ದಲಿತ ನೌಕರಿ ಹುಡುಕುವವರು ಮೀಸಲಾತಿಯನ್ನು ಉಪಯೋಗಿಸಿಕೊಂಡು ಸರ್ಕಾರಿ ಉದ್ಯೋಗಿಗಳಾಗಿ ನೇಮಕಗೊಳ್ಳುತ್ತಾರೆ. ಭಾರತ ಬದಲಾಗುತ್ತಿದೆ ಮತ್ತು ಜಾತಿ ತನ್ನ ಹಿಡಿತವನ್ನು ದಲಿತರ ಮೇಲೆ ಸಡಿಲಿಸಿದೆಯಾದರೂ, ಪೂರ್ವಾಗ್ರಹಗಳು ಇನ್ನೂ ಮುಂದುವರೆಯುತ್ತಿವೆ. ಪೂರ್ವಾಗ್ರಹಗಳು ಕೂಡಾ ಕಡಿಮೆಯಾಗಿವೆ ಆದರೆ ಕೊನೆಗೊಂಡಿಲ್ಲ.

ನಾನು ಪದೇ ಪದೇ ಹೇಳುವಂತೆ ಪ್ರತಿಯೊಂದನ್ನೂ ಬೆಲೆಕೊಟ್ಟೆ ಪಡೆಯಬೇಕು. ಮೀಸಲಾತಿ ಪದ್ದತಿ ಸಹ ಹಾಗೆಯೇ. ಒಳ ಪ್ರವೇಶದ ಸಮಯದಲ್ಲಿ ಹೆಚ್ಚು ದಲಿತರಿಗೆ ಒಂದಲ್ಲಾ ಒಂದು ರೀತಿಯಲ್ಲಿ ರಿಯಾಯಿತಿಯ ಅವಶ್ಯಕತೆ ಇದೆಯಾದರೂ ಕೆಲಸ ಮಾಡುವಾಗ ಹೆಚ್ಚು ದಲಿತರು ತಮ್ಮ ಸಹೋದ್ಯೋಗಿಗಳಿಗಿಂತ ಉತ್ತಮವಾಗಿ ಸಾಧನೆ ಮಾಡುತ್ತಾರೆ. ಪ್ರತಿ ರಾಜ್ಯದಲ್ಲಿ ದಲಿತ ಕಲೆಕ್ಟರರು ಮತ್ತು ಜಿಲ್ಲಾ ಪೊಲೀಸ್ ಮುಖ್ಯಸ್ಥರು ತಾವು ಮಾಡುವ ಕೆಲಸಕ್ಕಾಗಿ ಮನೆ ಮಾತಾಗುವುದನ್ನು ನಾವು ಕಾಣಬಹುದು. ಅದು ಐತಿಹಾಸಿಕ ಕಾರಣಗಳಿಂದಾಗಿ ಉಂಟಾಗುತ್ತದೆ. ಕರಿಯರಂತೆ ದಲಿತರು ಸಹ ಕಡಿಮೆ ಅರ್ಹತೆ ಅಥವಾ ಕಡಿಮೆ ದಕ್ಷತೆಯ ಕಳಂಕ ಹೊತ್ತು ಬೆಳೆಯುತ್ತಾರೆ. ಆದುದರಿಂದ ಶಾಲಾ ಉಪಾದ್ಯಾಯರುಗಳಾಗಿರಲಿ, ಇಂಜಿನಿಯರುಗಳಾಗಿರಲಿ ಅಥವಾ ಜಿಲ್ಲಾ ಕಲೆಕ್ಟರ್ ಆಗಿರಲಿ ದಲಿತರಿಗೆ ಜಾತಿ ಸಮಾಜದ ನಂಬಿಕೆ ತಪ್ಪು ಎಂದು ತೋರಿಸುವುದು ಎಂದು ಸಾಮಾಜಿಕ ಅವಶ್ಯಕತೆಯಾಗಿ ಕಾಣುತ್ತದೆ. ಆದ್ದರಿಂದ ಅವರು ತಮ್ಮ ಕರ್ತವ್ಯಗಳನ್ನು ಇತರರಿಗಿಂತ ಹೆಚ್ಚು ಗಂಭೀರವಾಗಿ ಪರಿಗಣಿಸುತ್ತಾರೆ. ನಮಗೆಲ್ಲರಿಗೂ ತಿಳಿದಿರುವಂತೆ ದಲಿತರು ಇತರರಿಗಿಂತ ತಾವು ಕೆಲಸ ಮಾಡುವವರಿಗೆ ಹೆಚ್ಚು ನಿಷ್ಠೆಯುಳ್ಳವರಾಗಿರುತ್ತಾರೆ.

ಇತರರಿಗಿಂತ ಉತ್ತಮವಾಗಿ ಕೆಲಸ ನಿರ್ವಹಿಸುವವರಾದರೂ ದಲಿತ ನೌಕರರನ್ನು ಅವರ ಕೆಲಸಕ್ಕಾಗಿ ಪ್ರಶಂಶಿಸುವುದು ಬಹಳ ಅಪರೂಪ. ಹೆಚ್ಚು ವೇಳೆ ನೌಕರಿ ಹುಡುಕುವವರನ್ನು ಶಿಕ್ಷೆಗೆ ಒಳಪಡಿಸಲಾಗುತ್ತದೆ. ಆಗಾಗ್ಗೆ ಅವರನ್ನು ವರ್ಗಾಯಿಸಲಾಗುತ್ತದೆ ಮತ್ತು ಯಾರು ಹೋಗಲಾಗದ ಸ್ಥಳಗಳಿಗೆ ಹಾಕಲಾಗುತ್ತದೆ. ಆದುದರಿಂದ ಅವರ ಮೇಲಾಧಿಕಾರಿಗಳು ಈ ದಲಿತ ಮೀಸಲಾತಿಯ ಮೂಲಕ ನೌಕರಿ ಪಡೆದಿದ್ದಾನೆ. ಅವನ ದಕ್ಷತೆ ಕಡಿಮೆ ಎಂದು ಯೋಚಿಸುತ್ತಾರೆ. ಹೆಚ್ಚು ದಲಿತ ನೌಕರಿ ಹುಡುಕುವವರು ತನ್ನ ವೃತ್ತಿ ಜೀವನದುದ್ದಕ್ಕೂ ಇಂತಹ ತಾರತಮ್ಯವನ್ನು ಅನುಭವಿಸುತ್ತಾರೆ. ಜಾತಿ ಎಂದೂ ಬದಲಾಗುವುದಿಲ್ಲ ಎಂದು ಯೋಚಿಸುತ್ತಾ ಅವರು ಹೆಚ್ಚು ಹೆಚ್ಚು ಕಹಿಯಾಗುತ್ತಾರೆ. ಮಾದ್ಯಮಗಳಲ್ಲಿ ದಲಿತ ಉದ್ಯಮಶೀಲರ ಬಗ್ಗೆ ಬರೆಯುವುದರಿಂದ ಸಮಾಜ ಅವರಿಗೆ ತೊಂದರೆ ನೀಡಬಹುದು ಎಂಬ ಅವರ ಕಳವಳಕ್ಕೆ ಇದೇ ಕಾರಣ.

ಮತ್ತೊಂದು ಕಡೆ ದಲಿತ ನೌಕರಿ ನೀಡುವವರು ತಮಗೆ ಅಡ್ಡ ಬರುವ ಎಲ್ಲಾ ಅಡ್ಡಿ ಆತಂಕಗಳೊಡನೆ ಹೋರಾಡಿ ಮುಕ್ತ ಮಾರುಕಟ್ಟೆಯಲ್ಲಿ ಯಶಸ್ವಿಯಾಗುತ್ತಾರೆ. ದಲಿತ ನೌಕರಿ ನೀಡುವವರು ಸರ್ಕಾರದ ಅಥವಾ ಸಮಾಜದ ಯಾವುದೇ ರಿಯಾಯಿತಿ ಇಲ್ಲದೆ ಬೆಳೆಯುತ್ತಾರೆ. ಅವರು ದಲಿತರಲ್ಲದವರಿಗೆ ನೌಕರಿ ನೀಡಿರುತ್ತಾರೆ. ದಲಿತ ತನ್ನ ಯಜಮಾನನಾಗಿರುವಾಗ, ದಲಿತೇತರನೊಬ್ಬ ಆ ಯಜಮಾನನ ಅರ್ಹತೆಯನ್ನು ಹೇಗೆ ಪ್ರಶ್ನಿಸಬಲ್ಲ?

ಆದುದರಿಂದ ಡಾ॥ ಬಿ.ಆರ್ ಅಂಬೇಡ್ಕರರ ಅನುಯಾಯಿಗಳು ಎಂದುಕೊಳ್ಳುವ ಎಲ್ಲ ದಲಿತರೂ ನೌಕರಿ ನೀಡುವವರಾಗಿ ಬದಲಾಗಬೇಕು. ಇದರಿಂದ ಸಾರ್ವಜನಿಕ ಜೀವನದಲ್ಲಿ ಜಾತಿಪದ್ಧತಿಯೂ ನಿಷ್ಪ್ರಯೋಜಕವಾಗುತ್ತದೆ.

■

ಇತರರಿಗಿಂತ ಉತ್ತಮವಾಗಿ ಕೆಲಸ ನಿರ್ವಹಿಸುವವರಾದರೂ ದಲಿತ ನೌಕರರನ್ನು ಅವರ ಕೆಲಸಕ್ಕಾಗಿ ಪ್ರಶಂಶಿಸುವುದು ಬಹಳ ಅಪರೂಪ. ಹೆಚ್ಚು ವೇಳೆ ನೌಕರಿ ಹುಡುಕುವವರನ್ನು ಶಿಕ್ಷೆಗೆ ಒಳಪಡಿಸಲಾಗುತ್ತದೆ. ಆಗಾಗ್ಗ ಅವರನ್ನು ವರ್ಗಾಯಿಸಲಾಗುತ್ತದೆ. ಮತ್ತೊಂದು ಕಡೆ ದಲಿತ ನೌಕರಿ ನೀಡುವವರು ತಮಗೆ ಅಡ್ಡ ಬರುವ ಎಲ್ಲಾ ಅಡ್ಡಿ ಆತಂಕಗಳೊಡನೆ ಹೋರಾಡಿ ಮುಕ್ತ ಮಾರುಕಟ್ಟೆಯಲ್ಲಿ ಯಶಸ್ವಿಯಾಗುತ್ತಾರೆ. ದಲಿತ ನೌಕರಿ ನೀಡುವವರು ಸರ್ಕಾರದ ಅಥವಾ ಸಮಾಜದ ಯಾವುದೇ ರಿಯಾಯಿತಿ ಇಲ್ಲಿದೆ ಬೆಳೆಯುತ್ತಾರೆ. ಅವರು ದಲಿತರಲ್ಲದವರಿಗೆ ನೌಕರಿ ನೀಡಿರುತ್ತಾರೆ.

ಕೃಷಿ ಆಧಾರಿತ ಸಮಾಜ
ದೇಶದ ಮಾದರಿ ರಾಜ್ಯ
ಕರ್ನಾಟಕ ಮುನ್ನಡೆಯುತ್ತಿದೆ
ಸನ್ಮಾನ್ಯ ಮುಖ್ಯಮಂತ್ರಿಗಳು
ರಾಜ್ಯದ ಆರ್ಥಿಕ ಬೆಳವಣಿಗೆಯಲ್ಲಿ ಕೃಷಿ ಕ್ಷೇತ್ರದ ಪಾತ್ರ ಪ್ರಮುಖ. ಕೃಷಿ ವಲಯದ ಉತ್ತೇಜನಕ್ಕೆ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ರೈತರ ಜೀವನ ಮಟ್ಟ ಸುಧಾರಿಸಲು ಬದ್ಧವಾಗಿರುವ ಸರ್ಕಾರ ಶೇ. 1 ರ ಅತ್ಯಲ್ಪ ಬಡ್ಡಿ ದರದಲ್ಲಿ ಕೃಷಿ ಸಾಲ ಸೌಲಭ್ಯವನ್ನು ಜಾರಿಗೊಳಿಸಿದೆ. ಹಾಗೆಯೇ, ರೈತರ ಅಭ್ಯುದ್ಯಯಕ್ಕಾಗಿ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದೆ. ಈ ಎರಡು ಕ್ರಮಗಳನ್ನು ಕೈಗೊಂಡ ದೇಶದ ಮೊದಲ ಸರ್ಕಾರವೆನಿಸಿದೆ. ಶೇ. 3ರ ಬಡ್ಡಿ ದರದಲ್ಲಿ ನೇಕಾರರು ಮತ್ತು ಮೀನುಗಾರರಿಗೆ ಸಹಕಾರ ಸಂಘಗಳಿಂದ ಅಲ್ಪಾವಧಿ ಸಾಲ ಸೌಲಭ್ಯವನ್ನು ಸರ್ಕಾರ ಮುಂದುವರೆಸಿದೆ.
ಕೃಷಿ ಅಭಿವೃದ್ಧಿ, ನಾಡ ಸಮೃದ್ಧಿ
ಕರ್ನಾಟಕ ವಾರ್ತೆ

DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnane Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 sysmetric dedicated leased line internet connectivity with optical fiber back bone.

ADMISSION OPEN FOR 2011-2012

Computer Lab

Mechanical Lab

Digital Library


Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intake
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

556 STUDENTS

Students Selection through campus interview

PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH | EUREKA FORBES LTD

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

'SAMVADA' Kannada Monthly, April 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 68)